ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೫ ಜನವರಿ-ಜೂನ್ ೨೦೧೧ ಸಂಚಿಕೆ : ೦೧

ಎಂ.ವಿ.ಸೀ. ಜನ್ಮಶತಮಾನೋತ್ಸವ ವಿಶೇಷ ಸಂಚಿಕೆ



ಸಂಪಾದಕರು

ಪ್ರೊ. ಜೆ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ.)
೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-೧೯
ದೂರವಾಣಿ : ೨೬೬೧೫೮೭೭

ಎಂ.ವಿ.ಸೀ. ಶತಮಾನೋತ್ಸವದ ಕೆಲವು ಛಾಯಾಚಿತ್ರಗಳು



ದೊಡ್ಡಬಳ್ಳಾಪುರದ
ಕೊಂಗಾಡಿಯಪ್ಪ ಕಾಲೇಜಿನಲ್ಲಿ
ಎಂ.ವಿ.ಸೀ. ಶತಮಾನೋತ್ಸವ
ಉದ್ಘಾಟನೆ ೯-೮-೧೦



ದಾವಣಗೆರೆಯ ಸರ್ಕಾರಿ
ಪ್ರಥಮದರ್ಜೆ ಕಾಲೇಜಿನಲ್ಲಿ
ಶತಮಾನೋತ್ಸವ
ವಿಚಾರಗೋಷ್ಠಿ ೨೧-೮-೧೦



ಚಿಕ್ಕನಾಯ್ಕನಹಳ್ಳಿಯ
ನವೋದಯ ಪ್ರಥಮದರ್ಜೆ
ಕಾಲೇಜಿನಲ್ಲಿ ಶತಮಾನೋತ್ಸವ
೨೭-೮-೧೦



ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ
ಪರಿಷತ್ತಿನ ಸಹಯೋಗದಲ್ಲಿ
ಬಿ.ಎಂ.ಶ್ರೀ. ಕಲಾಭವನದಲ್ಲಿ
ಶತಮಾನೋತ್ಸವ
೯-೩-೧೦

ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೫ ಜನವರಿ–ಜೂನ್ ೨೦೧೧ ಸಂಚಿಕೆ : ೦೧

ಎಂ.ವಿ.ಸೀ. ಜನ್ಮಶತಮಾನೋತ್ಸವ ವಿಶೇಷ ಸಂಚಿಕೆ

ಸಂಪಾದಕರು

ಪ್ರೊ. ಜಿ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಕಲಾಭವನ
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯
ದೂರವಾಣಿ : ೨೬೬೧೫೮೭೭, ೨೬೬೭೬೭೭೩
ಇಮೇಲ್: bmsritrust@gmail.com

KARNATAKA LOCHANA - (Half yearly Research Journal)
Editor : Prof. G. Abdul Basheer. Published by B.M.Sri. Smaraka Prathistana, M.V.Si. Reseach Center, B.M.Sri. Kalabhavan, 3rd Main Road, Narasimharaja Colony, Bangalore - 560 019. Ph.No. 080-26615877, 26676773 Pages: XII+139

Year : January-June 2011 (Vol. 25 , No. 01),

Yearly Subscription	:	**Rs. 100/-** (for Libraries)
For Individual	:	**Rs. 50/-**
Single issue	:	**Rs. 30/-**

ವಾರ್ಷಿಕ ಚಂದಾ	:	ರೂ. ೧೦೦/– (ಗ್ರಂಥಾಲಯಗಳಿಗೆ)
ಪ್ರತಿಷ್ಠಾನದ ಆಜೀವ ಸದಸ್ಯತ್ವ	:	ರೂ. ೫೦೦/– (ಲೋಚನ ಉಚಿತ)
ವ್ಯಕ್ತಿಗಳಿಗೆ	:	ರೂ. ೫೦/–
ಬಿಡಿ ಪ್ರತಿ	:	ರೂ. ೩೦/–

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೭೧೫೯

ಮುಂಮಾತು

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಿಂದ ಪ್ರಕಾಶನಗೊಳ್ಳುತ್ತಿರುವ 'ಕರ್ನಾಟಕ ಲೋಚನ' ಮುಖ್ಯವಾಗಿ ವಿದ್ವತ್ ಪತ್ರಿಕೆ. ಪ್ರಾರಂಭದಿಂದ ಮೂಲ ಆಶಯಕ್ಕೆ ಧಕ್ಕೆಬಾರದಂತೆ ಪ್ರಕಟವಾಗುತ್ತಿದೆ. ಆಗಾಗ ಸಂಶೋಧನೆಯ ವಿಷಯಗಳು ಕಡಮೆಯಾದರೂ ಸಾಹಿತ್ಯ ವಿವೇಚನೆಯ ವಿಷಯಗಳು ಮುಂಚೂಣಿಗೆ ಬಂದಂತೆ ಲೇಖನಗಳು ಕಾಣಿಸಿಕೊಂಡಿವೆ. ಪದಾಧಿಕಾರಿಗಳ ಬಯಕೆಯಂತೆ ಅಲ್ಪ ಮಟ್ಟದಲ್ಲಿ ರೂಪುರೇಷೆಗಳು ಬದಲಾಗಿರುವುದುಂಟು. ಆದರೂ ಯಾವುದೂ ಹದ್ದುಮೀರಿ ಹೋಗಿಲ್ಲ.

ಪ್ರಸ್ತುತ ಸಂಚಿಕೆ ಹಿರಿಯ ಲೇಖಕರೂ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರೂ ಆದ ಎಂ.ವಿ. ಸೀತಾರಾಮಯ್ಯ ಅವರ ಜನ್ಮಶತಮಾನೋತ್ಸವ ಸಂಸ್ಮರಣೆಗೆ ಮೀಸಲಾಗಿದೆ. ಇದೊಂದು ವಿಶೇಷ ಸಂದರ್ಭದ ವಿಶೇಷ ಸಂಚಿಕೆ. ಇದರಲ್ಲಿರುವ ಎಲ್ಲ ಬರಹಗಳೂ ಎಂ.ವಿ.ಸೀ. ಅವರ ಬದುಕು ಬರಹಗಳ ಮರು ಓದಿನ ಹೂರಣಗಳಾಗಿವೆ. ಇವು ಸಾಹಿತ್ಯಾಸಕ್ತ ಸಹೃದಯರ ಚಿಂತನ ಮಂಥನಕ್ಕೆ ಧಾರಾಳವಾಗಿ ಇಂಬಾಗುವವೆಂದು ಭಾವಿಸಲಾಗಿದೆ.

ಈ ಮೌಲಿಕ ಸಂಚಿಕೆಯನ್ನು ಪ್ರೊ. ಜಿ. ಅಬ್ದುಲ್ ಬಷೀರ್ ಕಷ್ಟಪಟ್ಟು ಸಂಪಾದಿಸಿದ್ದಾರೆ. ಕಾರ್ಯದರ್ಶಿಗಳಾದ ಡಾ. ನಾ. ಗೀತಾಚಾರ್ಯ ಮತ್ತು ಶ್ರೀ ಎಸ್. ವಿ. ಶ್ರೀನಿವಾಸರಾವ್ ಸಹಕರಿಸಿದ್ದಾರೆ. ಇವರಿಗೆ ಕೃತಜ್ಞತೆಗಳು.

–ಪ್ರೊ. ಡಿ. ಲಿಂಗಯ್ಯ
ಅಧ್ಯಕ್ಷ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಸಂಪಾದಕೀಯ

ಈ ವರ್ಷ ಪ್ರೊ. ಎಂ. ವಿ. ಸೀತಾರಾಮಯ್ಯನವರ ಜನ್ಮಶತಮಾನೋತ್ಸವ ವರ್ಷವಾಗಿರುವುದರಿಂದ ಈ ಸಂಚಿಕೆಯನ್ನುಅವರ ಸ್ಮರಣೆಯಲ್ಲಿ ಹೆಸರಿಸಲಾಗಿದೆ.

ಎಂ.ವಿ.ಸೀ. ಅವರ ಜನ್ಮಶತಮಾನೋತ್ಸವಾಚರಣೆಯ ಸಂದರ್ಭದಲ್ಲಿ (೯-೧೦-೨೦೦೯ ರಿಂದ ೯-೮-೨೦೧೦) ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ನಡೆದ 'ತಿಂಗಳ' ಉಪನ್ಯಾಸ ಮಾಲೆಯ ಲೇಖನಗಳ ಸಂಕಲನವೇ 'ಪ್ರಸ್ತುತ ಕರ್ನಾಟಕ ಲೋಚನ ವಿಶೇಷ ಸಂಚಿಕೆ'. ಪ್ರೊ. ಅ. ರಾ. ಮಿತ್ರ ಅವರ 'ಎಂ.ವಿ.ಸೀ. ಅವರ ಪ್ರಬಂಧ ಸಾಹಿತ್ಯ', ಪ್ರೊ. ಕೆ. ಎಸ್. ಮಧುಸೂದನ ಅವರ 'ಎಂ.ವಿ.ಸೀ. ಅವರ ಅಧ್ಯಾಪನ ಕಲೆ', ಡಾ. ಕೆ. ಆರ್. ಗಣೇಶ್ ಅವರ, ಎಂ.ವಿ.ಸೀ. ಅವರ ವಿದ್ವತ್ ಪ್ರಪಂಚ' ಎಂಬ ಲೇಖನಗಳು ಕಾರಣಾಂತರಗಳಿಂದ ಈ ವಿಶೇಷ ಸಂಚಿಕೆಯಲ್ಲಿ ಸೇರಿಲ್ಲ. ಹನ್ನೊಂದು ಲೇಖನಗಳಲ್ಲಿ ಎಂಟು ಲೇಖನಗಳು ಮಾತ್ರ ಈ ಸಂಚಿಕೆಯಲ್ಲಿ ಪ್ರಕಟವಾಗಿವೆ. ಈ ಎಂಟು ಲೇಖನಗಳು ಪ್ರತ್ಯೇಕ ಪುಸ್ತಕ ರೂಪದಲ್ಲಿಯೂ ಬರುತ್ತವೆ. ಈ ವಿಶೇಷ ಸಂಚಿಕೆಯಲ್ಲಿ ಎಂ.ವಿ.ಸೀ.ಯವರನ್ನು ಕುರಿತ ಇನ್ನಿತರ ಮೌಲಿಕವಾದ ಕೆಲವು ಲೇಖನಗಳೂ ಸೇರಿವೆ. ಶತಮಾನೋತ್ಸವದ ವರದಿಯೂ ಇದೆ.

ಎಂ.ವಿ.ಸೀ.ಯವರು ನನ್ನ ಗುರುಗಳು. ನಾನು ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. (ಆನರ್ಸ್); ಎಂ.ಎ. ಓದುತ್ತಿದ್ದಾಗ, ಎಂ.ವಿ.ಸೀ.ಯವರು ಆಟೋದಲ್ಲಿ ಕಾಫಿಯ ಫ್ಲಾಸ್ಕ್ ಬ್ಯಾಗ್ ಜೊತೆ ಕಚ್ಚೆಪಂಚೆ, ಕಪ್ಪುಕೋಟು, ಕಪ್ಪು ಟೋಪಿಯ ವೇಷಭೂಷಣದಲ್ಲಿ ಬಂದು ಇಳಿಯುತ್ತಿದ್ದುದು ಇಂದೂ ನನ್ನ ಕಣ್ಮುಂದೆ ಬರುತ್ತದೆ. ನಾನು ಸಾಹಿತ್ಯ ಕೃಷಿಗೆ ತೊಡಗಿದ್ದೇ 'ಪ್ರೊ. ಎಂ.ವಿ.ಸೀ.ಯವರ ಕಾವ್ಯದಲ್ಲಿ ದೇಶಭಕ್ತಿ' ಎಂಬ ಲೇಖನದ ಮುಖಾಂತರ. ನನ್ನ 'ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ಮಿಮರ್ಶೆ' ಹಾಗೂ 'ಶಬ್ದಮಣಿದರ್ಪಣ ದೀಪಿಕೆ' ಎಂಬ ಬೃಹತ್ ಗ್ರಂಥಗಳ ರಚನೆಗೆ ಕಾರಣಕರ್ತರು ಎಂ.ವಿ.ಸೀ. ನನ್ನ 'ಶಬ್ದಮಣಿದರ್ಪಣ ದೀಪಿಕೆ' ಎಂಬ ಕೃತಿಗೆ ಅರ್ಥಪೂರ್ಣ ಮುನ್ನುಡಿಯನ್ನು ಬರೆದು ಬೆನ್ನು ತಟ್ಟಿ ಆಶೀರ್ವದಿಸಿದವರು ಎಂ.ವಿ.ಸೀ. ಅವರು.

ಗವಿಪುರದಲ್ಲಿ ಅವರ ಮನೆಗೆ–ನಾನು ಕನ್ನಡ ಅಧ್ಯಾಪಕನಾದ ಮೇಲೂ ಪ್ರತಿದಿನ ಹೋಗುತ್ತಿದ್ದೆ. ಗ್ರಂಥಾಲಯದ ಸಹಾಯವನ್ನೂ ಪಡೆದುಕೊಳ್ಳುತ್ತಿದ್ದೆ ; ಹತ್ತು ಹಲವು ಸಂಗತಿಗಳನ್ನ ಅವರೊಡನೆ ಚರ್ಚಿಸುತ್ತಿದ್ದೆ ; ನೇರವಾಗಿ ನನ್ನನ್ನು ತಮ್ಮ ಅಡುಗೆ ಮನೆಯ ಬಳಿಯ ಕೊಠಡಿಗೆ ಆಹ್ವಾನಿಸಿ, ಕಾಫಿ ಕೊಟ್ಟು ; 'ಈಗ ಹೇಳಪ್ಪ ಯಾವ ವಿಷಯದ ಬಗ್ಗೆ ಚರ್ಚೆ' ಎಂದು ಮಾತು ಪ್ರಾರಂಭಿಸುತ್ತಿದ್ದರು. ಮುರುಟಿದ ಬೆರಳುಗಳ, ಗುಬ್ಬಚ್ಚಿಯ ಗೂಡು ದೇಹದ ಈ ಆಸ್ತಮಾ ರೋಗಿ' ಎಂಥ ಪವಾಡ ಪುರುಷ ! ಇವರ ಸಾಹಿತ್ಯ ರಚನೆಗೆ ಇವರ ಅನಾರೋಗ್ಯ ಯಾವ ತೊಂದರೆಯನ್ನೂ ನೀಡಲಿಲ್ಲ ; ಆದರೆ ಅದು ಅವರಿಗೆ ಸಹಕಾರಿಯೇ ಆಗಿದೆ ಎಂದು ನಾನು ದಿನನಿತ್ಯ ಹೇಳಿಕೊಳ್ಳುತ್ತಿದ್ದೆ.

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರದು ಅಚ್ಚಳಿಯದ ಹೆಸರು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಅವರು ಮುಟ್ಟದ ಸಾಹಿತ್ಯ ಪ್ರಕಾರವಿಲ್ಲ. ಎಂ.ವಿ.ಸೀ.ಯವರು ಸಂಶೋಧಕರಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಕವಿಯಾಗಿ, ವಿಮರ್ಶಕರಾಗಿ, ಕಾವ್ಯಮೀಮಾಂಸಕರಾಗಿ ಖ್ಯಾತನಾಮರಾಗಿದ್ದಾರೆ. ಅವರ ಸಾಹಿತ್ಯ ಕೃಷಿಯ ಬಗ್ಗೆ ವಿಶೇಷ ವಿಮರ್ಶೆಯಾಗಲೀ ಅವರಿಗೆ ಸಲ್ಲಬೇಕಾಗಿದ್ದ ಪ್ರಶಸ್ತಿಗಳಾಗಲೀ ಬರಲಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿಯೂ ತಾರತಮ್ಯಗಳು ಹೇಗೆ ನಡೆಯುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ ಸಾಕು. 'ಶಾಸ್ತ್ರಸಾಹಿತ್ಯ', 'ಕವಿರಾಜಮಾರ್ಗ' (ಸಂ.) 'ಕದಂಬ' ಎಂಬ ಅವರ ಮೂರು ಕೃತಿಗಳು ಕನ್ನಡ ಸಾಹಿತ್ಯದ ಅದ್ವಿತೀಯ ಕೃತಿಗಳು ; ಅವರ ವಿದ್ವತ್ತನ್ನು ಶ್ರುತಪಡಿಸುವ ಕೃತಿಗಳು.

ಇಂಗ್ಲೀಷ್, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದ ಅವರು ಶ್ರೇಷ್ಠ ಚಿಂತಕರಲ್ಲಿ ಒಬ್ಬರಾಗಿದ್ದರು. ಕಾವ್ಯಮೀಮಾಂಸೆ ಮತ್ತು ವ್ಯಾಕರಣ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರವಾದದ್ದು. ಎಷ್ಟೋ ವಿಚಾರಗಳನ್ನು ಮೊಟ್ಟಮೊದಲಬಾರಿಗೆ ಅವರು ಸ್ಥಾಪಿಸಿದ್ದಾರೆ. ಈ ವರ್ಷ ನಾಡಿನುದ್ದಗಲಕ್ಕೂ ಎಂ.ವಿ.ಸೀ. ಅವರನ್ನು ಕುರಿತು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವರ ಸಮಗ್ರ ಕೃತಿ ಸಂಪುಟಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸುತ್ತಿದೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಸ್ಥಾಪಿಸುವುದರ ಮೂಲಕ ಸಂಶೋಧನೆ ಮತ್ತು ಕೃತಿ ಪ್ರಕಟಣೆಗೆ ಶ್ರೀಯುತರು ವಿಶೇಷ ಒತ್ತನ್ನು ನೀಡಿದರು.

ಪ್ರಸ್ತುತ ಸಂಚಿಕೆಗೆ ಲೇಖನಗಳನ್ನು ನೀಡಿ ಉಪಕರಿಸಿದ ಸಾಹಿತಿ–ವಿದ್ವಾಂಸರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ಅವರಿಗೆ, ಗೌ॥ ಕಾರ್ಯದರ್ಶಿಗಳಾದ ಡಾ. ನಾ. ಗೀತಾಚಾರ್ಯ ಅವರಿಗೆ, ವ್ಯವಸ್ಥಾಪಕ ಕಾರ್ಯದರ್ಶಿಗಳಾದ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರಿಗೆ , ಕೋಶಾಧಿಕಾರಿಗಳಾದ ಶ್ರೀ ಎಂ. ಎಸ್. ರಾಮಪ್ರಸಾದ್ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. 'ಲೋಚನ'ವನ್ನು ನಿರಂತರವಾಗಿ ಸುಂದರವಾಗಿ ಮುದ್ರಿಸುತ್ತಾ ಬಂದಿರುವ 'ಇಳಾ ಮುದ್ರಣ'ದ ಮಾಲೀಕರಿಗೆ ಮತ್ತು ನನಗೆ ಸಹಕಾರ ನೀಡುತ್ತಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಛೇರಿ ಸಿಬ್ಬಂದಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

–ಪ್ರೊ. ಜಿ. ಅಬ್ದುಲ್ ಬಷೀರ್

ಪರಿವಿಡಿ



ಪ್ರೊ॥ ಎಂ.ವಿ.ಸೀತಾರಾಮಯ್ಯ : ಕಿರು ಪರಿಚಯ

(೯-೯-೧೯೧೦ ರಿಂದ ೧೭-೦೩-೧೯೯೦)

ಕವಿ, ಸಾಹಿತಿ, ವಿದ್ವಾಂಸ, ಸಂಘಟಕ ಎಂ.ವಿ.ಸೀತಾರಾಮಯ್ಯನವರು ಕನ್ನಡ ಸಾರಸ್ವತ ಲೋಕದ ಪ್ರಾತಃಸ್ಮರಣೀಯರು. ಆಚಾರ್ಯ ಬಿ.ಎಂ.ಶ್ರೀ ಅವರ ಗರಡಿಯಲ್ಲಿ ಪಳಗಿದ ಶಿಷ್ಯಶ್ರೇಷ್ಠರು. ಟಿ.ಎಸ್. ವೆಂಕಣ್ಣಯ್ಯ, ಎ.ಆರ್.ಕೃ., ತೀ.ನಂ.ಶ್ರೀ, ಡಿ.ಎಲ್.ಎನ್, ಮುಂತಾದ ವಿದ್ವಾಂಸರ ಮಾರ್ಗದರ್ಶನದಲ್ಲಿ ಬೆಳೆದ ಗಣ್ಯ ವಿದ್ವಾಂಸರು, ಬಿ.ಎಂ.ಶ್ರೀ ಪ್ರತಿಷ್ಠಾನದ ಸಂಸ್ಥಾಪಕರು.

ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯ ಸೆಪ್ಟೆಂಬರ್ ೯, ೧೯೧೦- ಸಾಧಾರಣ ಸಂವತ್ಸರ ಭಾದ್ರಪದ ಶುದ್ಧ ಷಷ್ಠಿ. ಸಂಪ್ರದಾಯಬದ್ಧ, ಸುಸಂಸ್ಕೃತ ಕುಟುಂಬದಲ್ಲಿ ತಂದೆ ವೆಂಕಟದಾಸಪ್ಪ ತಾಯಿ ಅರಕಲುಗೂಡಿನ ಸಾವಿತ್ರಮ್ಮ ಅವರ ೩ನೇ ಮಗನಾಗಿ ಮೈಸೂರಿನಲ್ಲಿ ಜನಿಸಿದರು. ಇವರ ಬಾಲ್ಯ ವಿದ್ಯಾಭ್ಯಾಸ ಮೈಸೂರಿನ ಬನುಮಯ್ಯ ಹೈಸ್ಕೂಲಲ್ಲಿ ನಡೆಯಿತು.

ಸಂಗೀತ - ಚಿತ್ರಕಲಾವಿದರು : ಬಾಲ್ಯದಲ್ಲೇ ಚಿತ್ರಗಾರ, ಸಂಗೀತಗಾರರಾಗಿ ಬೆಳೆದ ಎಂ.ವಿ.ಸೀ-ಮನೆಯ ಸನಿಹದಲ್ಲಿದ್ದ ಆಂಜನೇಯ ಚಿತ್ರ, ಆನೆಕರೋಟಿ(ಗಜಶಾಲೆ)ಯಲ್ಲಿನ ಆನೆಗಳನ್ನು ನೋಡಿ ಚಿತ್ರ ಬಿಡಿಸಲು ಪ್ರಾರಂಭಿಸಿ ಮುಂದೆ ಪ್ರಸಿದ್ಧ ಕಲಾವಿದ ವೆಂಕಟಪ್ಪನವರ ಶಿಷ್ಯರಾಗಿ ಪ್ರೊ. ತೀ.ನಂ.ಶ್ರೀ, ಟಿ.ಎಸ್. ವೆಂಕಣ್ಣಯನವರ ಪ್ರೋತ್ಸಾಹದಿಂದ ಚಿತ್ರಕಲೆಯಲ್ಲಿ ಪ್ರಾವಿಣ್ಯಾ ಗಳಿಸಿಕೊಂಡಿದ್ದರು. ಇವರು ರಚಿಸಿದ ಚಿತ್ರಗಳಿಗೆ ಮೈಸೂರು ದಸರಾ ವಸ್ತುಪ್ರದರ್ಶನ ಹಾಗೂ ಮದರಾಸಿನಲ್ಲಿ ನಡೆದ ಕಾಂಗ್ರೆಸ್ ವಸ್ತುಪ್ರದರ್ಶನಗಳಲ್ಲಿ ಬಹುಮಾನ ದೊರೆಯಿತು. ಕುವೆಂಪು, ನಾ. ಕಸ್ತೂರಿ, ಜೆ.ಪಿ. ರಾಜರತ್ನಂ ಮುಂತಾದವರ ಪುಸ್ತಕಗಳಿಗೂ ಇವರು ಚಿತ್ರಗಳನ್ನು ಬಿಡಿಸಿದ್ದಾರೆ. ಮನೆಯಲ್ಲೇ ನಡೆಯುತ್ತಿದ್ದ ಭಜನೆ, ಸಂಗೀತಗಳಿಂದ ಪ್ರಭಾವಿತರಾಗಿ ಮೃದಂಗವಾದನ ದಲ್ಲೂ ಪರಿಣಿತಿ ಪಡೆದ ಎಂ.ವಿ.ಸೀ ಅವರು ಬಾಲ್ಯದಲ್ಲಿ ವೀಣೆಶೇಷಣ್ಣನವರಿಗೆ ಪಕ್ಕವಾದ್ಯ ನೀಡಿದ್ದರು.

ಪ್ರಗತಿಶೀಲ ಕವಿ, ಸಾಹಿತಿಗಳು : ಬಾಲ್ಯದಲ್ಲಿಯೇ ತಮ್ಮ ಸಹೋದರರ ಸ್ನೇಹಿತರಾದ ತೀ.ನಂ.ಶ್ರೀಯವರ ಒಡನಾಟ ಲಭ್ಯವಾಗಿ ಸಾಹಿತ್ಯದತ್ತ ಒಲವು ಮೂಡಿ, ಕಾಲೇಜಿನಲ್ಲಿ ಬಿ.ಎಂ.ಶ್ರೀ, ಟಿ.ಎಸ್. ವೆಂಕಣ್ಣಯ್ಯ, ಡಿ.ಎಲ್.ಎನ್, ಎ.ಎನ್. ಮೂರ್ತಿರಾವ್, ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ನಾ. ಕಸ್ತೂರಿ ಮುಂತಾದ ದಿಗ್ಗಜ ಗುರುಗಳಿಂದ ಇವರು ತುಂಬಾ ಪ್ರಭಾವಿತರಾದರು. ಕವಿ–ಲೇಖಕರಾಗಿ ಬೆಳೆದರು. ಪ್ರಗತಿಶೀಲ ಸಾಹಿತ್ಯದಲ್ಲಿ ಪ್ರಮುಖರೆನಿಸಿದ್ದ ಎಂ.ವಿ.ಸೀ, 'ರಾಘವ' ಕಾವ್ಯನಾಮದ ಕವಿಯಾಗಿ, ಕಥೆ–ಕಾದಂಬರಿಕಾರರಾಗಿ, ಪ್ರಬಂಧಕಾರರಾಗಿ, ಹಾಗೂ ಮಕ್ಕಳ ಸಾಹಿತಿಯಾಗಿ ಜನಪ್ರಿಯಲೇಖಕರಾಗಿದ್ದರು. ಇವರ ಅನೇಕ ಕೃತಿಗಳು ಶಾಲಾ–ಕಾಲೇಜು ಪಠ್ಯಗಳಾಗಿ ಪ್ರಸಿದ್ಧವಾಗಿದ್ದವು.

ಉದ್ಯೋಗ: ಬಿ.ಎ. ಓದುತ್ತಿರುವಾಗಲೇ ೧೯೨೮ರಲ್ಲಿ ವಿದ್ಯಾರ್ಥಿಯಾಗಿದ್ದಾಗಲೆ ಕೋಣಂದೂರು ನಂಜುಂಡಯ್ಯನವರ ಮಗಳು ಸೌ॥ ಸಾವಿತ್ರಮ್ಮನವರೊಡನೆ ಇವರ ವಿವಾಹ ನಡೆಯಿತು. ವಿದ್ಯಾಭ್ಯಾಸವನ್ನೂ ಮುಂದುವರಿಸಿ ೧೯೩೧ರಲ್ಲಿ ಬಿ.ಎ., ೧೯೩೩ರಲ್ಲಿ ಕನ್ನಡ ಎಂ.ಎ ಪದವಿಯನ್ನೂ ಚಿನ್ನದ ಪದಕದೊಂದಿಗೆ ಪಡೆದರು. ೧೯೩೪ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಿ.ವಿ. ಗುಂಡಪ್ಪನವರೊಂದಿಗೆ ಇವರು ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದರು. ೧೯೩೯ ರಿಂದ ೧೯೪೬ರವರೆಗೆ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ – ಕನ್ನಡ ಕೋಶದ ಸಹ ಸಂಪಾದಕರಾಗಿ ಸೇವೆಸಲ್ಲಿದರು. ೧೯೪೬ರಿಂದ ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ೧೯೬೩ರಲ್ಲಿ ರೀಡರ್ ಆಗಿ ಬಡ್ತಿ ಪಡೆದು ೧೯೬೭ರಲ್ಲಿ ನಿವೃತ್ತರಾದರು. ಆನಂತರ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ ಗೌರವ ಪ್ರಾಧ್ಯಾಪಕರಾಗಿ ಕೆಲ ಕಾಲ ಸೇವೆ ಸಲ್ಲಿಸಿದರು.

ಮೆಚ್ಚಿನ ಗುರು, ಧೀಶಕ್ತಿಯ ಸಾಧಕರು : ಸರ್ಕಾರಿ ಕೆಲಸಕ್ಕೆ, ಸೇರಿದ ಕಡೆಯೇ ನಿವೃತ್ತಿ ಹೊಂದಿದ ಅಪರೂಪದ ವ್ಯಕ್ತಿ ಎಂ.ವಿ.ಸೀ. ಇವರ ವರ್ಗಾವಣೆಯ ಆದೇಶ, ಸಹಿಗಾಗಿ ಕುಲಪತಿಗಳಾಗಿದ್ದ ಕುವೆಂಪು ಬಳಿ ಹೋದಾಗ ಅವರು ಆಘಾತಗೊಂಡು ಆದೇಶವನ್ನೇ ರದ್ದುಗೊಳಿಸಿ ನಿವೃತ್ತಿಯವರೆಗೆ ವರ್ಗಾಯಿಸಕೂಡದೆಂದು ಆದೇಶಿಸಿದ್ದರು. ಅದಕ್ಕೆ ಕಾರಣ ಅವರ ಕೃಶಶರೀರ. ಸದಾ ಜೋಡಿ ಫ್ಲಾಸ್ಕಿನಲ್ಲಿನ ಕಾಫಿ, ಬಿಸಿನೀರಿನ ಗುಟುಕನ್ನು ಗಂಟೆಗೊಮ್ಮೆ ಸೇವಿಸುತ್ತಲೇ ಪಾಠ ಮಾಡುತ್ತಿದ್ದರೂ ಮೆಚ್ಚಿನ ಗುರುವಾಗಿ, ಜನಪ್ರಿಯ ಅಧ್ಯಾಪಕರಾಗಿ ಪ್ರಸಿದ್ಧಿಯಾಗಿದ್ದರು. ಊಟಕ್ಕಿಂತ ಹೆಚ್ಚಾಗಿ ಔಷಧಿಯನ್ನೇ ಸೇವಿಸುತ್ತ ನಿತ್ಯರೋಗಿಯಾಗಿದ್ದರೂ ರೋಗದ ಲಕ್ಷಣ ಲವಲೇಶವೂ ಇಲ್ಲದೆ ಗಂಟೆಗಟ್ಟಲೆ ನಿರರ್ಗಳವಾಗಿ ಮಾತಾಡುವ ಧೀಶಕ್ತಿ ಅವರಲ್ಲಿತ್ತು.

ದೇವರು 'ಕೈ'ಕೊಟ್ಟರೂ ಸ್ವತಃ ಸಾಧಿಸಿಕೊಂಡಿದ್ದ ಅದ್ಭುತ ಅಂತಃಶಕ್ತಿಯೇ ಅವರನ್ನು ೮೦ವರ್ಷ ನಮ್ಮೊಂದಿಗಿರಿಸಿತ್ತು. ಮಗುವಿನಂತಹ ಮನಸ್ಸಿನ, ಶ್ರೇಷ್ಠ ವ್ಯಕ್ತಿತ್ವದ, ಅಪ್ಪಟ ಅಪರಂಜಿ ಮನೋಭಾವದ, ಎಂಥವರೊಂದಿಗೂ ಸ್ನೇಹಶೀಲರಾಗಿದ್ದ, ಹಿರಿಯ-ಕಿರಿಯುರೊಂದಿಗೆ ಸದಾ ಬೆರೆಯುತ್ತಿದ್ದ ಸೀತಾರಾಮಯ್ಯನವರ ಸಾಧನೆ ಅಸಾಧಾರಣವಾದದ್ದು.

ಸರಿಯಾಗಿ ಪೆನ್ನು ಹಿಡಿಯಲಾಗದೆ ಮುರುಟಿ ಹೋಗಿದ್ದ ಬೆರಳುಗಳಲ್ಲೆ ಯುವಕರಾಗಿದ್ದಾಗ ಬಂದ ಖಾಯಿಲೆಯನ್ನೆದುರಿಸಿ ನೂರಾರು ಗ್ರಂಥಗಳಲ್ಲಿ ವೈವಿಧ್ಯಮಯ ಸಾಹಿತ್ಯವನ್ನು ಸೃಷ್ಟಿಸಿ ಮಾದರಿಯಾಗಿದ್ದರು, ಧೀಶಕ್ತಿಯ ಸಾಧಕರಾಗಿದ್ದರು.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸ್ಥಾಪನೆ : ೧೯೭೯ರಲ್ಲಿ ಇವರು ತಮ್ಮ ಪೂಜ್ಯ ಗುರುಗಳಾಗಿದ್ದ ಬಿ.ಎಂ.ಶ್ರೀಯವರ ಹೆಸರಿನಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾವನ್ನು ತಮ್ಮ ಸ್ವಗೃಹದಲ್ಲೇ ಸ್ಥಾಪಿಸಿ ಅದರ ಅಭ್ಯುದಯಕ್ಕಾಗಿ ಜೀವನಪರ್ಯಂತ ಶ್ರಮಿಸಿದರು. ಅವರ ಮುಂದಾಲೋಚನೆ ಹಾಗೂ ಅವಿಶ್ರಾಂತ ಪರಿಶ್ರಮದ ಫಲಶ್ರುತಿಯಾಗಿಯೇ ಇಂದು ಬೆಂಗಳೂರಿನಲ್ಲಿ ಮೂರು ಮಹಡಿಯ ಬೃಹತ್ ಬಿ.ಎಂ.ಶ್ರೀ ಕಲಾಭವನ ಕವಿ ಸ್ಮಾರಕವಾಗಿ ರೂಪುಗೊಂಡಿರುವುದಲ್ಲದೆ, ಬೆಳ್ಳೂರಿನಲ್ಲೂ ಎರಡು ಮಹಡಿಯ ಬಿ.ಎಂ.ಶ್ರೀ ಶತಮಾನೋತ್ಸವ ಭವನ ನಿರ್ಮಾಣಗೊಂಡಿದೆ. ಬಿ.ಎಂ.ಶ್ರೀ ಪ್ರತಿಷ್ಠಾನ ನಾಡಿನ ಪ್ರಮುಖ ಸಾಹಿತ್ಯ, ಸಂಶೋಧನ ಸೇವಾ ಕೇಂದ್ರವಾಗಿ ಪ್ರಸಿದ್ಧಿಯಾಗಿದೆ.

ಪ್ರಶಸ್ತಿ/ಪುರಸ್ಕಾರಗಳು :

ಬಹುಮುಖ ಪ್ರತಿಭಾವಂತರಾದ ಇವರಿಗೆ ಲಭಿಸಿರುವ ಪುರಸ್ಕಾರ-ಪ್ರಶಸ್ತಿಗಳು ಹಲವು. ವಿದ್ಯಾರ್ಥಿ ದೆಸೆಯಲ್ಲಿಯೇ ಕವಿತೆಗೆ ಬಿ.ಎಂ.ಶ್ರೀ ರಜತೋತ್ಸವ ಸ್ವರ್ಣಪದಕ (೧೯೩೩); ಹಕ್ಕಿಹಾಡು (೧೯೪೬), ಮಾದನಮಗಳು (೧೯೫೧), 'ಮುಗಿಯದ ಮಾಯೆ' ಕವನ ಸಂಕಲನಗಳಿಗೆ ದೇವರಾಜ ಬಹದ್ದೂರ್ ಪುರಸ್ಕಾರ; 'ತೊಟ್ಟಿಲು ತೂಗದ ಕೈ' (೧೯೫೭) 'ಜೀವನ ನಾಟಕ' ಕೃತಿಗಳಿಗೆ ರಾಜ್ಯ ಸರ್ಕಾರ ಪ್ರಶಸ್ತಿ (೧೯೬೦); ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೭೩); 'ಪ್ರಾಚೀನ ಕನ್ನಡ ವ್ಯಾಕರಣಗಳು' ಗ್ರಂಥಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ ಗೌರವ (೧೯೮೦); ಡಾ. ಜ.ಚ.ನಿ.ಯವರಿಂದ 'ವಿಚಾರ ರತ್ನಾಕರ ಪ್ರಶಸ್ತಿ' ಮತ್ತು ರಾಘವ ಅಭಿನಂದನ ಸಮಿತಿಯಿಂದ ಸಾರ್ವಜನಿಕ ಸನ್ಮಾನ(೧೯೬೭); ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ (೧೯೭೫); ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನದ ಸನ್ಮಾನ (೧೯೮೦) 'ಆಸ್ವಾದ' ಅಭಿನಂದನ ಗ್ರಂಥ ಸಮರ್ಪಣೆಗೆ (೧೯೮೩. ಉದಯಭಾನು ಕಲಾ ಸಂಘದಿಂದ). ಎಂ.ವಿ.ಸೀ ೮೦ ಅಭಿನಂದನೆ (೧೯೮೯) ಮುಂತಾದ ಅನೇಕ ಗೌರವ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಎಂ.ವಿ.ಸೀತಾರಾಮಯ್ಯ ಜನ್ಮ ಶತಮಾನೋತ್ಸವ ಯೋಜನೆ

ಹಸ್ತಪ್ರತಿ ಅಧ್ಯಯನ ವರ್ಷ: ಎಂ.ವಿ.ಸೀ ಅವರಿಗೆ ಏಳು ತಲೆಮಾರಿನ ಇತಿಹಾಸವಿದೆ. ಸುಮಾರು ಕ್ರಿ.ಶ ೧೭೦೦ರಲ್ಲಿದ್ದ ಚಿಕ್ಕನಾಯಕನಹಳ್ಳಿಯ ಅದ್ವೈತ ಗುರು ಶ್ರೀವಾಸುದೇವಾರ್ಯರ ಮೊಮ್ಮಕ್ಕಳಾದ ಅದ್ವೈತ ಹರಿದಾಸ ತಿಮ್ಮಪ್ಪದಾಸರ ಮರಿಮಗ ಇವರು. ಈ ಪೀಳಿಗೆಯನ್ನು ಶೋಧಿಸಿ ತಿಮ್ಮಪ್ಪದಾಸರ ಕೀರ್ತನಗಳನ್ನು ಸಂಪಾದಿಸಿ ಮೊದಲ ಬಾರಿಗೆ ಕನ್ನಡ ಸಾಹಿತ್ಯಕ್ಕೆ ಅದ್ವೈತ ಹರಿದಾಸ ಸಾಹಿತ್ಯ ಪರಂಪರೆಯನ್ನು ಪರಿಚಯಿಸಿದ ಕೀರ್ತಿ ಇವರದ್ದು. ಇದಕ್ಕಾಗಿ ಇವರ ಮನೆಯಲ್ಲೇ ಇದ್ದ ನೂರಾರು ಹಸ್ತಪ್ರತಿಗಳನ್ನು ಅಧ್ಯಯನ ಮಾಡಿದ್ದರು. ಇಂಥವುಗಳ ಸಂರಕ್ಷಣೆಗಾಗಿಯೇ ಈ ಸಂಸ್ಥೆಯನ್ನು ಸ್ಥಾಪಿಸಿ 'ಹಸ್ತಪ್ರತಿಶಾಸ್ತ್ರ'ಕ್ಕೆ ಚಾಲನೆ ನೀಡಿದ ಪ್ರಥಮರಾದರು. ವಿ.ವಿ.ಗಳಿಂದ ಮರೆಯಾಗುತ್ತಿದ್ದ ಗ್ರಂಥಸಂಪಾದನ ಶಾಸ್ತ್ರಕ್ಕೆ ಜೀವ ತುಂಬಿ ಅದನ್ನು ಹಸ್ತಪ್ರತಿಶಾಸ್ತ್ರದೊಂದಿಗೆ ಉಳಿಸಿ ಬೆಳೆಸಿದರು. ನಾಡಿನಾದ್ಯಂತ ಹಸ್ತಪ್ರತಿಶಾಸ್ತ್ರ ಚಳವಳಿಯಾಗಿ ಬೆಳೆಯಿತು. ಇಂದು ಈ ಕ್ಷೇತ್ರದಲ್ಲಿ ಹಲವಾರು ತರುಣ ವಿದ್ವಾಂಸರು ಹಸ್ತಪ್ರತಿಶಾಸ್ತ್ರದ ಸಂಗ್ರಹ, ಸಂರಕ್ಷಣೆ, ಸಂಪ್ರತಿ ಮತ್ತು ಗ್ರಂಥಸಂಪಾದನೆಯ ಪಾಠ ನಿರ್ಣಯದ ಮಿತಿಯಿಂದ ಹೊರಬಂದು ಹೊಸದೃಷ್ಟಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. ಹಸ್ತಪ್ರತಿಗಳನ್ನೇ ಆಕರ ವಸ್ತುವನ್ನಾಗಿಸಿ ಬಹುಶಾಸ್ತ್ರೀಯವಾಗಿ ಅಧ್ಯಯನ ಮಾಡಲಾಗುತ್ತಿದೆ. ಹಸ್ತಪ್ರತಿಯ ವಿವರಗಳಿಂದಲೇ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಚಿತ್ರಕಲೆ, ಲಿಪಿ, ಭಾಷೆ ಜನಪದ ಸಂಗತಿಗಳು, ಸಾಮಾಜಿಕ ವಿವರಗಳಂತಹ ಸಾಂಸ್ಕೃತಿಕ ಅಧ್ಯಯನವನ್ನು ಧರ್ಮ, ಶಾಸ್ತ್ರ, ಜ್ಯೋತಿಷ್ಯ, ವೈದ್ಯ, ಯೋಗ, ಶಿಕ್ಷಣ ವಿಜ್ಞಾನ–ತಂತ್ರಜ್ಞಾನ ಮುಂತಾದ ವಿವಿಧ ಕ್ಷೇತ್ರಗಳ ದೃಷ್ಟಿಯಿಂದ ಅಂತರಶಿಸ್ತೀಯ ಅಧ್ಯಯನವನ್ನೂ ಮಾಡಲಾಗುತ್ತಿದೆ. ಹೀಗೆ ಬಹುಮುಖೀ ಅಧ್ಯಯನವಾಗಿ ರೂಪಗೊಂಡಿರುವ ಹಸ್ತಪ್ರತಿ ಸಾಹಿತ್ಯಕ್ಕೊಂದು ಶಾಸ್ತ್ರದ ಚೌಕಟ್ಟನ್ನು ಕೊಡುವುದಕ್ಕಾಗಿ ಈ ಹಸ್ತಪ್ರತಿಗಳ ಬಹುಶಿಸ್ತೀಯ ಅಧ್ಯಯನವನ್ನು **"ಹಸ್ತಪ್ರತಿ ಅಧ್ಯಯನಶಾಸ್ತ್ರ"**, ಎಂದು ಹೆಸರಿಸಿ ಪ್ರತಿಷ್ಠಾನದಲ್ಲಿ ಈಗಾಗಲೇ ಅಧ್ಯಯನ ಮಾಡಲಾಗುತ್ತಿದೆ. ಹಸ್ತಪ್ರತಿಶಾಸ್ತ್ರವನ್ನು ಎಂ.ವಿ.ಸೀ ಅವರು ಚಾಲನೆಗೊಳಿಸಿದಂತೆ ಹಸ್ತಪ್ರತಿ ಅಧ್ಯಯನ ಶಾಸ್ತ್ರವನ್ನು ಅವರ ಶತಮಾನೋತ್ಸವದಲ್ಲೇ ವ್ಯಾಪಕವಾಗಿ ಚಾಲನೆಗೆ ತರಲು ಮತ್ತು ನಾಡಿನಾದ್ಯಂತ ಜಾಗೃತಿ ಮೂಡಿಸಲು ಶತಮಾನೋತ್ಸವ ವರ್ಷವನ್ನೇ **'ಹಸ್ತಪ್ರತಿ ಅಧ್ಯಯನ ವರ್ಷ'** ಎಂದು ಘೋಷಿಸಲಾಗಿದೆ.

(ಕೃಪೆ : ಶತಮಾನೋತ್ಸವ ಮನವಿ ಪತ್ರ)

೧. ಎಂ.ವಿ.ಸೀ. ಸ್ಮರಣೆ

• ಪ್ರೊ. ಡಿ. ಲಿಂಗಯ್ಯ

೧

ಕುಂತರೂ ನಿಂತರೂ ಗುಂಪಿನಲಿ ಗಮನಿಸುವ
ಎದ್ದು ಕಾಣುವ ಆಳಲ್ಲ ; ವಾಮನ ಮೂರುತಿ.
ಗುಬ್ಬಚ್ಚಿ ಗೂಡಿನಲಿ ಗರುಡ ಸಾಹಸ ಕನಸು,
ಸಂಕಲ್ಪ ಕಾಯಕ ಸಾಧಿಸುವ ಉಡದ ಪಟ್ಟು.
ಅಧ್ಯಯನ ಅಧ್ಯಾಪನ ಸೃಜನ ಸಾಹಿತ್ಯ
ರಚನ, ಕಂಡೆಡೆ ಶೋಧನ ; ಜೋಡಿ ದೋಣಿ ಚಲನೆ.
ಗುರಿ ಮುಟ್ಟುವ ಛಲ, ಸಾಲು ಸಾಲು ಹೊತ್ತಗೆ ರಾಶಿ
ದುಡಿಮೆಗೆ ತಕ್ಕಷ್ಟು ಫಲ. ಬಂದಷ್ಟೇ ಭಾಗ್ಯ.
ಕಲೆಯ ಜರಿ ಹೊಸ ಹೊಳಪು ಅಲ್ಲಷ್ಟು ಇಲ್ಲಷ್ಟು.
ನೋಡುಗರಿಗೆ ಮುಗ್ಧಮಗು, ಸುಸ್ನಿಗ್ಧ ನಸುನಗು,
ಪಾತಾಳ ಗರಡಿಯ ಕಣ್ಣು. ಸರಳತೆಯ ಹಿಂದೆ
ಸಂಕೀರ್ಣತೆಯ ಮೆರಗು. ಎದೆಯ ದನಿಯ ಕಾಯಕ
ಸದಾ ಗುನುಗು. ಸಂಪ್ರದಾಯ ಮನಕೆ ಬಂದಷ್ಟು
ಚಿಂತನ ; ಸಿರಿಗನ್ನಡ ದೇವಿಯ ಆರಾಧನ.

೨

ಗುರು ಸ್ಮರಣೆಗೆ ಸಾಹಿತ್ಯ ಗುಡಿ ಕಟ್ಟುವತ್ತ
ಗಮನ. ಗುದ್ದಲಿ ಪೂಜೆ. ಕನ್ನಡ ದಾಸಯ್ಯನ
ಕನ್ನಡ ಸೇವೆಗದು ಮೀಸಲು. ಹಸ್ತಪ್ರತಿಯ
ಚಿತ್ತ ಮಸ್ತಕದ ತುಂಬ, ಗುರುಕರುಣೆಯ ಬಿಂಬ
ಪಡಿಬಿಂಬ ನಾಡು ನುಡಿ ಗುಡಿಗೆಯ್ದು ನಿಡು ಬೇರು

ಪೋಷಿಸಿ ಫಲ ಪಡೆಯುವ ನಿರಂತರ ಬೇಸಾಯ.
ಸಾಹಿತ್ಯ ಕಲೆ ಸಂಶೋಧನೆಗೆ ಸಮದೃಷ್ಟಿ.
ಉಬ್ಬರವಿಳಿತವಿಲ್ಲ ಸಮಾಧಾನದ ಚಿತ್ತ
ಸಾಧನೆಯ ಸುತ್ತ. ಶ್ರೀ ಗುರುವಿನ ಕನಸನ್ನು
ನನಸಾಗಿಸಿ ನಿರಂಬಳ ನಡೆಗೆ ಗುರುವಿನೆಡೆಗೆ,
ಅಮರ ನೆಲೆಗೆ, ಹೂವಿನೊಡನೆ ನಾರು ನಾಕವನು
ಸೇರಿದಂತೆ ; ಕನ್ನಡಮ್ಮ ತಾ ಮೆಚ್ಚುವಂತೆ.
ಕನ್ನಡ ಕನ್ನಡಿಗ ಕರ್ನಾಟಕ ನುಡಿಗಡಣ
ತುಂಬಿ ತುಳುಕಿತು ಬದುಕು ಬರಹಕೆ ಇಹಕೆ ಪರಕೆ.

ವಾಮನರು ನಾವು

• ಡಾ॥ ನಾ. ಗೀತಾಚಾರ್ಯ

ಮೈವೆಂಸೀ ಮಗುವಿನಂತಹ ಮನಸು ನಡೆನುಡಿ
ಗುಳಿಗೆ ನುಂಗದ ದಿನದ ನೆನಪಿಲ್ಲ ನಿಮಗೆ, ನಿಮ್ಮ
ನೋಟ ವಾಮನ ಒಳಗಿಣುಕಿದರೆ ತ್ರಿವಿಕ್ರಮ

ಮುದುಡಿರುವ ಬೆರಳಿನಲು ಪೆನ್ನಿಗೆಂತಹ ಮೋಡಿ
ಹಿಂದೊಮ್ಮೆ ಚೈತ್ರದಲಿ ನಲಿದಿತ್ತು ನವೋದಯ
ಶೃತಿಗೆ ಸಿಕ್ಕ ರಾಗದಲಿ ಹೊಮ್ಮಿಸಿದೆವು ನಾದ
ಆದರಾಗುಂಗಿನಲ್ಲಿ ಮರೆತುಹೋದೆವಲ್ಲ

ಕನ್ನಡತಿಯ ವೀಣೆಯಲಿ ಇದ್ದೆಲ್ಲ ರಾಗವ
ಮಾಧುರ್ಯವಾಗಿಯೆ ಮಾರ್ನುಡಿದ ನಿಮ್ಮನೆ
ಆದರಗೊಡವೆಯೆ ಇಲ್ಲ ನಿಮಗೆ. ಮರೆತಿದ್ದ
ಶ್ರೀವಾಣಿಗೆ ಉಸಿರಾದಿರಿ, ಹಸಿರಾದಿರಿ. ಕುಗ್ಗಿದಷ್ಟು

ಹಿಗ್ಗುತಿಹ ನಿಮ್ಮುತ್ಸಾಹದಿದಿರು ವಾಮನರು ನಾವೆ
ಮಾಡುವೆವು ನಾವೂ ನುಡಿಸೇವೆಯ ಕಾಯಕ
ಕಟ್ಟಿರೀಗಲೆ ನಮಗು ಶ್ರೀಅಂಕಿತದ ತಾಯಿತ

೨. ಕನ್ನಡ ಜಾಗೃತಿಯ ನೈತಿಕ ಶಕ್ತಿ : ಎಂ.ವಿ.ಸೀ.

• ರಾ. ನಂ. ಚಂದ್ರಶೇಖರ

ಪ್ರೊ॥ ಎಂ. ವಿ. ಸೀತಾರಾಮಯ್ಯನವರು ದೈಹಿಕವಾಗಿ ತುಂಬ ದುರ್ಬಲರಾಗಿದ್ದರು. ಆರೋಗ್ಯವೂ ಸರಿಯಿರಲಿಲ್ಲ. ಆದರೆ ಎಂದೂ ಜೀವನಾಸಕ್ತಿ ಕಳೆದುಕೊಂಡಿರಲಿಲ್ಲ. ಅವರು ವಿಧಿವಶರಾಗುವ ಕೆಲ ದಿನಗಳ ಮುಂಚೆ ನಾನು ಅವರನ್ನು ಭೇಟಿ ಮಾಡಿದ್ದಾಗ ಕನ್ನಡ ಜಾಗೃತಿಯ ವಿಚಾರದಲ್ಲಿ ಅವರು ಆಲೋಚಿಸಿದ್ದ ದೊಡ್ಡ ಯೋಜನೆಯ ಬಗ್ಗೆ ತಿಳಿಸಿದ್ದರು. ವರ್ತಮಾನದ ಆಗು ಹೋಗುಗಳಿಗೆ ಅವರು ಸ್ಪಂದಿಸುತ್ತಿದ್ದ ರೀತಿ ಯಾರನ್ನಾದರೂ ಚಕಿತಗೊಳಿಸುವಂತದ್ದು. ಕನ್ನಡದ ವಿಚಾರದಲ್ಲಿ ಅವರು ತೋರುತ್ತಿದ್ದ ಪ್ರೀತಿ, ಪ್ರಚಲಿತ ಕನ್ನಡ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದ ರೀತಿ, ಸಮಸ್ಯೆಯ ಪರಿಹಾರಕ್ಕೆ ಅವರು ಆಲೋಚಿಸುತ್ತಿದ್ದ ಬಗೆ ಎಲ್ಲವೂ ಅನನ್ಯವಾದದ್ದು.

ಕನ್ನಡ ಚಳುವಳಿಗೆ ಹೊಸ ಆಯಾಮ ನೀಡಿದ ಡಾ॥ ಎಂ. ಚಿದಾನಂದಮೂರ್ತಿಯವರು ಎಂ.ವಿ.ಸೀ. ಬಗ್ಗೆ ಒಂದು ಕಡೆ ಹೀಗೆ ಹೇಳಿದ್ದಾರೆ. "ಅವರ ವಯಸ್ಸು, ಆರೋಗ್ಯ, ಕೊನೆಗೆ ಪ್ರವೃತ್ತಿ ಎಲ್ಲವೂ ವಿಶೇಷ ವಿಶ್ರಾಂತಿ ಜೀವನವನ್ನು ಬಯಸುವುದಾದರೂ ಅವರು ಬಹಿರಂಗಕ್ಕೆ ಬಂದು ಕನ್ನಡಕ್ಕಾಗಿ ಹೋರಾಡುತ್ತಿರುವುದು, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ಸಂಸ್ಥಾಪಕ ಕಾರ್ಯದರ್ಶಿಯಾಗಿ ಹೆಣಗುತ್ತಿರುವುದು, ತಮ್ಮ ಕೊಠಡಿಯಲ್ಲಿ ಸಂಶೋಧಕರಾಗಿ ಶ್ರಮಿಸುತ್ತಿರುವುದು ನನ್ನಲ್ಲಿ ಒಂದಕ್ಕಿಂತ ಒಂದು ಆಶ್ಚರ್ಯವನ್ನು ಹುಟ್ಟಿಸಿದೆ". ಡಾ॥ ಮೂರ್ತಿಯವರ ಈ ಮಾತುಗಳು ಎಂ.ವಿ.ಸೀ. ಅವರನ್ನು ಹತ್ತಿರದಿಂದ ಬಲ್ಲ ಎಲ್ಲರ ಅಭಿಪ್ರಾಯವೂ ಆಗಿತ್ತು ಎಂದು ನಂಬಿದ್ದೇನೆ.

ವಾಮನ ಮೂರ್ತಿಯಾಗಿದ್ದ ಎಂ.ವಿ.ಸೀ. ಕನ್ನಡದ ಕೆಲಸ ಮಾಡುವಾಗ ತ್ರಿವಿಕ್ರಮರಾಗುತ್ತಿದ್ದರು. ಅವರು ಬರೀ ಕನ್ನಡದ ಹಿತವನ್ನು ಬೋಧಿಸಲಿಲ್ಲ, ಕನ್ನಡ ಕಾರ್ಯಕರ್ತರಾಗಿ ಶ್ರಮಿಸಿದರು. ಎಂ.ವಿ.ಸೀ. ಅವರಂತಹ ಹಿರಿಯರ ಕನ್ನಡದ ಕೆಲಸದ ಬಗ್ಗೆ ಬರೆಯುವುದು ಬಹಳ ಕಷ್ಟದ ಕೆಲಸ ಎನ್ನುವ ಅರಿವು ನನಗಿದೆ. ನಾನು ಕಂಡಂತೆ ಅವರು ಪಾಲ್ಗೊಂಡ ಚಳುವಳಿಯ ಬಗ್ಗೆ ಮಾತ್ರ ನಾನು ಇಲ್ಲಿ ಹೇಳಿದ್ದೇನೆ.

ಕರ್ನಾಟಕ ಏಕೀಕರಣದ ನಂತರ ಕನ್ನಡಿಗ ತನ್ನ ನಾಡಿನಲ್ಲಿಯೇ ಪರಕೀಯ ಪ್ರಜ್ಞೆಯಿಂದ ನರಳುವಂತಹ ವಾತಾರಣ ನಿರ್ಮಾಣವಾದಾಗ ಅ.ನ.ಕೃ. 'ಕನ್ನಡ ಚಳುವಳಿ' ಸಂಘಟಿಸಿದರು. ಮ. ರಾಮಮೂರ್ತಿ, ನಾಡಿಗೇರ್ ಕೃಷ್ಣರಾಯ, ಬೀಚಿ, ತಿ. ತಾ. ಶರ್ಮ ಮುಂತಾದವರು ಸಕ್ರಿಯವಾಗಿ ಪಾಲ್ಗೊಂಡರು. ಅ.ನ.ಕೃ., ರಾಮಮೂರ್ತಿ ನಿಧನದ ನಂತರ ಕೆಲವು ಅಹಿತಕರ ಬೆಳವಣಿಗೆಯಿಂದ ಪ್ರಜ್ಞಾವಂತರು ಚಳುವಳಿಯಿಂದ ದೂರ ಸರಿದರು. ಒಟ್ಟಿನಲ್ಲಿ ಚಳುವಳಿ ಎಂದರೆ ಸಭ್ಯರಿಗಲ್ಲ ಅನ್ನುವ ವಾತಾವರಣ ನಿರ್ಮಾಣವಾಗಿತ್ತು. ಬೆಂಗಳೂರಿನಲ್ಲಂತು ಕನ್ನಡ ಕಾರ್ಯಕರ್ತರೆಂದರೆ ಅಸ್ಪೃಶ್ಯರಂತೆ ಕಾಣುವ ವಾತಾವರಣ ಸೃಷ್ಟಿಯಾಗಿತ್ತು. ಚಳುವಳಿಗೆ ಅಂಟಿದ್ದ ಈ ಅಪವಾದವನ್ನು ದೂರಮಾಡಿ 'ಕನ್ನಡ ಚಳುವಳಿಗೆ' ಹೊಸ ಗಾಂಭೀರ್ಯವನ್ನು ತಂದುಕೊಟ್ಟಿದ್ದು 'ಗೋಕಾಕ್ ಚಳುವಳಿ' ಎನ್ನುವುದು ನನ್ನ ಖಚಿತ ಅಭಿಪ್ರಾಯ.

ಪ್ರೌಢಶಾಲೆಗಳಲ್ಲಿ ಭಾಷಾ ಕಲಿಕೆಯ ಸ್ಥಾನಮಾನವನ್ನು ನಿರ್ಧರಿಸಲು ಸರ್ಕಾರ ನೇಮಿಸಿದ್ದ ಪ್ರೊ. ವಿ. ಕೃ. ಗೋಕಾಕ್ ಸಮಿತಿಯ ವರದಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ಮೀನ ಮೇಷ ಎಣಿಸಿದಾಗ ಕನ್ನಡಪರವಾದ ಈ ವರದಿಯ ಅನುಷ್ಠಾನಕ್ಕೆ ಒತ್ತಾಯಿಸಿ ಚಳುವಳಿ ನಡೆಸುವುದು ಕನ್ನಡಾಭಿಮಾನಿಗಳಿಗೆ ಅನಿವಾರ್ಯವಾಯಿತು. ಈ ಅವಿಸ್ಮರಣೀಯ ಚಳುವಳಿ ನಡೆದದ್ದು ೧೯೮೨ ರಲ್ಲಿ. ಈ ಸಂದರ್ಭದಲ್ಲಿ ರೂಪುಗೊಂಡ 'ಸಾಹಿತಿಗಳ ಕಲಾವಿದರ ಬಳಗ' ಕನ್ನಡ ಚಳುವಳಿಗೆ ಹೊಸ ಹೊಳಹನ್ನು ನೀಡಿ ಎಲ್ಲ ವರ್ಗದ ಜನ 'ಚಳುವಳಿಗೆ' ಸ್ಪಂದಿಸುವಂತೆ ಮಾಡಲು ಯಶಸ್ವಿಯಾಗಿ, 'ಕನ್ನಡ ಕಾರ್ಯಕರ್ತ' ಎಂದು ಹೇಳಿಕೊಳ್ಳಲು ಹೆಮ್ಮೆಪಡುವಂತಹ ವಾತಾವರಣ ನಿರ್ಮಾಣವಾಯಿತು. ಈ ಉತ್ತಮ ವಾತಾವರಣ ನಿರ್ಮಾಣಗೊಳ್ಳಲು ನೈತಿಕಶಕ್ತಿಯಾಗಿ ನಿಂತ ಬೆರಳೆಣಿಕೆಯ ಮಂದಿಯಲ್ಲಿ ಎಂ.ವಿ. ಸೀ. ಪ್ರಮುಖರು.

ಗೋಕಾಕ್ ಚಳುವಳಿ ತೀವ್ರವಾದಾಗ ಸರ್ಕಾರ ಒಂದು ಸೂತ್ರವನ್ನು ಘೋಷಿಸಿತು. 'ಹಿರಿಯರಲ್ಲನೇಕರು ಈ ಸೂತ್ರವನ್ನು ಸ್ವಾಗತಿಸಿದರೂ ಕನ್ನಡಕ್ಕೆ ಅಗ್ರಸ್ಥಾನವಿಲ್ಲದ ಸರ್ಕಾರದ ಸೂತ್ರವನ್ನು ತಿರಸ್ಕರಿಸಿ ಮತ್ತೆ ಹೋರಾಟ ನಡೆಸಲು ಬೆಂಗಳೂರಿನ ಕಾರ್ಯಕರ್ತರು ನಿರ್ಧರಿಸಿದರು. ಈ ಎರಡನೆಯ ಹಂತದ ಚಳುವಳಿ ಇನ್ನೂ ಹೆಚ್ಚು ವ್ಯಾಪಕವಾಗಿ ನಡೆದು ರಾಜ್ಯಸರ್ಕಾರ ಮಣಿಯಲೇ ಬೇಕಾದ ಪರಿಸ್ಥಿತಿ ನಿರ್ಮಾಣವಾದದ್ದು ; ಕೊನೆಗೂ ಸರ್ಕಾರ ಕನ್ನಡಕ್ಕೆ ಆದ್ಯತೆ ನೀಡುವ ಒಂದು ಭಾಷಾ ಸೂತ್ರ ಪ್ರಕಟಿಸಿದ್ದು–ಇವೆಲ್ಲ ಈಗ ಇತಿಹಾಸದ ಭಾಗವಾಗಿ ಹೋಗಿದೆ. ಈ ಹಂತದಲ್ಲಿ ಹಲವು ರೀತಿಯ ಚಳುವಳಿಗಳನ್ನು ರೂಪಿಸಲಾಯಿತು. ಬಡಾವಣೆಯ ಧರಣಿ ಚಳುವಳಿಗಳಲ್ಲಿ ಎಂ.ವಿ.ಸೀ. ಪಾಲ್ಗೊಂಡಿದ್ದರು. ಇನ್ನೊಂದು ಮುಖ್ಯ ಚಳುವಳಿ ಮೈಸೂರು ಬ್ಯಾಂಕ್ ಚೌಕದಲ್ಲಿ ಪಂಜಿನ ಮೆರವಣಿಗೆ. ಪೊಲೀಸರು ಅನುಮತಿ ಕೊಟ್ಟಿರಲಿಲ್ಲ. ಆದರೂ ಇದನ್ನು ರೂಪಿಸಿದ ಸಾಹಿತಿಗಳ ಕಲಾವಿದರ ಬಳಗದವರು

ಮಾಡಿಯೇ ತೀರುವ ಧೃಢ ಸಂಕಲ್ಪ ಮಾಡಿದ್ದರು. (ನಮ್ಮ ನಾಯಕರು, ಸಂಕಲ್ಪವನ್ನು ಪೂರೈಸುವ ಛಲಗಾರ ಡಾ॥ ಎಂ. ಚಿದಾನಂದಮೂರ್ತಿ) ಇಂತಹ ಸಂದರ್ಭದಲ್ಲಿ ಪಂಜನ್ನು ಬೆಳಗಿಸಿ ಕಾರ್ಮಿಕನ ಕೈಗೆ ಕೊಟ್ಟರು. "ಹಚ್ಚಿರೋ ಹಿಡಿಯಿರೋ ಕನ್ನಡದ ಪಂಜು । ನೆಚ್ಚಿನ ನಂದನ ಕನ್ನಡದ ಪಂಜು" ಎಂದು ಹಾಡಿದ ಪ್ರೊ॥ ಎಂ. ವಿ. ಸೀತಾರಾಮಯ್ಯನವರು, ನುಡಿದಂತೆ ನಡೆದ ಅಪರೂಪದ ವ್ಯಕ್ತಿತ್ವ ಇವರದು. ೧೯೮೮ ನವೆಂಬರ್ ೩೦ ರಂದು ಕನ್ನಡ ಶಕ್ತಿ ಕೇಂದ್ರವು ಮಹಿಷಿ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಪಂಜಿನ ಮೆರವಣಿಗೆ ಏರ್ಪಡಿಸಿತ್ತು. ಬೆಂಗಳೂರಿನ ಕೊರೆಯುವ ನವೆಂಬರ್ ಚಳಿಯಲ್ಲಿ ಇದನ್ನು ಉದ್ಘಾಟಿಸಿದವರು ತೀವ್ರ ಆಸ್ತಮದಿಂದ ನರಳುತ್ತಿದ್ದ ಎಂ.ವಿ.ಸೀ.ಯವರೇ ಎಂದು ಹೇಳಬೇಕಿಲ್ಲ. ಆಸ್ತಮದ ಜೊತೆಗೆ ಅರ್ಥರೈಟಸ್‌ನಿಂದ ಮುದುಡಿದ ಕೈನ ೭೯ ವರ್ಷದ ಎಂ.ವಿ.ಸೀ. ಪಂಜನ್ನು ಹಿಡಿದು ನಮ್ಮೊಡನೆ ಸ್ವಲ್ಪದೂರ ಬಂದರು. ಅಂದು ಅವರಾಡಿದ ಮಾತು ನನ್ನಲ್ಲಿ ಅಚ್ಚಳಿಯದೇ ಉಳಿದಿದೆ. 'ಈ ಪಂಜಿನ ಕಿಚ್ಚು ನಿಮ್ಮಲ್ಲಿ ಕೆಚ್ಚನ್ನು ತಂದು ಕನ್ನಡಿಗರನ್ನು ಮುಸುಕಿರುವ ನಿರಭಿಮಾನದ ಅಂಧಕಾರ ಹೋಗಲಾಡಿಸಲು ನೆರವಾಗಲಿ ಮತ್ತು ಸರ್ಕಾರದ ಕಣ್ಣು ತೆರಸಲಿ'. ಇಂತಹ ಮಾತುಗಳು ಕನ್ನಡ ಕಾರ್ಯಕರ್ತರಿಗೆ ಹೊಸ ಸ್ಫೂರ್ತಿ ನೀಡುತ್ತಿತ್ತು.

ಕನ್ನಡ ಚಳುವಳಿಗೆ ಕಳಂಕ ತಂದಿರುವುದು ಹಣ ಸಂಗ್ರಹಣೆ ಎಂಬ ವಾಸ್ತವತೆಯನ್ನರಿತಿದ್ದ ಬಳಗ ಹಣಕಾಸಿನ ವಿಚಾರದಲ್ಲಿ ಕಟ್ಟೆಚ್ಚರವಹಿಸಿತ್ತು. ಎರಡನೆಯ ಹಂತದ ಚಳುವಳಿಯಲ್ಲಿ ಹೋರಾಟಕ್ಕೆ ಜಯ ಲಭಿಸಿತ್ತು, ಅಂದರೆ ಕನ್ನಡಕ್ಕೆ ಜಯವಾಗಿತ್ತು. ಬಳಗವು ಈ ಘಟನೆಯನ್ನು ಬಳಸಿಕೊಂಡು ಕನ್ನಡಿಗರ ಹಲವು ಸಮಸ್ಯೆಗಳತ್ತ ಗಮನ ಸೆಳೆಯುವ ಮಹತ್ತರ ಉದ್ದೇಶದಿಂದ ೧೯೮೨ ರ ಆಗಸ್ಟಿನಲ್ಲಿ ಬೆಂಗಳೂರಿನ ನ್ಯಾಷನಲ್ ಪ್ರೌಢಶಾಲಾ ಮೈದಾನದಲ್ಲಿ ವಿಜಯೋತ್ಸವ ಆಚರಿಸಲು ಒಂದು ಕಾರ್ಯಕ್ರಮ ಏರ್ಪಡಿಸಿತ್ತು. ನಮ್ಮ ಕೈಮೀರಿದ ಶಕ್ತಿಗಳಿಂದ ಅಹಿತಕರ ಘಟನೆಗಳು ನಡೆದು ಹೋದವು. ಅಂದೇ ಅರಸಪ್ಪನೆಂಬ ಮುಗ್ಧ ಪೊಲೀಸರ ಗುಂಡೇಟಿಗೆ ಆಹುತಿಯಾದ. ನಂತರ ನಡೆದ ಗಲಾಟೆಯಿಂದ ನಮ್ಮ ಎಲ್ಲ ಯೋಜನೆ ತಲೆಕೆಳಕಾಗಿ ದೊಡ್ಡ ಮೊತ್ತದ ಸಾಲ ಬಳಗದ ಮೇಲೆ ಬಿತ್ತು. ಅದನ್ನು ತೀರಿಸಲು ಪಟ್ಟಪಾಡು ಬೇರೆ, ನಂತರ ಬಳಗದ ಕಾರ್ಯ ನಡೆಸುವುದು ಕಷ್ಟ ಅನ್ನುವ ಸ್ಥಿತಿಯಲ್ಲಿದ್ದಾಗ ಎಂ.ವಿ.ಸೀ. 'ಈ ಕರುನಾಡಿದು ನನ್ನ ಮನೆ' ಎಂಬ ಕೃತಿಯನ್ನು ಪ್ರಕಟಿಸಿ ೧೦೦೦ ಪ್ರತಿಗಳನ್ನು ಕೊಟ್ಟು ಅದರ ಮಾರಾಟದಿಂದ ಬರುವ ಪೂರ್ಣ ಹಣವನ್ನು ಬಳಗದ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವಂತೆ ಹೇಳಿದ್ದು ಮರೆಯಲಾಗದಂತಹ ಸಂಗತಿ. ಆರ್ಥಿಕವಾಗಿ ಅಂತಹ ಶ್ರೀಮಂತರಲ್ಲದ ಎಂ.ವಿ.ಸೀ. ಅವರು ಕನ್ನಡ ಜಾಗೃತಿಗೆ ಇಂತಹ ನೆರವು ನೀಡಿದ್ದು ಸಾಮಾನ್ಯ ಕೊಡುಗೆಯಲ್ಲ.

ಸಾಹಿತಿಗಳ ಕಲಾವಿದರ ಬಳಗ, ಕನ್ನಡ ಶಕ್ತಿ ಕೇಂದ್ರಗಳು

ಪ್ರಾರಂಭವಾದಂದಿನಿಂದ ಎಂ.ವಿ.ಸೀ. ವಿಧಿವಶರಾಗುವವರೆಗೆ ಅವುಗಳು ನಡೆಸಿದ ಎಲ್ಲ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಎಂ.ವಿ.ಸೀ.ಯವರ ಪಾತ್ರವಿತ್ತು. ಬಳಗ ಮತ್ತು ಶಕ್ತಿ ಕೇಂದ್ರದ ಹಲವು ಮಹತ್ವದ ಕಾರ್ಯಕ್ರಮಗಳು ರೂಪುಗೊಂಡಿದ್ದು ಪೂರ್ವಭಾವಿ ಸಮಾಲೋಚನನೆ ನಡೆಸಿದ್ದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದಲ್ಲಿ ಅರ್ಥಾತ್ ಎಂ.ವಿ.ಸೀ. ಮನೆಯಲ್ಲಿ. ಮುಖ್ಯಮಂತ್ರಿಗಳನ್ನು ಭೇಟಿ ಮಾಡುವ ನಿಯೋಗವಿರಲಿ, ಪ್ರತಿಭಟನೆ ಸಭೆಯಿರಲಿ, ಧರಣಿಯಿರಲಿ ಇಲ್ಲವೆ ಪಂಜಿನ ಮೆರವಣಿಗೆಯಿರಲಿ ಇನ್ನಾವುದೇ ಕನ್ನಡಪರ ಹೋರಾಟವಿರಲಿ, ಯಾವುದೇ ಮುಜುಗರವಿಲ್ಲದೆ, ಮಡಿವಂತಿಕೆ ತೋರದೆ ಕನ್ನಡದ ಮಣಿಹದಲ್ಲಿ ಪಾಲ್ಗೊಂಡು ಕಾರ್ಯಕರ್ತರ ಆದರಕ್ಕೆ, ಗೌರವಕ್ಕೆ ಪಾತ್ರರಾಗಿದ್ದರು.

ಎಂ.ವಿ.ಸೀ. ಅವರು ಪಾಲ್ಗೊಂಡ ಕನ್ನಡಪರ ಕಾರ್ಯಕ್ರಮಗಳ ಪಟ್ಟಿಮಾಡುವುದು ಸಾಧುವೂ ಅಲ್ಲ, ಸಾಧ್ಯವೂ ಇಲ್ಲ. ನನ್ನ ನೆನಪಿನಲ್ಲಿ ಗಟ್ಟಿಯಾಗಿ ಉಳಿದಿರುವ ಒಂದೆರಡು ಘಟನೆ ಮಾತ್ರ ಇಲ್ಲಿ ಹೇಳುತ್ತಿದ್ದೇನೆ.

ಸಾಹಿತಿಗಳ ಕಲಾವಿದರ ಬಳಗ ಕನ್ನಡ ದೂರದರ್ಶನಕ್ಕೆ ನಡೆಸಿದ ಹೋರಾಟ ಹಲವು. ಒಂದು ಸಭೆಯಲ್ಲಿ ಡಾ॥ ಎಂ. ಚಿದಾನಂದಮೂರ್ತಿಯವರು 'ಕನ್ನಡ ವಿರೋಧಿ ದೂರದರ್ಶನಕ್ಕೆ ಬಾಂಬ್ ಹಾಕಿ' ಎಂದು ಹೇಳಿದರು. ಅದು ದೊಡ್ಡ ವಿವಾದವನ್ನೇ ಸೃಷ್ಟಿಸಿತು. ಡಾ॥ ಮೂರ್ತಿಯವರ ಅಭಿಪ್ರಾಯ ಕನ್ನಡ ಕಾರ್ಯಕರ್ತರ ಅಭಿಪ್ರಾಯವೇ ಆಗಿತ್ತು. ಆ ತರುಣದಲ್ಲೇ ಬಳಗದ ಒಂದು ಸಭೆಯಲ್ಲಿ ಮಾತನಾಡುತ್ತಾ ಎಂ.ವಿ.ಸೀ.ಯವರು 'ಮೂರ್ತಿಯವರು ಕನ್ನಡ ವಿರೋಧಿ ದೂರದರ್ಶನಕ್ಕೆ ಬಾಂಬ್ ಹಾಕಿ ಎಂದಿದ್ದಾರೆ. ನಿಜವಾಗಿ ಕನ್ನಡವನ್ನು ಪ್ರೀತಿಸುವ ಯಾವ ವ್ಯಕ್ತಿಯೂ ಇದನ್ನು ವಿರೋಧಿಸುವುದು ಕಷ್ಟ. ಆದರೆ, ಯಾರು ಬಾಂಬ್ ಹಾಕಬೇಕು ? ಅನ್ನುವ ಪ್ರಶ್ನೆ ಬರುತ್ತದೆ. ನಾನು ಆ ಕೆಲಸ ಮಾಡಲು ಸಿದ್ಧ. ಆದರೆ ನೀವು ಸರಿಯಾದ ಸ್ಥಳಕ್ಕೆ ನನ್ನನ್ನು ಎತ್ತಿಕೊಂಡು ಹೋಗಿ ಕೂರಿಸಿ ಕೈಗೆ ಬಾಂಬ್ ಕೊಡಬೇಕು ಅಷ್ಟೆ. ಉಳಿದದ್ದು ನಾನು ಮಾಡುತ್ತೇನೆ' ಎಂದರು. ಇಂತಹ ಮಾತುಗಳು ಕನ್ನಡ ಕಾರ್ಯಕರ್ತರ ಮೇಲೆ ಬೀರುತ್ತಿದ್ದ ಪರಿಣಾಮ ಅಪಾರ.

ಮಹಿಷಿ ವರದಿ ಪ್ರಕಟಣೆಗೆ ಒತ್ತಾಯಿಸಿ ಗೋಪಾಲಗೌಡ ವೃತ್ತದಲ್ಲಿ ಧರಣಿ ಕಾರ್ಯಕ್ರಮ ಏರ್ಪಡಿಸಿದ್ದರು. ಅಂದು ಕೊನೆಯಲ್ಲಿ ಎಂ.ವಿ.ಸೀ. ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅವರ ಆರೋಗ್ಯ ಸರಿಯಿರಲಿಲ್ಲ. ಸಾಲದ್ದಕ್ಕೆ ಅವರು ಬಂದ ಸ್ವಲ್ಪ ಹೊತ್ತಿನ ನಂತರ ತುಂತುರು ಮಳೆ ಪ್ರಾರಂಭವಾಯಿತು. ಧ್ವನಿವರ್ಧಕ ಬೇರೆ ಇಲ್ಲ. ಇಂತಹ ಸನ್ನಿವೇಶದಲ್ಲಿ ಮಾತನಾಡಲು ಪ್ರಾರಂಭಿಸಿದರು. 'ನೋಡಿ ನಾನು ನಿಜವಾದ ಕನ್ನಡಿಗರ ಧ್ವನಿ. ನನ್ನ ಧ್ವನಿ ಯಾರಿಗೂ ಕೇಳಿಸುತ್ತಿಲ್ಲ ಎಂದು ಭಾವಿಸಿದ್ದೇನೆ. ನನ್ನ ಮಾತು ಕೇಳಲು ಧ್ವನಿವರ್ಧಕ ಬೇಕು. ನಾನು ಇನ್ನೊಬ್ಬರ ಸಹಕಾರವಿಲ್ಲದೆ ನಡೆಯಲಾರೆ. ಬೆಂಗಳೂರಿನಲ್ಲಿ ಕನ್ನಡದ ಸ್ಥಿತಿ ಬೇರೆ ಅಲ್ಲ. ನನ್ನ ಸ್ಥಿತಿ ಬೇರ ಅಲ್ಲ.

ನೀವೆಲ್ಲ ಒಗ್ಗಾಟ್ಟಾಗ ಕೂಗಿದರೆ ಹೋರಾಡಿದರೆ ಕನ್ನಡ ಉಳಿದೀತು. ನೀವು ಹಾಗೆ ಮಾಡಿ ಎಂಬುದು ನನ್ನ ಪ್ರಾರ್ಥನೆ' ಎಂದರು. ಅವರು ಅಂದು ಮಾತು ಮುಗಿಸಿದಾಗ ಹಲವು ಕನ್ನಡ ಕಾರ್ಯಕರ್ತರ ಕಣ್ಣಲ್ಲಿ ನೀರು ತುಂಬಿತ್ತು. ಕೆಲವರು ಕನ್ನಡದ ಕೆಲಸ ಮಾಡುವುದಾಗಿ ಹೇಳುತ್ತಿದ್ದರು, ಇಂತಹ ಹಲವು ಘಟನೆ ಹೇಳಬಹುದು. ಇನ್ನೊಂದು ಘಟನೆ ಮಾತ್ರ ಇಲ್ಲಿ ಹೇಳುತ್ತೇನೆ. ಒಂದು ಪ್ರತಿಭಟನಾ ಸಭೆಗೆ ಎಂ.ವಿ.ಸೀ. ಬಂದಿದ್ದರು, ಅಂದು ಅವರಿಗೆ ನಾಲ್ಕು ಮಾತು ಆಡುವಲ್ಲಿ ಸುಸ್ತಾಯಿತು, ಅಲ್ಲಿದ್ದ ಪತ್ರಕರ್ತ ಮಿತ್ರರು ಏಕೆ ನೀವು ಅವರನ್ನು ಕರೆದು ಹಿಂಸಿಸುತ್ತೀರಿ ಎಂದರು. ಇದು ಎಂ.ವಿ.ಸೀ. ಅವರ ಕಿವಿಗೆ ಬಿತ್ತು. ತಕ್ಷಣ ಅವರಿಗೆ ಹೇಳಿದರು 'ಇದು ಹಿಂಸೆ ಅಲ್ಲಪ್ಪ ನನ್ನ ಕರ್ತವ್ಯ' ಎಂದು. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಕನ್ನಡೇತರ ಅಧ್ಯಕ್ಷರು ನೇಮಕವಾಗುವ ವಿರುದ್ಧ ಅಲ್ಲಿನ ಕನ್ನಡ ಸಂಘ ಒಂದು ಧರಣಿ ಏರ್ಪಡಿಸಿತ್ತು, ಆ ಧರಣಿಯಲ್ಲಿ ಎರಡು ಘಂಟೆ ಭಾಗವಹಿಸಿದ್ದರು.

ಸಾಹಿತಿಗಳ ಕಲಾವಿದರ ಬಳಗ ನಡೆಸುತ್ತಿದ್ದ 'ಕನ್ನಡ ಕಲಿ' ಪತ್ರಕೆಗೆ ಅವರು ಕನ್ನಡ ಸಮಸ್ಯೆ ಕುರಿತು ಬರೆದ ಲೇಖನ. ಬಳಗ ಏರ್ಪಡಿಸಿದ್ದ 'ಅನ್ಯ ಪ್ರಾಂತೀಯರ ವಲಸೆ–ಕನ್ನಡಿಗರ ಸಮಸ್ಯೆ' ಕುರಿತಾದ ವಿಚಾರ ಸಂಕಿರಣದ ಅಧ್ಯಕ್ಷರ ಭಾಷಣ ಕನ್ನಡ ಶಕ್ತಿ ಕೇಂದ್ರದ ಕಾರ್ಯ ಸಮಿತಿ ಸಭೆಗೆ ಅವರು ಬರೆದ ಪತ್ರಗಳು ; ಅವರು ಸಮಸ್ಯೆಗಳನ್ನು ವಿಶ್ಲೇಷಿಸುತ್ತಿದ್ದ ರೀತಿ ಮತ್ತು ಸಂಘಟನೆಯ ಬಗೆ ಅವರ ಅನುಭವಕ್ಕೆ ನಿದರ್ಶನವಾಗಿವೆ.

ತಮ್ಮ ಎದುರು ಅನ್ಯಾಯವಾದಾಗ ಎಲ್ಲ ಸಜ್ಜನರೂ ವಿಷಾದ ಪಡುತ್ತಾರೆ, ನೊಂದುಕೊಳ್ಳುತ್ತಾರೆ. ಆದರೆ, ಅನ್ಯಾಯದ ವಿರುದ್ಧ ಪ್ರತಿಭಟಿಸಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಅನ್ಯಾಯದ ವಿರುದ್ಧ ಪ್ರತಿಭಟಿಸುವ ಶಕ್ತಿಯಿದ್ದ ಅಪರೂಪದ ಮಂದಿಯಲ್ಲಿ ಎಂ.ವಿ.ಸೀ. ಒಬ್ಬರು. ಕನ್ನಡ ಸಾಹಿತ್ಯ ಪರಿಷತ್ತಿನ ಅವ್ಯವಹಾರ ಮತ್ತು ಅನಂತರದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ, ಅದರಲ್ಲಿ ಅಕ್ರಮದಿಂದ ಎಲ್. ಎಸ್. ಶೇಷಗಿರಿರಾವ್ ಸೋಲು, ಈ ಬಗೆಗೆ ನಡೆದಿತ್ತೆನ್ನಲಾದ ಮೋಸ ಮತ್ತು ಅನ್ಯಾಯದ ವಿರುದ್ಧ ಒಂದು ಹೋರಾಟ ಸಮಿತಿ ರೂಪುಗೊಂಡಿತು. ಆ ಸಮಿತಿಯ ಅಧ್ಯಕ್ಷರಾಗಿದ್ದವರು ಎಂ.ವಿ.ಸೀ. ಆ ಸಮಿತಿಯ ಹೋರಾಟದ ಫಲವೇ ನ್ಯಾ. ಶ್ಯಾಮಸುಂದರ್ ಆಯೋಗದ ನೇಮಕ. ಉಳಿದ ವಿವರ ಅಗತ್ಯವಿಲ್ಲ. ಅದು ನಮ್ಮ ಮುಂದಿದೆ. ಎಂ. ವಿ. ಸೀ.ಯವರ ಸತ್ಯ ನಿಷ್ಠ ನಿಲುವು ಮತ್ತು ಅನ್ಯಾಯದ ವಿರುದ್ಧ ನೇರವಾಗಿ ಪ್ರತಿಕ್ರಿಯಿಸುತ್ತಿದ್ದ ರೀತಿ, ಎಲ್ಲ ಕನ್ನಡ ಕಾರ್ಯಕರ್ತರಿಗೆ ಆದರಣೀಯ, ಅನುಕರಣೀಯ. ನ್ಯಾಯದ ಪರವಾಗಿ ಪ್ರತಿಕ್ರಿಯಿಸುವ ಹಲವು ಜನ ಹಿರಿಯರನ್ನು ನಾನು ಹತ್ತಿರದಿಂದ ಕಂಡಿದ್ದೇನೆ. ಇಂದೂ ಅವರು ನಮ್ಮೊಡನಿದ್ದಾರೆ. ಎಂ.ವಿ.ಸೀ. ಅವರೊಬ್ಬರೆ ಎಂದು ನನ್ನ ಅಭಿಪ್ರಾಯವಲ್ಲ. ಆದರೆ ಅವರಷ್ಟು ನ್ಯಾಯ ನಿಷ್ಠುರರು ಅಪರೂಪ ಎಂಬುದಷ್ಟೆ ನನ್ನ ಅಭಿಪ್ರಾಯ.

ಎಂ.ವಿ.ಸೀ. ಅವರ ಸಂಘಟನಾಶಕ್ತಿ ಅಪಾರವಾದದ್ದು. ಅದು ನನ್ನ ಲೇಖನದ ವ್ಯಾಪ್ತಿಗೆ ಮೀರಿದ್ದು, ಆದರೂ ಅವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ಕಟ್ಟಿ ಬೆಳೆಸಿದ ಬಗೆ, ಮಾರ್ಗ ಪ್ರತಿಯೊಬ್ಬ ಸಂಘಟಕನೂ ಗಮನಿಸಲೇಬೇಕಾದುದು ಎಂದು ನನ್ನ ತಿಳಿವಳಿಕೆ. ಅವರು ಕಿರಿಯರನ್ನು ಬೆಳೆಸುತ್ತಿದ್ದ ರೀತಿ, ಪ್ರೋತ್ಸಾಹಿಸುತ್ತಿದ್ದ ಪರಿ, ಬರಹಕ್ಕೆ ನಿಲುಕದಷ್ಟು ವಿಶಿಷ್ಟವಾದದ್ದು. ಅವರು ಕಾರ್ಯಕರ್ತರಿಗೆ ಕೆಲಸ ಕೊಟ್ಟು ಮಾಡಿಸುತ್ತಿದ್ದ ಮಾರ್ಗ, ತಪ್ಪುಗಳನ್ನು ನೋವಾಗದ ರೀತಿ ತಿದ್ದುತ್ತಿದ್ದ ಬಗೆ ಆದರಣೀಯವಾದದ್ದು. ಪ್ರತಿಷ್ಠಾನದ ಸಹೃದಯ ಗೋಷ್ಠಿ ಸಂಚಾಲಕನಾಗಿ, ಎಂ.ವಿ.ಸೀ. ಅಧ್ಯಕ್ಷತೆಯಲ್ಲಿ ರೂಪುಗೊಂಡಿದ್ದ ಚಿದಾನಂದಮೂರ್ತಿ ಅಭಿನಂದನ ಸಮಿತಿಯ ಕಾರ್ಯದರ್ಶಿಯಾಗಿ ಪತ್ರ ಬರೆಯುವುದು ಹೇಗೆ ಎಂಬುದರಿಂದ ಹಿಡಿದು ಜನರನ್ನು ಸಂಪರ್ಕಿಸುವವರೆಗೆ ನಾನು ಕಲಿತಿದ್ದು ಅಪಾರ. ಅಂತಹ ಹಿರಿಯ ಚೇತನವನ್ನು ಹತ್ತಿರದಿಂದ ನೋಡಿದ ಮತ್ತು ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ ಭಾಗ್ಯ ನನ್ನದು.

□

೩. ಎಂ.ವಿ.ಸೀ. 'ರಾಘವ' ಅವರ ಕಾವ್ಯ

• ಡಾ. ಜಿ. ಬಿ. ಹರೀಶ್

ವಿಚಿತ್ರ ಸನ್ನಿವೇಶದಲ್ಲಿ ನಾವು ಬದುಕುತ್ತಿದ್ದೇವೆ. ಪ್ರೊ. ಎಂ.ವಿ.ಸೀ. ಅವರ ಶತಮಾನೋತ್ಸವ ವರ್ಷ ಮುಗಿದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಎಂ.ವಿ.ಸೀ. ಅವರ ಸಮಗ್ರಗಳು ಅಚ್ಚಾಗುತ್ತಿವೆ. ಅದರಲ್ಲಿ ಒಂದು ಸಂಪುಟ ಅವರ ಸಮಗ್ರ ಕವಿತೆಗಳದ್ದು.

ವಿಚಿತ್ರ ಎಂದೆ ; ಯಾಕೆ ? ಕೆಲವರು ನಿತ್ಯ ನೆನಪಾಗುತ್ತಾರೆ. ಕೆಲವರು ವರ್ಷಕ್ಕೊ, ಹತ್ತು ವರ್ಷಕ್ಕೊ ಒಮ್ಮೆ ನೆನಪಾಗುತ್ತಾರೆ. ಕೆಲವರು ಸದಾ ನೆನಪಾದರೂ ವಿಶೇಷವಾಗಿ ನೂರು ತುಂಬಿದಾಗ ನೆನಪಾಗತ್ತಾರೆ. ತುಂಬು ಬಾಳು ಬಾಳಿದವರೂ ನೂರು ತುಂಬಿದಾಗಲಾದರೂ ನೆನಪಾಗುತ್ತಾರಲ್ಲ, ಅದು ವಿಚಿತ್ರ.

ಈ ಎಂ.ವಿ.ಸೀ. ಯಾರು ? ಅವರ ಕೃತಿಗಳನ್ನು ಈಗಿನ ತರುಣ ಪೀಳಿಗೆಯ ಕವಿ, ವಿಮರ್ಶಕರು ಏಕೆ ಓದಬೇಕು? ಏಕೆ ಅಧ್ಯಯನ ಮಾಡಬೇಕು? ಎಂದು ಹಲವರ ಅಂಬೋಣ. ಕವಿ ಯಾರೆಂದು ಗೊತ್ತಿಲ್ಲದೆ ನನ್ನ ಪೀಳಿಗೆಯವರು ಎಂ.ವಿ.ಸೀ. ಕವಿತೆಗಳನ್ನು ಅಧ್ಯಯನ ಮಾಡಿದ್ದುಂಟು. 'ಹೂವನು ಮಾರುತ ಹೂವಾಡಗಿತ್ತಿ' ಅಂಥ ಒಂದು ನೆನಪುಗಲ್ಲು.

ಮಕ್ಕಳ ಸಾಹಿತ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ, ಸಂಶೋಧನೆಗಳಲ್ಲಿ ಕೈಯಾಡಿಸಿದವರು ಇವರು. ಕೈ ಆಡಿಸಿದ್ದು ಮಾತ್ರವಲ್ಲ, ನಾಕು ಕಾಲ ನಿಲ್ಲುವಂಥ ಬೆಳೆ ತೆಗೆದವರು. ಆದರೂ ಸಮಗ್ರವಾಗಿ ಓದಲು ನೂರು ವರ್ಷ ತುಂಬಬೇಕಾಯಿತು. ಇದಕ್ಕೆ ಏನು ಕಾರಣ ? ಆಲಸ್ಯ ? ಕೃತಿಗಳ ಅಲಭ್ಯತೆ ? ಓದುವ ದಾರಿ ತಿಳಿಯದಿರುವುದು ? ಈ ಎಲ್ಲವೂ ಹೌದು. ಜೊತೆಗೆ ಇನ್ನೊಂದು ಕಾರಣವಿದೆ.

ನವೋದಯದಲ್ಲಿ ಬೇಂದ್ರೆ, ಕುವೆಂಪು, ಗೋವಿಂದಪೈ, ಮಾಸ್ತಿ, ಡಿ.ವಿ.ಜಿ., ಪು.ತಿ.ನ.–ಇಂತಹ ಹಿರಿ ಆಲದ ಮರಗಳಿರುವಾಗ ತಾರುಣ್ಯದಿಂದ ನಳನಳಿಸುವ ಮರಗಿಡಗಳನ್ನು ಕೇಳುವವರು ಯಾರು? ಆಗಿನ ಹಿರಿಯ ಲೇಖಕರ ಒಂದು ಹಂತದ ಓದು ಈಗ ಮುಗಿದಿದೆ ಎನಿಸುತ್ತದೆ. ಹೀಗಾಗಿ ನವೋದಯದ ಎರಡನೆಯ ಅಲೆಯ

ಲೇಖಕ ಲೇಖಕಿಯರನ್ನು ರಸಿಕರು, ವಿಮರ್ಶಕರು ಇನ್ನಾದರೂ ಪ್ರಾಂಜಲ ಮನಸ್ಸಿನಿಂದ ಓದಿಯಾರು.

ಎಂ.ವಿ.ಸೀ. ಬಾಳಿದ್ದು ಕನ್ನಡ ನಾಡಿನಲ್ಲಿ. ಬರೆದದ್ದು ಕನ್ನಡ ಭಾಷೆಯಲ್ಲಿ. ಶಾಸ್ತ್ರ-ಕಾವ್ಯ ಎಂದು ಸೀಳು ಬುದ್ಧಿ ಇಟ್ಟುಕೊಂಡವರಲ್ಲ ಅವರು. ಪ್ರಾಚೀನ ಸಾಹಿತ್ಯವನ್ನು ಕುರಿತು ಹೇರಳ ಲೇಖನಗಳನ್ನು ಬರೆದಂತೆಯೇ 'ಹಕ್ಕಿಹಾಡು', 'ಕಾವ್ಯಾಲಾಪ', 'ರಾಗ', 'ಅಶೋಕಚಕ್ರ', 'ಆ ಚಿತ್ರಗಳು', 'ಹೂವಾಡಗಿತ್ತಿ', 'ರಾಷ್ಟ್ರರಥ', 'ರಾಷ್ಟ್ರದಿನೋತ್ಸವ ಗೀತ' ಮುಂತಾದ ಕವನಸಂಕಲನಗಳನ್ನು ಬರೆದಿದ್ದಾರೆ. ಇದರಲ್ಲಿ ನವೋದಯದ ಅತಿರಥ ಮಹಾರಥರ ಮುಂದೆ ತಾವೆಂದು ಪದ್ಯ ಪ್ರಕಟಿಸುವುದು ಎಂಬ ಸಂಕೋಚದಿಂದಾಗಿ ಹಲವು ಕವನಗಳು ತಡವಾಗಿಯೇ ಪ್ರಕಟವಾಗಿವೆ.

ಈ ಪರಿಮಿತಿಗಳೊಂದಿಗೆ ಮತ್ತು ತಮ್ಮ ನಿರಂತರವಾದ ಅನಾರೋಗ್ಯದ ಕಾಟದಿಂದಾಗಿ ಅವರ ಕವನಗಳಿಗೆ ಆಗ ಸಿಗಬೇಕಾದ ಚರ್ಚೆಯ ಗೌರವ ಒದಗಲಿಲ್ಲ.

* * * *

ದೊಡ್ಡ ಪರ್ವತಕ್ಕೆ ಬೆಲೆ ಬರುವುದು ಅದರ ಸುತ್ತಲೂ ಇರುವ ಅನೇಕ ಗುಡ್ಡಗಳಿಂದ. ಗುಡ್ಡಕ್ಕೂ ದೊಡ್ಡ ಪರ್ವತದ ಸಮೀಪ ಇರುವುದರಿಂದ ಗೌರವ. ಅಸ್ತಿತ್ವ ಮತ್ತು ಗೌರವ, ಸಾಹಿತ್ಯ ಚರಿತ್ರೆಯಲ್ಲಿ ಪಕ್ಕಪಕ್ಕದಲ್ಲೇ ಸಂಚರಿಸುತ್ತಿರುತ್ತದೆ. ಹಲವು ಅಲೆಗಳಿಂದ ಕೂಡಿ ಸಮುದ್ರಕ್ಕೆ ಶೋಭೆ, ಮೆರುಗು. ಕೆಲವು ದೊಡ್ಡ ಅಲೆಗಳು, ಹಲವು ಕಿರುದೆರೆಗಳು. ಸಾಹಿತ್ಯ ಚರಿತ್ರೆಯ ೨೦ನೆಯ ಶತಮಾನದ ನವೋದಯದ ಪುಟಗಳನ್ನು ಪರ್ವತ, ಅಲೆಗಳ ರೂಪಕದ ಮೂಲಕ ಗ್ರಹಿಸಬಹುದು.

ಸದ್ಯಕ್ಕೆ ಈಗಿರುವ ಹೊಸಗನ್ನಡ ಕಾವ್ಯ ಚರಿತ್ರೆಯಲ್ಲಿ ಎಂ.ವಿ.ಸೀ. ಇರಬಹುದು. ಯರ್ಮುಂಜ, ಪಾಂಡೇಶ್ವರ...ಪತಿರಾವ್ ಇರಬಹುದು. ಬೆಳೆಗೆರೆ ಜಾನಕಮ್ಮ, ಗೋವಿಂದರಾವ್ ಇರಬಹುದು. ಕಿರುದೆರೆಗಳಾಗಿ ಅಲ್ಲಲ್ಲಿ ವಿಮರ್ಶೆಯ ಕಣ್ಣಿಗೆ ಕಾಣಿಸಿಕೊಂಡಿದ್ದಾರೆ. ಕರ್ನಾಟಕ ಸಂಸ್ಕೃತಿಯ ನೂರು ವರ್ಷಗಳ ಘಟ್ಟದಲ್ಲಿ ರಸಿಕಸಂಪ್ರದಾಯ ನಶಿಸಿ, ಪಾಶ್ಚಾತ್ಯ ಪ್ರತೀತ ವಿಮರ್ಶಾ ಸಂಪ್ರದಾಯ ತಲೆಯೆತ್ತಿದ್ದರಿಂದ ಆದ ನಷ್ಟವನ್ನು ಕನ್ನಡ ವಿಮರ್ಶೆ ಇನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

* * * *

ಎಂ.ವಿ.ಸೀ. ಅವರು ಕಾವ್ಯ ರಚಿಸಿದ ಕಾಲದಲ್ಲಿ ಎರಡು ಪ್ರಬಲ ಶಕ್ತಿಗಳು ಕೆಲಸ ಮಾಡುತ್ತಿದ್ದವು.

೧) ಯೂರೋಪಿನ ಅದರಲ್ಲೂ ಇಂಗ್ಲೆಂಡಿನ ಯಜಮಾನ್ಯದ ಎದುರು ತಲೆಯೆತ್ತಿದ ಸಾಂಸ್ಕೃತಿಕ ರಾಷ್ಟ್ರೀಯತೆ (Cultural Nationalism).

೨) ಯೂರೋಪಿನ ಮೂಲದಿಂದ ಹೊರಟು ರಷ್ಯಾ ಮಾರ್ಗದ ಮೂಲಕ ಭಾರತವನ್ನು ಪ್ರವೇಶಿಸಿದ ಕಮ್ಯುನಿಸಂ (Europian Communism) ಎಂ.ವಿ.ಸೀ. ಅವರ ಕವಿತೆಗಳು ಸಾಂಸ್ಕೃತಿಕ ರಾಷ್ಟ್ರೀಯತೆಯ ಅಂಗಗಳಾದ ನಾಡಚೆಲುವು, ಸಭ್ಯತೆ,

ಗಾಂಧೀಜಿಯಂಥ ಮಹಾನ್ ಚೇತನ ನಿಲುಮೆ ಇವುಗಳನ್ನು ಹಲವು ಸ್ತರಗಳಲ್ಲಿ ಅನುಸಂಧಾನಿಸಿದೆ.

ಕನ್ನಡದ ಮನಸ್ಸು ಮಹಾತ್ಮಗಾಂಧೀಜಿಯವರ ನಿಲುವು, ವ್ಯಕ್ತಿತ್ವ, ಕನಸನ್ನು ಹಲವು ಬಗೆಗಳಲ್ಲಿ ಧ್ಯಾನಿಸಿ ಕವಿತೆ ಮಾಡಿದೆ. ಈ ನಿಟ್ಟಿನಲ್ಲಿ ಗಾಂಧಿವಾದದತ್ತ ಸೆಳೆತವಿದ್ದ ಸೀತಾರಾಮಯ್ಯನವರು ೧೯೪೪ರಲ್ಲಿ ಮಹಾತ್ಮ ಗಾಂಧೀಜಿಯವರನ್ನು ಅನಾರೋಗ್ಯದ ಕಾರಣದಿಂದ ಸೆರೆಯಿಂದ ಬಿಡುಗಡೆ ಮಾಡಿದಾಗ, ಅವರ ಆರೋಗ್ಯ ಕೋರಿ ಬರೆದ ಕವನ ಗಮನ ಸೆಳೆಯುವಂತಿದೆ.

"ದೇವ ಕರುಣಿಸು ಜಯದ ನಾಮಕಗೆ
ಜೀವದಿಂದುಳುಹೆಮಗೆ ನಾಡ ಬಿಡುಗಡೆಗೆ
ಹಿಂಸೆನ್ನಡಗಿಸಲು, ಹಿಂಸಕರನೆದುರಿಸೆ, ಅ
ಹಿಂಸೆಯೆನ್ನುವ ಹಿರಿಯ ತತ್ತ್ವವನು ಸಾರಿ,
ಧ್ವಂಸಕರ ಲೋಕದಲಿ ಶಾಂತಿ ಮೂಡಿಸೆ, ಪರಮ–
ಹಂಸ ಸಂದೇಶವಾಚರಿಸುತಿಹ ಗಾಂಧಿಗೆ"

(ಮಹಾತ್ಮರ ಯಶಃ ಪ್ರಾರ್ಥನೆ)

'ಅಶೋಕ ಚಕ್ರ' ಕವನ ಸಂಕಲನದಲ್ಲಿ ಅನೇಕ ಬಗೆಯ ಸಾಂಸ್ಕೃತಿಕ ರಾಷ್ಟ್ರವಾದದ ಕವನಗಳಿವೆ. ಭಾರತವೆನ್ನುವುದಕ್ಕೆ ೫೦೦೦ ವರ್ಷಗಳ ಹಲವು ಸ್ತರಗಳ ಜೀವನ ವೈವಿಧ್ಯತೆ, ರಸವಿದೆ. ಅದು ಬ್ರಿಟಿಷರ ವಸಾಹತುಶಾಹಿಯಲ್ಲಿ ಕೇವಲ ೧೫೦ ವರ್ಷಗಳಿಂದ ಹೊರಟ ರಾಜಕೀಯಾತ್ಮಕ ರಾಷ್ಟ್ರವಾದವಲ್ಲ ಎಂಬ ನಿಲುವು ಎಂ.ವಿ.ಸೀ. ಅವರ ಹಲವು ಕವಿತೆಗಳಲ್ಲಿದೆ.

೧. "ಸ್ವತಂತ್ರ ಭಾರತದರುಣೋದಯದ
ಮುಂಗಿರಹಾವದೋ ಮೂಡುತಿದೆ ;
ಶತಮಾನದ ಮೇಲಿನ ಕಡುದಾಸ್ಯವ
ಭಂಗಗೈದ ತಮವೋಡುತಿದೆ"

(ಜಯವಾಗಲಿ ಇಳೆಗೆಲ್ಲ ಜಯ)

೨. "ಇಂದಿನ ಜಯ ಹೊರಶಕ್ತಿಯ ಹುಸಿಜಯ
ಹಿಂಗಲಿಲ್ಲ ಲೋಕದೊಳು ಭಯ ;
ಮುಂದೆ ಭಾರತವು ತೋರುವ ಆತ್ಮದ
ಜಯವಾಗಲಿ ಇಳೆಗೆಲ್ಲ ಜಯ"

(ಅದೇ)

೩. "ಎನಿತೊ ಶತಮಾನಂಗಳಿಂದವರ ಸಾವ್ ತುಳಿದು
ಗೈದ ಪಾಪದ ಫಲವೆ ನಮ್ಮ ಇಂದಿನ ದಾಸ್ಯ"

(ಅಸ್ಪೃಶ್ಯನಾರು ?)

೪. "ಮತದ ಮೈಲಿಗೆ ಕಳೆದು ಒಮ್ಮತದ ಮಡಿಯುಟ್ಟು

ಸ್ವಾತಂತ್ರ್ಯ ಮಂದಿರದೊಳೆಲ್ಲ ನೆರೆದು
ಭಾರತಾಂಬೆಯನೇಕನಿಷ್ಠೆಯಲಿ ಭಜಿಪಂತೆ
ಹರಸು, ಹೇ ! ಭಾರತದ ಭಾಗ್ಯದೈವ !"

(ಹರಸು, ಹೇ ! ಭಾರತದ ಭಾಗ್ಯದೈದ)

ಬುದ್ಧ, ಕೃಷ್ಣ, ಅಶೋಕ, ಗಾಂಧಿ, ಇವರ ಆಶಯಗಳನ್ನು ಒಳಗೊಳ್ಳುವ ಹಲವು ನಿಟ್ಟಿನ ಕವನಗಳನ್ನು ಎಂ.ವಿ.ಸೀ. ರಚಿಸಿದ್ದಾರೆ. ಅವುಗಳನ್ನು ಕರ್ನಾಟಕ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದ ಅಭ್ಯಾಸ ಮಾಡಬೇಕಿದೆ. ಯಾರಾದರೂ ಒಂದೆರಡು ಪಿಹೆಚ್.ಡಿ. ಮಾಡುವಷ್ಟು ಶಕ್ತಿ ಅವರ ಕವನ ಸಂಕಲಗಳಲ್ಲಿದೆ.

* * * *

ಉದಾರವಾದಿ ಹಿಂದೂ ದೃಷ್ಟಿಯ ಮಾಸ್ತಿಯವರ ದಾರಿ ತುಳಿದವರು ಎಂ.ವಿ.ಸೀ. ಉಗ್ರ ಪ್ರಾಂತ್ಯಾಭಿಮಾನದ ಬದಲು ಎಲ್ಲರನ್ನೂ ತಮ್ಮವರೆಂದು ನೋಡುವ, ಸ್ವೀಕರಿಸುವ ದೃಷ್ಟಿ ಇವರ ಕವಿತೆಗಳ ಹಿಂದಿದೆ. ಗಾಂಧಿ ಮಾದರಿಯ ಹಿಂದೂ ದೃಷ್ಟಿ ಕವಿತೆಗಳು ಅವರಲ್ಲಿ ಹಲವಿರುವುದು ನೋಡಿದ್ದೇವೆ. ಕೊನೆಯಲ್ಲಿ ಅವರ ಕವಿತೆಗಳ ಭಾಷೆ, ಶೈಲಿ, ಛಂದಸ್ಸಿನ ವೈವಿಧ್ಯ, ಅನುವಾದಿತ ಕವನಗಳು ಇವುಗಳನ್ನೆಲ್ಲ ಅಧ್ಯಯನ ಮಾಡಬೇಕಿದೆ. ನವೋದಯದ ಮತ್ತು ಉಳಿದ ಪಂಥಗಳ ಕವಿಗಳೊಂದಿಗೆ ಎಂ.ವಿ.ಸೀ. ಅವರ ಕವಿತೆಗಳನ್ನು ತೌಲನಿಕವಾಗಿ ಓದುವ ಅವಶ್ಯಕತೆಯಿದೆ.

ಈ ಹಿಂದೆ ಎತ್ತಿದ ಪ್ರಶ್ನೆಯ ಎರಡನೆಯ ಭಾಗವಾಗಿ, ಕಮ್ಯುನಿಸಂ ಕುರಿತು ಎಂ.ವಿ.ಸೀ. ಧೋರಣೆ ಕಾವ್ಯಾಭಿವ್ಯಕ್ತಿ ಕುರಿತು ಕೆಲವು ಮಾತುಗಳನ್ನಾಡಬೇಕಾದ ಅವಶ್ಯಕತೆಯಿದೆ. ಬೇರೆ ಬೇರೆ ಕಾರಣಗಳಿಗಾಗಿ ಕನ್ನಡದ ಮುಖ್ಯ ಕವಿ ಸಾಹಿತಿಗಳು ಯೂರೋಪ್ ಕೇಂದ್ರಿತ ಕಮ್ಯುನಿಸಂ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದಾರೆ. ಮಾಸ್ತಿ, ಕಾರಂತ, ಅಡಿಗ, ಲಂಕೇಶ್ ಮುಂತಾದವರ ಸಾಹಿತ್ಯವನ್ನು ಅವರ ರಾಜಕೀಯ ನಿಲುವಿನ ದೃಷ್ಟಿಯಿಂದ ನೋಡಿದರೆ ಈ ಮಾತಿಗೆ ಪುರಾವೆ ಸಿಗುತ್ತದೆ.

ಎಂ.ವಿ.ಸೀತಾರಾಮಯ್ಯನವರ 'ಕಾವ್ಯಾಲಾಪ' ಒಂದು ವಿಶಿಷ್ಟ ಕವನ ಸಂಕಲನ. "ನನ್ನ ಮಾತು' ಎಂಬ ಮುನ್ನುಡಿ ರೂಪದ ಲೇಖಕರ ಮಾತಿನಲ್ಲಿ ಎಂ.ವಿ.ಸೀ. 'ಕಾವ್ಯಾಲಾಪ' ಹುಟ್ಟಿಕೊಂಡ ಹಿನ್ನೆಲೆಯಲ್ಲಿ ವಿವರಿಸಿಕೊಂಡಿದ್ದಾರೆ.

"ಕಾವ್ಯಾಲಾಪ", ೪೦–೫೦ ಪದ್ಯಗಳ ಒಂದು ತೀರ ಚಿಕ್ಕ ಪುಸ್ತಕ. ಪುಸ್ತಕ ಚಿಕ್ಕದಾದರೂ, ಅದರ ಪರಿಣಾಮ, ಅಂದಿನ ಸಾಹಿತ್ಯ ಪ್ರಪಂಚದಲ್ಲಿ ತಕ್ಕಮಟ್ಟಿಗೆ ಆಯಿತು. ರಷ್ಯದ ಅಕ್ಟೋಬರ್ ಕ್ರಾಂತಿಯ ಪ್ರಭಾವ ನನ್ನ ಮೇಲಾಗಿದ್ದರೂ, ನಾನು ಕಮ್ಯೂನಿಸಮ್ಮಿನ ಸಿದ್ಧಾಂತವನ್ನು ಪೂರ್ತಿ ಒಪ್ಪಿರಲಿಲ್ಲ. ಮಹಾತ್ಮರು ಬೋಧಿಸಿದ ಅಹಿಂಸಾಯುತ ಕ್ರಾಂತಿಯಲ್ಲಿ ನನ್ನ ನಿಷ್ಠೆ ದೃಢವಾಗಿ ನೆಲೆಸಿತ್ತು."

ನವೋದಯ ಕಾಲಘಟ್ಟದ ಕಾವ್ಯದ ತಾತ್ವಿಕತೆಯನ್ನು ಆದಷ್ಟು ಮಟ್ಟಿಗೆ ಪ್ರತಿಪಾದಿಸುವ 'ಕಾವ್ಯಾಲಾಪ', ಕನ್ನಡ ಕವಿತೆಯ ಚರಿತ್ರೆಯಲ್ಲಿ ಗದ್ಯ ಕೃತಿಯಲ್ಲದಿದ್ದರೂ, ಗಮನಿಸಲೇಬೇಕಾದ ಕೃತಿ.

"ರಾಮಾಯಣವ ಸುಡಿರೊ ಭಾರತವ ಬಿಸುಡಿರೋ
ಎಂದೆನಲು ಅವು ಬರಿಯ ಹಾಳೆ ಕಟ್ಟೆ?
ಆ ಮಹಾಕಾವ್ಯಗಳು ನಮ್ಮ ಜಗಜೀವನದ
ಹಾಸು ಹೊಕ್ಕುವ ತೆಗಳೆ ನೀನೆ ಕೆಟ್ಟೆ!" (೧೮)

'ಕಾವ್ಯಾಲಾಪ' ಜನ್ಮ ತಳೆಯಲು ೧೯೪೨-೪೩ರ ಸುಮಾರಿನಲ್ಲಿ, ಜೋರಿದ್ದ ಪ್ರಗತಿಶೀಲ ಚಳವಳಿಯ (Progressive movement) ಕೆಲವು ಧೋರಣೆಗಳು ಕಾರಣ. ಅದರ ಹಿನ್ನೆಲೆಯನ್ನು ಸ್ವತಃ ಎಂ.ವಿ.ಸೀ. ಅವರೇ ಹೀಗೆ ಕಾಣಿಸಿದ್ದಾರೆ :

"ಸಾಹಿತ್ಯ ಬಡವರ ಬವಣೆಯನ್ನು ಚಿತ್ರಿಸಬೇಕು, ಆ ಮೂಲಕ ಸರ್ವಸಮಾನತಾ ತತ್ವವನ್ನು ಪ್ರತಿಪಾದಿಸಬೇಕು-ಎಂಬ ನಿಲುವಿನಲ್ಲಿ ತಪ್ಪೇನೂ ಇಲ್ಲ. ಪ್ರಗತಿಶೀಲ ಪಂಥದ ಬರಹಗಾರರು ಇಷ್ಟಕ್ಕೆ ನಿಲ್ಲದೆ, ಸಮಕಾಲೀನ ಕವಿಗಳು ನಿಸರ್ಗದ ವರ್ಣನೆ ಮಾಡುತ್ತಿದ್ದುದನ್ನೂ ಪ್ರಾಚೀನ ಸಾಂಸ್ಕೃತಿಕ ಪರಂಪರೆಯಲ್ಲಿ ನಿಷ್ಠೆಯುಳ್ಳವರಾಗಿದ್ದುದನ್ನೂ ಕಟುವಾಗಿ ಟೀಕಿಸಿದರು ;...ಇವರು ಪ್ರಗತಿಶೀಲರ ದೃಷ್ಟಿಯಲ್ಲಿ ಪ್ರತಿಗಾಮಿಗಳಾದರು. ಹರೆಯದ ಬಿಸಿರಕ್ತದ "ರಾಘವ"ನಿಗೆ ಇದು ಸಹಿಸಲಿಲ್ಲ. ಪ್ರಗತಿಶೀಲ ಸಾಹಿತ್ಯದ ನಿಲುವನ್ನು ಪದ್ಯರೂಪದಲ್ಲಿ ಪ್ರತಿಭಟಿಸುತ್ತಾ, ಆ ಗುಂಪಿನೊಂದಿಗೆ ಏಕಾಂಗಿಯಾಗಿಯೇ ಹೋರಾಡಿದನು." (ನನ್ನ ಮಾತು)

ಉದಾರ ಮನಸ್ಸಿನ ಸೌಜನ್ಯದಿಂದ ಕೂಡಿದ ಎಂ.ವಿ.ಸೀ. 'ಕಾವ್ಯಾಲಾಪ'ಕ್ಕೆ ವಿರುದ್ಧವಾಗಿ 'ವ್ಯರ್ಥಾಲಾಪ' ಕವನ ಸಂಕಲನ ಬಂತೆಂದು ದಾಖಲಿಸಿ, ತಮ್ಮ ಬರಹದಿಂದ ಪ್ರಗತಿಶೀಲದ ಕಾವು ತಗ್ಗಿತು ಎಂದು ತಾವೆಂದೂ ಭಾವಿಸಿಲ್ಲ ಎಂದೂ ಬರೆಯುತ್ತಾರೆ. ಪ್ರಗತಿಶೀಲ ಕಾವ್ಯದ ಅಳಿವಿಗೆ ಅವರು ಕೊಡುವ ಕಾರಣ "ಅದರ ಸಿದ್ಧಾಂತ ತಳಹದಿಯೇ ಕಾವ್ಯತತ್ತ್ವಕ್ಕೆ ವಿರುದ್ಧವಾದದ್ದರಿಂದ ಬೇಗನೆ ನಿಂತುಹೋಯಿತು." (ನನ್ನ ಮಾತು)

ಈ ಅಸ್ತವ್ಯಸ್ತ ಜಗತ್ತಿನಲ್ಲಿ ನಮ್ಮ ಬದುಕುಗಳೇ ಹರಿದು ಹಂಚಿಹೋಗಿವೆ. ಆಸಕ್ತಿಗಳೂ ದಿಕ್ಕಾಪಾಲಾಗಿವೆ. ಕಾವ್ಯಕ್ಕೆ ಸಂಬಂಧಿಸಿದ ಒಟ್ಟು ಸ್ಪಂದನವನ್ನು ಹಿಡಿದು ಕೇಂದ್ರಕ್ಕೆ ತರುವಲ್ಲಿ ಇಂಥ ಸಮಗ್ರಗಳು ನೆರವಿಗೆ ಬರಬಹುದೆನಿಸುತ್ತದೆ. ಪ್ರೊ. ಎಂ.ವಿ.ಸೀ. ಅವರ ಸಮಗ್ರ ಕಾವ್ಯ ಸಂಪುಟವು ಕಾವ್ಯ ಕುರಿತು ಅದರಲ್ಲೂ ನವೋದಯ-ಪ್ರಗತಿಶೀಲ ಸಾಹಿತ್ಯ ಕುರಿತು ಹೊಸ ಒಳನೋಟ ಕೊಡುವುದರಲ್ಲಿ ಸಂಶಯವಿಲ್ಲ.

□

೪. ಎಂ.ವಿ.ಸೀ.ಯವರ ಮಕ್ಕಳ ಸಾಹಿತ್ಯ : ಒಂದು ನೋಟ

• ಡಾ. ಎಚ್. ಎ. ಸತ್ಯವತಿ

ನವೋದಯ ಕಾಲದ ಸಾಹಿತಿ, ಸಂಶೋಧಕ ಮತ್ತು ವಿಮರ್ಶಕರಾಗಿ ಬರವಣಿಗೆಯನ್ನು ಆರಂಭಿಸಿ, ಎಲ್ಲ ಸಾಹಿತ್ಯಕ ಚಳುವಳಿಗಳಿಗೂ ತಮ್ಮನ್ನು ಒಡ್ಡಿಕೊಂಡರೂ, ಯಾವುದೇ ಚಳುವಳಿಗೆ ವಿಶೇಷವಾಗಿ ಬದ್ಧರಾಗದೆ, ತಮ್ಮ ಸ್ವಂತಿಕೆಯ ಛಾಪನ್ನು ಮೂಡಿಸಿದವರು ಪ್ರೊ. ಎಂ. ವಿ. ಸೀತಾರಾಮಯ್ಯನವರು. ಕಾವ್ಯ, ಕಾದಂಬರಿ, ಸಣ್ಣಕಥೆ, ಪ್ರಬಂಧ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ–ಮುಂತಾದ ಸೃಜನಾತ್ಮಕ ಸಾಹಿತ್ಯ : ವಿಮರ್ಶೆ : ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಹಸ್ತಪ್ರತಿ ಶಾಸ್ತ್ರ–ಮುಂತಾದ ಶಾಸ್ತ್ರವಿಷಯಗಳೆಂಬ ಎರಡೂ ಕ್ಷೇತ್ರಗಳಿಗೆ ಅಚ್ಚಳಿಯದ ಕಾಣಿಕೆ ನೀಡಿರುವವರು ಎಂ. ವಿ. ಸೀ.ಯವರು. ಅವರ ಬಹುಮುಖೀ ದೈತ್ಯ ಪ್ರತಿಭೆ ಬೆಚ್ಚಿ ಬೀಳಿಸುವಷ್ಟು ಆಶ್ಚರ್ಯ ಮೂಡಿಸುತ್ತದೆ.

೨೦ನೆಯ ಶತಮಾನದ ಪ್ರಕಾಂಡ ವಿದ್ವಾಂಸರೂ ಪಂಡಿತರೂ ಆದ ಡಿ. ಎಲ್. ನರಸಿಂಹಾಚಾರ್, ಟಿ. ಎಸ್. ವೆಂಕಣ್ಣಯ್ಯ, ತೀ. ನಂ. ಶ್ರೀಕಂಠಯ್ಯ, ಬಿ. ಎಂ. ಶ್ರೀಕಂಠಯ್ಯನವರಂತಹ ಗುರುಗಳ ಗರಡಿಯಲ್ಲಿ ಪಳಗಿದವರು. ಪ್ರಧಾನವಾಗಿ ತೀ.ನಂ.ಶ್ರೀ., ಬಿ.ಎಂ.ಶ್ರೀ.ಯವರ ತೀವ್ರ ಪ್ರಭಾವಕ್ಕೆ ಒಳಗಾಗಿದ್ದರಿಂದ ಸಂಸ್ಕೃತ, ಪ್ರಾಕೃತಗಳೊಂದಿಗೆ ಆಂಗ್ಲ ಭಾಷೆಯೂ ಕರತಲಾಮಲಕ. ಇಂತಹ ವಿದ್ವತ್ತು, ಪಾಂಡಿತ್ಯದೊಂದಿಗೆ ಸೃಜನಶೀಲ ಸಾಮರ್ಥ್ಯವೂ ಹಾಲು–ಸಕ್ಕರೆಯಂತೆ ಸುಮಧುರವಾಗಿ ಬೆರೆತಿವೆ.

'ಕಲಿತವರ ಕಲ್ಪವೃಕ್ಷ'ವಾಗಿರುವ ಎಂ.ವಿ.ಸೀ.ಯವರು ಪುಟ್ಟ ಮಕ್ಕಳ ಮನಸ್ಸನ್ನು ಅರಿತು, ಅವರಿಗಾಗಿಯೂ ಸಾಹಿತ್ಯವನ್ನು ರಚಿಸಿದ್ದಾರೆಂಬ ವಿಷಯ ಅಚ್ಚರಿ ಮೂಡಿಸುವುದಾದರೂ ನಿಜ. ಎಂ.ವಿ.ಸೀ.ಯವರ 'ಮಕ್ಕಳ ಸಾಹಿತ್ಯ'ವನ್ನು ಪ್ರವೇಶಿಸುವ ಮುನ್ನ 'ಮಕ್ಕಳು ಎಂದರೆ ಯಾರು?' ಎಂಬ ಪ್ರಶ್ನೆಯನ್ನು ಅರ್ಥೈಸಿಕೊಳ್ಳಬೇಕು. ಹುಟ್ಟಿದ ಮಗುವಿನಿಂದ ೧೮ ವರ್ಷಗಳವರೆಗಿನ ಹದಿ-

ಹರೆಯದವರನ್ನು ಮಕ್ಕಳೆಂದು ಪರಿಗಣಿಸಬಹುದು. ಈ ವಿವಿಧ ಮಜಲುಗಳಲ್ಲಿ ಮಗುವಿನ ದೈಹಿಕ, ಮಾನಸಿಕ ಸ್ಥಿತಿ-ಗತಿಗಳು, ಆಲೋಚನೆ-ಆಸಕ್ತಿಗಳು ವಯೋಮಾನಕ್ಕೆ ಅನುಗುಣವಾಗಿ ಭಿನ್ನವಾಗುತ್ತಾ ಹೋಗುತ್ತವೆ. ಇಂತಹ ಮಕ್ಕಳಿಗಾಗಿ ದೊಡ್ಡವರು ರಚಿಸುವ ಸಾಹಿತ್ಯವೇ 'ಮಕ್ಕಳ ಸಾಹಿತ್ಯ'. ಆದ್ದರಿಂದ ಮಕ್ಕಳ ಸಾಹಿತ್ಯ 'ಮನರಂಜನೆ ಕೊಡುತ್ತಾ 'ಬುದ್ಧಿವಿಕಾಸ, ಜ್ಞಾನವಿಕಾಸ'ಗಳನ್ನೂ ಮಾಡುವಂತಿರಬೇಕು. ಎಂ.ವಿ.ಸೀ.ಯವರಿಗೆ 'ಮಕ್ಕಳ ಸಾಹಿತ್ಯ ಸ್ವರೂಪ'ದ ಬಗ್ಗೆ ಸ್ಪಷ್ಟ ಅರಿವಿತ್ತು. ಅಲ್ಲದೆ ೧೯೪೦-೪೫ರ ವರೆಗೆ ಕನ್ನಡದಲ್ಲಿ ರಚಿತವಾಗಿದ್ದ ಮತ್ತು ಮುಂದೆ ರಚಿತವಾಗಬೇಕಾಗಿರುವ ಮಕ್ಕಳ ಸಾಹಿತ್ಯದ ರೂಪು-ರೇಷೆಗಳ ಬಗ್ಗೆ ಖಚಿತವಾದ ಜ್ಞಾನವಿತ್ತು.

ಕರ್ನಾಟಕ ಸರ್ಕಾರ ೧೯೮೫ ರಲ್ಲಿ ಪ್ರಕಟಿಸಿದ 'ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ'ಯ 'ಮಕ್ಕಳ ಸಾಹಿತ್ಯ' ಎಂಬ ಕೃತಿಯನ್ನು ಎಂ.ವಿ.ಸೀ.ಯವರು ಸಂಪಾದಿಸಿದ್ದಾರೆ. ಓದುವ ಮಕ್ಕಳಿಗೆ ಇಷ್ಟವಾಗಬೇಕು, 'ವಸ್ತು' ಮತ್ತು 'ಪ್ರಕಾರ'ಗಳಲ್ಲಿ ವೈವಿಧ್ಯತೆ ಇರಬೇಕು ಎಂಬುದರ ಜೊತೆಗೆ ಉದಯೋನ್ಮುಖ ಲೇಖಕರಿಗೆ ಮಾದರಿಯಾಗಿರಬೇಕೆಂಬ ಹಲವಾರು ಉದ್ದೇಶಗಳಿಗೆ ಈ ಸಂಕಲನ ಬದ್ಧವಾಗಿದೆ ಎಂದು ಹೇಳಿಕೊಂಡಿರುವ ಎಂ.ವಿ.ಸೀ.ಯವರು 'ಕಿರಿಯ ಮಕ್ಕಳಿಗೆ' ಮತ್ತು 'ಹಿರಿಯ ಮಕ್ಕಳಿಗೆ' ಎಂಬ ಎರಡು ಭಾಗಗಳಲ್ಲಿ ಪುಸ್ತಕವನ್ನು ಸಿದ್ಧಪಡಿಸಿರುವಲ್ಲಿ ಅವರ ಜ್ಞಾನ ಸ್ಪಷ್ಟವಾಗುತ್ತದೆ. ಪ್ರಾರಂಭದಲ್ಲಿರುವ 'ಪೀಠಿಕೆ' ಭಾಗದಲ್ಲಿ ವಿದ್ವತ್ಪೂರ್ಣವಾದ ಮುನ್ನುಡಿ ಇದೆ.

ಮಕ್ಕಳಿಗೆ ಹೇಳುವ ಕಥೆ ಹೇಗಿರಬೇಕು ಎನ್ನುವುದಕ್ಕೆ ಪಂಚತಂತ್ರ ಉತ್ತಮವಾದ ಮಾದರಿ. ಮಕ್ಕಳಿಗೆ ಮೊತ್ತಮೊದಲು ಪರಿಚಯವಾಗುವ ಲೋಕ ಎಂದರೆ ಅವರು ಹುಟ್ಟಿ ಬೆಳೆದ ಮನೆ, ಮನೆಯಜನ, ಮನೆಗೂ ಮನೆಯ ಸುತ್ತಮುತ್ತಣ ಪರಿಸರಕ್ಕೂ ಹೊಂದಿಕೊಂಡು ಜೀವಿಸುವ ಪ್ರಾಣಿಪ್ರಪಂಚ ಹಾಗೂ ಸಸ್ಯಪ್ರಪಂಚ. ಕಾಡು ಪ್ರಾಣಿಗಳ ವಿಷಯವನ್ನು ಮಕ್ಕಳು ಕೇಳಿ ತಿಳಿಯಬೇಕಾದ್ದರಿಂದ ಅವುಗಳ ಬಗ್ಗೆ ಆಸಕ್ತಿ, ಕುತೂಹಲ ಇರುವುದು ಸಹಜ. ಆದ್ದರಿಂದ ಕಾಡುಪ್ರಾಣಿಗಳಿಗೆ ಸಂಬಂಧಿಸಿದ ಕಥೆಗಳು, ಪದ್ಯಗಳು ಮಕ್ಕಳಿಗೆ ಹೆಚ್ಚು ಸೊಗಸುತ್ತವೆ.

ಇದೆಲ್ಲವೂ ಹಿಂದಿನ ಕಾಲದ ಕಥಾಪ್ರಪಂಚ. ಇಂದಿನ ಮಗು ಮೇಲೆ ವಿವರಿಸಿದ ಪ್ರಪಂಚಕ್ಕೆ ವಿಜ್ಞಾನ ಯುಗದ ಯಂತ್ರನಾಗರಿಕತೆ ಪ್ರವೇಶಿಸುವುದನ್ನು ಕಾಣುತ್ತದೆ. ಕನ್ನಡವೂ ಸೇರಿದಂತೆ ನಮ್ಮ ದೇಶದ ಯಾವುದೇ ಭಾಷೆಯ ಮಕ್ಕಳ ಸಾಹಿತ್ಯದಲ್ಲಿ ಈ ಎಲ್ಲವೂ ಮಕ್ಕಳು ಕಾಣಬಹುದಂಥವು. ಕಾಣದಿದ್ದರೂ ಕೇಳಿ ತಿಳಿಯುವ ವಸ್ತು-ವಿಷಯ"[೧]

೧ ಎಂ.ವಿ. ಸೀತಾರಾಮಯ್ಯ (ಸಂ.) : ಮಕ್ಕಳ ಸಾಹಿತ್ಯ, ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ೧೯೮೫, ಪೀಠಿಕೆ, ಪು. v-vi.

ಎಂದು ಮಕ್ಕಳ ಸಾಹಿತ್ಯದ ಸ್ವರೂಪವನ್ನು ವಿವರಿಸಿದ್ದಾರೆ. ಇನ್ನೂ ಮುಂದುವರೆಯುತ್ತಾ ಶುದ್ಧ ಮನರಂಜನೆಯ ಜನಪದ ಕಥೆಗಳು, ಹಾಸ್ಯಪೂರಿತ ಕಥೆಗಳು, ಭಾರತದ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ ಮೊದಲಾದ ಜೀವನ ಮೌಲ್ಯಗಳನ್ನು, ಜೀವನ ಶ್ರದ್ಧೆಯನ್ನು ಎತ್ತಿಹಿಡಿಯುವಂತಹ ಕಥೆ-ಉಪಕಥೆಗಳು; ಹಿರಿಯ ಮಕ್ಕಳಿಗೆ ಪ್ರಾಚೀನ ಕಾವ್ಯಗಳ ಕಥಾನಾಯಕರ, ಭಕ್ತರ, ವೀರಪುರುಷರ ಜನನ, ಬಾಲ್ಯದ ಕಥೆಗಳು ಪ್ರಿಯವಾಗುತ್ತವೆ ಎಂದು ವಿವರವಾಗಿ ವಿವರಿಸಿದ್ದಾರೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಕ್ಷೇತ್ರದಲ್ಲಿ ಈಗಾಗಲೇ ದುಡಿದಿರುವವರು, ರಚಿತವಾಗಿರುವ ಸಾಹಿತ್ಯದ ವೈವಿಧ್ಯತೆ, ಮಕ್ಕಳ ಸಾಹಿತ್ಯಕ್ಕಾಗಿಯೇ ಮೀಸಲಾಗಿದ್ದ ಹಳೆಯ ಪತ್ರಿಕೆಗಳು-ಮೊದಲಾದ ಎಲ್ಲ ವಿಷಯಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ್ದಾರೆ.

ಆದ್ದರಿಂದ 'ವ್ಯುತ್ಪತ್ತಿ' ಮತ್ತು 'ಪ್ರತಿಭೆ'-ಎರಡರ ಸಂಗಮದಿಂದ ಮೂಡಿಬಂದಿರುವುದೇ ಎಂ.ವಿ.ಸೀ.ಯವರ 'ಮಕ್ಕಳ ಸಾಹಿತ್ಯ'. ಪ್ರಸಿದ್ಧ ಕವಿ ಜಿ. ಪಿ. ರಾಜರತ್ನಂ ಅವರ ಕವನಸಂಕಲನಗಳಿಗೆ ಚಿತ್ರಗಳನ್ನು ಬರೆಯುತ್ತಿದ್ದರು. ಮಕ್ಕಳ ಸಾಹಿತ್ಯ ಸೃಷ್ಟಿಗೆ ಇದೇ ಮೂಲ ಪ್ರೇರಣೆ. ಎಂ.ವಿ.ಸೀ.ಯವರು ಬರೆದಿರುವ 'ಮಕ್ಕಳ ಸಾಹಿತ್ಯ ಕೃತಿಗಳು ಒಟ್ಟು ಹನ್ನೊಂದು.

೧. **ಕವನ ಸಂಕಲನಗಳು-ಮೂರು**
   ೧. ಹೂವಾಡಿಗಿತ್ತಿ-೧೯೪೫
   ೨. ಹಾವಾಡಿಗ-೧೯೫೮
   ೩. ಕೋಡಂಗಿ-೧೯೭೯
   ಕಥನ ಕವನ : ದಾದಿರನ್ನೆ-೧೯೭೮
೨. **ನಾಟಕಗಳು-ಮೂರು**
   ೧. ಕೈಕೋಲು-೧೯೭೯
   ೨. ಕುಮಾರ ಗೌತಮ-೧೯೭೮
   ೩. ಕರುಣೆಯ ಕುಡಿ-೧೯೮೧
೩. **ವಿಚಾರ ಪ್ರಚೋದಕ ಕೃತಿಗಳು-ಎರಡು**
   ೧. ಕನ್ನಡದ ಕತೆ-೧೯೭೯, ೨. ಈ ಕರುನಾಡಿದು ನನ್ನ ಮನೆ-೧೯೮೨
೪. **ಜೀವನ ಚರಿತ್ರೆ** : ರನ್ನ-೧೯೭೯, ದ್ವಿಮು. ೨೦೦೫
೫. **ವ್ಯಕ್ತಿಚಿತ್ರ** : ಯುಧಿಷ್ಠಿರ (ಆಂಗ್ಲದಲ್ಲಿ)-೧೯೭೫
೬. **ಅನುವಾದ** : ರಾಬಿನ್‌ಸನ್ ಕ್ರೂಸೋ (ಮೊದಲ ಭಾಗ)-೧೯೪೮

೧೯೪೫ ರಿಂದ ೧೯೮೨ರ ವರೆಗಿನ ೩೭ ವರ್ಷಗಳ ಸುದೀರ್ಘ ಅವಧಿಯಲ್ಲಿ ರಚಿತವಾಗಿರುವ ಸಾಹಿತ್ಯದಲ್ಲಿ ಸ್ವಾತಂತ್ರ್ಯಪೂರ್ವ ಕಾಲದ ಸಂಸ್ಕೃತಿಯೊಂದಿಗೆ ಯಂತ್ರ ನಾಗರಿಕತೆ, ವಿಜ್ಞಾನದ ಆವಿಷ್ಕಾರಗಳ ಮಿಶ್ರಣದ ಸಂಸ್ಕೃತಿಯೂ ಸ್ಥಾನ ಪಡೆದಿವೆ. ಆದ್ದರಿಂದ ಎಂ.ವಿ.ಸೀ.ಯವರ ಮಕ್ಕಳ ಸಾಹಿತ್ಯ ಸಂಖ್ಯೆಯಲ್ಲಿ ಮಿತ : ಸತ್ವದಲ್ಲಿ

ಅಮಿತ.

ಕವನ ಸಂಕಲನಗಳು :

'ಹೂವಾಡಿಗಿತ್ತಿ, ಹಾವಾಡಿಗ ಮತ್ತು ಕೋಡಂಗಿ' ಎಂಬ ಕವನ ಸಂಕಲನಗಳು ಮತ್ತು 'ದಾದಿರನ್ನೆ' ಎಂಬ ಕಥನ ಕವನ–ಈ ಗುಂಪಿಗೆ ಸೇರುತ್ತವೆ.

೧೬ ಕವನಗಳೊಂದಿಗೆ ೧೯೪೫ ರಲ್ಲಿ ರಚಿತವಾದ ಮೊಟ್ಟಮೊದಲ ಕವನಸಂಕಲನವೇ 'ಹೂವಾಡಿಗಿತ್ತಿ'. ನಂತರ ಇನ್ನೂ ೧೧ ಪದ್ಯಗಳನ್ನು ಸೇರಿಸಿಕೊಂಡು ೧೯೫೮ ರಲ್ಲಿ ದ್ವಿತೀಯ ಮುದ್ರಣ ಕಂಡಿತು. ೧೯೫೮ ರಲ್ಲಿ ಪ್ರಕಟವಾದ 'ಹಾವಾಡಿಗ'ದಲ್ಲಿ ೨೫ ಪದ್ಯಗಳೂ, ೧೯೭೯ ರಲ್ಲಿ ಪ್ರಕಟವಾದ 'ಕೋಡಂಗಿ'ಯಲ್ಲಿ ೧೭ ಪದ್ಯಗಳೂ ಸೇರಿವೆ.

ಇಲ್ಲಿ 'ಮಕ್ಕಳ ವಯಸ್ಸು' ಮತ್ತು 'ವಸ್ತು'–ಎರಡನ್ನು ಆಧರಿಸಿ ಕವನಗಳ ಅಧ್ಯಯನವನ್ನು ಮಾಡಲಾಗಿದೆ.

ಪುಟ್ಟಮಕ್ಕಳು : ಮುಗ್ಧತೆಯೇ ಸಾಕಾರವಾದಂತಿರುವ ಪುಟ್ಟ ಮಕ್ಕಳಿಗೆ ಬುದ್ಧಿಯ ಕಸರತ್ತಿಗಿಂತ ಕಿವಿಯ ಹಿತ ಮುಖ್ಯ. ಪದಗಳ ಮತ್ತು ಅಕ್ಷರಗಳ ಪುನರುಕ್ತಿ, ಅನುಕರಣ ಪದಗಳು, ಪ್ರಾಸಬದ್ಧ ಪದಗಳೇ ಮೊದಲಾದ ಶಬ್ದಾಲಂಕಾರಯುಕ್ತವಾದ ಭಾಷೆ ಈ ಉದ್ದೇಶವನ್ನು ನೆರವೇರಿಸುತ್ತದೆ. ಎಂ.ವಿ.ಸೀ.ಯವರು ವಿಶಿಷ್ಟ ನಾದದ ಮೂಲಕ ಆಕರ್ಷಿತವಾಗುವ ಹಲವಾರು ಪದ್ಯಗಳನ್ನು ಬರೆದಿದ್ದಾರೆ.

ಉದಾ : ೧. **ಬಾತುಕೋಳಿ ಕುಣಿತ.**

ಬಾತುಕೋಳಿ ಪೀಪಿ ಹಿಡಿದು
ಪೀ ಎಂದಿತು – ಪೀ ಪೀ ಎಂದಿತು ;
ಬಾತುಮರಿ ಕುಣಿದು ಕುಣಿದು
ತೈ ಎಂದಿತು – ತೈ ತೈ ಎಂದಿತು
ಪೀ ಪಿ ಪಿ ಪೀ ಪೀ ಪಿ ಪೀ ಪಿ
ಪೀ – ಪೀ – ಪೀ
ತೈ ತಕ್ಕ ತೈ ತಕ್ಕ
ತೈ – ತೈ – ತೈ[2]

ಬಾತುಕೋಳಿ ಮತ್ತು ಮರಿಯ ಆತ್ಮೀಯ ಸಂಬಂಧ, ಮರಿಯ ಕುಣಿತ ಮತ್ತು ಪೂರಕ ಭಾಷೆ ಮಗುವನ್ನೂ ಸಂತೋಷದಿಂದ ಕುಣಿಯಲು ಪ್ರೇರೇಪಿಸುತ್ತದೆ.

೨. ಢುಂ ಢುಂ ಡೋಲು !

ಈ ಪದ್ಯದಲ್ಲಿ 'ಢುಂ ಢುಂ ಢುಂ' ಎಂಬ ಅನುಕರಣ ಶಬ್ದಗಳಿರುವ ಸಾಲುಗಳ ಪುನರುಕ್ತಿಯಿಂದ ಕಿವಿಗೆ ಹಿತವಾಗುತ್ತದೆ. ಜೊತೆಗೆ ಹುಡುಗಿ ಮತ್ತು ಹುಡುಗನ ಸಂಭಾಷಣಾ ರೂಪದಲ್ಲಿರುವ ಈ ಪದ್ಯ ಬದಲಾಗುತ್ತಿರುವ ಸಂಸ್ಕೃತಿಯನ್ನು

---

೨. ಎಂ.ವಿ.ಸೀ. ಹೂವಾಡಿಗಿತ್ತಿ, ಬಾತುಕೋಳಿ ಕುಣಿತ. ಕಾವ್ಯಾಲಯ. ಮೈಸೂರು.೧೯೬೮.ಪುಟ ೧೩.

ಹಾಸ್ಯಮಯವಾಗಿ ಹೇಳುತ್ತದೆ.

ಜುಟ್ಟು ಹೋಯ್ತು ಕ್ರಾಪು ಬಂತು
ಢುಂ ಢುಂ ಢುಂ
ದಟ್ಟಿ ಹೋಯ್ತು ಪ್ಯಾಂಟು ಬಂತು
ಢುಂ ಢುಂ ಢುಂ
–ಎಂದು ಹುಡುಗಿ ಹೇಳಿದರೆ
ಅರಿಸಿನ ಹೋಯ್ತು ಪೌಡರ್ ಬಂತು
ಢುಂ ಢುಂ ಢುಂ
ಕರಿಮಣಿ ಹೋಯ್ತು ನೆಕ್ಲೇಸ್ ಬಂತು
ಢುಂ ಢುಂ ಢುಂ[3]

–ಎಂದು ಹುಡುಗ ಹೇಳುತ್ತಾನೆ. ಕೊನೆಯಲ್ಲಿ ಇಬ್ಬರೂ ಒಟ್ಟಿಗೆ ಹೇಳುವಂತಹ ನಿರೂಣೆ ಮಕ್ಕಳ ಮನವನ್ನು ಸುಲಭವಾಗಿ ಮುಟ್ಟುತ್ತವೆ.

ಕಿವಿಯ ಮೂಲಕ ಮಕ್ಕಳನ್ನು ತಲುಪುವಂತೆಯೇ ಕಣ್ಣಿನ ಮೂಲಕವೂ ತಲುಪುವ ಹೊಸ ಪ್ರಯತ್ನ ಮಾಡಿದ್ದಾರೆ.

ಉದಾ : ಇಲಿಯ ಬಾಲ[4]

ಒಂದು
ಇಲಿ
ಕೋಣೆ
–ಯಲಿ
ಗೋಡೆ
ಬಳಿ
ಮೂಲೆ ತು
–ಯಲಿ ಡಿ
ತೋಡಿ ಂ
ನೆಲ ಕ
ಮಾಡಿ ಗೆ
ಬಿಲ ಹೀ
ಒ ಲ
ಳ ಬಾ
ಗೆ ರ
ಹೋ ದ
ಗಿ – ಅ

ವಿಷಯ ಮತ್ತು ಬರವಣಿಗೆಯ ರೀತಿ – ಎರಡೂ ಆಕರ್ಷಕ. ಶಾಲೆಗೆ ಹೋಗುವ

---

೩. ಅದೇ, ಢುಂ ಢುಂ ಡೋಲು, ಪು. ೨೭.
೪. ಎಂ.ಪಿ.ಸೀ. ಹೂವಾಡಿಗಿತ್ತಿ, ಇಲಿಯ ಬಾಲ, ಕಾವ್ಯಾಲಯ, ಮೈಸೂರು, ೧೯೬೮, ಪು. ೨೨

ಮಕ್ಕಳು (೮ ವರ್ಷದ ನಂತರ) : ೮ನೇ ವರ್ಷದಿಂದ ಶಾಲೆಗೆ ಹೋಗಲು ಆರಂಭಿಸಿದ ಮಕ್ಕಳಿಗೆ ಶಾಲೆಗೆ ಹೋಗುವುದು, ಪಾಠ ಕಲಿಯುವುದೆಂದರೆ ಬೇಸರದ ವಿಷಯ. "ಪಟಂಗ ರಂಗ"[೫] ಎಂಬ ಪದ್ಯ ಮಕ್ಕಳ ಈ ಮನಸ್ಥಿತಿಯನ್ನು ಚೆನ್ನಾಗಿ ಚಿತ್ರಿಸಿದೆ. "ಶಾಲೆಗ ಹೋದರೆ ಮೇಷ್ಟರ ಕಾಟ, ಮನೆಯಲಿ ಉಳಿದರೆ ಆಟವೆ ಆಟ" ಎಂದು ಯೋಚಿಸಿದ ರಂಗ ಪಟಂಗನಾದ.

ಪಟಂಗನೆಂದರೆ ಶುದ್ಧ ಒರಟ,
ತಿರುಳಿಲ್ಲದ ತೆಂಗಿನ ಕಾಯ್‌ಕರಟ !

ಕಡೆಯ ಸಾಲು ಶಾಲೆಯನ್ನು ತಿರಸ್ಕರಿಸಿ ಉಂಡಾಡಿ ಗುಂಡನಾಗುವಂತಹ ಹುಡುಗನ ನಿಷ್ಪ್ರಯೋಜಕ ಜೀವನದ ಧ್ವನಿ ಪೂರ್ಣ ಸಾಲು.

ವಿದ್ಯಾರ್ಥಿಗಳ ಪಾಲಿಗೆ ಕಬ್ಬಿಣದ ಕಡಲೆಯಾಗಿರುವ 'ಲೆಕ್ಕಶಾಸ್ತ್ರ' ಅರ್ಥವಾಗದಿದ್ದಾಗ ಆ ಹುಡುಗ ಆಟವಾಡುತ್ತಾ, ಅಡ್ಡದಾರಿ ಹಿಡಿಯುವ ಜೀವನದ ಸುಂದರ ಚಿತ್ರಣವೇ "ನಂ ಚಿಕ್ಕ."[೬].

ಎಲ್ಲರಿಗಣ್ಣ ನಂ ಚಿಕ್ಕ :
ಲೆಕ್ಕ ಅಂದರೆ ಬಲು ದುಃಖ !
ಕೂಡುವುದೆಲ್ಲ ಕವಡೆ ಕಲ್ಲು
ಕಳೆಯುವುದೆಲ್ಲ ಪುಸ್ತಕ ಬಳಪ
ಗುಣಿಸುವುದೆಲ್ಲ ಗೋಡೆಯ ಚಿತ್ರ
ಭಾಗ್ಸೋದೆಲ್ಲ ಬಾಯಿನ ಒಳಗೆ !
ಜೇಬಿನ ತುಂಬ ರೂ. ಆ. ಪೈ !
ಎಲ್ಲಿತ್ತನೆ ಬಾಯ್‌ಬಿಟ್ಟರೆ ಸೈ !
ಬೀದಿಯ ಕುಣಿತ
ಚಿಕ್ಕನ ಗಣಿತ !
ಮನೆಯಲಿ ಜೋರು ಕೈಯಿ ಬಾಯಿ ;
ಪರೀಕ್ಷೆಯಲಿ ಕುಂಬಳಕಾಯಿ !
ಎಲ್ಲರಿಗಣ್ಣ ನಂ ಚಿಕ್ಕ.
ಲೆಕ್ಕ ಎಂದರೆ ಬಲು ದುಃಖ !

ಲೆಕ್ಕ ಶಾಸ್ತ್ರದ ಪರಿಕಲ್ಪನೆಗಳ ಬಳಕೆಯ ಮೂಲಕವೆ ಚಿಕ್ಕನ ಅಜ್ಞಾನವನ್ನು ತಿಳಿಸುತ್ತಾ "ಬೀದಿ ಕುಣಿತ, ಚಿಕ್ಕನ ಗಣಿತ !" ಎಂಬ ಸಾಲಿನ ಮೂಲಕ ಚಿಕ್ಕನ ಜೀವನವನ್ನು ಧ್ವನಿಸುತ್ತಾರೆ.

"ಯಾಕೆ ಸ್ಕೂಲಿಗೆ ಹೊತ್ತಾಯ್ತು ?"[೭] ಎಂಬ ಮತ್ತೊಂದು ಪದ್ಯ ಅಧ್ಯಾಪಕ ಮತ್ತು

---

೫. ಅದೇ, ಪಟಂಗ ರಂಗ, ಪು. ೧೫.

೬. ಎಂ.ವಿ.ಸೀ : ಹೂವಾಡಿಗಿತ್ತಿ, ನಂ ಚಿಕ್ಕ, ಕಾವ್ಯಾಲಯ, ಮೈಸೂರು, ಪು. ೧೫, ೧೬.

ವಿದ್ಯಾರ್ಥಿಯ ಪ್ರಶ್ನೋತ್ತರ ರೂಪದಲ್ಲಿದೆ. ಪದ್ಯದ ಶೀರ್ಷಿಕೆಯೇ ಮೇಷ್ಟ್ರರ ಪ್ರಶ್ನೆ. ಇಡೀ ಪದ್ಯ ತುಂಟ ಹುಡುಗನ ಉತ್ತರ. "ಭರ್ ಭರ್ ಭರ್ ಭರ್ ಭರ್ ರ್ ರ್" ರಂತ, ಬಂದವು ಕಾರ್ ಮೇಲ್ ಕಾರ್" ಎಂದು ಆರಭಿಸಿ, 'ಫೋರ್ಡ್ ಫಿಯಟ್ ಬ್ಯೂಕ್ ಸ್ಟೂಡಿಬೇಕರ್, ಬೇಬಿ ಆಸ್ಟಿನ್ ಮಾರಿಸ್ ಮೈನರ್' ಕಾರುಗಳ ಆರ್ಭಟದಲ್ಲಿ ಹಳ್ಳೀ ಗಮಾರನೊಬ್ಬ ಬಾಳೇಹಣ್ಣಿನಸಿಪ್ಪೆ ಮೇಲೆ ಕಾಲಿಟ್ಟು ಜಾರಿದಾಗ, ಕಾರುಗಳು ನಿಂತು, ಜನ ಗುಂಪು ಸೇರಿ, ಪೋಲೀಸಿನವರು ಬಂದಾಗ, ತಾನೂ ನೋಡುತ್ತಾ ನಿಂತುದನ್ನು ಹುಡುಗ ಹೇಳುತ್ತಾನೆ. ವೇಗವಾಗಿ ಬೆಳೆಯುತ್ತಿದ್ದ ನಾಗರಿಕತೆಯ ಮಧ್ಯೆ ಹಳ್ಳಿಯ ಮುಗ್ಧ ಜನರ ಬವಣೆಯನ್ನು, ಆಗ ಬಳಕೆಯಲ್ಲಿದ್ದ ವಿದೇಶಿ ಕಾರುಗಳನ್ನು ಈ ಪದ್ಯ ಧ್ವನಿಸುತ್ತದೆ. ಹುಡುಗನ ತುಂಟಾಟಿಕೆಯ ಉತ್ತರದಲ್ಲಿ ನಾಟಕೀಯ ಸ್ಪರ್ಶವಿದೆ.

ನವಿಲು ಗರಿಯ ತುಣುಕುಗಳನ್ನು ಪುಸ್ತಕದಲ್ಲಿ ಇಟ್ಟರೆ, ಅವು ಬೆಳೆಯಲು ತರ್ಕಬದ್ಧವಾಗಿ ಸಾಧ್ಯವಿಲ್ಲದಿದ್ದರೂ, ಮುಗ್ಧ ಮಗುವಿನ ಪ್ರಪಂಚದಲ್ಲಿ ಸಾಧ್ಯ. ಇದನ್ನು 'ನವಿಲು ಮರಿ'[೮] ಎಂಬ ಪದ್ಯ

ಬಣ್ಣ ಬಣ್ಣದಾ ನವಿಲು ಗರಿ
ಹಾಕಿದೆ ಪುಸ್ತಕದಲ್ಲಿ ಮರಿ !
ಒಂದಿದ್ದುದು ನೂರಾಗಿದೆ, ಅಣ್ಣ
ಎಲ್ಲಕ್ಕೂ ಇದೆ ಬಗೆ ಬಗೆ ಬಣ್ಣ !
ಗರಿಗಳೆಲ್ಲವೂ ತೆರೆವುವು ಕಣ್ಣ,
ಆಗ ನೋಡಲವು ಇನ್ನೂ ಚೆನ್ನ
ಬೆಳೆದೂ ಬೆಳೆದೂ ನವಿಲು ಗರಿ,
ಕೊನೆಗಾಗುವುದು ನವಿಲು ಮರಿ !

–ಎಂಬಂತೆ ಸುಂದರವಾಗಿ ಚಿತ್ರಿಸುತ್ತದೆ. ಮಕ್ಕಳು ಬೆಳೆಯುತ್ತಾ ತುಂಟಾಟ ಮಾಡುವುದು ಸಹಜ. 'ತುಂಟರು'[೯] ಎಂಬ ಪದ್ಯ

ಕಿಟ್ಟು ಪುಟ್ಟು ಒಟ್ಟಿಗೆ ಸರ್ರನೆ
ಬೀದಿಯ ಬಚ್ಚಲು ಹಾರಿದರು ;
ಒಬ್ಬನು ಎಡವಲು ಇಬ್ಬರು ಜರ್ರನೆ
ಬಚ್ಚಲ ಕೊಚ್ಚೆಗೆ ಜಾರಿದರು.
ಅವರಿಗೆ ಮೈ ಕೈ ಕೆಸರಾಯ್ತು !
ತುಂಟರು ಎಂದು ಹೆಸರಾಯ್ತು !

–ಎಂಬಂತೆ ಇಬ್ಬರು ಹುಡುಗರ ಸಾಹಸ ಪ್ರವೃತ್ತಿ, ತುಂಟತನವನ್ನು ಸಂಕ್ಷಿಪ್ತ

---

೭. ಎಂ.ವಿ.ಸೀ. : ಹೂವಾಡಿಗ, ಯಾಕೆ ಸ್ಕೂಲಿಗೆ ಹೋತ್ತಾಯ್ತು ?, ಕಾವ್ಯಾಲಯ, ಮೈಸೂರು, ಪು. ೨೫

೮. ಎಂ.ವಿ.ಸೀ. : ಹೂವಾಡಿಗಿತ್ತಿ, ನವಿಲು ಮರಿ, ಕಾವ್ಯಾಲಯ, ಮೈಸೂರು, ಪು. ೨೫.

೯. ಅದೇ, ತುಂಟರು, ಪು. ೧೪.

ಘಟನೆಯೊಂದಿಗೆ ಚಿತ್ರಿಸಿದೆ. ಹಾಗೆಯೇ

ಅಡಿಗೆ ಮನೆಗೆ ಹೋಗಿ ಸಿದ್ಧ
ಕರಿಯ ಬೆಲ್ಲದಚ್ಚು ಕದ್ದ.
ಅಚ್ಚಿನಲ್ಲಿ ಬರಿಯ ಗೊದ್ದ!
ಕಾಣಲಿಲ್ಲ ಸಿದ್ಧ, ಪೆದ್ದ–
ಹಾಗೆ ಹಾಗೆಯೇ ಮೆದ್ದ.
ಬಾಯ ಕಚ್ಚಲಾಗ ಗೊದ್ದ
ಅಳುತ ಅಳುತ ಅಲ್ಲೆ ಇದ್ದ;
ಅಮ್ಮ ಬರಲು, ಸಿಕ್ಕಿಬಿದ್ದ!

–ಎಂಬಂತೆ "ಕಳ್ಳ ಸಿದ್ಧ"[೧೦] ಎಂಬ ಪದ್ಯ ವಸ್ತು, ಸಂಸ್ಕೃತಿ ಭಾಷೆಯ ದೃಷ್ಟಿಯಿಂದ ಉತ್ತಮ ಪದ್ಯ. 'ಬೆಲ್ಲ' ಮಾತ್ರವೇ ಅಂದಿನ ಕಾಲದಲ್ಲಿ ಸಾಮಾನ್ಯರ ಮನೆಯಲ್ಲಿರುತ್ತಿದ್ದ ಸಿಹಿಯಾಗಿತ್ತು. ಕಳ್ಳತನದಿಂದ ಉಂಟಾದ ಅನಾಹುತ ಹುಡುಗನ ಮುಗ್ಧತೆ, ಸಿಹಿ ತಿನ್ನುವ ಚಪಲದೊಂದಿಗೆ ಓದುಗರಲ್ಲಿ ನಗುವನ್ನೂ ತರಿಸುತ್ತದೆ. ಇಡೀ ಪದ್ಯದ ಅಂತ್ಯಪ್ರಾಸ ಹೊರೆಯಾಗದೆ ಸಹಜವಾಗಿ ಹೊಂದಿಕೊಂಡಿದೆ. "ಕಿಟ್ಟಿಯ ಪ್ರಶ್ನೆ"[೧೧] ಎಂಬಲ್ಲಿ

ಎಮ್ಮೇ ಪ್ಯಾಸನು ಮಾಡಿದ್ದೀಯ
ನಿನಗೇನೂ ತಿಳಿಯದು. ಅಣ್ಣ–
ನಮ್ಮ ಮನೆಯನೆಡಹುತ ಸೂರ್ಯ
ಬಿದ್ದ, ರಕ್ತ ಹರಿಯುತ್ತಿದೆ, ಅಣ್ಣ

–ಎಂಬಂತೆ 'ಸೂರ್ಯಾಸ್ತ'ವನ್ನು ವಿವರಿಸುವ ರೀತಿ ಮುಗ್ಧ, ಮನೋಹರ ವಾಗಿದೆ. ತುಂಟ ಮಕ್ಕಳು ಬಿದ್ದು, ರಕ್ತ ಹರಿಯುವ ಕ್ರಿಯೆ ತುಂಬಾ ಸಾಮಾನ್ಯ. ಹುಡುಗನೊಬ್ಬ ತನ್ನ ದೃಷ್ಟಿಯಿಂದ ಸೂರ್ಯಾಸ್ತವನ್ನು ವರ್ಣಿಸುವ ರೀತಿ ಜಿ. ಪಿ ರಾಜರತ್ನಂರವರು ಹೆಂಡ್ಕುಡುಕನ ದೃಷ್ಟಿಯಲ್ಲಿ ವರ್ಣಿಸುವ

"ಪಟ್ಟಾಗಿ ಒಡದ್ಬುಟ್ಟಿ ತೂರಾಡ್ತ ತೂಗ್ತಾನೆ[೧೨]!
ಕಣ್ಗಳ್ನ ಕೆಂಪಿಗ್ ಮಾಡ್ ತೇಲೀಸ್ತಾನೆ!
ನನ್ ಅಣಕ್ಸೊ ನರಮನ್ಸ ಸೂರ್‍ಯನೆ ಬಾಯ್ಬುಟ್ಟಿ
ಅದಕಂತೆ ಇದಕಂತೆ ವೋಲಿಸ್ತಾನೆ!
ತೂರಾಡ್ತಾ ಮೋರೀಗೆ ಮೋಚ್ತಾನೆ ಸೂರ್‍ಯಪ್ಪ–

೧೦. ಅದೇ, ಕಳ್ಳ ಸಿದ್ಧ, ಪು. ೧೪, ೧೧. ಅದೇ, ಕಿಟ್ಟಿಯ ಪ್ರಶ್ನೆ, ಪು. ೨೪.
೧೨. ಜಿ. ಪಿ. ರಾಜರತ್ನಂ : ರತ್ನನ ಪದಗಳು, ಸಮಾದಾನ, ಸಾಹಿತ್ಯ ಮಂಟಪ, ಬೆಂಗಳೂರು, ಪು. ೨೪, ೨೫.

ಕೆಸರೆಲ್ಲ ಛಿಲ್ಲಂತ ಮೇಲ್ ಆರ್‍ತದೆ!
ಅಡಕಂಡು 'ಕತ್ಲಾತು' ಕತ್ಲಾತು ಅನಕೊಂಡಿ
ಬೆಪ್ತಕಡಿ ಲೋಕೆಲ್ಲ ಕೂಗ್ ಆಕ್ತದೆ!
ವರ್ಣನೆಯನ್ನು ನೆನಪಿಸುತ್ತದೆ.

೧೯೭೭ರಲ್ಲಿ ಪ್ರಕಟವಾದ 'ಕೋಡಂಗಿ' ಕವನ ಸಂಕಲನ ಎಂ.ವಿ.ಸೀ.ಯವರ ಇಳಿವಯಸ್ಸಿನಲ್ಲಿ ಪ್ರಕಟವಾಯಿತು.

ಕಿರಿಯ ಮತ್ತು ಹಿರಿಯ ಮಕ್ಕಳಿಗೆ 'ಮಕ್ಕಳವರ್ಷ'ದ ಕೊಡುಗೆಯಾಗಿ, ಬರೆಯುತ್ತೇನೆಂಬ ಕೊಟ್ಟ ಮಾತಿನಂತೆ ಈ ಸಂಕಲನ ಪ್ರಕಟವಾಗಿದೆ. ಎಂ.ವಿ.ಸೀ.ಯವರ ಕಡೆಯ ಕವನಸಂಕಲನವಾದ ಇದರಲ್ಲಿ ೧೭ ಪದ್ಯಗಳಿವೆ.

ಎಂ.ವಿ.ಸೀ.ಯವರು 'ಪ್ರಕೃತಿ ಪ್ರೇಮ' ಮಕ್ಕಳ ಕಾವ್ಯದಲ್ಲೂ ಪ್ರವೇಶ ಪಡೆದಿದೆ. ಗಾಳಿ, ನೀರು ಮೊದಲಾದ ಪಂಚಭೂತಗಳು ; ಮಲ್ಲಿಗೆ ಮೊದಲಾದ ವಿವಿಧ ಹೂಗಳು ; ಗಿಣಿ, ನವಿಲು, ಹಲ್ಲಿ, ಹುಲಿ ಮೊದಲಾದ ವಿವಿಧ ಪಕ್ಷಿ, ಪ್ರಾಣಿ, ಜಂತುಗಳ ಪ್ರಸ್ತಾಪ, ಮತ್ತು ವರ್ಣನೆಯನ್ನು ಕಾಣಬಹುದು ಇಂತಹ ಕವನಗಳು ಹಿರಿಯ ಮಕ್ಕಳ ಜ್ಞಾನವನ್ನು ಹೆಚ್ಚಿಸುತ್ತವೆ.

ಉದಾ : ೧. ಬಾರಯ್ಯ ಬಾ ಗಾಳಿ[೧೩] ಎಂಬ ಸಾನೆಟ್ಟಿನಲ್ಲ "ಮೆಲುಗಾಳಿ, ಸುಳಿಗಾಳಿ, ತೆಂಗಾಳಿ, ತಂಗಾಳಿ, ಸುಟ್ಟುರೆಗಾಳಿ, ನೆರೆಗಾಳಿ, ಸುಯ್ಗಾಳಿ, ಹೊಯ್ಗಾಳಿ, ಬಿರುಗಾಳಿ, ಕೊರೆಗಾಳಿ ಎಂಬ ೧೦ ಬಗೆಯ ಗಾಳಿಗಳ ವರ್ಣನೆ ಇದೆ. ಕೊನೆಯಲ್ಲಿ "ತೋರಯ್ಯ ದಯೆಯ ನಿನ್ನಿಂದ ಬದುಕಿಹವು ಜೀವಾಳಿ" ಎಂದು ಗಾಳಿಯ ಪ್ರಾಮುಖ್ಯತೆ ಪ್ರಸ್ತಾಪಿತವಾಗಿದೆ. ಗಾಳಿಗಳ ಸ್ವರೂಪಕ್ಕೆ ತಕ್ಕಂತಹ ಪದಗಳನ್ನು ಕವಿ ಸೃಷ್ಟಿಸಿರುವುದು ಕವಿಯ ಪ್ರತಿಭೆಗೆ ಸಾಕ್ಷಿಯಂತಿವೆ. "ತೆಂಕಣಿಂ ತಂಪುಕಂಪುಗಳ"ನ್ನು ತರುವುದು 'ತೆಂಗಾಳಿ'ಯಾದರೆ "ಸಂಕಟದ ಬೇಗೆಯನು ತೊಲಗಿಸು"ವುದು 'ತಂಗಾಳಿ'ಯಾಗತ್ತದೆ.

ಉದಾ : ೨. "ಜೋಗದ ಜಲಪಾತ"[೧೪] ಎಂಬ ದೀರ್ಘ ಕವನದಲ್ಲಿ ಪಶ್ಚಿಮ ಘಟ್ಟದಲ್ಲಿ ಹುಟ್ಟುವ 'ಶರಾವತಿ' ನದಿಯ ನೀರ ಬೀಳಿನ ಪರಿ"ಯನ್ನು ಪ್ರಾಸಬದ್ಧವಾದ ಪರಿಣಾಮಕಾರೀ ಭಾಷೆಯಲ್ಲಿ ವಿವರಿಸುತ್ತಾ, ಆ ಜಲಪಾತ ನಾಲ್ಕು ಸೀಳಾಗಿ ನೆಲಕ್ಕೆ ಬೀಳಾಗುವಾಗ ಕಾಣುವ ಬಿಳಿನೊರೆ, "ಮನ್ಮಥ ಮಲ್ಲಿಗೆ ಹೂಬಾಣ"ವನ್ನು ಬಿಟ್ಟಂತೆ ಹೂಮಳೆಗರೆಯುತ್ತಿರುವ ರೀತಿಯನ್ನು ವರ್ಣಿಸುತ್ತಾ 'ಇಂದ್ರನ ನಂದನ'ವೆಂದು ವರ್ಣಿಸಿದ್ದಾರೆ ನಾಲ್ಕು ಸೀಳುಗಳಿಗೆ ಸ್ಥಳಪುರಾಣದಲ್ಲಿ "ರಾಮ, ಸೀತೆ ಲಕ್ಷ್ಮಣ ಹನುಮ" ಎಂಬ ಹೆಸರುಗಳಿದ್ದರೆ, ಬ್ರಿಟಿಷರು "ರಾಜ, ರಾಣಿ, ರಾಕೆಟ್ ರೋರರ್" ಎಂಬ ಹೆಸರುಗಳನ್ನು ಕೊಟ್ಟಿದ್ದಾರೆಂದು ಹೇಳಿ, ಪುರಾಣದ ಹೆಸರುಗಳೇ "ನಮಗೆ ಪ್ರಿಯ" ಎಂದಿದ್ದಾರೆ. ಕೊನೆಯಲ್ಲಿ ಈ ಜಲಪಾತದಿಂದ ವಿದ್ಯುತ್ತನ್ನು ತಯಾರಿಸುತ್ತಿರುವುದನ್ನು

೧೩. ಎಂ.ವಿ.ಸೀ. : ಹಾವಾಡಿಗ, ಬಾರಯ್ಯ ಬಾ ಗಾಳಿ, ಕಾವ್ಯಾಲಯ, ಮೈಸೂರು, ಪು.೧೨
೧೪. ಅದೇ : ಜೋಗದ ಜಲಪಾತ, ಪು. ೧೭

ಹೇಳುತ್ತಾ "ಬೆಳಕಾಗುತ ಬಲವಾಗುವಳೀ ಹೊಳೆ" "ಜ್ಯೋತಿರ್ಮಯಿಯೀ ಶರಾವತಿ, ಶಕ್ತಿಪೂರ್ಣೆ ಈ ಶರಾವತಿ, ಅನ್ನಪೂರ್ಣೆ ಈ ಶರಾವತಿ" ಎಂದು ಮುಕ್ತಾಯ ಮಾಡಿದ್ದಾರೆ. ಅಂದರೆ–

ಈ ಕವನದಲ್ಲಿ ಜಲಪಾತದ ಸಮಗ್ರ ಚಿತ್ರ, ಪುರಾಣ ಮತ್ತು ಪ್ರಸ್ತುತದ ವಿವರಗಳು ಮತ್ತು ವಿದ್ಯುಚ್ಛಕ್ತಿಯ ಉಗಮಕ್ಕೆ ಕಾರಣವಾಗಿರುವ ವೈಜ್ಞಾನಿಕ ವಿಷಯ–ಎಲ್ಲ ವಿಷಯಗಳೂ ಬಂದಿವೆ. ವಿಷಯಕ್ಕೆ ಪೂರಕವಾದ ಪ್ರಭಾವಪೂರ್ಣ ಭಾಷೆ ಮತ್ತು ನಾಟಕೀಯ ಸ್ಪರ್ಶವನ್ನು ನೀಡುವ ಮೊಮ್ಮಕ್ಕಳು ಮತ್ತು ತಾತನ ಪ್ರಶ್ನೋತ್ತರ ರೂಪದ ಚೌಕಟ್ಟು ವಿಶೇಷ ಮೆರುಗನ್ನು ನೀಡಿವೆ.

"ಮಲ್ಲಿಯ ಮಲ್ಲಿಗೆ"[೧೫] ಎಂಬ ಪದ್ಯ ಮಲ್ಲಿಗೆಯಲ್ಲಿರುವ ವಿವಿಧ ಬಗೆಗಳನ್ನು ಹೆಸರಿಸುವುದರೊಂದಿಗೆ

ತುರುಬಿಗೆ ದಂಡೆ
ಕಟ್ಟಿದ ಮಲ್ಲಿಗೆ
ದೇವರ ಪೂಜೆಗೆ ಬಿಡಿಮಲ್ಲಿಗೆ
ಮದುಮಕ್ಕಳಿಗೆ
ಮಾಲೆಯ ಮಲ್ಲಿಗೆ
ಮಲ್ಲಿಗೆ ಮೊಗ್ಗು ನಿಡುಜಡೆಗೆ

–ಎಂದು ಅದರ ಉಪಯೋಗಗಳನ್ನು ದಾಖಲಿಸುವಾಗ ನಮ್ಮ ಭಾರತೀಯ ಸಂಸ್ಕೃತಿಯ ವಿವರಗಳೂ ಸ್ಥಾನ ಪಡೆದಿವೆ.

ಎಂ.ವಿ.ಸೀ.ಯವರ ನಿಸರ್ಗದ ಕಾವ್ಯದಲ್ಲಿ ಎದ್ದು ಕಾಣುವ ಅಂಶವೆಂದರೆ "ಪರಿಸರ ಪ್ರೇಮ". ಹೂಗಳನ್ನು ಕೀಳದೆ ಗಿಡದಲ್ಲೇ ಬಿಟ್ಟು ನಲಿಯಬೇಕೆಂಬ ಪ್ರಜ್ಞೆ[೧೬], ಮರಿಪ್ರಾಣಿಗಳು ತಮ್ಮ ತಾಯಿಯೊಂದಿಗೆ ನಕ್ಕು, ನಲಿಯಬೇಕೆಂಬ ಆಸೆ[೧೭], ಸ್ವಾರ್ಥಕ್ಕಾಗಿ ಹಕ್ಕಿಗಳನ್ನು ಗಿಣಿಗಳನ್ನು ಪಂಜರದಲ್ಲಿ ಬಂಧಿಸದೆ ಪ್ರಕೃತಿಯಲ್ಲಿ ಸ್ವತಂತ್ರವಾಗಿ ಸ್ವೇಚ್ಛೆಯಿಂದ ಇರಲು ಬಿಡಬೇಕೆಂಬ ಆಲೋಚನೆ[೧೮]–ಇವರ ಪ್ರಧಾನ ಚಿಂತನೆಗಳಾಗಿವೆ. ಹಕ್ಕಿಯ ಹಾಡನ್ನು ಕೇಳಿ, ಆನಂದಿಸಲು, ಹಕ್ಕಿಯನ್ನು ಬಂಧಿಸಿ ತಂದು, ಅದು ಹಾಡದಿದ್ದಾಗ 'ಅಮ್ಮ'ನ ಪಾತ್ರದ ಮೂಲಕ ಕವಿ ಕೊಡುವ ಉತ್ತರವೆಂದರೆ–

ಹಣ್ಣು ಕೊಡಲೇ ಬೇಡ ಬಿಟ್ಟುಬಿಡೊ ಅದನು
ಹಣ್ಣು ಕೊಡುವನು ಅದಕೆ ಬೇರೊಬ್ಬನು ;
ನಮಗನ್ನ ಕೊಡುವವನೆ ಹಣ್ಣದಕೆ ಕೊಡುವ
ಹಕ್ಕಿಯನು ಬಿಟ್ಟುಬಿಡು–ಕೇಳದರ ಹಾಡು[೧೯]

---

೧೫. ಎಂ.ವಿ.ಸೀ. : ಕೋಡಂಗಿ, ಮಲ್ಲಿಯ ಮಲ್ಲಿಗೆ, ಕಾವ್ಯಾಲಯ, ಮೈಸೂರು. ಪು. ೧೬

೧೬. ಅದೇ : ಹೂ ಬಿಡುವ ಗಿಡ, ಪು. ೧೭, ೧೮.

೧೭. ಎಂ.ವಿ.ಸೀ. : ಹಾವಾಡಿಗ, ಮರಿಯ ಮುದ್ದಿನ ತಾಯಿ, ಪು. ೧೪–೧೬.

೧೮. ಅದೇ : ಪಂಜರದ ಗಿಣಿ, ಪು. ೧೩.

೧೯. ಎಂ.ವಿ.ಸೀ. : ಕೋಡಂಗಿ, ಹಾಡದ ಹಕ್ಕಿ, ಪು. ೧೫

–ಎಂಬ ಕವಿಯ ಚಿಂತನೆಗಳಲ್ಲಿ ಇಂದಿನ 'ಪರಿಸರ ವಿಜ್ಞಾನ'ದ ಪ್ರಮುಖ ಚಿಂತನೆಗಳನ್ನು ಕಾಣಹುದು.

ಎಂ.ವಿ.ಸೀ. ಯವರ ಮತ್ತೊಂದು ಪ್ರಮುಖ ಕಾಳಜಿಯೆಂದರೆ "ಭಾರತೀಯ ಸಂಸ್ಕೃತಿ". ಮಕ್ಕಳ ಕಾವ್ಯದ ಕಾಲವ್ಯಾಪ್ತಿ ೧೯೪೫ ರಿಂದ ೧೯೮೨ರ ವರೆಗೆ ಹರಡಿಕೊಂಡಿರುವುದರಿಂದ ಸಂಪ್ರದಾಯಬದ್ಧ ಭಾರತೀಯ–ವಿಶೇಷವಾಗಿ ಕನ್ನಡಿಗರ–ಸಂಸ್ಕೃತಿಯೊಂದಿಗೆ ಬ್ರಿಟಿಷರ ಆಳ್ವಿಕೆಯ ಪರಿಣಾಮದಿಂದ ಪ್ರವೇಶ ಮಾಡಿದ ಯಂತ್ರನಾಗರಿಕತೆ, ವೈಜ್ಞಾನಿಕ ಆವಿಷ್ಕಾರಗಳು, ವಾಹನಗಳು ಮೊದಲಾದ ವಿವರಗಳಿಗೆ ಮಿಶ್ರಣದ ಚಿತ್ರಣವನ್ನು ಕಾಣುತ್ತೇವೆ.

ಹೂವನ್ನು ಮಾರುವ ಹೂವಾಡಿಗಿತ್ತಿ[೨೦], ಮನೆ ಮನೆಗೆ ಮೊಸರನ್ನು ಮಾರಲು ಬರುವ ಚಿತ್ರ[೨೧], ನಾಗರಹಾವನ್ನು ಆಡಿಸುವ ಹಾವಡಿಗ[೨೨]–ಮೊದಲಾದ ವಿವರಗಳು ಸಂಪ್ರದಾಯ ಸಮಾಜದ ಚಿತ್ರವನ್ನು ನೀಡುತ್ತವೆ.

ನಮ್ಮ ಸಂಸ್ಕೃತಿಯನ್ನು ಚಿತ್ರಿಸುವ ಅತ್ಯುತ್ತಮ ಪದ್ಯವೆಂದರೆ "ಹಬ್ಬದ ಗುಟ್ಟು".[೨೩]

ಕೇಳಿರಿ ಹೇಳುವೆ ಹಬ್ಬದ ಮಟ್ಟು
ಕೇಳಿರಿ ಕೇಳಿರಿ ಕಿವಿಗೊಟ್ಟು
ಎಂದು ಆರಂಭಿಸಿ
ಯುಗಾದಿ ಹಬ್ಬಕೆ ಒಬ್ಬಟ್ಟು
ಕೋಸಂಬ್ರಿ ಪಾನಕ ರಾಮನಿಗೆ
ಹಿಟ್ಟಿನ ಹೋಳಿಗೆ ಕಾಮನಿಗೆ
ಮಂಗಳ ಗೌರಿಗೆ ತಂಬಿಟ್ಟು
ಗಣಪನ ತಾಯಿಗೆ ಗರುಗೊಬ್ಬಟ್ಟು
ಗಣಪಗೆ ಗರಿಗರಿ ಕರಿಗಡಬು
ನವರಾತ್ರಿಯಲಿ ಬಗೆ ಬಗೆ ಭಕ್ಷ್ಯ
ನಮಗವುಗಳ ಮೇಲೇ ಲಕ್ಷ್ಯ
ಸರಸ್ವತೀ ದೇವಿಗೆ ಅತ್ರಾಸ
ದುರ್ಗಾದೇವಿಗೆ ಆಂಬೊಡೆ ಪಾಯಸ
ದೀಪಾವಳಿಯಲಿ ಅಳಿಯನೆ ದೇವರು
ಅವನುಪಚಾರ ಅತ್ತೆಗೆ ಬೆವರು
ಶೂನ್ಯಮಾಸ ಹಬ್ಬಕ್ಕೆ ಸೊನ್ನೆ
ಶಿವರಾತ್ರಿಯಲಿ ಬರಿ ಜಾಗರಣೆ

---

೨೦. ಎಂ.ವಿ.ಸೀ. : ಹೂವಾಡಗಿತ್ತಿ, ಪು. ೯,೧೦
೨೧. ಅದೇ : ಮೊಸರ್ಬೇಕೆ ಮೊಸರು ಪು. ೧೦.
೨೨. ಎಂ.ವಿ.ಸೀ. : ಹಾವಾಡಿಗ, ಪು. ೮–೯
೨೩. ಎಂ.ವಿ.ಸೀ : ಕೋಡಂಗಿ, ಹಬ್ಬದ ಗುಟ್ಟು, ಪು. ೧೨.

ಸಂಕ್ರಾಂತಿಯಲಿ ಎಳ್ಳು ಕಬ್ಬು
ಹಬ್ಬ ಹಬ್ಬಕೂ ಸಂತಸದುಬ್ಬು
ತಿನ್ನದ ದೇವರ ಮುಂದಿಟ್ಟು
ತಿನ್ನುವುದೇ ಹಬ್ಬದ ಗುಟ್ಟು

–ಎಂಬಂತೆ ಯುಗಾದಿಯಿಂದ ಯುಗಾದಿ ಬರುವವರೆಗಿನ ಒಂದು ವರ್ಷದಲ್ಲಿ ಬರುವ ಹಬ್ಬಗಳ ಹೆಸರು ಮತ್ತು ಮುಖ್ಯ ಖಾದ್ಯಗಳ ಪ್ರಸ್ತಾಪವಿದೆ. ಕಡೆಯ ಸಾಲುಗಳಲ್ಲಿ ಹಾಸ್ಯ ಮಿಶ್ರಿತ ವಾಸ್ತವತೆ ಇದೆ.

ಹಾಗೆಯೇ "ಋತುಗಳ ರೀತಿ"[೨೪] ಎಂಬ ಪದ್ಯ

ಚೈತ್ರ ವೈಶಾಖ ವಸಂತ ಋತು–
ಗಿಡಮರ ಚಿಗುರುವುದಕ್ಕೆ ಗುರುತು ;
ರೈತರು ತಮ್ಮ ಗದ್ದೆ ಹೊಲ
ಹದಮಾಡಿ ಉಳಲು ಇದೆ ಕಾಲ.
ಜ್ಯೇಷ್ಠ ಆಷಾಢ ಗ್ರೀಷ್ಮ ಋತು–
ಬೇಸಗೆ ಬಿಸಿಲು ಈಗ ಮುಗಿಯಿತು ;
ದಟ್ಟ ಮೋಡ ಆಕಾಶದಿ ಕವಿದು
ಬೀಸುತ್ತಿರುವುದು ಬಿರುಗಾಳಿ.
ಶ್ರಾವಣ ಭಾದ್ರಪದವು ವರ್ಷ ಋತು–
ಮೋಡ ಬಿರಿದು ಮಳೆ ಸುರಿಯುವುದು ;
ರೈತರು ಹಾಕಿದ ಬೆಳೆ ಬೆಳೆದು
ಎಲ್ಲೆಲ್ಲೂ ಹಸುರಾಗುವುದು.
ಆಶ್ವೀಜ ಕಾರ್ತಿಕವು ಶರದ್‌ಋತು–
ಮಳೆ ನಿಂತಾಕಾಶವು ನೀಲಿ ;
ಹೊಲಗದ್ದೆಯ ಬೆಳೆ ತೆನೆಗೂಡಿ
ರೈತರು ನಲಿವರು ಕುಣಿದಾಡಿ.
ಮಾರ್ಗಶಿರ ಪುಷ್ಯ ಹೇಮಂತ ಋತು–
ಚಳಿಗಾಲವು ಕಾಲೂರುವುದು ;
ಮಂಜು ಬೀಳುವುದು ಬೆಳಗಾಗ
ಸಂಜೆಯಾಗುವುದು ಬಲುಬೇಗ.
ಮಾಘ ಫಾಲ್ಗುಣವು ಶಿಶಿರಋತು–
ಚಳಿ ಗಾಳಿಗೆ ಎಲೆ ಉದುರುವುದು ;

೨೪. ಅದೇ : ಋತುಗಳ ರೀತಿ, ಪು.೧೧

ಪಯಿರನು ಕೊಯ್ಯಲು ರೈತರು ಹಿಗ್ಗಿ,

ಎಲ್ಲೆಲ್ಲೂ ಸಂತಸ ಸುಗ್ಗಿ.

–ಎಂಬ ಈ ಪದ್ಯದಲ್ಲಿ ಭಾರತೀಯ ತಿಂಗಳುಗಳು ಮತ್ತು ಆರು ಋತುಗಳ ಹೆಸರುಗಳೊಂದಿಗೆ ಆಯಾ ಕಾಲದ ಪ್ರಕೃತಿಯ ರೀತಿಯನ್ನು ವರ್ಣಿಸಿದ್ದಾರೆ. ಆಂಗ್ಲ ಹೆಸರುಗಳ ಹಾವಳಿಯಲ್ಲಿ ಸಂಪೂರ್ಣ ಕಣ್ಮರೆಯಾಗಿರುವ ಭಾರತೀಯ ಹೆಸರುಗಳನ್ನು ನಾವೆಲ್ಲರೂ ಕಲಿತು, 'ನಮ್ಮತನ'ವನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ದೃಷ್ಟಿಯಿಂದ ಈ ಪದ್ಯ ತುಂಬಾ ಪ್ರಸ್ತುತ.

ಬ್ರಿಟಿಷರ ಆಗಮನದಿಂದ ೨೦ನೇ ಶತಮಾನದಲ್ಲಿ ಭಾರತಕ್ಕೆ ಬಂದ ಯಂತ್ರ ನಾಗರಿಕತೆ, ವಾಹನಗಳೂ ಕೂಡ ವಿಪರೀತವಾಗಿವೆ. ಆಕಾಶದಲ್ಲಿ ಸುತ್ತುವ 'ಏರೋಪ್ಲೇನು'ಗಳನ್ನು

ಚಂದ್ರನ ಮರಿ ಚಂದ್ರನ ಮರಿ !

ಸುತ್ತುತ್ತಿವೆ ಗಿರಿ ಗಿರಿ !

ಅಮೆರಿಕ ರಷ್ಯಗಳು ಬಿಟ್ಟ

ವಿಜ್ಞಾನದ ಅಚ್ಚರಿ[೨೫]

–ಎಂದು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

ಸ್ವಾತಂತ್ರ್ಯಪೂರ್ವ ಕಾಲದ ಮುಖ್ಯ ಮೌಲ್ಯಗಳಲ್ಲಿ ಒಂದಾದ 'ದೇಶಭಕ್ತಿ'ಯನ್ನೂ ವಿವರಿಸಿದ್ದಾರೆ.

ಮೂಡಿದಂದು ಸ್ವಾತಂತ್ರ್ಯದ ಸೂರ್ಯ

ಮುಗಿವುದು ನಮ್ಮ ಯುದ್ಧ ಕಾರ್ಯ

ಅದಕಾಗಿಯೇ ನಾವ್ ದುಡಿಯೋಣ

ಅವಶ್ಯಬಿದ್ದರೆ ನಾವ್ ಮಡಿಯೋಣ[೨೬]

–ಎಂದು ಮಕ್ಕಳ ಎದೆಯಲ್ಲಿ ಸ್ವಾತಂತ್ರ್ಯದ ಬಯಕೆಯ ಕಿಚ್ಚು ಹತ್ತುವಂತೆ ಬರೆಯುತ್ತಾರೆ. "ನವಭಾರತರತ್ನ ಜವಹರ್"[೨೭] ಮುಂತಾದ ಪದ್ಯಗಳಲ್ಲಿ ದೇಶಭಕ್ತರನ್ನು ಪರಿಚಯಿಸಿದ್ದಾರೆ.

ಹೀಗೆ ಎಂ.ವಿ.ಸೀ.ಯವರ ಕವನಗಳು ಮನರಂಜನೆಯೊಂದಿಗೆ ಉತ್ತಮ ಮೌಲ್ಯಗಳನ್ನೂ ಕೊಡುತ್ತಾ ಮನಸ್ಸು–ಬುದ್ಧಿಗೆ ಬೆಳಕನ್ನು ನೀಡುತ್ತಿವೆ.

ಕಥನ ಕವನಗಳು :

ಕಥೆಯನ್ನು ಕವನದ ರೂಪದಲ್ಲಿ ಹೇಳುವ 'ಕಥನಕವನ'ಗಳನ್ನೂ ರಚಿಸಿದ್ದಾರೆ. ಈ ಗುಂಪಿಗೆ ಸೇರಿರುವ ಗಮನಾರ್ಹ ಕವನವೆಂದರೆ 'ದಾದಿರನ್ನೆ'. ರಾಜಕುಮಾರನಿಗಾಗಿ

---

೨೫. ಎಂ.ವಿ.ಸೀ. : ಹಾಪಾಡಿಗ. ಚಂದ್ರನ ಮರಿ. ಪು. ೨೯.

೨೬. ಎಂ.ವಿ.ಸೀ. ಹೂಪಾಡಿಗಿತ್ತಿ. ಕೊಲ್ಲದ ಕಾಳಗ. ಪು. ೩೨.

೨೭. ಎಂ.ವಿ.ಸೀ. : ಹಾವಾಡಿಗ. ಪು. ೩೦

ತನ್ನ ಮಗನನ್ನೇ ಬಲಿಕೊಟ್ಟು "ಎನ್ನ ಬಾಳಿನ ಬೆಳಕು ನಂದಿತೆ....ಇನ್ನು ಯಾರಿಗೆ ಬದುಕಿರಲಿ ?"[೨೮] ಎಂದು ಹಲುಬುವ ಅಪರೂಪದ ದೇಶಭಕ್ತಳ ಕತೆ 'ದಾದಿರನ್ನೆ', ಪಾತ್ರಗಳ ಸಂಭಾಷಣೆ, ವರ್ಣನೆಗಳ ಮೂಲಕ ನಡೆಯುವ ಈ ಕಥನ ಕವನ ದಾದಿ 'ಪನ್ನೆ'ಯ ವಿಶಿಷ್ಟ ವ್ಯಕ್ತಿತ್ವವನ್ನು ಕಣ್ಮುಂದೆ ನಿಲ್ಲಿಸುತ್ತದೆ. ಪನ್ನೆಯ ಮಾತೃವಾತ್ಸಲ್ಯ, ಭಾಳನ ಮುಗ್ಧತೆ ಮನವನ್ನು ತಟ್ಟುತ್ತವೆ. ಸುಂದರವಾದ ಚಂದ್ರ ಮೂಡಿರುವ ರಾತ್ರಿಯ ವರ್ಣನೆಯಿಂದ ಪ್ರಾರಂಭವಗುವ ಕವನ "ಚಂದ್ರ" ಮುಗಿಲ ಮರೆಯಲಿ ಮೌನವಾದನು. ತಿರೆಯು ತಮಮಯವಾಯಿತು"[೨೯] ಎಂಬ ವರ್ಣನೆಯಿಂದ ಮುಕ್ತಾಯವಾಗಿ ಪ್ರಕೃತಿ ವರ್ಣನೆ ಕಥೆಗೆ ಪೂರಕವಾಗಿದೆ. ಹಾಗೆಯೇ ಸುಲಭವಾದ ಪ್ರಾಸಬದ್ಧ ಭಾಷೆ ಮತ್ತು ಸಂಭಾಷಣೆಗಳು ಕಥೆಗೆ ದೃಶ್ಯ ಕಾವ್ಯದ ಸೊಬಗನ್ನು ನೀಡಿವೆ.

ಮರಿಯ ಮುದ್ದಿನ ತಾಯಿ, ಕೋಡಂಗಿ, ಅಳಿಲುಸೇವೆ, ತಬ್ಬಲಿ ಕಮಲೆ–ಎಂಬ ಪದ್ಯಗಳೂ ಸಹ ಕಥನ ಕವನಗಳ ಸಾಲಿಗೇ ಸೇರುತ್ತವೆ.

ನಾಟಕಗಳು :

ಎಂ.ವಿ.ಸೀ.ಯವರು ಬರೆದಿರುವ ಮಕ್ಕಳ ನಾಟಕಗಳು ಮೂರು. ಅವುಗಳೆಂದರೆ_

೧. ಕೈಕೋಲು ೨. ಕುಮಾರ ಗೌತಮ ೩. ಕರುಣೆಯ ಕುಡಿ.

'ಕೈಕೋಲು' ಎಂಬುದು ರೇಡಿಯೋ ನಾಟಕವಾಗಿ ಜನಪ್ರಿಯವಾದ ನಾಟಕ. ಇದರ ಪಾತ್ರಧಾರಿಗಳು ೧೦–೧೨ ವರ್ಷಗಳ ಮಿತಿಯೊಳಗಿರುವ ಮಕ್ಕಳು. 'ಕಾಮನ ಹುಣ್ಣಿಮೆ'ಯ ಮಾರನೆಯ ದಿನದ ಸಂಜೆ ಹುಣ್ಣಿಮೆಯ ದಿನ ನಡೆದ ಘಟನೆಯನ್ನೇ ನಾಟಕ ರೂಪದಲ್ಲಿ ಹೇಳುವ ಧಾಟಿ ಇದೆ. ಇಲ್ಲಿ ಎಂಟು ಮಕ್ಕಳ ಪಾತ್ರಗಳು, ಅಜ್ಜ, ಭಿಕ್ಷುಕಿಯ ಪಾತ್ರಗಳು ಮತ್ತು 'ಕಾಮನ ಕಟ್ಟಿಗೆ' ಕೇಳುವ ನಾಲ್ಕೈದು ಹುಡುಗರ ಪಾತ್ರಗಳೂ ಬರುತ್ತವೆ. ಇವುಗಳಲ್ಲಿ ದಯೆ, ದಾಕ್ಷಿಣ್ಯ, ಕರುಣೆ ಇಲ್ಲದೆ ಭಿಕ್ಷುಕಿಯ ಕೋಲನ್ನೂ, ಹಣವನ್ನೂ ಕಿತ್ತುಕೊಳ್ಳುವ 'ಗಂಡ'ನಂತಹ ದುಷ್ಟ ಹುಡುಗನ ಪಾತ್ರವೂ; ತನ್ನ ತಾತನ ಕೋಲನ್ನೇ ಭಿಕ್ಷುಕಿಗೆ ಕೊಟ್ಟು ಅಜ್ಜನಿಗೆ ತಾನೇ ಊರುಗೋಲಾಗುವ ಚಿಂತನೆ ಮಾಡಿದ 'ಸೋಮು'ವಿನಂತಹ ಸದ್ಗುಣವಂತ ಹುಡುಗನ ಪಾತ್ರವೂ ಬರುತ್ತದೆ.

"ಹಿರಿಯರ ಮುಪ್ಪಿನ ಕಾಲದಲ್ಲಿ ಮಕ್ಕಳು ಕೈಕೋಲಾಗಿರಬೇಕು" ಮತ್ತು ಸತ್ಯ, ದಯೆ, ಪರೋಪಕಾರ ಬುದ್ಧಿ" ಎಂಬ "ಈ ಕೈಕೋಲನ್ನ ಯಾರೂ ಕಿತ್ತುಕೊಂಡು ಹೋಗೋದಕ್ಕೆ ಆಗೋದಿಲ್ಲ"[೩೦]–ಎಂಬ ಎರಡು ಸಂದೇಶಗಳನ್ನು ನೀಡಿದ್ದಾರೆ. ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ 'ಕಾಮನ ಹುಣ್ಣಿಮೆ' ಹಬ್ಬದ ಆಚರಣೆಯ ವಿಧಾನವೂ ಚಿತ್ರಿತವಾಗಿದೆ. ಇವುಗಳಿಗೆ ಕಡಲೆಕಾಯಿ, ಬೆಲ್ಲ ತಿನ್ನುತ್ತಾ ಕತೆಗಳನ್ನು

---

೨೮. ಎಂ.ವಿ.ಸೀ : 'ದಾದಿರನ್ನೆ', ಜಯ ನಿವಾಸ, ಬೆಂಗಳೂರು, ಪು. ೧೬

೨೯. ಅದೇ.

೩೦. ಎಂ.ವಿ.ಸೀ. ಕೈಕೋಲು, ಕಾವ್ಯಾಲಯ, ಮೈಸೂರು, ಪು. ೨೮.

ಹೇಳಿಕೊಂಡು ನಲಿಯುವ ಮಕ್ಕಳ 'ಕತೆಯ ಕೂಟ' ಚಿನ್ನದ ಚೌಕಟ್ಟನ್ನು ನೀಡಿವೆ.

'ಕುಮಾರ ಗೌತಮ' ಮತ್ತು 'ಕರುಣೆಯ ಕುಡಿ' ಎಂಬ ಎರಡು ನಾಟಕಗಳೂ 'ಭಗವಾನ್ ಬುದ್ಧ'ನ ಬಾಲ್ಯಜೀವನದ ಕೆಲವು ಮುಖ್ಯ ಸಂಗತಿಗಳನ್ನು ವಸ್ತುವಾಗಿ ಹೊಂದಿವೆ. ಕುಮಾರ ಗೌತಮ ೧೯೫೪ ರಲ್ಲಿ ರಚಿತವಾದರೂ ಪ್ರಕಟವಾಗಿರಲಿಲ್ಲ. ೧೯೬೪-೬೫ ರಲ್ಲಿ ಇದೇ ವಸ್ತುವನ್ನು ಹೆಚ್ಚು ವಯಸ್ಸಾದ ಬಾಲಕ-ಬಾಲಕಿಯರಿಗಾಗಿ ಬರೆಯಬೇಕೆನಿಸಿ ಸ್ವಲ್ಪ ಪ್ರೌಢವಾದ ಭಾಷಾಶೈಲಿಯ ಸರಳರಗಳೆಯ ರೂಪಕವಾಗಿ ಬರೆದರು. ಅದೇ 'ಕರುಣೆಯ ಕುಡಿ'ಯಾಯಿತು. ಆದರೆ ಎರಡೂ ನಾಟಕಗಳು ಕ್ರಮವಾಗಿ ೧೯೭೮ ಮತ್ತು ೧೯೮೧ ರಲ್ಲಿ ಪ್ರಕಟವಾದವು.

'ಕುಮಾರ ಗೌತಮ'ನ 'ಮೊದಲ ಮಾತಿ'ನಲ್ಲಿರುವ ಬುದ್ಧನ ಬದುಕಿನಲ್ಲಿ, ಅವನ ಉಪದೇಶದಲ್ಲಿ ಎದ್ದು ಕಾಣುವ ಮುಖ್ಯ ಗುಣ ಕರುಣೆ. ಸಕಲ ಜೀವಿಗಳಲ್ಲಿಯೂ ಕರುಣೆಯನ್ನು ತೋರಿದ ಆತ ಮಹಾಕಾರುಣಿಕ. ಅವನ ಈ ಗುಣ ಬಾಲ್ಯದಲ್ಲಿಯೇ ಹೇಗೆ ಅವನ ನಡೆನುಡಿಗಳಲ್ಲಿ ಕಾಣಿಸುತ್ತಿತ್ತು ಎನ್ನುವುದನ್ನು ತೋರಿಸಲು ನಾಟಕದಲ್ಲಿ ಪ್ರಯತ್ನಿಸಿದೆ.....ಮಕ್ಕಳು ಈ ನಾಟಕವನ್ನು ಓದಿ, ಆಡಿ, ಆಡಿದ್ದನ್ನು ನೋಡಿ, ಸಂತೋಷಪಟ್ಟು, ಕುಮಾರ ಗೌತಮನ ಲೋಕ ಕಾರುಣ್ಯವನ್ನು ತಮ್ಮ ನಡೆನುಡಿಗಳಲ್ಲಿ ಬೆಳೆಸಿಕೊಳ್ಳಲಿ ಎಂದು ಹಾರೈಸುತ್ತೇನೆ"[೩೧] ಎಂಬ ಮಾತುಗಳಲ್ಲಿ ನಾಟಕಕಾರರ ಆಶಯ ವ್ಯಕ್ತವಾಗಿದೆ. ಧನುರ್ವಿದ್ಯಾ ಪ್ರದರ್ಶನದಲ್ಲಿ ಚಿಕ್ಕಪ್ಪನ ಮಗನನ್ನು ಸೋಲಿಸಿದ ಮೇಲೆ "ಒಬ್ಬನ ಗೆಲುವಿನಿಂದ ಇನ್ನೊಬ್ಬನಿಗೆ ಸೋಲು, ಒಬ್ಬನ ಸುಖದಿಂದ ಇನ್ನೊಬ್ಬನ ಅಸುಖ-ಈ ಬಗೆಯ ಗೆಲವು ಗೆಲವಲ್ಲ, ಸುಖ ಸುಖವಲ್ಲ"[೩೨] ಎಂಬ ಆಲೋಚನೆಯಲ್ಲಿರುವ ಕರುಣೆಯ ವ್ಯಕ್ತಿತ್ವ ಮಕ್ಕಳಿಗೆ ಒಳ್ಳೆಯ ನೀತಿ ಪಾಠವಾಗಿದೆ. ಹಾಗೆಯೇ ಹೂಗಳನ್ನು ಕಿತ್ತರೆ ಗಿಡಕ್ಕೆ ನೋವಾಗುವುದು ; ಪಂಜರದಲ್ಲಿರುವ ಗಿಣಿಗಳನ್ನು ಸ್ವತಂತ್ರವಾಗಿರಲು ಬಿಟ್ಟುಬಿಡುವುದು ; ಬಾಣ ನಾಟಿದ ರಕ್ತಸಿಕ್ತವಾದ ಹಕ್ಕಿಯನ್ನು ಕಂಡು ದುಃಖಿಸುವುದು-ಈ ಎಲ್ಲ ಅಂಶಗಳಲ್ಲಿ 'ಕರುಣೆ'ಯೊಂದಿಗೆ ಪರಿಸರದ ಬಗೆಗಿನ ವಿಶೇಷ ಕಾಳಜಿ ವ್ಯಕ್ತವಾಗಿದೆ. ಗಿಡ-ಮರ, ಪ್ರಾಣಿ-ಪಕ್ಷಿಗಳನ್ನು ಹಾಳುಮಾಡದೆ ಉಳಿಸಬೇಕೆಂಬ ಇಂದಿನ ಪರಿಸರ ವಿಜ್ಞಾನಿಗಳ ಆಲೋಚನೆಯೊಂದಿಗೆ ಸಮೀಕರಣವಾಗಿ ಪ್ರಸ್ತುತವಾಗಿದೆ.

ಇದೇ ವಸ್ತು "ಕರುಣೆಯ ಕುಡಿ"ಯಲ್ಲೂ ಪ್ರಸ್ತಾಪಿತವಾಗಿದೆ. ಸರ್ ಎಡ್‌ವಿನ್ ಆರ್‌ನಲ್ಡ್‌ರವರ 'ಏಷ್ಯದ ಜ್ಯೋತಿ' (Light of Asia) ಕಾವ್ಯದ ಮೊದಲ ಅಧ್ಯಾಯದಿಂದ ಪ್ರೇರಣೆ ಪಡೆದಿದ್ದೇನೆ, ಪ್ರಯೋಜನ ಪಡೆದಿದ್ದೇನೆ ಎಂದು ಲೇಖಕರು ಹೇಳಿಕೊಂಡಿದ್ದಾರೆ. ನಾಟಕದ ಆರಂಭದಲ್ಲಿರುವ 'ಅಸಿತ ಮುನಿಗಳ ಭವಿಷ್ಯದ ನುಡಿ' ಗೌತಮ ಕಲಿತಿರುವ ವಿದ್ಯೆಯ ವೈಶಿಷ್ಟ್ಯದ ವರ್ಣನೆ'-ಮುಂತಾದವು ಕುಮಾರ

೩೧. ಎಂ.ವಿ.ಸೀ : 'ಕುಮಾರ ಗೌತಮ'. ಮೊದಲ ಮಾತು. ಜಯ ನಿವಾಸ. ಬೆಂಗಳೂರು. ಪು. ೩.
೩೨. ಅದೇ. ಪು. ೯

ಗೌತಮನಲ್ಲಿರುವುದಕ್ಕಿಂತ ಹೆಚ್ಚು ವಿಸ್ತಾರವಾಗಿವೆ. ಭಾಷೆ ಪ್ರೌಢವಾಗಿದೆ.

ಕನ್ನಡದ ಬಗ್ಗೆ ಮಕ್ಕಳಲ್ಲಿ ಒಲವನ್ನು ಮೂಡಿಸುವಂತಹ ಕಾರ್ಯವನ್ನೂ ಮಾಡಿದ್ದಾರೆ. ಈ ದಿಸೆಯಲ್ಲಿ

೧. ಕನ್ನಡದ ಕತೆ ೨. ಈ ಕರುನಾಡಿದು ನನ್ನ ಮನೆ–ಎಂಬ ಎರಡು ಕೃತಿಗಳು ಮೂಡಿವೆ.

"ಕನ್ನಡದ ಕತೆ" ಕನ್ನಡ ಸಾಹಿತ್ಯ ಪರಿಷತ್ತು ಅಂತರರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಮಕ್ಕಳ ಕಲ್ಯಾಣಕ್ಕಾಗಿ ಪ್ರಕಟಿಸಿದ ಪುಸ್ತಕ ಮಾಲೆಗೆ ಸೇರಿರುವ ಪುಸ್ತಕ. ಅಂದಿನ ಅಧ್ಯಕ್ಷರಾಗಿದ್ದ ಪ್ರೊ॥ ಹಂಪ. ನಾಗರಾಜಯ್ಯನವರು ಹೇಳಿರುವ " ವೈಜ್ಞಾನಿಕ ದೃಷ್ಟಿ ಹಾಗೂ ಚಿಂತನೆಯ ಪ್ರವೃತ್ತಿಯನ್ನು ಉದ್ದೀಪಿಸುವುದು ಈ ಪುಸ್ತಕ ಮಾಲೆಯ ಆಶಯ"[೩೩] ಎಂಬುದು ಈ ಪುಸ್ತಕ ಆಶಯವನ್ನು ತಿಳಿಸುತ್ತದೆ. ಪುಸ್ತಕದ ಶೀರ್ಷಿಕೆಯೇ ಹೇಳುವಂತೆ ರಾಜ್ಯೋತ್ಸವದ ಭಾಷಣದಿಂದ ಆರಂಭವಾಗುವ ಪುಸ್ತಕ 'ಶಿವರಾಮಯ್ಯ' ಎಂಬ ಉಪಾಧ್ಯಾಯ ಮತ್ತು ಐದು ಜನ ವಿದ್ಯಾರ್ಥಿಗಳ ವಿವಿಧ ಪ್ರಶ್ನೋತ್ತರಗಳ ರೂಪದಲ್ಲಿ ಕನ್ನಡ ಮತ್ತು ಸಂಸ್ಕೃತಗಳ ಬಾಂಧವ್ಯ, ಹಲ್ಮಿಡಿಯ ಶಾಸನದಿಂದ ಆರಂಭಿಸಿ–ಜನಪದ ಸಾಹಿತ್ಯವನ್ನೂ ಒಳಗೊಂಡಂತೆ–ಇತ್ತೀಚೆಯ ಮಹಿಳಾ ಸಾಹಿತ್ಯದವರೆಗಿನ ಕನ್ನಡ ಭಾಷೆ ಮತ್ತು ಸಾಹಿತ್ಯದ ಚರಿತ್ರೆಯನ್ನೂ, ಸೊಗಸನ್ನೂ ವಿವರಿಸಿದ್ದಾರೆ. ಕೃತಿಯ ವಿವರಣೆಗೆ ನಾಟಕೀಯ ಸ್ಪರ್ಶ ಒದಗಿದೆ.

"ಈ ಕರುನಾಡಿದು ನನ್ನ ಮನೆ" ಎಂಬ ಪುಸ್ತಕದಲ್ಲಿ "ಕನ್ನಡಮ್ಮನ ಕೊರಗು" ಎಂಬ ದೀರ್ಘ ಕತೆ ಇದೆ. ಈ ಕೃತಿ ಕನ್ನಡದ ದುರ್ದೆಸೆಯನ್ನು ಕಥೆಯ ರೂಪದಲ್ಲಿ ಹೇಳುತ್ತಿದೆ. 'ಉಸಿರು' ಎಂಬ ಹೆಸರಿನ ೧೨ ಭಾಗಗಳಲ್ಲಿ ಹರಿಯುವ ಈ ಕಥೆಯಲ್ಲಿ 'ಕನ್ನಡಮ್ಮ' ಕಾವ್ಯವನದ ಕುಟೀರ ಬಿಟ್ಟು, ಊರನ್ನು ನೋಡುತ್ತಾ ಹೋಗುವ ದೃಶ್ಯಗಳು ಬರುತ್ತವೆ. ಕನ್ನಡದ ನೆಲದಲ್ಲಿ ಕನ್ನಡಕ್ಕೇ ಸ್ಥಳವಿಲ್ಲದೆ, ಹಿಂದಿ, ಇಂಗ್ಲಿಷ್ ಮೊದಲಾದ ಅನ್ಯ ಭಾಷೆಗಳು ನೆಲೆಯೂರಿರುವುದರ ಬಗ್ಗೆ ಚಿಂತನೆ ಇದೆ. ನಗರದಲ್ಲಿ ಈ ಸ್ಥಿತಿಯಾದರೆ, ಗ್ರಾಮೀಣ ಜನತೆ ಕನ್ನಡವೂ ಸೇರಿ ಯಾವ ಭಾಷೆಯನ್ನೂ ಓದಲು ಬಾರದಂತಹ ಸ್ಥಿತಿಯಲ್ಲಿದ್ದಾರೆ. 'ಕನ್ನಡವಕ್ಕಿ' ಪಂಜರದಲ್ಲಿ ಸೆರೆಯಾಗಿದೆ. ಇಂತಹ ಪರಿಸರದಲ್ಲೂ ಕನ್ನಡ ಪುಸ್ತಕ ಓದುವ ರೀತಿ ಸ್ವಲ್ಪ ಮಟ್ಟಿಗಿದೆ ಎಂಬ ಆಶಾಭಾವನೆಯೂ ಇದೆ. "ಹೆರರ ನುಡಿ, ಹೆರರ ನಡೆ, ಹೆರರ ಕೂಗೇ ಕೂಗು, ಹೆರರದೇ ಹೆಮ್ಮೆ ; ನನ್ನ ಮನೆ ಹಾಳು, ನನ್ನ ನುಡಿ ಬೀಳು"[೩೪] ಎಂಬ ಕನ್ನಡಮ್ಮನ ಕೊರಗು ಅಂತ್ಯದಲ್ಲಿ ನಿವಾರಣೆಯಾಗಿ "ನಕ್ಕಳಾ ತಾಯಿ" ಎಂದು ಮುಕ್ತಾಯವಾಗುತ್ತದೆ.

---

೩೩. ಎಂ.ಪಿ.ಸೀ. ಕನ್ನಡದ ಕತೆ, ಈ ಮಾಲೆಯ ಪುಸ್ತಕ ಕುರಿತು, ಕನ್ನಡ ಸಾಹಿತ್ಯ ಪರಿಷತ್ತು, ೧೯೭೯, ಬೆನ್ನುಡಿ.

೩೪. ಎಂ.ಪಿ.ಸೀ. : ಈ ಕರುನಾಡಿದು ನನ್ನ ಮನೆ, ರಾಘವ ಪ್ರಕಾಶನ, ಬೆಂಗಳೂರು, ಪು. ೩೩

ಜೀವನ ಚರಿತ್ರೆಗಳು :

ರಾಷ್ಟ್ರೋತ್ಥಾನ ಪರಿಷತ್ 'ಭಾರತ-ಭಾರತಿ ಪುಸ್ತಕ ಸಂಪದ'ದ ಹೆಸರಿನಲ್ಲಿ ಭಾರತದ ಗಣ್ಯರ ಜೀವನ-ಸಾಧನೆ-ವ್ಯಕ್ತಿತ್ವಗಳನ್ನು ಪರಿಚಯಿಸುವ ಯೋಜನೆ ಹಾಕಿಕೊಂಡಿತು. ಎಂ.ವಿ.ಸೀ.ಯವರ 'ರನ್ನ' ಮತ್ತು "Yudhistira" ಎಂಬ ಪುಸ್ತಕಗಳು ಈ ಯೋಜನೆಯ ಭಾಗಗಳಾಗಿ ಮೂಡಿಬಂದವು.

'ರನ್ನ' ಎಂಬುದು ೧೯೭೯ ರಲ್ಲಿ ಮೊದಲು ಪ್ರಕಟವಾಗಿ ೨೦೦೫ ರಲ್ಲಿ ಮರು ಮುದ್ರಣ ಕಂಡಿದೆ. ೪೦ ಪುಟಗಳ ಈ ಪುಸ್ತಕದಲ್ಲಿ ರನ್ನನ ವೈಶಿಷ್ಟ್ಯ, ಜೀವಿಸಿದ್ದ ಕಾಲ, ರಾಜಕೀಯ ಸ್ಥಿತಿ, ಆಶ್ರಯ ನೀಡಿದ, ಪ್ರೋತ್ಸಾಹಿಸಿದ ಚಾವುಂಡರಾಯ, ಅತ್ತಿಮಬ್ಬೆಯರ ಬಗ್ಗೆ ; 'ರನ್ನ' ಎಂಬ ಹೆಸರು, ರುಜು ; ಕೃತಿಗಳ ಪರಿಚಯ-ಎಲ್ಲವನ್ನೂ ವಿವರಿಸಿದ್ದಾರೆ. ಹಳಗನ್ನಡದ ಪದ್ಯಗಳನ್ನು ಬಹುಮಟ್ಟಿಗೆ ಹೊಸಗನ್ನಡದಲ್ಲಿ ಅನುವಾದ ಮಾಡಿ ಉದ್ಧರಿಸುತ್ತಾರೆ. ಅಲ್ಲಲ್ಲಿ ಹಳಗನ್ನಡ ಪದ್ಯಗಳನ್ನೂ ಕೊಟ್ಟು, ಕೆಳಗೆ ಅನುವಾದದ ರೂಪವನ್ನೂ ಕೊಟ್ಟಿದ್ದಾರೆ. ಈ ತಂತ್ರದಿಂದ ಮಕ್ಕಳಿಗೆ ಮೂಲ ಕಾವ್ಯದ ಸ್ವರೂಪವೂ ತಿಳಿಯುತ್ತದೆ ; ಸುಲಭವಾಗಿ ಅರ್ಥವೂ ಆಗುತ್ತದೆ. ಅಲ್ಲಲ್ಲಿ ಸುಂದರ ಚಿತ್ರಗಳೂ ಇವೆ. ಮುಖಪುಟದಲ್ಲಿರುವ ರನ್ನನ ಚಿತ್ರವೇ ಅತ್ಯಂತ ಆಕರ್ಷಕವಾಗಿದ್ದು, ಮಕ್ಕಳನ್ನು ಸೆಳೆಯುತ್ತದೆ.

"Yudhishtira" ಎಂಬುದು ೧೯೭೫ ರಲ್ಲಿ ಪ್ರಕಟವಾಗಿದೆ. ಕನ್ನಡದಲ್ಲಿ ಬರೆದಿರುವುದನ್ನು ಪ್ರಪಂಚದಾದ್ಯಂತ ಇರುವ ಯುವ ಓದುಗರಿಗಾಗಿ ಆಂಗ್ಲಭಾಷೆಗೆ ಅನುವಾದ ಮಾಡಿಸಲಾಗಿದೆ ಎಂದು ಪ್ರಧಾನ ಸಂಪಾದಕರಾದ ಪ್ರೊ|| ಎಲ್. ಎಸ್. ಶೇಷಗಿರಿರಾಯರು ಹೇಳಿದ್ದಾರೆ. ಕೃತಿಯ ಪ್ರಾರಂಭದಲ್ಲಿರುವ A man should live virtuously because virtue is good, not because it pays to be virtuous'-so he believed and acted. And he said to the king of the Gods, 'I cannot enter a Heaven in which there is no place for a faithful dog'[೩೫] ಎಂಬ ನುಡಿಗಳಲ್ಲಿ ಯುಧಿಷ್ಠಿರನ ವ್ಯಕ್ತಿತ್ವದಲ್ಲಿರುವ ವೈಶಿಷ್ಟ್ಯದ ಸಾರವನ್ನು ನಿರೂಪಿಸಿದ್ದಾರೆ. ೪೮ ಪುಟಗಳ ಈ ಪುಟ್ಟ ಪುಸ್ತಕದಲ್ಲಿ ಯುಧಿಷ್ಠಿರನ ಜೀವನ ಮತ್ತು ಸಾಧನೆಗಳ ಸಮಗ್ರ ಚಿತ್ರಣ ಸರಳ ಭಾಷೆಯಲ್ಲಿ ಮೈತಳೆದಿದೆ. ಸುಂದರವಾದ ಚಿತ್ರಗಳು ವಿಶೇಷ ಸೊಬಗನ್ನು ನೀಡಿವೆ.

ಅನುವಾದ :

ಈ ಗುಂಪಿಗೆ 'ಕೋಡಂಗಿ' ಎಂಬ ಕವನ ಸಂಕಲನದಲ್ಲಿರುವ 'ತಬ್ಬಲಿ ಕಮಲೆ'

---

೩೫. M.V.S. : Yudhishtira, Bharatha-Bharathi Pustaka Sampada, Bangalore, P. 5

ಎಂಬ ನೀಳವಾದ ಕಥನ ಕವನ ಮತ್ತು 'ರಾಬಿಸನ್‌ಕ್ರೂಸೋ' ಎಂಬ ಗದ್ಯರೂಪದ ಪ್ರವಾಸ ಕಥನ ಸೇರುತ್ತವೆ.

"ತಬ್ಬಲಿ ಕಮಲೆ" ಎಂಬುದು ವರ್ಡ್ಸ್‌ವರ್ತ್ ಕವಿಯ 'Luey Gray' ಎಂಬ ಪದ್ಯ ಮಾದರಿಯಲ್ಲಿ ಬರೆದಿರುವುದಾಗಿ ಹೇಳಿಕೊಂಡಿದ್ದಾರೆ.[೩೬] ಕವನದ ಶೀರ್ಷಿಕೆಯಲ್ಲಿ ವ್ಯತ್ಯಾಸವಿದ್ದು, ಕನ್ನಡದ ಸೊಗಡನ್ನು ಹೊಂದಿದೆ ; ತಂದೆ, ಚಿಕ್ಕಮ್ಮ ಜೀವಂತವಾಗಿದ್ದರೂ ಪ್ರೀತಿಯನ್ನು ಕಾಣದ ಕಮಲೆಯ ಸ್ಥಿತಿಯನ್ನು ಧ್ವನಿಸುತ್ತಿದೆ. ಮಳೆಯ ಆರ್ಭಟ ದಟ್ಟವಾದ ಕತ್ತಲಿನಿಂದ ಕೂಡಿರುವ ಭಯಾನಕ ರಾತ್ರಿಯ ವರ್ಣನೆ, ತಂದೆ ಅವಳಿಗೆ ಕೈದೀಪವನ್ನು ಕೊಟ್ಟು ತಾಯಿಯನ್ನು ಕರೆತರಲು ಕಳುಹಿಸಿದ್ದು ; "ಸಂಜೆಗೆಂಪೊಳು ನದಿಯ ತಡಯಲಿ, ಕಮಲೆ ಚಿಕ್ಕಮ್ಮನನು ಕೂಗುತ, ಹಾಡಿಕೊಳ್ಳುತ್ತಿರುವಳೊಬ್ಬಳೆ-ಎಂದು ಜನ ನಂಬಿರುವರು[೩೭] ಎಂಬಂತೆ ಜನರ ನಂಬಿಕೆಯ ಭಾವ ಎರಡೂ ಪದ್ಯಗಳಲ್ಲಿ ಸಮಾನವಾಗಿದೆ.

ಆದರೆ ವರ್ಡ್ಸ್‌ವರ್ತ್‌ನಲ್ಲಿ ತಂದೆ ಮತ್ತು ಚಿಕ್ಕಮ್ಮ-ಇಬ್ಬರೂ ಲೂಸಿಯನ್ನು ಹುಡುಕಿ ಕಾಣದೆ "In heaven we all shall meet" ಎಂದು ದುಃಖಿಸುತ್ತಾರೆ. ಎಂ.ವಿ.ಸೀ.ಯವರಲ್ಲಿ ತಂದೆ ಹುಡುಕಲು ಹೊರಟಾಗ ಚಿಕ್ಕಮ್ಮ ತಡೆದಳೆಂದೂ, ಅವನು "ಹೆಂಡತಿಯ ಮಾತನ್ನು ಕೇಳದೆ"[೩೮] ಏಕಾಂಗಿಯಾಗಿ ಹುಡುಕಲು ಹೊರಟನೆಂದು ನಿರೂಪಿತವಾಗಿದೆ. ಇಲ್ಲಿ ಚಿಕ್ಕಮ್ಮನ ಪಾತ್ರ ನಿರ್ದಯತೆಯ ಪರಾಕಾಷ್ಠೆಯನ್ನು ಮುಟ್ಟಿದೆ.

ಒಟ್ಟಿನಲ್ಲಿ ತಂದೆಯ ಪ್ರೀತಿಗೆ ಎರವಾಗಿ ಪ್ರಕೃತಿಯ ವಿಕೋಪಕ್ಕೆ ಬಲಿಯಾದ ಪುಟ್ಟ ಹುಡುಗಿಯ ಕರುಣಾಜನಕ ದುರಂತ ಕಥೆ ೧೬ ಪುಟ್ಟ ಭಾಗಗಳಲ್ಲಿ ಪರಿಣಾಮಕಾರಿಯಾಗಿ ನಿರೂಪಿತವಾಗಿದೆ.

"ರಾಬಿನ್ಸನ್ ಕ್ರೂಸೊ"ಎಂಬುದು ಕ್ರಿ.ಶ. ೧೬೫೯-೧೭೩೧ರ ವರೆಗೆ ಜೀವಿಸಿದ್ದ ಲಂಡನ್ನಿನ 'ಡ್ಯಾನಿಯಲ್ ಡೀಫೋ' ಎಂಬ ಆಂಗ್ಲ ಗ್ರಂಥಕರ್ತನ ಕೃತಿಯ ಅನುವಾದ. ದೀರ್ಘವಾದ ಮೂಲ ಕೃತಿಯ 'ಮೊದಲನೆಯ ಭಾಗ'ವನ್ನು ಅನುವಾದ ಮಾಡಿ ೧೯೪೪ರ ರಷ್ಟು ಹಿಂದೆಯೇ ಪ್ರಕಟಪಡಿಸಿದ್ದಾರೆ. " 'ರಾಬಿನ್ಸನ್ ಕ್ರೂಸೊ' ಶ್ರೇಷ್ಠವಾದ ಗ್ರಂಥವೆಂಬುದರಲ್ಲಿ ಸಂದೇಹವೇ ಇಲ್ಲ. ಅದರಲ್ಲಿ ಅನಿರ್ವಚನೀಯವಾದ ಆಕರ್ಷಕ ಗುಣವೊಂದು ಅಡಗಿದೆ. ಸಾಹಸಕೃತ್ಯಗಳನ್ನೂ ನೀತಿ ವಿಚಾರಗಳನ್ನೂ ಬೆರೆಸಿರುವುದೇ ಈ ಗ್ರಂಥದ ವೈಶಿಷ್ಟ್ಯ....ಕಥಾವಸ್ತು, ಕಥನ ರೀತಿ-ಎಲ್ಲವೂ ಬಹು ಸರಳ ; ಆದರೆ ಅದು ಮಹಾಕಾವ್ಯಗಳ ನಿರೂಪಣ ಕ್ರಮದಲ್ಲಿ ಕಾಣಬರುವ ಭವ್ಯವಾದ ಸುಂದರ ಸರಳತೆ"[೩೯] ಎಂದು ಮುನ್ನುಡಿಯಲ್ಲಿ ಮೂಲ ಲೇಖಕನ ಪರಿಚಯವನ್ನೂ, ಕೃತಿಯ

---

೩೬ ಎಂ.ವಿ.ಸೀ. : ಕೋಡಂಗಿ, ತಬ್ಬಲಿ ಕಮಲೆ, ಕಾವ್ಯಾಲಯ, ಮೈಸೂರು, ಪು. ೨೪.

೩೭. ಅದೇ, ಪು. ೩೦.

೩೮. ಅದೇ, ಪು. ೩೮.

ವೈಶಿಷ್ಟ್ಯವನ್ನೂ ವಿವರಿಸಿದ್ದಾರೆ. ಹಾಗೆಯೇ "ನಾನು ಚಿಕ್ಕಂದಿನಲ್ಲಿ ಓದಿ ನಲಿದ ಈ ಗ್ರಂಥವನ್ನು ನಾಡಿನ ಬಾಲಕ ಬಾಲಕಿಯರ ಮುಂದಿಡಬಯಸುತ್ತೇನೆ. ಅವರು ಓದಿ ನಲಿದರೆ ನನ್ನ ಶ್ರಮ ಸಾರ್ಥಕವಾದಂತೆ"[೪೦] ಎಂದು ಅನುವಾದದ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. ಪ್ರಪಂಚದ ಮಟ್ಟದಲ್ಲಿ ಅತ್ಯುತ್ತಮವಾದುದನ್ನು ಕ್ನಡ ಮಕ್ಕಳಿಗೆ ಅವರ ಸ್ವಭಾಷೆಯಲ್ಲಿ-ನೀಡುವ ಸದಾಶಯ ಅತ್ಯಂತ ಶ್ಲಾಘನಾರ್ಹ.

ಮೂಲ ಆಶಯಕ್ಕೆ ಯಾವುದೇ ಧಕ್ಕೆಯಾಗದಂತೆ ರಚಿತವಾಗಿರುವ ಸುಂದರ 'ಭಾವಾನುವಾದ'ವೆಂದು ಹೇಳಬಹುದು. ಅಲ್ಲಲ್ಲಿ ಸೇರ್ಪಡೆಯಾಗಿರುವ-ಲೇಖಕರಿಂದಲೇ ಚಿತ್ರಿತವಾಗಿರುವ-ಸುಂದರ ಚಿತ್ರಗಳು ಹಿರಿಯ ಮಕ್ಕಳ ಸಾಹಸ ಪ್ರವೃತ್ತಿ, ಕಲ್ಪನೆಗಳನ್ನು ತಣಿಸಿ ರೋಮಾಂಚನವನ್ನೂ ಆನಂದವನ್ನು ನೀಡುವುದರಲ್ಲಿ ಸಂಶಯವೇ ಇಲ್ಲ.

ಭಾಷೆ ಬಹುಮಟ್ಟಿಗೆ ಸರಳವಾಗಿದೆ. ಅಲ್ಲಲ್ಲಿ "ತೊತ್ತಳದುಳಿದು, ನ್ಯಾಸ, ಅಳವು, ದುರ್ನಿವಾರಣೀಯ" ಮೊದಲಾದ ಪದಗಳಿದ್ದು ಭಾಷೆಯ ಶಕ್ತಿಯನ್ನು ಹೆಚ್ಚಿಸಿವೆ. ಆದರೆ "ದೋಣಿಯನ್ನು ಅತ್ತಕಡೆ ತೆಗೆದುಕೊಂಡು ಹೋಗಲು ಎರಡು ವೇಳೆ ಪ್ರಯತ್ನಪಟ್ಟೆ"[೪೧] ಭರತ ಬಂದು ಹರಿಯುವುದರಲ್ಲಿ ಇದ್ದುದರಿಂದ, ಇನ್ನೂ ಮುಂದಕ್ಕೆ ಹೋಗುವುದಕ್ಕಾಗಿ ಇದ್ದೆಡೆಯಲ್ಲೇ ಕಾದಿದ್ದೆವು"[೪೨].....ಎಂಬ ವಾಕ್ಯಗಳಲ್ಲಿ 'ಎರಡುವೇಳೆ' 'ಭರತ' ಎಂಬ ಪದಗಳ ಬಳಕೆ ಅಸಹಜವಾಗಿದೆ. ಇಂತಹ ಅಪವಾದಗಳನ್ನು ಬಿಟ್ಟರೆ ಹಳಗನ್ನಡ, ನಡುಗನ್ನಡ, ಸಂಸ್ಕೃತ ಪದಗಳ ಮಿಶ್ರಣವಾಗಿರುವ ಹೊಸಗನ್ನಡವನ್ನು ಬಳಸಿದ್ದಾರೆ. ಇದರಿಂದ ಕನ್ನಡ ಮಕ್ಕಳ ಭಾಷಾಸಂಪತ್ತು ವೃದ್ಧಿಯಾಗುತ್ತದೆ.

ಉತ್ತಮ ಪಂಡಿತರಾಗಿದ್ದರೂ ಮುಗ್ಧ ಮಕ್ಕಳ ಮಟ್ಟಕ್ಕೂ ಇಳಿದು, ಅವರ ಬುದ್ಧಿ, ಭಾವಗಳಿಗೆ ಬೆಳಕಾಗುವಂತೆ ರಚಿಸಿರುವ ಎಂ.ವಿ.ಸೀ.ಯವರ ಮಕ್ಕಳ ಸಾಹಿತ್ಯ ಇಂದಿನ ಕಾಲಕ್ಕೂ ಸಲ್ಲುವಂತಹದು ಎಂಬುದರಲ್ಲಿ ಸಂಶಯವಿಲ್ಲ.

---

೩೯. ಎಂ.ವಿ.ಸೀ. : ರಾಬಿನ್ಸನ್ ಕ್ರೂಸೊ. ಮುನ್ನುಡಿ. ಎಸ್.ಎಸ್.ಎನ್. ಬುಕ್ ಡಿಪೋ. ಬೆಂಗಳೂರು. ಪು. iii

೪೦. ಅದೇ.

೪೧. ಅದೇ, ಪು. ೩೦.

೪೨. ಅದೇ.

೫. ಎಂ.ವಿ. ಸೀತಾರಾಮಯ್ಯನವರ ಕಥಾ ಸಾಹಿತ್ಯ

• ಡಾ. ಮುಳುಕುಂಟೆ ರಮೇಶ್

ಸಣ್ಣ ಕತೆಗಳು ಕನ್ನಡದಲ್ಲಿ ಆರಂಭವಾದದ್ದು ಕ್ರಿಶ. ೧೯೦೦ರ ಸುಮಾರಿನಲ್ಲಿ. ಅಂದರೆ ಕನ್ನಡ ಸಣ್ಣ ಕತೆಗಳು ಆರಂಭವಾಗಿ ಒಂದು ಶತಮಾನವಾಗಿದೆ ಎಂದು ಸ್ಥೂಲವಾಗಿ ಹೇಳಬಹುದು. ಸುಮಾರು ನೂರು ವರ್ಷಗಳ ಕಾಲಘಟ್ಟದಲ್ಲಿ ಕನ್ನಡ ಸಣ್ಣ ಕತೆ ಪ್ರಕಾರವು ಹುಲುಸಾಗಿಯೇ ಬೆಳೆದಿದೆಯೆಂದು ಹೇಳಬಹುದಾಗಿದೆ.

ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳೆನಿಸಿದ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಸ್ತ್ರೀವಾದಿ ಸಂವೇದನೆಯ ಸಾಹಿತ್ಯದಲ್ಲಿ, ಸಣ್ಣ ಕತೆಗಳದು ಕಾವ್ಯದಂತೆ ಸಿಂಹಪಾಲು. ನವೋದಯ ಕಾಲಘಟ್ಟದ ಕತೆಗಾರಲ್ಲಿ ಸಭ್ಯತೆ, ಸಜ್ಜನಿಕೆ, ಸೌಜನ್ಯ, ನೀತಿ, ಮೌಲ್ಯಗಳ ಆದರ್ಶ, ಅನುಕಂಪ ಕಂಡುಬರುತ್ತದೆ. ತುಳಿತಕ್ಕೆ, ಕೆಡುಕಿಗೆ, ಹಿಂಸೆಗೆ ಕಾರಣವಾದ ವ್ಯಕ್ತಿ ಅಥವಾ ವ್ಯವಸ್ಥೆಯ ಬಗ್ಗೆ ತೀವ್ರ ವಿರೋಧ ಒಡ್ಡುವ ಎದೆಗಾರಿಕೆ ಇಲ್ಲಿ ಕಂಡುಬರುವುದಿಲ್ಲ.

ಆದರೆ ೧೯೪೦ ರ ಸುಮಾರಿನಲ್ಲಿ ಆರಂಭವಾದ ಪ್ರಗತಿಶೀಲರ ಕತೆಗಳ ದೃಷ್ಟಿ ಧೋರಣೆ ಇದಕ್ಕಿಂತ ಭಿನ್ನವಾದುದು. ಸಮಾಜದ ಬೂಟಾಟಿಕೆ, ಆಚಾರ ವಿಚಾರಗಳ ಮುಖವಾಡ ಬಯಲಿಗೆಳೆಯುವುದು, ವ್ಯವಸ್ಥೆಯ ಬಗ್ಗೆ ಬೇಸರ-ವಿರೋಧ, ಶೋಷಿತ ಮತ್ತು ಶೋಷಕ ವರ್ಗವಾಗಿ ಕಾಣುವುದು. ಅಂದರೆ ಶೋಷಿತ ವ್ಯಕ್ತಿ ಮತ್ತು ಶೋಷಕ ಇಲ್ಲಿ ಸಾಮಾಜಿಕ ವ್ಯವಸ್ಥೆಯ ಪ್ರತಿನಿಧಿಗಳಂತೆ ತೋರುತ್ತಾರೆ.

ಆದರೆ ನವ್ಯರ ಕತೆಗಳಲ್ಲಿ ಇವೆರಡು ಹಂತಗಳಿಗಿಂತ ಭಿನ್ನವಾದ ವಿಚಾರವನ್ನು ಕಾಣುತ್ತೇವೆ. ೧೯೫೦ರ ನಂತರದ ಕಾಲದಲ್ಲಿ ರಚಿತವಾದ ನವ್ಯಕತೆಗಳಲ್ಲಿ ಮನುಷ್ಯನಲ್ಲಿರುವ ನೈತಿಕತೆ, ಧಾರ್ಮಿಕ ನಂಬಿಕೆಗಳು, ಮೌಲ್ಯಗಳು ಸಂಸ್ಕಾರ ರೂಪದಲ್ಲಿ ಅಡಗಿರುತ್ತವೆ. ಅವು ಸಾಂದರ್ಭಿಕವಾಗಿ ವ್ಯಕ್ತಿತ್ವವನ್ನು ನಿಯಂತ್ರಿಸುತ್ತವೆ. ಎಷ್ಟೋ ವೇಳೆ ತಾನು ನಂಬಿರುವ ತತ್ತ್ವ, ಸಿದ್ಧಾಂತಗಳಿಗೆ ತಿಲಾಂಜಲಿ ಕೊಡುವುದಕ್ಕೂ ಇಲ್ಲಿನ ವ್ಯಕ್ತಿಗಳು ಹಿಂಜರಿಯುವುದಿಲ್ಲ. ಇಲ್ಲಿನ ಕತೆಗಳಲ್ಲಿ ಭಾವನೆಗಿಂತ, ಅನುಭವ ಮುಖ್ಯವಾಗಿ ಕೆಲಸಮಾಡುತ್ತದೆ.

ಈ ಹಿನ್ನೆಲೆಯಲ್ಲಿ ಎಂ. ವಿ. ಸೀತಾರಾಮಯ್ಯನವರ ಸಣ್ಣ ಕತೆಗಳನ್ನು ನೋಡಬೇಕು. ಎಂ.ವಿ.ಸೀ. ಯವರು ನವೋದಯ ಕಾಲಘಟ್ಟದ ಎರಡನೆಯ ಪೀಳಿಗೆಯ ಕತೆಗಾರರು. ಮಾಸ್ತಿ, ಎ. ಆರ್. ಕೃಷ್ಣಶಾಸ್ತ್ರಿಗಳು ಮೊದಲ ಪೀಳಿಗೆಯ ಕತೆಗಾರರು. ಮಾಸ್ತಿಯವರ ಮೊದಲ ಕತೆ **'ರಂಗನ ಮದುವೆ'** ೧೯೧೦ರ ಸುಮಾರಿಗೆ ಪ್ರಕಟವಾಯಿತು. ಅಂದರೆ ಅದು ಎಂ. ವಿ. ಸೀತಾರಾಮಯ್ಯನವರ ಹುಟ್ಟಿದ ವರ್ಷ.

ಎಂ.ವಿ.ಸೀ.ಯವರು **ಆರು ಕಥಾಸಂಕಲನಗಳನ್ನು** ಪ್ರಕಟಿಸಿದ್ದಾರೆ. ನಿಲ್ದಾಣಗಳ ನಡುವೆ, ಮಾರ್ಗದರ್ಶಕ, ರತಿದೇವಿ ಮತ್ತು ಇತರ ಕತೆಗಳು, ಬಿಸಿಲು–ಬೆಳದಿಂಗಳು, ಜೀವನ ನಾಟಕ, ಕರುಣಾಲಹರಿ. ಅಲ್ಲದೆ ಗುಂಡಿನೇಟು ಮತ್ತು ಇತರ ಕತೆಗಳು, ಶಿಲಾಮುಖಿ, ಯೌವನಸುಧೆ ಮೊದಲಾದ ಅನುವಾದ ಮತ್ತು ರೂಪಾಂತರದ ಕಥಾಸಂಕಲನಗಳೂ ಪ್ರಕಟವಾಗಿವೆ.

ಎಂ.ವಿ.ಸೀ.ಯವರ ಕತೆಗಳಲ್ಲಿ ನವೋದಯದ ಪ್ರಮುಖ ಆಶಯವಾದ ಸಜ್ಜನಿಕೆಯ ದರ್ಶನ ಬಹು ನಿಚ್ಚಳವಾಗಿ ತೋರುತ್ತದೆ. ಉದಾ. : **'ಕಳ್ಳರಂಗ'** ಕತೆಯಲ್ಲಿ ಹಳ್ಳಿಯಲ್ಲಿ ಏನೂ ಆಧಾರವಿರದ ನಿರ್ಗತಿಕ ರಂಗ ತನ್ನ ಸಂಸಾರದೊಂದಿಗೆ ಬೆಂಗಳೂರಿಗೆ ಬರುತ್ತಾನೆ. ಕೂಲಿನಾಲಿ ಮಾಡಿ ಹೊಟ್ಟೆ ಹೊರೆಯುವ ಉದ್ದೇಶ ಅವನದು. ಆದರೆ ಅದು ದೊರೆಯದೇ ಇದ್ದಾಗ, ಮರ್ಯಾದೆ ಕಡಿಮೆಯಾದರೂ ಚಿಂತೆಯಿಲ್ಲ ಎಂದು ಭಿಕ್ಷೆ ಬೇಡಲು ಪ್ರಾರಂಭಿಸುತ್ತಾನೆ. ಆದರೆ ಸಜ್ಜನಿಕೆಗೆ ಬೆಲೆ ದೊರೆಯದೆ ಇದ್ದಾಗ ಕಳ್ಳತನಕ್ಕೆ ಇಳಿಯುತ್ತಾನೆ. ಕಳ್ಳತನದಲ್ಲೂ ಒಂದು ನಿಯತ್ತು. ಅನ್ಯಾಯವಾಗಿ ಸಂಪಾದಿಸಿದವರ ಮನೆಗಳಲ್ಲಿ ಕದ್ದು ಸಂಸಾರ ನಿಭಾಯಿಸುವುದು. ನೆಂಟರಿಷ್ಟರ ಸಾಲ ತೀರಿಸಿ ಅವರನ್ನು ಋಣಮುಕ್ತರನ್ನಾಗಿಸುವುದು, ಕೊನೆಗೆ ಒಮ್ಮೆ ಗೋಡೆ ಹಾರುವಾಗ ಬಿದ್ದು ಕಾಲು ಮುರಿದುಕೊಂಡು ಭಿಕ್ಷೆಗೆ ಇಳಿಯುತ್ತಾನೆ. **ಅಂಜಪ್ಪನ** ಕತೆಯನ್ನು ಇದು ನೆನಪಿಸುತ್ತದೆ. **'ಸ್ವಪ್ನರತ್ನ'** ಕತೆಯಲ್ಲಿ ಕಥಾನಾಯಕ ವಿಧುರ. ಮನೆಯವರ ಒತ್ತಾಯಕ್ಕೆ ಕಟ್ಟುಬಿದ್ದು ೨ನೆಯ ಮದುವೆ ಮಾಡಿಕೊಳ್ಳುತ್ತಾನೆ. ಆದರೂ ಮನದ ತುಂಬ ಮೊದಲ ಹೆಂಡತಿಗೆ ದ್ರೋಹ ಬಗೆದೆ ಎಂಬ ಅಳುಕು ಅವನ ಮನದಲ್ಲಿ ಕೊರೆಯುತ್ತಿರುತ್ತದೆ. ಈ ಸಂಘರ್ಷದ ಪರಿಣಾಮ ಮೊದಲ ಪತ್ನಿ ಕನಸಿನಲ್ಲಿ ಕಾಣಿಸಿಕೊಂಡು 'ವತ್ಸಲಾ'ಳಲ್ಲಿಯೇ ತನ್ನನ್ನು ಕಾಣುವಂತೆ ತಿಳಿಸುತ್ತಾಳೆ. ಕಥನಾಯಕನ ಸಜ್ಜನಿಕೆಯ ದರ್ಶನ ಓದುಗನಿಗೆ ಇಲ್ಲಿ ಆಗುತ್ತದೆ. ಈ ಕಾಲದಲ್ಲಿ ನಿಂತು ಎಂ.ವಿ.ಸೀ. ಕತೆಗಳನ್ನು (ನವೋದಯದ) ಓದಬಾರದು. ಆ ಕಾಲಘಟ್ಟದಲ್ಲಿ ಸಂದರ್ಭ, ಸನ್ನಿವೇಶಗಳಿಗೆ ತಕ್ಕಂತೆ ಘಟನೆಗಳು ಕತೆಯ ರೂಪ ತಾಳುತ್ತವೆ.

ಕತೆಗಳಲ್ಲಿ ಶೃಂಗಾರ ಭಾವಕ್ಕೇನೂ ಕೊರತೆಯಿಲ್ಲ. ಆದರೆ ಈ ಶೃಂಗಾರ, ಚಪಲತೆಗಳು ಸೌಜನ್ಯದ ಎಲ್ಲೆ ಮೀರಿ ಅಶ್ಲೀಲ ಎನಿಸುವುದಿಲ್ಲ.

ಅದರಲ್ಲೂ ವಿಶೇಷವಾಗಿ ಈ ಭಾವವನ್ನು ಮಾಸ್ತಿ ಕತೆಗಳು ಅದ್ಭುತವಾಗಿ ವ್ಯಕ್ತಪಡಿಸುತ್ತವೆ. ಉದಾಹರಣೆಗೆ : ವೆಂಕಟಿಗನ ಹೆಂಡತಿ. ಅಂದರೆ ಆ ಕಾಲದ ಕತೆಗಳು

ಕೆಡುಕಿರದ ನೆಲೆಗಟ್ಟಿನ ಮೇಲೆ ನಿಂತ ; ಆದರೆ ಪ್ರಧಾನವಾಗಿ ಚಪಲತೆಯನ್ನು ಹೊಂದಿದ ಕತೆಗಳು : ರಾಮಚಂದ್ರರಾಯರು, ಸುಬ್ಬರಾಯರೆ ಶಾರೀರ ಸುಖ ಮುಖ್ಯವೋ ?

ನಿಜವಾದ ಸಂಗೀತ ಜ್ಞಾನ ಮುಖ್ಯವೋ ? ಶಾರೀರ, ಶರೀರ ಸೌಖ್ಯ ಬೇಕಿದ್ದರೆ ಶಿವರಾಮ ಪೇಟೆಯ ನಾಗಮಣಿ. ಮನೆ ಇದ್ದೇ ಇದೆ. (ಆ ಕಾಲದ ಸಮಾನ ವಯಸ್ಕರ ಗೇಲಿಯ ಸಂಭಾಷಣೆ) (ಅಮರ ಕಲೆ)..

ಬಿಟ್ಟ ಮುಖ, ಕಾಂತಿಯುಕ್ತವಾದ ಕಣ್ಣುಗಳು, ತಾಂಬೂಲ ರಸದಿಂದ ಕೆಂಪಾದ ತುಟಿಗಳು ; ತುಸು ತೋರವಾದ, ಕಾಮಿಗೆ ಕರೆಕೊಡುವಂಥ ತುಟಿಗಳು, ತುಟಿಯ ಕೊನೆಯಲ್ಲಿ ತುಂಬುನಗೆ ತುಂಬಿದ ತೋಳು, ತುಂಬು ಮೈ, ತುಂಬಿದ ಎದೆ........(ಮೇದರ ಚೆನ್ನಿ)...

ಈ ಕೆಂಪು ಮುಖದ ಕೆಂಪಮ್ಮ ಸೊಂಪಮ್ಮನೂ ಆಗಿದ್ದಳು. ದುಂಡಾದ ಮುಖದ ಜೊತೆ ದುಂಡಾದ ಮೈಕೈ (ಕಡಲೆಪುರಿ ಕೆಂಪಮ್ಮ); 'ಕಡಲೆಪುರಿಯ ಕೆಂಪಮ್ಮ' ಎನ್ನುವುದು ಬಹು ಅನ್ವರ್ಥವಾಗಿದೆ. ಅವಳು ಕೆಂಪಗೆ ದುಂಡಗಿದ್ದಳು. ಕಡಲೆಪುರಿಯಂತೆ ನೋಟಕರಿಗೆ ಗರಿಗರಿಯಾದ, ಹೆದ್ದಾನೆಯ ಅನುಭವ ಒದಗಿಸುತ್ತಿದ್ದಳು. ಕಡಲೆಪುರಿಯಂತೆ ಸಾಮಾನ್ಯರಿಗೂ ಕಾಣಬಲ್ಲವಳಾಗಿದ್ದಳು. ಬಡವೆ ಈ ಎಲ್ಲ ಅರ್ಥಗಳೂ ಇರುವುದನ್ನು ಕತೆ ಓದಿದಾಗ ಕಾಣಬಹುದಾಗಿದೆ. ಮಾಸ್ತಿಯವರ 'ಮೊಸರಿನ ಮಂಗಮ್ಮ' ಸಂಬಂಧಗಳ ಬಳ್ಳಿಯಿಂದ ಬಂಧಿತವಾದಳು. ಆದರೆ ಎಂ.ವಿ.ಸೀಯವರ 'ಕಡಲೆಪುರಿ' ಕೆಂಪಮ್ಮ ಅನಾಥೆ, ಸ್ವತಂತ್ರ ಸುಂದರ ಹೆಣ್ಣು. ಆದರೆ ಮಾಸ್ತಿಯವರ ಕತೆಗಳಲ್ಲಿ ಕಾಣಬರುವ ಅನಿರೀಕ್ಷಿತ ತಿರುವು ಎಂ.ವಿ.ಸೀ. ಅವರ ಕತೆಗಳಲ್ಲಿ ಕಾಣಬರುವುದಿಲ್ಲ. ಕೆಂಪಮ್ಮ ಸತ್ತುಹೋದಳು ಎಂಬ ಸುದ್ದಿ ತಿಳಿದಾಗ ಲೇಖಕರೂ–ಅವರ ಮಿತ್ರರೂ ಕಣ್ಣೀರು ಹಾಕುತ್ತಾರೆ. ಕತೆ ಇಲ್ಲಿಗೆ ಮುಗಿಯುತ್ತದೆ. ಎಂ.ವಿ.ಸೀ.ಯವರು ಕತೆಗೆ ಇದ್ದಕ್ಕಿದ್ದಂತೆ ಅನಿರೀಕ್ಷಿತ ತಿರುವು ನೀಡಲು ಪ್ರಯತ್ನಿಸಿದ್ದಾರೆ. ಆದರೆ ಪರಿಣಾಮ ತೀವ್ರವಾಗಿರುವುದಿಲ್ಲ. ಆದ್ದರಿಂದಲೇ 'ಕಡಲೆಪುರಿಯ ಕೆಂಪಮ್ಮ' ಕತೆ ಮುಗಿದಮೇಲೆ ಅವರೇ ತಿದ್ದಿರುವ ಪ್ರತಿಯಲ್ಲಿ– 'ಆದರೆ, ಕೆಂಪಮ್ಮ ನಿಜವಾಗಿಯೂ ಸತ್ತಿಲ್ಲ. ನನ್ನ ಬಗೆಯ ಬೀದಿಯಲ್ಲಿ ನಡೆದಾಡುತ್ತಲೇ ಇದ್ದಾಳೆ. ಅವಳ ಕಡಲೆಪುರಿಗಿಂತ ಅವಳ ನೆನಪು ಇನ್ನೂ ರುಚಿ ಎಂದು ಹೇಳುತ್ತಾರೆ. ಈ ಕತೆ ಅವರ ಬಾಲ್ಯದ ನೆನಪಿನ ಕೆನೆಯಿಂದ ಕೂಡಿದೆ.

ಅದೇ ರೀತಿ ಅನಿವಾರ್ಯ ತಿರುವು ಪಡೆದು ಕೊನೆಗೊಳ್ಳುವ ಕತೆ 'ಬಾಚಿ ತಬ್ಬಿಕೊಂಡಳು ತನ್ನ ಮಗುವನ್ನು'. ಇದು ಒಂದು ಬಗೆಯ ಹೊಸ ಪ್ರಯೋಗ. ಒಂದು ರೀತಿಯಲ್ಲಿ ಏಕವ್ಯಕ್ತಿ ಪ್ರಯೋಗದಂತಿದೆ. ಕಡಲೆಕಾಯಿ ಮಾರುವ ಮುದುಕಿಯ ಸ್ವಭಾವ, ದಯೆ, ಮಕ್ಕಳ ಮೇಲೆ ಅವಳಿಗಿರುವ ಪ್ರೀತಿಗಳನ್ನು ಅಭಿವ್ಯಕ್ತಗೊಳಿಸುತ್ತಾ ಕತೆ ಸಾಗುತ್ತದೆ. ಮಕ್ಕಳಿಲ್ಲದ ಆಕೆ ಕಡಲೆಕಾಯಿ ಕೊಳ್ಳಲು ಬರುವ ಶಾಲಾ ಮಕ್ಕಳನ್ನೇ ತನ್ನ

ಮಕ್ಕಳೆಂದು ಭಾವಿಸಿರುತ್ತಾಳೆ. ಆಗಿನ ಬೆಂಗಳೂರಿನ ರಸ್ತೆಗಳಲ್ಲಿ ಚಲಿಸುತ್ತಿದ್ದ ಲಾರಿಗಳನ್ನು ಕಂಡರೆ ಆಕೆಗೆ ಭಯ. ಯಾವ ಮಕ್ಕಳು ಈ ಹೆಮ್ಮಾರಿಗೆ ಸಿಕ್ಕಿಕೊಳ್ಳುತ್ತಾರೋ ಎಂದು. ಕೊನೆಗೆ ಆಕೆಯ ಊಹೆ ನಿಜವೇ ಆಗುತ್ತದೆ. ಮಗುವೊಂದು ಇನ್ನೇನು ಲಾರಿಗೆ ಸಿಕ್ಕಬೇಕು ಎನ್ನುವಾಗ, ಓಡಾಡಲಾಗದಿದ್ದ ಆಕೆ ತನ್ನಲ್ಲಿದ್ದ ಚೈತನ್ಯವನ್ನೆಲ್ಲ ಒಗ್ಗೂಡಿಸಿ ಮಗುವನ್ನು ಪಕ್ಕಕ್ಕೆ ಎಳೆದು ಹಾಕಿ ತನ್ನ ಪ್ರಾಣಾರ್ಪಣೆ ಮಾಡುತ್ತಾಳೆ.

ಇಂಥದೇ ಕತೆ **'ಗಂಡಿನ ಹೃದಯ'**. 'ಗಂಡು ಹೃದಯ ಕಲ್ಲು, ಹೆಣ್ಣಿನದು ಹೇಳಿ ಕೇಳಿ ಹೆಂಗರುಳು' ಎಂಬ ಮಾತಿದೆ. ಕಥಾನಾಯಕ **ಗೂಗ್ಲಿಲ್ಮೊ** ತನ್ನ ಸೋದರತ್ತೆಯ ಮಗಳಾದ **ಅನಾ**ಳನ್ನು ಪ್ರೀತಿಸುತ್ತಿರುತ್ತಾನೆ. ತಾಯಿಯ ಒತ್ತಾಯಕ್ಕೆ ಮಣಿದು ಬೇರೊಂದು ಹೆಣ್ಣನ್ನು ವಿವಾಹವಾಗುತ್ತಾನೆ. ಆದರೆ ಸುಂದರ ತರುಣಿ ಅನಾ ಮಾತ್ರ ವಿವಾಹವಾಗುವುದಿಲ್ಲ. ಈಗ ಗೂಗ್ಲಿಲ್ಮೊ ಹೆಂಡತಿ ಪ್ರಸವ ವೇದನೆಯಲ್ಲಿದ್ದಾಳೆ. ಮನೆಗೆ ಅವನ ಮಿತ್ರನೆ ಆದ ವೈದ್ಯ ಚಿಕಿತ್ಸೆ ಮಾಡಲು ಬರುತ್ತಾನೆ. ರೋಗಿಯನ್ನು ನೋಡಿ ಅವಳ ಸ್ಥಿತಿ ಅರಿಯುತ್ತಾನೆ. ಯಾವಾಗಲೂ ಗೂಗ್ಲಿಲ್ಮೊ ಅನಾಳ ಚಿಂತೆಯಲ್ಲಿರುವುದು ಗೆಳೆಯನಿಗೆ ಗೊತ್ತು.

ಆದರೆ ವೈದ್ಯಮಿತ್ರ ಗೆಳೆಯನ ಬಳಿಬಂದು ಸನ್ನಿವೇಶದ ತೀವ್ರತೆಯನ್ನು ಹೇಳುತ್ತಾನೆ. ತಾಯಿ–ಮಗು ಇಬ್ಬರಲ್ಲಿ ಯಾರನ್ನು ಉಳಿಸಲಿ ? ಒಬ್ಬರನ್ನು ಮಾತ್ರ ಉಳಿಸಬಹುದು. ಗೂಗ್ಲಲ್ಮೊಗೆ ಏನು ಹೇಳಲೂ ತಿಳಿಯುವುದಿಲ್ಲ. ವೈದ್ಯನೇ ತನ್ನ ಅಭಿಪ್ರಾಯ ಮುಂದುವರೆಸಿ, ಹೇಗಿದ್ದರೂ ಅನಾಳನ್ನು ನೀನು ಪ್ರೀತಿಸುತ್ತೀಯೆ. ಅವಳಿಗೂ ನಿನ್ನ ಮೇಲೆ ಮನಸ್ಸಿದೆ. ಮಗುವನ್ನು ಉಳಿಸಿಕೊಳ್ಳುವುದೇ ಉತ್ತಮ ಎನ್ನುತ್ತಾನೆ. ಆಗ ತನ್ನ ಕೊನೆಯ ನಿರ್ಧಾರವೆನ್ನುವಂತೆ ಗೂಗ್ಲಲ್ಮೊ 'ದಯವಿಟ್ಟು ತಾಯಿಯನ್ನು ಉಳಿಸಿಕೊಡಿ' ಎಂದು ಹೇಳುವುದರೊಂದಿಗೆ ಕತೆ ಮುಕ್ತಾಯವಾಗುತ್ತದೆ.

ಎಂ.ವಿ.ಸೀ.ಯವರು ಕತೆಗಳ ಮೂಲಕ ಅದಾಗ ತಾನೆ ಉರಿಯಲು ಆರಂಭಿಸಿದ್ದ ಸಣ್ಣಕತೆಯೆಂಬ ಹಣತೆಗೆ ತೈಲ ಎರೆಯುವ ಕೈಂಕರ್ಯ ಮಾಡಿದ್ದಾರೆ. ಹೀಗೆ ಹಲವು ಕತೆಗಾರರು ನೀಡಿದ ಕೊಡುಗೆಯಿಂದ ಕನ್ನಡ ಕಥಾ ಸಾಹಿತ್ಯ ಮುಂದೆ ಜಾಜ್ವಲ್ಯಮಾನವಾಗಿ ಬೆಳಗಲು ಅನುವು ದೊರೆಯಿತು ಎನ್ನಬಹುದು. ನವೋದಯ ಕಾಲದ ಸಣ್ಣ ಕತೆಗಳ ಆಶಯದಂತೆ ಎಂ.ವಿ.ಸೀ. ಅವರ ಕತೆಗಳಲ್ಲೂ. ದಯಾಪರತೆ ಬಡತನ ಕಡಿಮೆ ಮಾಡುವ, ವಿಧವೆಯರ ಕಣ್ಣೊರೆಸುವ, ಅಂಗವಿಕಲತೆಗೆ ಮರುಗುವ ಕರುಣಾ ದೃಷ್ಟಿ ಪ್ರಧಾನವಾಗಿದೆ.

'ದೃಷ್ಟಿ ಲಾಭ' ಕತೆಯಲ್ಲಿ ಹುಟ್ಟು ಕುರುಡನಾಗಿದ್ದ, ಸಂಗೀತಗಾರ ತನ್ನ ಹೆಂಡತಿಯ ಪ್ರಯತ್ನದಿಂದ ದೃಷ್ಟಿಲಾಭ ಪಡೆಯುತ್ತಾನೆ. ಆದರೆ ಕಣ್ಣಿರುವವರ ಚಂಚಲತೆ, ಆಸ್ತಿಕ ಮನಸ್ಸು, ಚಪಲತೆ ಇತ್ಯಾದಿಗಳನ್ನು ಹೊಂದಿ ಅಹಂಕಾರಿಯಾಗಿ, ಮಾಡಬಾರದ

ಕೃತ್ಯಗಳನ್ನು ಎಸಗುತ್ತಾನೆ. ಏನೋ ಕಾಯಿಲೆ ತಂದುಕೊಂಡು, ಪುನಃ ದೃಷ್ಟಿಹೀನನಾಗುತ್ತಾನೆ. ಆಗ ಶಿವರಾಮಯ್ಯನಿಗೆ ಪಶ್ಚಾತ್ತಾಪ ಉಂಟಾಗಿ ತನ್ನ ಹೆಂಡತಿಯ ಬೆಲೆ ತಿಳಿಯುತ್ತದೆ.

ನೀಲಿಯ ಕವರು ಕತೆಯಲ್ಲಿ, ಒಂದು ಅಚಾತುರ್ಯ ಉಂಟುಮಾಡಬಹುದಾದ ಸನ್ನಿವೇಶದ ಚಿತ್ರಣವಿದೆ.ಸ್ನೇಹಿತನೊಬ್ಬ ತನ್ನ ಹೆಂಡತಿಗೆ ಬರೆದ ಕಾಗದವನ್ನು, ತನ್ನ ಸ್ನೇಹಿತನಿಗೆ ವಿಳಾಸ ಬರೆದ ಕವರಿನಲ್ಲಿಟ್ಟು ಕಳುಹಿಸಿಬಿಡುತ್ತಾನೆ. ಆ ಕಾಗದವನ್ನು ಓದಿದ ಗಂಡ ಬೆಂಕಿಯಾಗಿ ಹೆಂಡತಿಯನ್ನೇ ಅನುಮಾನಿಸುತ್ತಾನೆ. ದುರದೃಷ್ಟದ ಸಂಗತಿಯೆಂದರೆ ಅವನ ಹೆಂಡತಿ ಪತ್ರವನ್ನು ಮಾತ್ರ ತೆಗೆದಿಟ್ಟು, ಕವರನ್ನು ಎಲ್ಲೋ ಇಟ್ಟುಬಿಟ್ಟಿರುತ್ತಾಳೆ. ಕೊನೆಗೆ ಸ್ನೇಹಿತನ ಕಾಗದದಿಂದ, ಅವರ ಹೆಂಡತಿಯ ಹೆಸರು ಒಂದೇ ಎಂದೂ, ಕಾಗದ ಅದಲು ಬದಲಾಗಿವೆ ಎಂಬ ಸಂಗತಿ ತಿಳಿಯುತ್ತದೆ. ಕತೆಯ ರಚನೆಯ ಚಮತ್ಕಾರವೇ ಇಲ್ಲಿ ಪ್ರಧಾನವಾದುದು.

ಅದೇ ಬಗೆಯ ಚಮತ್ಕಾರವನ್ನು **'ಮದುವೆಯ ಉಡುಗೊರೆ'** ಕತೆಯಲ್ಲೂ ಕಾಣಬಹುದಾಗಿದೆ. ವನಜ–ಪ್ರಕಾಶರ ವಿವಾಹದ ಆರತಕ್ಷತೆಯಲ್ಲಿ, ವನಜಳ ಹಳೆಯ ಪ್ರೇಮಿ ಪ್ರೇಮಕುಮಾರ ಮಾಡಿದ ಕುಚೇಷ್ಟೆ ; ಹೆಣ್ಣಿನ ತಂದೆ, ವರ ಹಾಗೂ ಇತರರನ್ನು ಧೃತಿಗೆಡಿಸುತ್ತದೆ. ಕೊನೆಗೆ ಪ್ರೇಮಕುಮಾರನೇ ಬಂದು ಪರಿಸ್ಥಿತಿಯನ್ನು ತಿಳಿಸುತ್ತಾನೆ. ಇಲ್ಲೂ ಕತೆಗಾರರ ಚಮತ್ಕಾರ ಇದ್ದರೂ ಪರಿಣಾಮ ಹೆಚ್ಚು ಪ್ರಭಾವಯುತ ವಾಗಿರುವುದಿಲ್ಲ. ಕೆಲವೊಮ್ಮೆ ಹಾಸ್ಯಾಸ್ಪದವೆನ್ನಿಸಿಬಿಡುತ್ತದೆ.

ಅಂಥದೇ ಇನ್ನೊಂದು ಕತೆ **ಕೊಳ್ಳಿದೆವ್ವ**. ಇದು ವಿಶೇಷವಾಗಿ ಹಾದರಕ್ಕೆ ಸಂಬಂಧಿಸಿದ ಕತೆ. ಇಲ್ಲಿಯ ಉದ್ದೇಶ ಓದುಗನಿಗೆ ಹರ್ಷನೀಡುವುದು.

ಆನೇಕಲ್ಲಿನ ನಿವಾಸಿಯಾದ ಸಣ್ಣಪ್ಪ ತಕ್ಕಮಟ್ಟಿಗೆ ಅನುಕೂಲಸ್ಥ. ಆದರೆ ಮಕ್ಕಳಿಲ್ಲವೆಂಬ ನೆಪ, ಬೆಂಗಳೂರಿನ ಸುಂದರಮ್ಮನ ಸಂಬಂಧಕ್ಕೆ ಕಾರಣವಾಗುತ್ತದೆ. ಗಂಡನ ನಿತ್ಯ ಬೆಂಗಳೂರಿನ ಪಯಣದ ಕಾರಣ ತಿಳಿದ ಹೆಂಡತಿ ತವರಿಗೆ ಹೋದವಳು ಹಿಂದಿರುಗಿ ಬರುವುದೇ ಇಲ್ಲ. ಕೊನೆಗೆ ಸಣ್ಣಪ್ಪ ಬೆಂಗಳೂರಿಗೇ ಬಂದು ನೆಲೆನಿಲ್ಲುತ್ತಾನೆ. ಸುಂದರಮ್ಮನಿಗೂ ಮಕ್ಕಳಿಲ್ಲ. ಸಣ್ಣಪ್ಪನ ಚಪಲ, ದಾಹಕ್ಕೆ ಕೊನೆಯಿಲ್ಲ. ಕಂಡಲೆಲ್ಲ ಕಣ್ಣುಹಾಕುತ್ತಾನೆ. ಬಾಡಿಗೆದಾರನ ಹೆಂಡತಿ ಜಾನಕಮ್ಮನ ಮನೆಗೆ ಹೋಗಿ ಅವಳನ್ನು ಕೆಣಕಿದ ಪರಿಣಾಮ ಒಲೆಯ ಕೊಳ್ಳಿಯಿಂದ ತಿವಿಸಿಕೊಳ್ಳಲು ಕಾರಣವಾಗುತ್ತದೆ. ಕತೆ ಆತುರದಲ್ಲಿ ಮುಕ್ತಾಯಗೊಂಡಂತಿದೆ. ಗಂಡನಿಗೆ ಪಶ್ಚಾತ್ತಾಪವಾಗಲೀ, ಹೆಂಡತಿಗೆ ಗಂಡನ ಬಗ್ಗೆ ತಿರಸ್ಕಾರ–ಬೇಸರದ ಭಾವವಾಗಲೀ ಕಾಣುವುದಿಲ್ಲ.

ಇಲ್ಲಿ ಕತೆಗಳಲ್ಲಿ ಸಾಮಾನ್ಯವಾಗಿ ಊಟ–ತಿಂಡಿಯ ವಿಚಾರ ಬಂದೇ ಬರುತ್ತದೆ. ನವೋದಯ ಕಾಲದ ಮೊದಲ ಮತ್ತು ನಂತರದ ಎಲ್ಲ ಲೇಖಕರ ಕೃತಿಗಳಂತೆ ಸಹಜವಾದದ್ದು. ಡಿ.ವಿ.ಜಿ., ವಿ.ಸೀ., ಮಾಸ್ತಿ, ಎ.ಆರ್.ಕೃ. ಮೊದಲಾದವರು ಹೊಟ್ಟೆಗೆ

ಮೋಸ ಮಾಡಿದವರಲ್ಲ. ಎಂ.ವಿ.ಸೀ. ಕತೆಗಳಲ್ಲಿಯೂ ಬಗೆಬಗೆಯ ತಿಂಡಿಗಳ ಹೆಸರು ಕೇಳಿಬರುತ್ತದೆ. ಕೊನೆಪಕ್ಷ ಏನಿಲ್ಲವೆಂದರೂ ಉಪ್ಪಿಟ್ಟು, ದೋಸೆ, ಕಾಫಿ ಇದ್ದೇ ಇರುತ್ತದೆ.

ನವೋದಯ ಕತೆಗಾರರು ದೇಶಭಕ್ತಿ–ಬ್ರಾತೃತ್ವ, ಅನ್ಯಧರ್ಮ ಸಹಿಷ್ಣುತೆಗೆ ತಮ್ಮ ಕತೆಗಳಲ್ಲಿ ಪ್ರಮುಖ ಸ್ಥಾನ ನೀಡಿದರು. ಅದರಲ್ಲೂ ಹಿಂದೂ–ಮುಸ್ಲಿಂ ಬಾಂಧವ್ಯಕ್ಕೆ ಮಹತ್ವ ನೀಡಿದ್ದಾರೆ. ಎಂ.ವಿ.ಸೀ.ಯವರು ಇಂಥ ಕತೆಗಳನ್ನು ಬರೆದಿದ್ದಾರೆ. **ಮುರಿದ ಅಗಳಿ, ನೂರಾನಲವತ್ತೆರಡು, ನಿಲ್ದಾಣಗಳ** ನಡವೆ ಮೊದಲಾದ ಕೃತಿಗಳು ಇದಕ್ಕೆ ಉದಾಹರಣೆ : **ಮುರಿದ ಅಗಳಿ** : ಭಾರತ ಇಬ್ಭಾಗವಾದ ಕಥಾ ವಸ್ತುವನ್ನು ಹೊಂದಿದೆ. ಮನೆಗೆ ಬಂದ ಅನಂತಯ್ಯ ಗೆಳೆಯನ ಮನೆಯ ಕೊಠಡಿಯಲ್ಲಿ ಕುಳಿತ ಬಾಗಿಲ ಅಗಳಿಯ ಕಡೆ ಕಣ್ಣು ಹಾಯಿಸುತ್ತಾನೆ. ಕತೆಯ ಆರಂಭಕ್ಕೆ ಇದು ಕಾರಣವಾಗುತ್ತದೆ. ಪಾಕೀಸ್ತಾನದ ಉದಯದಿಂದ ಕೋಮು ದಳ್ಳುರಿ ಆರಂಭವಾಗುತ್ತದೆ. (೧೯೪೭ ಜುಲೈ) ಬೆಂಗಳೂರಿನಲ್ಲಿಯೂ ಅದರ ಬಿಸಿ ಎದ್ದಿತು. ಅನಂತಯ್ಯ ಸರ್ಕಾರಿ ಕಛೇರಿಯಿಂದ ಮನೆಗೆ ಬರಲು ಒಬ್ಬ ವೃದ್ಧ ಮುಸಲ್ಮಾನನ ಜಟಕಾಗಾಡಿ ಆಶ್ರಯಿಸಿರುತ್ತಾರೆ. ನಗರದಲ್ಲಿ ಕರ್ಫ್ಯೂ ಜಾರಿಯಲ್ಲಿದೆ. ಗಾಡಿಯಾತ ಅನಂತಯ್ಯನಲ್ಲಿ ಮುಕ್ತವಾಗಿ ಮಾತನಾಡುತ್ತಿದ್ದ. ಅರ್ಥವಿಲ್ಲದ ದ್ವೇಷವನ್ನು ಮರೆತು ಹಿಂದೂ–ಮುಸ್ಲಿಮರು ಮೈತ್ರಿಯಿಂದ ಇರಬೇಕಾದ ಅಗತ್ಯವನ್ನು ಆತ ಹೇಳುತ್ತಿದ್ದನು. ಆದರೆ ಎಲ್ಲೆಡೆ ಪರಿಸ್ಥಿತಿ ಭಿನ್ನವಾಗಿತ್ತು. ಮುಸಲ್ಮಾನರ ಕೇರಿಯಲ್ಲಿ ಹಿಂದೂಗಳ ಮೇಲೆ ದಾಳಿ ಹಿಂದೂಗಳ ಬೀದಿಯಲ್ಲಿ ಮುಸ್ಲಿಮರ ಮೇಲೆ ಗಲಭೆ ಹೀಗೆ ಗಲಾಟೆ ನಡಿಯುತ್ತಲೆ ಇತ್ತು. ಗಾಡಿಯ ಸಾಹೇಬ–ದಾವೂದ್ ಖಾನ್ ಇದಾವುದಕ್ಕು ಸೊಪ್ಪು ಹಾಕದೆ ತನ್ನ ಕಾಯಕವನ್ನು ಮಾಡಿಕೊಂಡಿದ್ದ. ಸ್ವಭಾವದಲ್ಲೂ ದಾವೂದ್ ಖಾನ್ ಸರಳ ವ್ಯಕ್ತಿ. ಹೆಚ್ಚು ಹಣಕ್ಕಾಗಿ ಆಸೆ ಪಟ್ಟವನಲ್ಲಾ. ಅನಂತಯ್ಯನವರ ಬಳಿ ಕಡಿಮೆ ಬಾಡಿಗೆ ಪಡೆದು ಸ್ನೇಹ, ಪ್ರೀತಿ ಗಳಿಸಿದ್ದ. ಹೀಗಿರುವಾಗ ಒಂದು ರಾತ್ರಿ ದಾವೂದ್ ಸಾಹೇಬರ ಗಾಡಿ ಅನಂತಯ್ಯನ ಮನೆ ಮುಂದೆ ಬಂದು ನಿಂತಿತು. ಅನಂತಯ್ಯ ಹೊರಗೆ ಹೋಗಿ ನೋಡುತ್ತಾರೆ. ದಾವೂದ್ ಜೊತೆ ಒಬ್ಬಳು ಯುವತಿ–ಸುಂದರಿ. ಅನಂತಯ್ಯನಿಗೆ ಆಶ್ಚರ್ಯ. ಯಾವುದಾದರೂ ವಿಳಾಸ ಸಿಕ್ಕಲಿಲ್ಲವೇ ? ಎಂದರು. ನಿಮ್ಮ ಮನೆಗೇ ಸ್ವಾಮಿ ಬಂದಿದ್ದು ಅಂದರು. ಸಾಹೇಬರು ಸರಿ ಒಳಗೆ ಬನ್ನಿ ಎಂದು ಅವರನ್ನು ಅನಂತಯ್ಯ ಕರೆದುಕೊಂಡು ಹೋದರು. "ಇವಳು ನನ್ನ ಮಗಳು. ನಿಮ್ಮ ತಂಗಿ. ಈ ಒಂದು ರಾತ್ರಿ ಇವಳ್ಗೆ ನಿಮ್ಮ ಮನೇಲಿಟ್ಟುಕೊಂಡು ಕಾಪಾಡಬೇಕು. ಬೆಳಗ್ಗೆ ಬಂದು ಕರ್ಕೊಂಡು ಹೋಗ್ತೀನಿ' ಎಂದು ನೆಲಮುಟ್ಟಿ ಸಲಾಂ ಮಾಡುತ್ತಾನೆ.

'ಮನೆಯವರನ್ನು ಎಬ್ಬಿಸಿ ಕರೆದುಕೊಂಡು ಬರ್ತೀನಿ' ಅಂತ ಅನಂತಯ್ಯ. 'ಯಾಕೆ ಎಬ್ಬಿಸ್ತೀರಿ, ಇವಳ್ಗೆ ಮಲಗೋಕೆ ಒಂದು ಜಾಗತೋರಿಸಿ ಸಾಕು' ಅಂತ ಸಾಹೇಬರು. ಕೊನೆಗೆ ಅನಂತಯ್ಯ ಹೆಂಡತಿಯನ್ನು ಎಬ್ಬಿಸಿ ಕರೆದುಕೊಂಡು ಬಂದರು. ತಮ್ಮ

ಕತೆಯನ್ನೆಲ್ಲಾ ಸಾಹೇಬರು ಮನೆ ಒಡತಿಗೆ ತಿಳಿಸಿ, ಅವರನ್ನು ಒಪ್ಪಿಸಿ, ಆ ಹುಡುಗಿಯನ್ನು ಅಲ್ಲೇ ಬಿಟ್ಟು ಹಿಂದಿರುಗುತ್ತಾರೆ. ಅನಂತಯ್ಯನ ಹೆಂಡತಿ (ರಜೆಯ ಮೇಲಿರುತ್ತಾಳೆ) ಮಲಗಲು ಹೋಗಿಬಿಡುತ್ತಾಳೆ.

ಅನಂತಯ್ಯನಿಗೆ ನಿದ್ದೆಹತ್ತುವುದಿಲ್ಲ. ಪಾಪ ಊಟ ಮಾಡಿರುವಳೋ ಇಲ್ಲವೋ, ಭಯವೋ ಏನೋ ಎಂಬ ಚಿಂತೆ. ಅವಳು ಮಲಗಿದ್ದ ಕೋಣೆಯ ತುಂಬ ಬೆಳದಿಂಗಳು. ಬೆಳದಿಂಗಳನ್ನು ಕಂಡು ಹಾಲಿನ ನೆನಪಾಗಿ ಒಳಗಿನಿಂದ ಒಂದು ಲೋಟ ಹಾಲು ತಂದು ಬೇಗಂಳಿಗೆ ಕೊಡುತ್ತಾರೆ.

ಅವಳು ಅನಂತಯ್ಯನ ಔದಾರ್ಯಕ್ಕೆ ಮೆಚ್ಚಿ 'ಇಂದು ನಾನು ನಿಮ್ಮ ವಸ್ತು' ಎನ್ನುತ್ತಾಳೆ....ನನ್ನ ಗಂಡ ತೀರಿಹೋಗಿದ್ದಾರೆ.....ಯೋಚನೆ ಮಾಡಿ.....ನಿಮ್ಮ ಉಪಕಾರಕ್ಕೆ ಪ್ರತಿಯಾಗಿ.....ಅನಂತಯ್ಯ ನೆಟ್ಟನೆ ತಮ್ಮ ಕೋಣೆಗೆ ಹೋಗಿ ಮಲಗುತ್ತಾರೆ. ಅವರ ಮನಸ್ಸಿನಲ್ಲಿ ತುಮುಲ. ಸದ್ಗುಣ-ಸ್ವಾರ್ಥದ ಸಂಘರ್ಷ, ಮುಸಲ್ಮಾನರ ಮೇಲೆ ಪ್ರತೀಕಾರ ?-ಬಾನೂ ಮಲಗಿದ್ದಲ್ಲಿಗೆ ಹೋಗಿ, ದೀಪಹಾಕುತ್ತಾರೆ. ಆಕೆ ನಿದ್ರಿಸುತ್ತಿರುತ್ತಾಳೆ. ಮುಗ್ಧ ಭಾವ, ಶೈಶವ ಸರಳತೆ. ಯಾವ ಆತಂಕವೂ ಇಲ್ಲದೆ, ಚಿತ್ರಪಟವನ್ನು ನೋಡಿ ಆನಂದಿಸುವಂತೆ ಚಲುವನ್ನು ಅನಂತಯ್ಯ ಸವಿದರು.....ಹೊರಗೆ ಬಂದು ಕೋಣೆಗೆ ಬೀಗಹಾಕುತ್ತಾರೆ. ಈ ಕತೆಯಲ್ಲಿ ಅನಂತಯ್ಯನ ಸೌಜನ್ಯ ಸನ್ನಿವೇಶಕ್ಕೆ ಸಿಕ್ಕು ತನ್ನ ತನವನ್ನು ಕಳೆದುಕೊಳ್ಳುವುದಿಲ್ಲ. ಇದು ಉತ್ತಮ ಕತೆಗಳಲ್ಲಿ ಒಂದು. ಜಾತಿಯಾವುದಾದರೇನು ? ಅಂತಃಕರಣ ಶುದ್ಧವಿರಬೇಕು ಎಂಬುದನ್ನು ಈ ಕತೆ ಸಾರುತ್ತದೆ.

ಅಂತಹದೇ ಕಥಾವಸ್ತುವನ್ನು ಹೊಂದಿದ ಕತೆ **ನಿಲ್ದಾಣಗಳ ನಡುವೆ.** ಚನ್ನಪಟ್ಟಣದಿಂದ ಶ್ರೀರಂಗಪಟ್ಟಣಕ್ಕೆ ರೈಲಿನಲ್ಲಿ ಹೋಗುವಾಗ ನಡೆಯುವ ಕತೆ. ಒಂದು ಕಂಪಾರ್ಟ್‌ಮೆಂಟ್‌ನ ಡಬ್ಬಿಯಲ್ಲಿ ಮುಸ್ಲಿಂ ಕುಟುಂಬ. ರೈಲಿನಲ್ಲಿ ಪರಿಚಯ. ಒಬ್ಬಳು ಬುರ್ಖಾಧಾರಿ ಹೆಂಗಸು. ಅವಳ ಮಗ ಹಾಗೂ ವಯಸ್ಕ. ಅವನ ಹೆಸರು ಯಾಕೂಬ್. ಆತ ಹುಡುಗನ ಕತೆಯನ್ನು ಕತೆಗಾರರಿಗೆ ಹೇಳುತ್ತಾನೆ. ಅಲ್ಲಿ ಕುಳಿತಿದ್ದ ಹೆಂಗಸಿನ ಗಂಡ ಅವಳನ್ನು ಬಿಟ್ಟು ದೇಶಾಂತರ ಓಡಿಹೋದ. ಪಾಪ ಆಗಿನ್ನೂ ಚಿಕ್ಕ ಮಗು ಈ ಹುಡುಗ. ಮಗನ್ನ ಶ್ರೀರಂಗಪಟ್ಟಣದಲ್ಲಿ ಓದಿಸಿ, ತೋಟ ತುಡಿಕೆ ಮಾರಿ, ಈಗ ಹುಡುಗ ಇಂಟರ್ ಮೀಡಿಯಟ್ ಮಾಡಿದಾನೆ ಎಂದು ಹೇಳುತ್ತಾನೆ. ಅಲ್ಲದೆ ಇವರ ತೋಟ ಕೊಂಡುಕೊಂಡ ಲಾಯರ್ ಒಬ್ಬರ ಬುದ್ಧಿವಾದ ಕೇಳೋಕೆ ಹೋಗ್ತಿದಾರೆ. ನಾನು ಸ್ವಾಮಿ ರಂಗನಾಥ ದರ್ಶನಕ್ಕೆ ಪಾಕಿಸ್ತಾನದಿಂದ ಬಂದಿದೀನಿ ಎಂದು ತನ್ನ ಕತೆ ಹೇಳತೊಡಗುತ್ತಾನೆ.

ಅವನ ಹೆಸರು ಯಾಕೂಬ್. ಅವನಿಗೆ ಹದಿನೆಂಟು ವರ್ಷಕ್ಕೇ ಮದುವೆಯಾಯಿತು. ಅದಕ್ಕೆ ಮೊದಲೇ ಒಬ್ಬಳು ಒಕ್ಕಲ ಹುಡುಗಿ ಯಾಕೂಬನಿಗೆ ಮೋಡಿ ಹಾಕಿರುತ್ತಾಳೆ. ತಂದೆಯ ಬಲವಂತಕ್ಕೆ ಜುಬೇದಳನ್ನು ಮದುವೆಯಾಗಿರುತ್ತಾನೆ. ಮನಸ್ಸೆಲ್ಲ ಒಕ್ಕಲ ಹುಡುಗಿಯ ಬಳಿಯೇ ಇದೆ. ಕಷ್ಟಪಟ್ಟು

ದುಡಿಯುತ್ತಿದ್ದ ಯಾಕೂಬ್ ಈ ವೇಳೆಗಾಗಲೇ ಸಣ್ಣದೊಂದು ಗಂಟುಮಾಡಿರುತ್ತಾನೆ. ಅದರಿಂದ ಎರಡೂ ಸಂಸಾರ ತೂಗಿಸುತ್ತಿರುತ್ತಾನೆ. ಯಾಕೂಬನ ತಾಯಿಯ ಮರಣಾನಂತರ ಜುಬೇದ ಗರ್ಭಿಣಿಯಾಗಿ ಗಂಡುಮಗು ಹಡೆಯುತ್ತಾಳೆ. ಯಾಕೂಬ್ ಸಾವಿರ ರೂಪಾಯಿಯ ಒಂದು ಗಂಟನ್ನು ಹೆಂಡತಿಯ ಬಳಿ ಜೀವನಾಂಶವೆಂದು ಇಟ್ಟು ಒಂದಿರುಳು ನಲ್ಲೆ ಒಕ್ಕಲಗಿತ್ತಿಯೊಡನೆ ಹೈದರಾಬಾದಿಗೆ ಹೊರಟುಹೋಗುತ್ತಾನೆ. ಈ ವೇಳೆಗೆ ಗರ್ಭಿಣಿಯಾಗಿದ್ದ ಆಕೆ ಹಡೆಯುತ್ತಾಳೆ. ಯಾಕೂಬ್ ಕೈಯ ಹಣ ಖಾಲಿಯಾಗುತ್ತದೆ. ನಗರದ ಕೂಲಿ ಜೀವನ ಯಾಕೂಬನಿಗೆ ಒಗ್ಗುವುದಿಲ್ಲ. ಹೀಗಾಗಿ ನಲ್ಲೆ-ಮಗು ಭಾರವಾಗುತ್ತಾರೆ. ಅವರ ಹೊಟ್ಟೆ ಬಟ್ಟೆಗೂ ತತ್ವಾರ ಬಂದೊದಗುತ್ತದೆ. ಅವೆಲ್ಲವನ್ನೂ ಪೂರೈಸುವುದಾಗಿ ಆಸೆ ಹುಟ್ಟಿಸಿದ ಅನ್ಯಪುರುಷನಿಗೆ ಯಾಕೂಬನ ೨ನೆಯ ಹೆಂಡತಿ ಮನಸೋಲುತ್ತಾಳೆ. ಇದರಿಂದ ಬೇಸರಗೊಂಡ ಯಾಕುಬ್ ಅವಳನ್ನು ನಿಂದಿಸಿ ಬೊಂಬಾಯಿಗೆ ಹೊರಟು ಹೋಗುತ್ತಾನೆ. ಅಲ್ಲಿ ಕೆಲವು ವರ್ಷ ಪ್ರಾಮಾಣಿಕ ಜೀವನ ನಡೆಸುತ್ತಾನೆ. ೧೯೪೭ ರಲ್ಲಿ ಹಿಂದೂ-ಮುಸ್ಲಿಂ ಗಲಭೆಗಳಾದಾಗ ಯಾವುದೋ ಹುಚ್ಚು ಸೆಳೆತಕ್ಕೆ ಒಳಗಾಗಿ ಪಾಕಿಸ್ತಾನಕ್ಕೆ ಹೊರಟು ಹೋಗುತ್ತಾನೆ. ಅವನಿಗೆ ಆ ನೆಲ ಇಷ್ಟವಾಗುವುದಿಲ್ಲ. ಕೆಲವು ವರ್ಷ ಹೇಗೋ ಸಹಿಸಿಕೊಂಡು ಇದ್ದವನು ಹೇಗೋ ಭಾರತಕ್ಕೆ ಬಂದು ರಂಗನಾಥನ ಪಾದಕ್ಕೆ ನಮಸ್ಕರಿಸಿ ಮುಂದಿನ ಕಾರ್ಯಕ್ಕೆ ಹೋಗಬೇಕು ಎಂದು ಬರುತ್ತಿದ್ದೇನೆ ಎಂದು ತನ್ನ ಕತೆ ಹೇಳುತ್ತಾನೆ.

ಅಲ್ಲಿಗೆ ಲೇಖಕರು ಇಳಿಯಬೇಕಿದ್ದ ಮಂಡ್ಯ ರೈಲ್ವೆ ಸ್ಟೇಷನ್ ಹತ್ತಿರವಾಗುತ್ತದೆ. ಅದುವರೆಗೆ ಕತೆ ಹೇಳುತ್ತಿದ್ದ ಹೆಂಗಸು ಹಾ ! ಮೇರಾ ಯಾಕೂಬ್ ಎಂದು ಪ್ರೇಮದಿಂದ ಕೂಗಿಕೊಳ್ಳುತ್ತಾಳೆ. ಅವಳೇ ಜುಬೇದ.

ಇದಲ್ಲದೆ-**ಗೆದ್ದೆತ್ತಿನ ಬಾಲ, ಗೌರಿ ಸಾವು** ಮೊದಲಾದ ಪ್ರಾಣಿಗಳನ್ನು ಕುರಿತಾದ ಕತೆಗಳಿವೆ.

ಇಡೀ ಕತೆಯಲ್ಲಿ ಎತ್ತುಗಳೆರಡರ ಸಂಭಾಷಣೆಯೇ ತುಂಬಿದೆ. ಇದೊಂದು ಆ ಕಾಲಕ್ಕೆ ಹೊಸ ಪ್ರಯೋಗ.

ಹೀಗೆ ಆಧುನಿಕ ಸಣ್ಣ ಕಥಾ ಸಾಹಿತ್ಯದ ಪುಷ್ಪ ಅರಳಲು ಆರಂಭಿಸಿದ ಕಾಲದಲ್ಲಿ ಅದಕ್ಕೆ ನೀರೆರೆದು ಪೋಷಿಸಿದವರಲ್ಲಿ ಎಂ.ವಿ. ಸೀ.ಯವರೂ ಒಬ್ಬರು. ದ. ರಾ. ಬೇಂದ್ರೆಯವರು. "ಆಧುನಿಕ ಕಥಾ ಸಾಹಿತ್ಯ ಸೃಷ್ಟಿಯಲ್ಲಿ ಎಂ.ವಿ.ಸೀ.ಯವರ ಕೃತಿಗಳು ಒಂದು ತರಂಗ." ಎಂದು ಗುರುತಿಸಿದ್ದಾರೆ. ಅಲ್ಲದೆ ಇಲ್ಲಿ ಕಥನ ಶಕ್ತಿಯ ಬೀಜವು ಮೊಳೆತು, ಎಲೆ ಬಿಟ್ಟು, ಕೂಡಿಚಾಚಿ, ಹೂವಾಗಿರುವುದನ್ನು ಕಾಣಬಹುದು ಎಂದು ಹೇಳಿದ್ದಾರೆ.

ಎಂ.ವಿ.ಸೀಯವರು ಮಾಸ್ತಿಯವರ ಜಾಡನ್ನೇ ಹಿಡಿದರು ; ಅವರ ಪ್ರಭಾವದಲ್ಲಿ ಸಿಲುಕಲಿಲ್ಲ. ಅವರ ಕತೆಗಳು ಹೂತೋಟದ ವಿಹರಿಸುವ ಬಣ್ಣ ಬಣ್ಣದ ಚಿಟ್ಟೆಗಳಂತಿವೆ. ಆದರೆ ಮುಂದೆ ಸಣ್ಣ ಕಥಾ ಸಾಹಿತ್ಯವು ಆಕಾಶದೆತ್ತರ ಬೆಳೆದು ಮಿನುಗುವ ನಕ್ಷತ್ರಗಳನ್ನು ನೀಡಲು ಇದು ನಾಂದಿಯಾಯಿತು ಎನ್ನಲು ತೊಂದರೆ ಇಲ್ಲ. ◘

೬. ಪ್ರೊ|| ಎಂ.ವಿ.ಸೀ. ಅವರ ಶಾಸ್ತ್ರ ಸಾಹಿತ್ಯ ವಿಚಾರಗಳು

• ಡಾ. ಎಚ್.ಎಸ್. ಗೋಪಾಲರಾವ್

ಎಂ.ವಿ.ಸೀ.ಎಂದ ತಕ್ಷಣ ನನ್ನ ಕಣ್ಣ ಮುಂದೆ ನಿಲ್ಲುವುದು ಕಿವಿ ಮುಚ್ಚುವ ಹಾಗೆ ಬೆಚ್ಚಗಿನ ಉಣ್ಣೆಯ ಕುಲಾವಿ ಹಾಕಿಕೊಂಡು ಜೊತೆಗೆ ಒಂದು ಚೀಲದಲ್ಲಿ ಬಿಸಿನೀರು ತುಂಬಿದ ಫ್ಲಾಸ್ಕ್ ಮತ್ತು ಔಷಧದ ಪೊಟ್ಟಣಗಳನ್ನು ಹೊತ್ತು ಬರುತ್ತಿದ್ದ ಕೃಶಾಂಗ ಹಿರಿಯ ಜೀವ. ಕುಳಿತಾಗ ಇರಲಿ, ನಿಂತಾಗಿನಂತೆ ನಡೆಯುವಾಗಲೂ ಜೊತೆಯವರನ್ನು ಮಾತಿಗೆಳೆದು, ಅವಕಾಶ ಸಿಕ್ಕಾಗಲೆಲ್ಲಾ ನಗಿಸುತ್ತಾ ಬದುಕೆಲ್ಲಾ ಸಲೀಸು ಎಂಬಂತೆ ಬಾಳಿದ ತುಂಬು ಜೀವ ಎಂ,ವಿ.ಸೀ. ವಿ.ಸೀ. ಮತ್ತು ಎಂ.ವಿ.ಸೀ.ಅವರಿಗೆ ದೈಹಿಕವಾಗಿ ಅಪಾರ ವ್ಯತ್ಯಾಸ. ಆದರೆ ಸಾಹಿತ್ಯ ವಿಚಾರಕ್ಕೆ ಬಂದಾಗ ಬಹಳ ಸಾಮರಸ್ಯ.

'ಮಾದನ ಮಗಳು' ಕಾದಂಬರಿಯ ಮೂಲಕ ಇಂದಿಗೂ ಪ್ರಸ್ತುತ ಎನ್ನುವ ಕಾದಂಬರಿಕಾರರಾಗಿ, 'ಹೂವಾಡಗಿತ್ತಿ' ಕವನದ ಮೂಲಕ ಮಕ್ಕಳ ಮನಸ್ಸಿನಲ್ಲಿ, ಶ್ರೀವಿಜಯಕೃತ 'ಕವಿರಾಜಮಾರ್ಗ'ದ ಸಂಪಾದಕರಾಗಿ ವಿದ್ವಾಂಸರಿಗೆ ಆಪ್ತರಾಗಿರುವ ಎಂ.ವಿ.ಸೀ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಸಾರ್ಥಕ ಕೆಲಸ ಮಾಡಿರುವರಾದರೂ, ಅವರ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿರುವುದು ಅವರು ಸಂಪಾದಿಸಿದ 'ಶ್ರೀವಿಜಯಕೃತ ಕವಿರಾಜಮಾರ್ಗಂ' ಮತ್ತು ಆ ವಿಷಯಕ್ಕೆ ಸಂಬಂಧಿಸಿದಂತೆ ಬರೆದ ಲೇಖನಗಳ ಸಂಗ್ರಹ 'ಕವಿರಾಜಮಾರ್ಗ ವಿವಕ್ಷೆ'. ಕವಿರಾಜಮಾರ್ಗ ಕುರಿತ ಎಂ,ವಿ.ಸೀ. ಅವರ ಕೃತಿಯ ಬಗ್ಗೆ ಕನ್ನಡದ ದಾರ್ಶನಿಕ ಡಿ.ವಿ.ಜಿ. ಒಂದೆಡೆ ದಾಖಲಿಸಿರುವುದು ಹೀಗೆ. "I am ashamed of the long time I have taken in thanking you for the gift of your edition of Nrupatunga's Kavirajamarga. I see what a fine scholar you are and how well you argue things. I accept your finding that the author of Kavirajamarga may be Sri Vijaya of the court of Nrupathunga". ಇದಕ್ಕಿಂತ ಹೆಚ್ಚಿನ ಯಾವ ಮೆಚ್ಚುಗೆಯ ಮಾತುಗಳನ್ನು ಯಾರಿಂದ ತಾನೇ ನಿರೀಕ್ಷಿಸಲು ಸಾಧ್ಯ.

ಕವಿರಾಜಮಾರ್ಗ ಕೃತಿಯನ್ನು ಮೊಟ್ಟಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದ ಕೆ.ಬಿ.ಪಾಠಕ್ ಅವರು ಕೃತಿಯ ಕರ್ತೃವು ನೃಪತುಂಗ ಎಂದು ಹೇಳಿದಂದಿನಿಂದ ಇಂದಿನವರೆಗೆ ಬಹುತೇಕ ಎಲ್ಲ ವಿದ್ವಾಂಸರೂ ಕವಿರಾಜಮಾರ್ಗದ ಕರ್ತೃ ನೃಪತುಂಗ ಎಂದೇ ಒಪ್ಪಿಕೊಂಡಿದ್ದಾರೆ. ಜೆ.ಎಫ್.ಫ್ಲೀಟ್ ಅವರು ೧೯೦೪ರಲ್ಲಿ ಕವಿರಾಜಮಾರ್ಗ ಕೃತಿಯ ಕರ್ತೃ ಕವೀಶ್ವರ ಎಂದರು. ಅದೇ ಸರಿಸುಮಾರಿನಲ್ಲಿ ಆರ್.ನರಸಿಂಹಾಚಾರ್ ಕೃತಿಯ ಕರ್ತೃ 'ಶ್ರೀವಿಜಯ' ಎಂದರು. ಹೀಗೆ ಕವಿರಾಜಮಾರ್ಗ ಕರ್ತೃತ್ವದ ಬಗ್ಗೆ ಮೂರು ಅಭಿಪ್ರಾಯಗಳು ಪ್ರಚಲಿತವಿದ್ದವು. ಹೆಚ್ಚು ವಿದ್ವಾಂಸರು ಶ್ರೀವಿಜಯ ಪಕ್ಷದವರೇ ಆಗಿದ್ದರು. ಈ ಭಿನ್ನಾಭಿಪ್ರಾಯಗಳಿಗೆ ಅಂತಿಮ ತೆರೆ ಎಳೆದವರು ಪ್ರೊ.ಎಂ.ವಿ.ಸೀ. ಅದಕ್ಕಾಗಿ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ವಿಶೇಷವಾಗಿ ಕವಿಚರಿತ್ರೆಯ ಪ್ರಸ್ತಾಪ ಆದಾಗಲೆಲ್ಲಾ ನೆನಪಿಗೆ ಬರುತ್ತಾರೆ. ಯಾವುದೇ ವಿಷಯವು ಗೀಳಿನ ಹಾಗೆ ಕಾಡದಿದ್ದರೆ. ಆ ಬಗ್ಗೆ ನಿರಂತರ ಚಿಂತನೆ ನಡೆಯದಿದ್ದರೆ, ಖಚಿತ ಎನ್ನುವ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಕವಿರಾಜಮಾರ್ಗ ಮತ್ತು ಅದರ ಕರ್ತೃತ್ವದ ವಿಚಾರ ಎಂ.ವಿ.ಸೀ.ಅವರನ್ನು ಅವರು ಎಂ.ಎ.ವಿದ್ಯಾರ್ಥಿಯಾಗಿದ್ದಾಗಲೇ ಕಾಡಲು ಆರಂಭಿಸಿತ್ತು. ಅದಕ್ಕೆ ಕಾರಣರಾಗಿದ್ದವರು ಎಂ.ವಿ.ಸೀ.ಅವರಿಗೆ ಎಂ.ಎ.ತರಗತಿಯಲ್ಲಿ ಕವಿರಾಜಮಾರ್ಗದ ಬಗ್ಗೆ ಪಾಠ ಹೇಳಿದ ಪ್ರೊ.ಟಿ.ಎಸ್.ವೆಂಕಣ್ಣಯ್ಯನವರು. ಅದೇ ಸಮಯದಲ್ಲಿ 'ಪ್ರಜಾಮತ' ವಾರಪತ್ರಿಕೆಗೆ 'ಕವಿರಾಜಮಾರ್ಗ'ದ ವಿಮರ್ಶೆ ಮಾಡುವ ಅವಕಾಶ ಎಂ.ವಿ.ಸೀ.ಅವರಿಗೆ ದೊರೆತದ್ದು ನಮ್ಮೆಲ್ಲರಿಗೆ ಅದೃಷ್ಟವಾಗಿ ಪರಿಣಮಿಸಿದೆ. ಅವರ ಆಗಿನ ವಿಮರ್ಶೆ ಪ್ರಜಾಮತ ಪತ್ರಿಕೆಗೆ ಮೀಸಲಾದರೂ, ನಂತರ ಮುಂದುವರಿದ ಅವರ ಅಧ್ಯಯನ ಅನೇಕ ಒಗಟುಗಳನ್ನು ಬಿಡಿಸುವಲ್ಲಿ ಸಹಾಯಮಾಡಿತು. ಒಳ್ಳೆಯ ಉಪಾಧ್ಯಾಯ ಪಾಠ ಮಾಡುತ್ತಲೇ ತಾನೂ ಕಲಿಯುತ್ತಿರುತ್ತಾನೆ. ಎಂ.ವಿ.ಸೀ. ಒಳ್ಳೆಯ ಉಪಾಧ್ಯಾಯರು ಎಂಬುದಕ್ಕೆ ಉದಾಹರಣೆ ಎಂಬಂತೆ ಕವಿರಾಜಮಾರ್ಗದ ಪಾಠ ಹೇಳುವ ಸಂದರ್ಭದಲ್ಲಿ ತಾವು ಎದುರಿಸಿದ ಪಾಠದೋಷ ಮತ್ತು ಅರ್ಥಕ್ಲೇಷಗಳ ನಿವಾರಣೆಗೆಂದು ತಾವೇ ಕೃತಿಯ ಪರಿಷ್ಕರಣೆಗೆ ತೊಡಗಿದರು. ಪರಿಷ್ಕೃತ ಸಂಪಾದಿತ ಕೃತಿಯ ಪ್ರಕಟಣೆಯ ನಂತರ ವಿದ್ಯಾರ್ಥಿಗಳ ಉಪಯೋಗಕ್ಕೆಂದು ಮತ್ತೊಂದು ಪರಿಷ್ಕೃತ ಆವೃತ್ತಿಯೂ ಪ್ರಕಟವಾಯಿತು. ಇವೆಲ್ಲದರ ಹಿಂದೆ ಕವಿರಾಜಮಾರ್ಗವು ವಿದ್ವಾಂಸರು ಮತ್ತು ವಿದ್ಯಾರ್ಥಿಗಳಿಬ್ಬರಿಗೂ ತಲುಪಬೇಕೆಂಬ ಎಂ.ವಿ.ಸೀ.ಅವರ ಕಾಳಜಿ ಅನುಕರಣೀಯ. ಗ್ರಂಥ ಸಂಪಾದನೆಗೆ ಎಂ.ವಿ.ಸೀ.ಅವರು ಸಂಪಾದಿಸಿರುವ 'ಕವಿರಾಜಮಾರ್ಗ' ಒಂದು ಉತ್ತಮ ಉದಾಹರಣೆ.

ಕವಿರಾಜಮಾರ್ಗದ ಕರ್ತೃತ್ವದ ಬಗ್ಗೆ ಆವರೆಗೆ ನಡೆದಿದ್ದ ಎಲ್ಲಾ ಚರ್ಚೆಗಳನ್ನೂ ಪ್ರೊ.ಎಂವಿ.ಸೀ.ಗಮನಿಸಿದ್ದಾರೆ. ಯಾವುದೇ ವಾದಗ್ರಸ್ತ ವಿಷಯದ ಬಗ್ಗೆ ಚರ್ಚೆಯನ್ನು ಮುಂದುವರಿಸಬೇಕಾದಾಗ, ಹಿಂದಿನ ಎಲ್ಲ ಅಭಿಪ್ರಾಯಗಳನ್ನೂ, ಅದು ಒಂದು ಸಾಲಿನದ್ದಾಗಿರಲಿ, ನೂರು ಪುಟದ್ದಾಗಿರಲಿ ಗಮನಿಸಬೇಕಾದ್ದು ಅನಿವಾರ್ಯ; ಅದು

ಸಂಶೋಧಕನ ಜವಾಬ್ದಾರಿ. ಕವಿರಾಜಮಾರ್ಗವು ರಾಜ್ಯದಲ್ಲಿ ನೆಮ್ಮದಿಯು ನೆಲೆಸಿದ್ದ ಕಾಲದಲ್ಲಿ ರಚಿತವಾದ ಕೃತಿ ಎಂಬ ಸಾಮಾನ್ಯವಾಗಿ ಗೌಣ ಎನಿಸುವ, ಆದರೆ ಎಂದಿಗೂ ಗೌಣವಲ್ಲದ ಸೂಕ್ಷ್ಮ ವಿಚಾರದ ಜಾಡು ಹಿಡಿದು, ಕೃತಿಯ ರಚನೆಯ ಕಾಲದ ಬಗ್ಗೆ ತೀರ್ಮಾನಕ್ಕೆ ಬಂದಿದ್ದಾರೆ. ಅಮೋಘವರ್ಷನ ಕಾಲದಲ್ಲಿ ಇಡೀ ಕರ್ನಾಟಕದಲ್ಲಿ ಶಾಂತಿಯು ನೆಲೆಸಿತ್ತು ಎಂದು ಇತಿಹಾಸ ಬಲ್ಲವರಿಗೆ ತಿಳಿದಿದೆ. ಯಾವುದೇ ರಾಜನನ್ನು ಒಂದು ನಿರ್ದಿಷ್ಟ ಧರ್ಮಕ್ಕೆ ಮಿತಿಗೊಳಿಸುವುದು ಅಪಾಯಕಾರಿ. ಯಾವುದೇ ಒಂದು ದಾಖಲೆಯನ್ನು ಆಧರಿಸಿ ಅವನು ಇಂತಹುದೇ ಧರ್ಮಕ್ಕೆ ಸೇರಿದವನು ಎಂದು ತೀರ್ಮಾನಿಸಲಾಗುವುದಿಲ್ಲ ಮತ್ತು ಅಂತಹ ತೀರ್ಮಾನಗಳನ್ನು ಒಪ್ಪಿಕೊಳ್ಳಲಾಗುವುದಿಲ್ಲ. ನ್ಯಾಯವಾದಿಯು ತನ್ನ ಕಕ್ಷಿದಾರನ ಪರವಾಗಿ ಮಾತ್ರ ವಾದಿಸಬೇಕು. ಅದು ಅನಿವಾರ್ಯ. ಆದರೆ ನ್ಯಾಯಾಧೀಶನಾದವನು ಪರ ಮತ್ತು ವಿರೋಧದ ವಾದಗಳನ್ನು ಗಂಭೀರವಾಗಿ ಪರಾಮರ್ಶಿಸಿ, ಸತ್ಯವನ್ನು ಪತ್ತೆ ಮಾಡುವ ಕೆಲಸ ಮಾಡುತ್ತಾನೆ. ಆದ್ದರಿಂದಲೇ 'ಸತ್ಯಕ್ಕೆ ಜಯ' ಎಂಬ ಮಾತು ಚಾಲ್ತಿಗೆ ಬಂದಿರಬೇಕು. ಕವಿರಾಜಮಾರ್ಗದ ಕರ್ತೃತ್ವ ವಿಚಾರದಲ್ಲಿ ಪಾಠಕ್, ಫ್ಲೀಟ್ ಮತ್ತು ಆರ್.ನರಸಿಂಹಾಚಾರ್ಯರ ಅಭಿಪ್ರಾಯಗಳನ್ನು ತೀರ್ಮಾನ ಎಂದು ಪರಿಭಾವಿಸದೆ, ವಾದ ಎಂದು ಸ್ವೀಕರಿಸುವುದು ಸೂಕ್ತ. ಮೇಲೆ ಪ್ರಸ್ತಾಪಿಸಿದ ಮೂರೂ ಜನ ವಿದ್ವಾಂಸರ ಅಭಿಪ್ರಾಯಗಳನ್ನು ಪರಾಮರ್ಶಿಸಿ, ಒಂದು ತೀರ್ಮಾನಕ್ಕೆ ಬಂದಿರುವ ಪ್ರೊ.ಎಂ.ವಿ.ಸೀ.ಅವರನ್ನು ನ್ಯಾಯವಾದಿ ಎಂದು ಪರಿಗಣಿಸದೆ, ನ್ಯಾಯಾಧೀಶ ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ನೃಪತುಂಗನ ಶಾಸನಗಳಲ್ಲಿ ಮತ್ತು ಕವಿರಾಜಮಾರ್ಗದಲ್ಲಿ ಜಿನಪರ ಮತ್ತು ವೈದಿಕಪರ ಅಭಿಪ್ರಾಯಗಳೆರಡನ್ನೂ ಕಾಣುತ್ತೇವೆ. ವೈದಿಕಪರ ಎಂದಾಗ ಅದರಲ್ಲಿ ಶೈವ ಮತ್ತು ವೈಷ್ಣವ ಎರಡೂ ಸೇರುತ್ತವೆ. ಇದಿಷ್ಟೇ ಆಧಾರದ ಮೇಲೆ ಕವಿರಾಜಮಾರ್ಗದ ಕರ್ತೃ ನೃಪತುಂಗ ಎಂದು ತೀರ್ಮಾನಿಸಲು ಸಾಧ್ಯವಿಲ್ಲ.

ಪ್ರೊ.ಎಂ.ವಿ.ಸೀ.ಅವರೆಗಿನ ಎಲ್ಲ ಚರ್ಚೆಗಳನ್ನೂ ಕೂಲಂಕಷವಾಗಿ ಪರಾಮರ್ಶಿಸಿ, ನಂತರದ ಕವಿಗಳು ಉಲ್ಲೇಖಿಸಿರುವ ಶ್ರೀವಿಜಯನ ವಿಚಾರವನ್ನೂ ಗ್ರಹಿಸಿ, "ಶ್ರೀವಿಜಯನು ನೃಪತುಂಗ ಸಭಾಸದ; ಕವಿ ಮತ್ತು ಲಕ್ಷಣಶಾಸ್ತ್ರಜ್ಞ; ಬಹುಶಃ ನೃಪತುಂಗನ ಕೋರಿಕೆಯಂತೆ, ದಂಡಿ, ಭಾಮಹರನ್ನು ಅನುಸರಿಸಿ, ಆತ 'ಕವಿರಾಜಮಾರ್ಗ'ವನ್ನು ರಚಿಸಿದ್ದನು. ಅವನು ಅದನ್ನು ನೃಪತುಂಗನ ಸಭೆಯಲ್ಲಿ ಶ್ರುತಪಡಿಸಿದನು. ಕನ್ನಡನಾಡಿನ ಚಕ್ರವರ್ತಿಯಾಗಿದ್ದ ನೃಪತುಂಗನು ಕನ್ನಡಕ್ಕೆ ಸಂಬಂಧಪಟ್ಟಂತೆ ಶಾಸ್ತ್ರವಿಚಾರವನ್ನು ವಿಸ್ತರಿಸಿ, ಪ್ರತಿಪಾದಿಸಬೇಕೆಂದು ಸೂಚಿಸಿರಬಹುದು; ಅಲ್ಲದೆ, ಸ್ವತಃ ವಿದ್ವಾಂಸನಾಗಿದ್ದ ನೃಪತುಂಗನು 'ಕವಿರಾಜಮಾರ್ಗ'ದ ಇತರ ಶಾಸ್ತ್ರ ವಿಚಾರಗಳನ್ನು ತನ್ನ ಸಭೆಯಲ್ಲಿ ಚರ್ಚಿಸಿ, ತನ್ನ ಅಭಿಪ್ರಾಯಗಳನ್ನೂ ಸೂಚಿಸಿರಬಹುದು. ಇಂಥ ಒಂದು ವಿಚಾರಮಥನದ ಫಲಿತವಾಗಿ 'ಕವಿರಾಜಮಾರ್ಗ'

ರೂಪುಗೊಂಡಿರಬೇಕೆಂಬುದಕ್ಕೆ ಗ್ರಂಥದಿಂದ ಅನೇಕ ಸಂದರ್ಭೋಕ್ತಿಗಳನ್ನು ನಿದರ್ಶನಗಳಾಗಿ ಕೊಡಬಹುದು. ಶ್ರೀವಿಜಯನು ತನ್ನ ಪ್ರಭುವಿನ ಹಾಗೂ ಇತರ ವಿದ್ವಾಂಸರ ಅಭಿಪ್ರಾಯಗಳೆಲ್ಲವನ್ನೂ ಸ್ವೀಕರಿಸಿ, ಅಳವಡಿಸಿ, ತನ್ನ ';ಕವಿಮಾರ್ಗ'ವನ್ನು 'ಕವಿರಾಜಮಾರ್ಗ' ಎಂದು ಕರೆದು, ಪರಿಚ್ಛೇದಾಂತ ಪದ್ಯಗಳಲ್ಲಿ 'ಶ್ರೀವಿಜಯಪ್ರಭೂತ' ಮುಂತಾಗಿ ತನ್ನ ಕರ್ತೃತ್ವವನ್ನೂ ಸೂಚಿಸಿ, ಪರಿಚ್ಛೇದಾಂತ ಗದ್ಯದಲ್ಲಿ ತನ್ನ ಕೃತಿಗೆ ಆಶ್ರಯದಾತ ನೃಪತುಂಗನ ಮಾನ್ಯತೆಯಿದೆ, ಒಪ್ಪಿಗೆಯಿದೆ ಎಂಬುದನ್ನು 'ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗ' ಎಂಬ ಮಾತುಗಳಲ್ಲಿ ಸ್ಮರಿಸಿದ್ದಾನೆ" ಎಂದು ಸ್ಪಷ್ಟವಾದ ಮಾತುಗಳಲ್ಲಿ ತಿಳಿಸಿದ್ದಾರೆ.[೧]

'ಕವಿರಾಜಮಾರ್ಗ'ದ ಅಧ್ಯಯನ ಮತ್ತು ಅಧ್ಯಾಪನದ ಸಂದರ್ಭಗಳಲ್ಲಿ ಕೃತಿ ಮತ್ತು ಕೃತಿಕಾರನ ಬಗ್ಗೆ ಆವರೆಗೆ ನಡೆದಿದ್ದ ಚರ್ಚೆಗಳನ್ನೆಲ್ಲಾ, ಎಂ.ವಿ.ಸೀ.ಗಮನಿಸಿದ್ದರು; ಪಾಠ ಮಾಡುವಾಗ ಕೃತಿಯ ಪಾಠಗಳಲ್ಲಿನ ದೋಷ ಮತ್ತು ಅರ್ಥಕ್ಲೇಷಗಳು ಅವರಿಗೆ ಸವಾಲಾಗಿ ಪರಿಣಮಿಸಿದ್ದರ ಜೊತೆಗೆ 'ಕವಿರಾಜಮಾರ್ಗ'ದ ಪ್ರತಿಗಳು ಅಲಭ್ಯವಾಗಿದ್ದ ಕಾರಣದಿಂದ ಕೃತಿಯನ್ನು ಪ್ರಕಟಿಸುವ ಜವಾಬ್ದಾರಿ ಅವರ ಮೇಲೆ ಬಿದ್ದಿತು.

ಪ್ರೊ.ಎಂ.ವಿ.ಸೀ. ಮೊದಲೇ ನಿರ್ಧರಿಸಿ, ನಂತರ ಅದಕ್ಕೆ ಪೂರಕವಾಗುವ ಆಕರಗಳ ಶೋಧ ಮಾಡಿದವರಲ್ಲ. ಮೊದಲು, ಒಂದು ಅನುಮಾನದ ಬೆನ್ನು ಹತ್ತಿ ಪರ, ವಿರೋಧ ಎಲ್ಲದರ ಸಾಕ್ಷ್ಯಗಳನ್ನು ಸಂಗ್ರಹಿಸಿ, ಆ ಸಾಕ್ಷ್ಯಗಳನ್ನು ಆಧರಿಸಿ, ವಿವಿಧ ವಿದ್ವಾಂಸರು ನಡೆಸಿರುವ ಚರ್ಚೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಆ ಹಿನ್ನೆಲೆಯಲ್ಲಿ ಹೊಸದಾಗಿ ದೊರೆತ ಮಾಹಿತಿಗಳನ್ನು ತಮ್ಮ ಅಭಿಪ್ರಾಯದ ಪರವಿರಲಿ ಅಥವಾ ಇಲ್ಲದಿರಲಿ ಪರಿಶೀಲಿಸಿ, ತಮ್ಮ ಚರ್ಚೆಯನ್ನು ಮುಂದುವರಿಸುತ್ತಾರೆ. ಆಗ ಎಂ.ವಿ.ಸೀ. ನ್ಯಾಯವಾದಿಯಂತೆ ಕಾಣುತ್ತಾರೆ. ನಿರ್ಣಯ ಹೇಳುವ ಸಂದರ್ಭದಲ್ಲಿ ಅವರು ನ್ಯಾಯಾಧೀಶರಾಗಿಬಿಡುತ್ತಾರೆ. ಸಂಶೋಧನೆಯಲ್ಲಿ ಇದು ಅನಿವಾರ್ಯ ಎಂಬ ಅಭಿಪ್ರಾಯವನ್ನು ಸಹೃದಯರು ಒಪ್ಪುತ್ತಾರೆ. 'ಕವಿರಾಜಮಾರ್ಗ' ದ ಕರ್ತೃತ್ವದ ಬಗ್ಗೆ ಚರ್ಚಿಸಿರುವ ಎಲ್ಲರೂ ಪ್ರಾಮಾಣಿಕರು. ಅವರಲ್ಲಿ ಯಾರ ಪ್ರಾಮಾಣಿಕತೆಯನ್ನೂ ಪ್ರಶ್ನಿಸುವಂತಿಲ್ಲ. ಆ ಸಂದರ್ಭದ ಸಾಕ್ಷ್ಯಗಳು ಅವರ ತೀರ್ಮಾನಕ್ಕೆ ಇಂಬುಗೊಡುತ್ತಿದ್ದವು. ಆದರೆ, ಯಾರೊಬ್ಬರ ತೀರ್ಮಾನವೂ ಒಂದೇ ಆಗಿರಲಿಲ್ಲವಾದ್ದರಿಂದ, ಚರ್ಚೆಗಳು ಮುಂದುವರಿದಿದ್ದವು. ಆದರೆ, ಎಲ್ಲ ವಿದ್ವಾಂಸರ ಚರ್ಚೆಗಳೂ ಆರೋಗ್ಯಕರವಾಗಿದ್ದವು ಎಂಬುದು, ಅಂದಿನ ಸಂಶೋಧನ ಪರಂಪರೆಯ ಗಾಂಭೀರ್ಯ ಮತ್ತು ಸತ್ಯನಿಷ್ಠೆಗೆ ಮಾದರಿಗಳು. ಯಾವುದೇ ಸಮಸ್ಯೆ ನಿರಂತರವಾಗಿ ಮುಂದುವರಿಯಬಾರದು. ಎಲ್ಲದಕ್ಕೂ ಒಂದು ಅಂತ್ಯ ಇರಲೇಬೇಕು.ಸಂಶೋಧನ ವಿಧಾನ ಮತ್ತು ಸಂಶೋಧನ ಗುಣಗಳಿಗೆ ಸ್ವಲ್ಪವೂ ಚ್ಯುತಿ ಬರದಂತೆ ಎಂ.ವಿ.ಸೀ. ಕಾರ್ಯ ನಿರ್ವಹಿಸಿದ್ದಾರೆ. ಬಹುತೇಕ ಸತ್ಯನಿಷ್ಠ ಮತ್ತು ವಸ್ತುನಿಷ್ಠ ಸಂಶೋಧನೆಗೆ ಇದು ಒಂದು ಮಹತ್ವದ ಉದಾಹರಣೆಯಾಗಿ

ದೀರ್ಘಕಾಲ ಉಳಿಯುತ್ತದೆ. ಈ ವಿಚಾರದಲ್ಲಿ ಬಹು ಮುಖ್ಯವಾಗಿ ನಾವು ಗಮವಿಸಬೇಕಾದದ್ದು ಎಂ.ವಿ.ಸೀ. ಎಲ್ಲಿಯೂ ಹಿಂದಿನ ವಿದ್ವಾಂಸರುಗಳ ನಿರ್ಣಯಗಳ ಬಗ್ಗೆ ಹಗುರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿಲ್ಲ.

ಕವರಾಜಮಾರ್ಗದ ಕರ್ತೃತ್ವದ ವಿಚಾರವಾಗಿ ಚರ್ಚಿಸುವಾಗ ಮತ್ತೊಂದು ಬಹು ಮುಖ್ಯ ವಿಚಾರವನ್ನು ನಾವು ಗಮನದಲ್ಲಿಟ್ಟುಕೊಳ್ಳಲೇಬೇಕು. ಅದೆಂದರೆ, ಅಂದಿನ ಕಾಲಕ್ಕೆ ಮಹತ್ವದ ಶಿಲ್ಪವಾಗಲೀ, ಸಾಹಿತ್ಯ ಕೃತಿಯಾಗಲೀ ತಮ್ಮ ಕರ್ತೃವಿನ ವಿಚಾರದಲ್ಲಿ ಸಾಮಾನ್ಯವಾಗಿ ಮೌನವಾಗಿದ್ದುಬಿಟ್ಟಿವೆ. ಶಿಲ್ಪ ಅಥವಾ ಸಾಹಿತ್ಯ ಕರ್ತೃತ್ವದ ಬಗೆ ಕೃತಿಕಾರ ತಾನೇ ಎಲ್ಲೂ ಸ್ಪಷ್ಟವಾಗಿ ಘೋಷಿಸಿಕೊಂಡಿರುವುದರ ಸುಳಿವಿಲ್ಲ. ಕರ್ನಾಟಕದ ಪ್ರಾಚೀನ ಶಿಲ್ಪ ಸಂಸ್ಕೃತಿಯಲ್ಲಿ ಅದ್ವಿತೀಯ ಎಂದೇ ಪರಿಗಣಿತವಾಗಿರುವ ಬಾಹುಬಲಿಯ ಶಿಲ್ಪಿಯ ಹೆಸರೂ ಇಂದಿಗೂ ಅಜ್ಞಾತವಾಗಿದೆ. ಆ ವಿಚಾರದಲ್ಲಿ ಖಚಿತವಾದ ನಿರ್ಧಾರಕ್ಕೆ ಬರಲು ಸಾಧ್ಯವೇ ಆಗಿಲ್ಲ. ಹಾಗೆಯೇ ಬಾದಾಮಿಯ 'ಮಹಾನಟನ ಶಿಲ್ಪದ ಕರ್ತೃತ್ವದ ವಿಚಾರ. ಆದರೆ, ಕವಿರಾಜಮಾರ್ಗಕಾರ ತನ್ನ ಹೆಸರನ್ನು ದಾಖಲಿಸಿದ್ದಾನೆ; ಆದರೆ, ಸ್ಪಷ್ಟವಾಗಿ ಅಲ್ಲ. ಕವಿಯಾದವನು ತನ್ನ ಆಶ್ರಯದಾತನ ಹೆಸರನ್ನು ದಾಖಲಿಸುವುದಷ್ಟೇ ಅಲ್ಲದೆ, ಉತ್ಪ್ರೇಕ್ಷೆಯ ಮೂಲಕ ವರ್ಣಿಸಬೇಕು. ಇದು ಅನಿವಾರ್ಯ ಎಂಬ ಪರಿಸ್ಥಿತಿಯು ಆ ಕಾಲದ ಧರ್ಮ ಎನ್ನುವುದನ್ನು ನಿರಾಕರಿಸುವಂತಿಲ್ಲ.

ಎಂ.ವಿ.ಸೀ.ಅವರು ಈ ಎಲ್ಲ ವಿಚಾರಗಳನ್ನೂ ತಿಳಿದಿದ್ದರು. ಆದ್ದರಿಂದಲೇ ಒಗಟನ್ನು ಬಿಡಿಸುವುದು ಅವರಿಗೆ ಸಾಧ್ಯವಾಯಿತು. ಪ್ರೊ.ಎಂ.ವಿ.ಸೀ.ಅವರಿಂದ ಸಂಪಾದಿತವಾದ ಶ್ರೀವಿಜಯಕೃತ ಕವಿರಾಜಮಾರ್ಗಂನ ಪೀಠಿಕಾ ಭಾಗವು ಸಂಶೋಧಕರಿಗೆ ಒಂದು ಮಾದರಿಯಾಗಿದೆ.'[೨] ನಾವು ವಹಿಸಿರುವ ಪಕ್ಷದ ನಿಲುವನ್ನು ಇನ್ನಷ್ಟು ಬಲಪಡಿಸುವ ನಮ್ಮ ಕೊನೆಯ ಮಾತನ್ನು ಜಿಜ್ಞಾಸುಗಳ ಮುಂದಿಡಲು ತಕ್ಕ ಮಟ್ಟಿನ ನೆರವು ದೊರೆಯುವುದರಿಂದಲೂ, ನೃಪತುಂಗನ ವಿಚಾರವನ್ನು ಸಂಕ್ಷೇಪವಾಗಿಯಾದರೂ ಪ್ರಸ್ತಾವಿಸಬೇಕಾದದ್ದು ಅಗತ್ಯ.' ಎಂದು ಬಿನ್ನವಿಸುತ್ತಾರೆ. ಹೀಗೆ ತಮ್ಮ ವಾದ ಪ್ರತಿಪಾದನೆಗೆ ವೇದಿಕೆಯನ್ನು ಸಿದ್ಧಪಡಿಸಿಕೊಂಡು, ರಾಷ್ಟ್ರಕೂಟ ವಂಶದ ವಿಚಾರಗಳ ಬಗ್ಗೆ ಸಂಗ್ರಾಹ್ಯವಾಗಿ, ಆದರೂ ಪ್ರಮುಖಾಂಶಗಳನ್ನು ಬಿಡದೆ, ಚರ್ಚಿಸುತ್ತಾ, ಕೆಲವು ಮಹತ್ವದ ವಿಚಾರಗಳನ್ನು ಅನಾವರಣಗೊಳಿಸಿದ್ದಾರೆ. ನೃಪತುಂಗನ ಸಾಧನೆ ಮತ್ತು ವ್ಯಕ್ತಿತ್ವದ ಬಗ್ಗೆ ಚರ್ಚಿಸುತ್ತಾ, ನೃಪತುಂಗನು ತಂದೆ ಇಟ್ಟ 'ಶರ್ವ'ಎಂಬ ಹೆಸರಿನ ಜೊತೆಗೆ, ಪಟ್ಟಕ್ಕೆ ಬಂದಾಗ. 'ಅಮೋಘವರ್ಷ' ಎಂಬ ಹೆಸರನ್ನು ಪಡೆದು, ತಂದೆ ೩ನೆಯ ಗೋವಿಂದ 'ಜಗತ್ತುಂಗ' ಎಂದು ಪ್ರಸಿದ್ಧನಾಗಿದ್ದಂತೆ, ತಾನು 'ನೃಪತುಂಗ' ಎಂದು ಪ್ರಸಿದ್ಧನಾದುದನ್ನು ನೆನಪು ಮಾಡಿಕೊಂಡಿದ್ದಾರೆ. ಸಮಕಾಲೀನ ಶಾಸನಗಳಲ್ಲಿ ಕಂಡುಬರುವ ನೃಪತುಂಗನ ಬಿರುದುಗಳ ಪೈಕಿ, ಕವಿರಾಜಮಾರ್ಗದಲ್ಲಿ ಮೇಲಿಂದ ಮೇಲೆ ಅತಿಶಯಧವಳ, ನೃಪತುಂಗ, ಅಮೋಘವರ್ಷ ಎಂಬ ಬಿರುದುಗಳು

ಉಕ್ತವಾಗಿರುವುದನ್ನು ಗಮನಿಸಿದ್ದಾರೆ. ರಾಷ್ಟ್ರಕೂಟ ದೊರೆಗಳ ಪೈಕಿ, ನೃಪತುಂಗನೊಬ್ಬನಿಗೆ ಮಾತ್ರ 'ಅತಿಶಯಧವಳ' ಎಂಬ ಬಿರುದಿರುವುದನ್ನು ಅವರು ಗುರುತಿಸಿದ್ದಾರೆ. ಕವಿರಾಜಮಾರ್ಗದ ಪದ್ಯವೊಂದರಲ್ಲಿ ೩ನೆಯ ಗೋವಿಂದನ ಮರಣದ ಸೂಚನೆ ಇದೆ ಎಂಬ ಊಹೆಯನ್ನು ಪ್ರಸ್ತಾಪಿಸಿ,[೩] ಕವಿರಾಜಮಾರ್ಗ ಕೃತಿಯು ನೃಪತುಂಗನ ಕಾಲದ ರಚನೆ ಎಂದು ನಿರ್ಧರಿಸಿದ್ದಾರೆ. ನೃಪತುಂಗನ ಆಳ್ವಿಕೆಯ ಆರಂಭದ ದಿನಗಳು ಶಾಂತಿಯುತವಾಗೇನೂ ಇರಲಿಲ್ಲವೆಂದು ಎಂ.ವಿ.ಸೀ. ಸ್ಪಷ್ಟಪಡಿಸಿದ್ದಾರೆ. ಕವಿರಾಜಮಾರ್ಗದ ಕೆಲವು ಪದ್ಯಗಳಲ್ಲಿ 'ರಾಜಕೀಯ ಧ್ವನಿ' ಇರುವುದನ್ನು ಎಂ.ವಿ.ಸೀ.ಗುರುತಿಸಿದ್ದಾರೆ. ಎಂ.ವಿ.ಸೀ.ಸಂಪಾದಿಸಿರುವ ಶ್ರೀವಿಜಯಕೃತ ಕವಿರಾಜಮಾರ್ಗ ದ ೩ನೆಯ ಪರಿಚ್ಛೇದದ ೧೮೦ ಮತ್ತು ೧೮೧ನೆಯ ಲಕ್ಷ್ಯಪದ್ಯಗಳಲ್ಲಿನ ರಾಜಕೀಯ ಧ್ವನಿಯನ್ನು ಗುರುತಿಸಿರುವ ಎಂ.ವಿ.ಸೀ. ಕ್ರಿ.ಶ೮೧೪ರಲ್ಲಿ ಪಟ್ಟಕ್ಕೆ ಬಂದ ನೃಪತುಂಗನ ರಾಜಕೀಯ ಸಮಸ್ಯೆಗಳೆಲ್ಲಾ ಒಂದು ಹಂತಕ್ಕೆ ಬಗೆಹರಿದು, ಬಹುತೇಕ ಶಾಂತಿ ನೆಲೆಸಲು ಸುಮಾರು ೨೫-೩೦ ವರ್ಷಗಳಾದರೂ ಆಗಿರಬೇಕು ಎಂದು ತರ್ಕಿಸಿದ್ದಾರೆ. ಬಹುತೇಕ ಆ ಕಾಲಕ್ಕೆ ಶ್ರೀವಿಜಯನ ಕವಿರಾಜಮಾರ್ಗ ರಚನೆಯಾಗಿದೆ ಎನ್ನುವುದು ಎಂ.ವೀ.ಸೀ.ಅವರ ಅಭಿಪ್ರಾಯ. ಅಂದರೆ ಕವಿರಾಜಮಾರ್ಗದ ರಚನೆಯ ಕಾಲವು ಕ್ರಿ.ಶ.ಸು.೮೬೦ ಇರಬೇಕು ಎಂಬುದು ಅವರ ಅಭಿಪ್ರಾಯ. ಈ ತರ್ಕಬದ್ಧ ಗಣಿತವನ್ನು ಸುಲಭವಾಗಿ ನಿರಾಕರಿಸುವಂತಿಲ್ಲ.

ನೃಪತುಂಗನ ಸರ್ವಧರ್ಮ ಸಮತಾಭಾವವನ್ನು ಅವನ ಶಾಸನಗಳ ನೆರವಿನಿಂದ ಗುರುತಿಸುವ ಎಂ.ವಿ.ಸೀ. ಅದು ಬಹುತೇಕ ಎಲ್ಲ ರಾಜರ ಸಾಮಾಜಿಕ ಧರ್ಮ ಎಂದು ತಿಳಿಸುತ್ತಾರೆ. ಹೀಗೆ ಆ ಕಾಲದ ಧಾರ್ಮಿಕ ಪರಿಸ್ಥಿತಿಯ ಬಗ್ಗೆಯೂ ತಿಳಿಸುವ ಎಂ.ವಿ.ಸೀ.ಕವಿರಾಜಮಾರ್ಗಕಾರನ ಸರ್ವಧರ್ಮಸಮತಾಭಾವವನ್ನು ಸಮೀಕರಿಸಿ, ಆ ಕಾಲಧರ್ಮಕ್ಕೆ ತಕ್ಕಂತೆ ಕೃತಿ ರಚನೆ ಆಗಿರುವ ವಿಚಾರವನ್ನು ಸ್ಪಷ್ಟಪಡಿಸುತ್ತಾರೆ.

ಕವಿರಾಜಮಾರ್ಗ ಕರ್ತೃತ್ವದ ವಿಚಾರವಾಗಿ, ಆವರೆಗಿನ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನೂ ವಿವರವಾಗಿ ಅಧ್ಯಯನ ಮಾಡಿ, ಪರಿಶೀಲಿಸಿರುವುದನ್ನು ಗಮನಿಸಿದಾಗ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಾ, ಮತ್ತು ಬೋಧಕನಾಗಿ ಅಧ್ಯಾಪನ ಮಾಡುತ್ತಾ, ಎಂ.ವಿ.ಸೀ. ಕವಿರಾಜಮಾರ್ಗದ ಪ್ರತಿಯೊಂದು ಪದ್ಯ, ಪ್ರತಿಯೊಂದು ಪದದ ಬಗೆಗೂ ಮಾಡಿರುವ ಗಂಭೀರ ಆಲೋಚನಾ ಕ್ರಮವು ಅವರಿಗೆ ಕೃತಿಯ ಬಗ್ಗೆ ಮಾತ್ರವಲ್ಲದೆ, ಅದರೊಳಗಿನ ವಿಷಯಗಳನ್ನು ಸ್ಪಷ್ಟವಾಗಿ ತಿಳಿಯುವ ಮತ್ತು ತಿಳಿಸುವ ಸಾಮರ್ಥ್ಯ ಬಗ್ಗೆ ಇದ್ದ ನಿಷ್ಠೆಯನ್ನು ವ್ಯಕ್ತಪಡಿಸುತ್ತವೆ.

ಕವಿರಾಜಮಾರ್ಗವನ್ನು ಮೊಟ್ಟ ಮೊದಲು ಸಂಪಾದಿಸಿ ಪ್ರಕಟಿಸಿದವರು ಕೆ.ಬಿ.ಪಾಠಕರು. ಅದು ಕ್ರಿ.ಶ.೧೮೯೮ರಲ್ಲಿ. ೧೯೦೪ರಲ್ಲಿ ಮೊದಲು ಅದಕ್ಕೆ ವಿಮರ್ಶಾತ್ಮಕ ಲೇಖನ ಬರೆದ ಜೆ.ಎಫ್.ಫ್ಲೀಟ್ ಅವರ ಕರ್ತೃ ಕವೀಶ್ವರ ಎಂಬ ಸೂಚನೆ ನೀಡಿದರು.

'ಯದ್ಯಪಿ ಈ ಗ್ರಂಥವು ನೃಪತುಂಗಕೃತವೆಂದು ಪ್ರತೀತಿಯಿದ್ದರೂ ಶ್ರೀವಿಜಯಕೃತವೋ ಎಂದು ಸಂದೇಹ ಪಡುವುದಕ್ಕೆ ಅವಕಾಶವಿದೆ' ಎಂದು ಮೊಟ್ಟಮೊದಲು ಹೇಳಿದವರು ಆರ್.ನರಸಿಂಹಾಚಾರ್ಯರು. ಹೀಗೆ ಪ್ರಕಟವಾದ ದಿನದಿಂದ ಈವರೆಗೂ ಕರ್ತೃತ್ವ ವಿಚಾರದಲ್ಲಿ ಕವಿರಾಜಮಾರ್ಗ ಅಸ್ಪಷ್ಟತೆಯನ್ನೇ ಉಳಿಸಿಕೊಂಡು ಬಂದಿದೆ. ಕವಿರಾಜಮಾರ್ಗ ಕರ್ತೃತ್ವದ ಬಗ್ಗೆ ಪ್ರೊ.ಎಂ.ವಿ.ಸೀ. ತೆರೆ ಎಳೆದಿದ್ದಾರೆ, ಈಗ ಅದು ಶ್ರೀವಿಜಯನ ಪರವಾಗಿ ಒಪ್ಪಿತವಾಗಿದೆ ಎಂದು ಖಚಿತವಾಗಿ ಹೇಳಲು ಸಾಧ್ಯವಾಗದಂತೆ, ಅಲ್ಲೊಬ್ಬರು ಇಲ್ಲೊಬ್ಬರು ನೃಪತುಂಗದೇವಕೃತ ಕವಿರಾಜಮಾರ್ಗ ಎಂದೇ ಹೇಳುತ್ತಾರೆ. ಆ ಮಾತಿಗೆ ಪೂರಕವೆಂಬಂತೆ, ಪಠ್ಯಪುಸ್ತಕವಾಗಿ ಪ್ರಕಟಗೊಂಡಿರುವ ಕವಿರಾಜಮಾರ್ಗದ ಕೆಲವು ಆವೃತ್ತಿಗಳು, ಕವಿರಾಜಮಾರ್ಗದ ಕರ್ತೃ ನೃಪತುಂಗ ಎಂದೇ ದಾಖಲಿಸಿವೆ ಮತ್ತು ದಾಖಲಿಸುತ್ತಿವೆ. ಪಠ್ಯಪುಸ್ತಕ ಮಂಡಲಿಯಲ್ಲಿರುವವರಿಗೆ ಈಚಿನ ಅಭಿಪ್ರಾಯ ತಿಳಿದೇ ಇಲ್ಲ ಅಥವಾ ತಿಳಿದಿದ್ದರೂ, ಅವರ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಲು ಸಿದ್ಧಇಲ್ಲ ಎನಿಸುತ್ತದೆ. ಎಂ.ವಿ.ಸೀ. ಕವಿರಾಜಮಾರ್ಗ ಕರ್ತೃತ್ವ ವಿಚಾರದ ಬಗ್ಗೆ ಚಿಂತನೆ ಆರಂಭಿಸುವ ಹೊತ್ತಿಗೆ ಕವಿರಾಜಮಾರ್ಗ ಕರ್ತೃತ್ವದ ಬಗ್ಗೆ ಇದ್ದದ್ದು ಕೇವಲ ಮೂರು ಪಕ್ಷಗಳು. ಅದು ನೃಪತುಂಗ ಪಕ್ಷ, ಕವೀಶ್ವರ ಪಕ್ಷ ಮತ್ತು ಶ್ರೀವಿಜಯ ಪಕ್ಷ. ಕವೀಶ್ವರ ಪಕ್ಷ ದುರ್ಬಲವಾಗಿತ್ತು. ಮೂರೂ ಪಕ್ಷಗಳ ವಿದ್ವಾಂಸರು ಮೇಧಾವಿಗಳು ಮಾತ್ರವಲ್ಲ ಪ್ರಾಮಾಣಿಕರು. ಆದ್ದರಿಂದ ಅಂತಹವರ ಅಭಿಪ್ರಾಯಗಳ ಬಗ್ಗೆ ಅನುಮಾನ ವ್ಯಕ್ತಪಡಿಸುವುದಕ್ಕೇ ಧೈರ್ಯ ಬೇಕಾಗುತ್ತದೆ. ಆ ಧೈರ್ಯ, ಪ್ರಾಮಾಣಿಕತೆ , ನಿಷ್ಠೆ, ಎಂ.ವಿ.ಸೀ.ಅವರಿಗೆ ಇದ್ದುದರಿಂದ, ಅವರು ಸಮಸ್ಯೆಯನ್ನು ಬಿಡಿಸಿ, ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಯಿತು. ಎಲ್ಲ ಪ್ರಮಾಣಗಳನ್ನೂ ಪರಿಶೀಲಿಸುತ್ತಾ, ಎಂ.ವಿ.ಸೀ. ಒಂದು ಅನುಮಾನವನ್ನು ವ್ಯಕ್ತಪಡಿಸುವುದನ್ನು ಮರೆಯುವುದಿಲ್ಲ. 'ಚಂದ್ರಪ್ರಭಪುರಾಣವು ಉಪಲಬ್ಧವಾಗಿ, ಅದರ ಕರ್ತೃ ಬೇರೆ ಎಂದು ನಿರ್ಧಾರ ವಾಗುವವರೆಗೆ ಕಬಿರಾಜಮಾರ್ಗ ಕರ್ತೃವಾದ ಶ್ರೀವಿಜಯನೆ ಅದನ್ನು ಬರೆದಾತನೆಂದು ಇಟ್ಟುಕೊಳ್ಳಬಹುದು. "ಈ ಶ್ರೀವಿಜಯನು 'ಆಶ್ರಿತಮಹಾನೃಪತುಂಗ ಸಭಾಸದನೆಂದು ಗ್ರಂಥದಿಂದಲೆ ಸ್ಪಷ್ಟವಾಗುತ್ತದೆ. ನೃಪತುಂಗ ಸಭಾಸದನಾಗುವ ಮುನ್ನವೆ ಆತ 'ಕವಿವೃಷಭರಾಪ್ರಯೋಗಂಗಳೊಳಂ ಕೃಥಪರಿಚಯಬಲನೂ', 'ವ್ಯಾಕರಣ ಕಾವ್ಯ ನಾಟಕಲೋಕಕಳಾಸಮಯಮಾದಳಂಕೃತಿಗಳೊಳಂ ವ್ಯಾಕುಳನೂ' ಆಗಿದ್ದು, ತನ್ನ ಪ್ರತಿಭೆ, ಪಾಂಡಿತ್ಯಗಳಲ್ಲಿ ಆತ್ಮವಿಶ್ವಾಸವುಳ್ಳವನಾದ್ದರಿಂದಲೇ, 'ವಿವೇಕ ಬೃಹಸ್ಪತಿ'ಯ ನಗರವನ್ನು ಪ್ರವೇಶಿಸಿ, 'ಅತಿಶಯಧವಳ ಸಭಾಸದರ ಮನ್ನಣೆಗೆ ಪಾತ್ರನಾದನು'."[4] ಹೀಗೆ, ಎಂ.ವಿ.ಸೀ. ಬಹಳ ಸೂಕ್ಷ್ಮ ವಿಚಾರಗಳನ್ನು ಗಮನಿಸಿ, ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುತ್ತಾರೆ. ಬಾಹ್ಯ ಸಾಕ್ಷ್ಯಗಳನ್ನಲ್ಲದೆ, ಕಾವ್ಯದೊಳಗೇ ಅಂತರ್ಗತವಾಗಿರುವ ಸಾಕ್ಷ್ಯಗಳನ್ನೂ ಗ್ರಹಿಸಿ, ಎಂ.ವಿ.ಸೀ. ಕೊನೆಗೆ ಭರತವಾಕ್ಯದಂತೆ ಹೇಳಿರುವ ಮಾತುಗಳು ಕವಿರಾಜಮಾರ್ಗದ'ಬಗೆಗಿನ ಅವರ ದೃಢ ತೀರ್ಮಾನವಾಗಿದೆ. ಆ ಮಾತುಗಳೆಂದರೆ,

"'ನೃಪತುಂಗನ ಕವಿರಾಜಮಾರ್ಗ' ಎನ್ನುವುದು ನಮಗೆ ಅಭ್ಯಾಸವಾಗಿ ಹೋಗಿದೆ. ಇನ್ನಾದರೂ, 'ಶ್ರೀವಿಜಯನ ಕವಿರಾಜಮಾರ್ಗ' ಎನ್ನೋಣ. ಈ ನಿಶ್ಚಿತವನ್ನು ಮುಂದಿಡುವುದರಲ್ಲಿ ಪ್ರಕೃತ ಸಂಪಾದಕನ ಪಾತ್ರ ಇಷ್ಟೆ: ಕವಿರಾಜಮಾರ್ಗದ ಕರ್ತೃ ಶ್ರೀವಿಜಯ ಎಂದು ನಿಶ್ಚಯಿಸಿದ್ದ ವಿದ್ವಾಂಸರು, ಕೂಡ ಹೆಸರಿನ ಮುಂದೆ ಒಂದು ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕುತ್ತಿದ್ದರು; ಈ ಸಂಪಾದಕನು ಅದನ್ನು ಅಳಿಸಿಹಾಕಲು ಪ್ರಯತ್ನಿಸಿದ್ದಾನೆ ಅಷ್ಟೆ."[೨]

ಇಂತಹ ಅಭಿಪ್ರಾಯಗಳೇ ಒಬ್ಬ ಸಂಶೋಧಕನ ಪ್ರಾಮಾಣಿಕತೆಯ ಸಾಕ್ಷ್ಯಗಳು. ಕವಿರಾಜಮಾರ್ಗ ಕರ್ತೃವಿನ ವಿಚಾರವಾಗಿ ಒಂದು ಖಚಿತ ಎನ್ನುವ ಅಭಿಪ್ರಾಯವನ್ನು ರೂಪಿಸಿದಂತೆ, ಪ್ರೊ.ಎಂ.ವಿ.ಸೀ. ಕೃತಿಯ ಸಂಪಾದನೆಯಲ್ಲೂ ತಮ್ಮ ಪರಿಶ್ರಮವನ್ನು ನಿರೂಪಿಸಿದ್ದಾರೆ. ಲಭ್ಯವಿದ್ದ ನಾಲ್ಕು ಪ್ರತಿಗಳ ಮೂಲಕವೇ ನಿರ್ದುಷ್ಟ ಎಂದು ಒಪ್ಪಬಹುದಾದ ಪರಿಷ್ಕರಣೆಯನ್ನು ಮಾಡಿ, ಸರ್ವಸಮ್ಮತ ಎನ್ನಬಹುದಾದ ಪಾಠವನ್ನು ಎಂ.ವಿ.ಸೀ. ಸಂಪಾದಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕಾಗುತ್ತದೆ.

ಪ್ರೊ.ಎಂ.ವಿ.ಸೀ. ಕವಿರಾಜಮಾರ್ಗ ಕೃತಿಯಲ್ಲಿನ ಛಂದಸ್ಸಿನ ವಿಚಾರಗಳ ಬಗ್ಗೆ ವಿಶೇಷ ಅಂಶಗಳನ್ನು ಪರಿಶಿಷ್ಟವಾಗಿ ನೀಡಿರುವುದಲ್ಲದೆ, ಅನುಬಂಧವಾಗಿ ಮುಖ್ಯ ಪಾಠಾಂತರದ ವಿಚಾರಗಳನ್ನು ಪ್ರಸ್ತಾಪಿಸಿ, ಪರಿಶೀಲಿಸಲು ಪ್ರಯತ್ನಿಸುವ ವಿದ್ವಾಂಸರಿಗೆ ಅನುಕೂಲ ಮಾಡಿದ್ದಾರೆ. .

ಒಂದು ಕೃತಿಯ ಬಗ್ಗೆ ಶಾಸ್ತ್ರ ವಿಚಾರಗಳನ್ನು ನಿಖರವಾಗಿ ತಿಳಿಸುವ ಶಕ್ತಿ, ಅದಕ್ಕೆ ಬೇಕಾದ ವ್ಯುತ್ಪತ್ತಿ ಜ್ಞಾನ ಎಂ.ವಿ.ಸೀ.ಅವರಲ್ಲಿ ಇದ್ದುದರಿಂದ ಕವಿರಾಜಮಾರ್ಗದ ಶಾಸ್ತ್ರ ವಿಚಾರಗಳು ಓದುಗನಿಗೆ ಸುಲಭವಾಗಿ ದಕ್ಕಿವೆ.

ಪ್ರೊ.ಎಂ.ವಿ.ಸೀ.ಅವರ ವಿದ್ವತ್ತಿನ ಪ್ರಖರತೆಯನ್ನು ಕವಿರಾಜಮಾರ್ಗದ ಬಗ್ಗೆ ಅವರು ಮಾಡಿರುವ ಅಧ್ಯಯನವು ದಾಖಲಿಸಿದೆ. ಕವಿರಾಜಮಾರ್ಗದ ಪರಿಷ್ಕೃತ ಸಂಪಾದನೆಯ ಕಾರ್ಯವನ್ನಲ್ಲದೆ, ಆ ಬಗ್ಗೆ ಮಹತ್ವದ ಲೇಖನಗಳನ್ನು ಬರೆದು, ಕೃತಿಯ ಕರ್ತೃತ್ವ ಮತ್ತು ಇನ್ನೂ ಕೆಲ;ವು ವಿಚಾರಗಳ ಬಗೆಗಿದ್ದ ಅನುಮಾನಗಳನ್ನು ತಮ್ಮ ೧೩ ಲೇಖನಗಳ ಮೂಲಕ ಬಗೆಹರಿಸಿ ಉಪಕಾರ ಮಾಡಿದ್ದಾರೆ.

'ಕವಿರಾಜಮಾರ್ಗದ ಒಟ್ಟು ಪದ್ಯಸಂಖ್ಯೆ ೫೩೬ (ಪ್ರಕ್ಷಿಪ್ತವಾದುದನ್ನು ಬಿಟ್ಟು): ಇವುಗಳಲ್ಲಿ ಸುಮಾರು ೪೫ ಪದ್ಯಗಳಿಗೆ ಭಾಮಹನ ಕಾವ್ಯಾಲಂಕಾರವೂ, ಸುಮಾರು ೨೩೦ಕ್ಕೆ ದಂಡಿಯ ಕಾವ್ಯಾದರ್ಶವೂ ಆಕರಗ್ರಂಥಗಳು ಎಂದ ಮೇಲೆ ಸುಮಾರು ಅರ್ಧದಷ್ಟು ಗ್ರಂಥ ಸ್ವಂತ ರಚನೆ.'[೬] ಇಷ್ಟು ಖಚಿತವಾಗಿ ಅಂಕಿ-ಅಂಶಗಳನ್ನು ಕೊಡುವುದೆಂದರೆ, ಅವರ ಅಧ್ಯಯನದ ವ್ಯಾಪ್ತಿ ಮತ್ತು ವಿಸ್ತಾರಗಳ ಅರಿವಾಗುತ್ತದೆ. ಈ ಕಾರಣದಿಂದಾಗಿಯೇ ಕವಿರಾಜಮಾರ್ಗಕಾರನ ಅನುವಾದ ಪದ್ಧತಿಯಲ್ಲಿನ ದೋಷಗಳು, ಅವನ ಸ್ವೋಪಜ್ಞತೆ, ಪುನರುಕ್ತಿ ದೋಷ ಇತ್ಯಾದಿ ವಿಚಾರಗಳ ಬಗ್ಗೆ ಕೂಲಂಕಷ ಚರ್ಚೆ ಮಾಡಲು ಸಾಧ್ಯವಾಗಿದೆ. ಎಂ.ವಿ.ಸೀ. ಕವಿರಾಜಮಾರ್ಗದ

ಲಕ್ಷ್ಯ ಪದ್ಯಗಳ ಬಗ್ಗೆ ಚರ್ಚಿಸುತ್ತಾ, ಅನುವಾದಿತ ಲಕ್ಷ್ಯಗಳಲ್ಲಿ ಕಾವ್ಯಶಾಸ್ತ್ರಕ್ಕೆ ಹೊರತಾದ ಸಂಗತಿಗಳೇನೂ ಇಲ್ಲ ಎಂದು ಸ್ಪಷ್ಟಪಡಿಸಿ, ಸ್ವನಿರ್ಮಿತ ಲಕ್ಷ್ಯ ಪದ್ಯಗಳಲ್ಲಿನ ಸೋಪಜ್ಞತೆಯನ್ನು ಸ್ಪಷ್ಟಪಡಿಸುತ್ತಾರೆ. ಸಮಕಾಲೀನ ಶಾಸನಗಳನ್ನೂ ಪರಿಶೀಲಿಸುತ್ತಾ, ಕವಿರಾಜಮಾರ್ಗದ ಭಾಷಿಕ ಮಾತ್ರವಲ್ಲದೆ, ಐತಿಹಾಸಿಕ ಮಹತ್ವದ ಬಗ್ಗೆಯೂ ಎಂ.ವಿ.ಸೀ.ಮನವರಿಕೆ ಮಾಡಿಕೊಡುತ್ತಾರೆ. ಎಂ.ವಿ.ಸೀ. ತಮ್ಮ ಕೆಲವು ಲೇಖನಗಳಲ್ಲಿನ ವಿಚಾರಗಳಿಗೆ ಸಂಬಂಧಿಸಿದಂತೆ ಬಂದ ಆಕ್ಷೇಪಣೆಗಳು ಮತ್ತು ಅಭಿಪ್ರಾಯಗಳಿಗೆ ಸಂಬಂಧಿಸಿದಂತೆ, ಆಯಾ ಲೇಖನಗಳ ಕೊನೆಯ ಪರಿಶಿಷ್ಟ ಭಾಗದಲ್ಲಿ ಉತ್ತರ ಅಥವಾ ಸಮರ್ಥನೆಯನ್ನು ನೀಡಿ, ಕುತೂಹಲಿಗಳು ಮತ್ತಷ್ಟು ಓದಲು ಪ್ರೇರಣೆ ನೀಡುತ್ತಾರೆ. ಕವಿರಾಜಮಾರ್ಗದಲ್ಲಿನ ಕಾರಕ ವಿಚಾರಗಳ ಬಗ್ಗೆಯೂ ಪ್ರೊ.ಎಂ.ವಿ.ಸೀ. ಆವರೆಗಿನ ಎಲ್ಲ ಚರ್ಚೆಗಳನ್ನೂ ಕ್ರೋಢೀಕರಿಸಿ, ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕೆ ಮಹತ್ವದ ಆಕರಗಳೆಂದರೆ, ಕನ್ನಡ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು. ಅದೆಷ್ಟೋ ಸೂಕ್ಷ್ಮ ವಿಚಾರಗಳನ್ನು ಬಗೆಹರಿಸುವಲ್ಲಿ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ನೆರವಿಗೆ ಬಂದಿರುವ ವಿಚಾರವು ಆ ನಿಟ್ಟಿನಲ್ಲಿ ಕೆಲಸ ಮಾಡಿರುವ ಎಲ್ಲರಿಗೂ ತಿಳದಿದೆ. 'ಪುರುಷವ್ರತ'ಕ್ಕೆ ಸಂಬಂಧಿಸಿದಂತೆ ಎಂ.ವಿ.ಸೀ. ಅವರ ಚರ್ಚೆ ವಿಶೇಷ ಎನಿಸುತ್ತದೆ.[೭] ಆವರೆಗೆ ಲಭ್ಯವಿದ್ದ ಶಾಸನಗಳು ಮತ್ತು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡಿರುವ ವ್ರತ, ಪುರುಷವ್ರತ, ಶ್ರಾವಕವ್ರತ, ಇತ್ಯಾದಿ ಪ್ರಯೋಗಗಳನ್ನು ವಿಶ್ಲೇಷಿಸಿ, 'ಪುರುಷವ್ರತ' ಎಂದರೆ, (i) ಆಜೀವಪರ್ಯಂತ ನೈಷ್ಠಿಕ ಬ್ರಹ್ಮಚರ್ಯೆ (=ಮಹಾವ್ರತ) (ii) ವಿವಾಹಪೂರ್ವದ (ವೈದಿಕ ಧರ್ಮವಾದರೆ, ಪ್ರಥಮಾಶ್ರಮದ) ಬ್ರಹ್ಮಚರ್ಯೆ (iii)ವಿವಾಹವಾದ ಮೇಲೆ ದಾಂಪತ್ಯ ಜೀವನದಲ್ಲಿ ವ್ರತರೂಪದಲ್ಲಿ ಕೈಗೊಳ್ಳುವ ಬ್ರಹ್ಮಚರ್ಯೆ. (+ಜೈನ ಅಣುವ್ರತದ ಅಂಗ) ಎಂಬುದಾಗಿ 'ಬ್ರಹ್ಮಚರ್ಯದ ಯಾವ ಪ್ರಕಾರವಾದರೂ ಆಗಬಹುದು ಎಂದು ವ್ಯಕ್ತಪಟ್ಟಿದೆ. ಸ್ಥೂಲವಾಗಿ 'ಪುರುಷವ್ರತ' ಎಂದರೆ 'ಬ್ರಹ್ಮಚರ್ಯೆ',. ಇದು ಸ್ತ್ರೀಪುರುಷರಿಬ್ಬರಿಗೂ ಅನ್ವಯಿಸತಕ್ಕದ್ದು' ಎಂಬ ಅತ್ಯಂತ ಸರಳವಾದ ವ್ಯಾಖ್ಯೆ ನೀಡುತ್ತಾರೆ.[೮] ಈ ವಿಚಾರಕ್ಕೆ ಸಂಬಂಧಿಸಿದಂತೆಯೂ ಎಂ.ವಿ.ಸೀ. ಪರಿಶಿಷ್ಟದಲ್ಲಿ ಮಹತ್ವದ ವಿಚಾರಗಳನ್ನು ದಾಖಲೆಯಾಗಿ ನೀಡಿದ್ದಾರೆ.

ಕವಿರಾಜಮಾರ್ಗದ ಮೇಲೆ ಹಿಂದಿನ ಅಲಂಕಾರಿಕರ ಪ್ರಭಾವದ ಬಗೆಗೆ ಸೋದಾಹರಣವಾಗಿ ವಿವರಗಳನ್ನು ನೀಡುವ ಎಂ.ವಿ.ಸೀ.ಆ ಕೃತಿಯಲ್ಲಿನ ಕೆಲವು ವಿಶಿಷ್ಟ ಪದಪ್ರಯೋಗಗಳ ಬಗ್ಗೆ ನಡೆಸಿರುವ ವಿಶ್ಲೇಷಣೆಗಳು ಅನೇಕ ಸಂದೇಹಗಳಿಗೆ ಪರಿಹಾರ ನೀಡುತ್ತವೆ.

'ಕವಿರಾಜಮಾರ್ಗ' ಮತ್ತು ಅದರ ಕರ್ತೃವಿನ ವಿಚಾರಗಳಲ್ಲಿ ಎಂ.ವಿ.ಸೀ.ಅವರ ನಿರ್ಣಯಗಳನ್ನು ಬಿಟ್ಟು ಏನೂ ಮಾಡುವಂತಿಲ್ಲ. ಆವರೆಗಿನ ಎಲ್ಲ ಚರ್ಚೆಗಳು

ಮತ್ತು ಜಿಜ್ಞಾಸೆಗಳನ್ನು ಪರಿಶೀಲಿಸುತ್ತಲೇ, ವಿಶ್ಲೇಷಿಸುತ್ತಾ, ಬಹುತೇಕ ಎಲ್ಲರೂ ಒಪ್ಪಬಹುದಾದ ಅಭಿಪ್ರಾಯಗಳನ್ನು ಎಂ.ವಿ.ಸೀ. ವ್ಯಕ್ತಪಡಿಸಿದ್ದಾರೆ.

ಕವಿರಾಜಮಾರ್ಗವಲ್ಲದೆ, ಎಂ.ವಿ.ಸೀ.ಕಾವ್ಯ ಮೀಮಾಂಸೆ, ಕನ್ನಡ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ ಶಾಸ್ತ್ರದ ವಿಚಾರದಲ್ಲೂ ಆಳವಾದ ಅಧ್ಯಯನ ಮಾಡಿ, ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಕಾವ್ಯದ ವಸ್ತುವನ್ನು ಕುರಿತ ಅವರ ಪರಿಶೀಲನೆಯು ಅತ್ಯಂತ ಕುತೂಹಲಕಾರಿಯಾಗಿದೆ. ಶ್ರವಣಬೆಳಗೊಳದ ಪ್ರಸಿದ್ಧ ನಿಸಿಧಿ ಶಾಸನವಾದ 'ಸುರಚಾಪಂಬೋಲೆ' ಎಂಬ ವೃತ್ತದ ಮೊದಲ ಎರಡು ಸಾಲುಗಳಲ್ಲಿರುವ ಕಾವ್ಯಗುಣವು ಇಡೀ ಪದ್ಯಕ್ಕೆ ಕಾವ್ಯದ ಮೆರುಗನ್ನು ಹೇಗೆ ತಂದಿದೆ ಎಂಬುದನ್ನು ವಿವರಿಸುತ್ತಾ, ಎಂ.ವೀ.ಸೀ. ಇಂತಹ ಹಲವು ಉದಾಹರಣೆಗಳನ್ನು ನೀಡುತ್ತಾರೆ.

ಉದಯಾದಿತ್ಯ ಕೃತ ಅಲಂಕಾರ ಗ್ರಂಥವಾದ 'ಉದಯಾದಿತ್ಯಾಲಂಕಾರ' ದ ಕರ್ತೃತ್ವ ಮತ್ತು ಕಾಲದ ಬಗ್ಗೆ ನಡೆಸಿರುವ ಅನುಸಂಧಾನವು ಆ ಕೃತಿಗೆ ಒಳ್ಳೆಯ ಪ್ರವೇಶವನ್ನು ದೊರಕಿಸುತ್ತದೆ.

ಪ್ರೊ.ಎಂ.ವಿ.ಸೀ.ಅವರಿಗೆ ಭಾರತೀಯ ಕಾವ್ಯ ಮತ್ತು ಪರಂಪರೆಯ ಬಗ್ಗೆ ಇರುವ ವ್ಯುತ್ಪತ್ತಿಯಷ್ಟೇ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಬಗ್ಗೆ ಇರುವುದನ್ನು ಅವರ ಹಲವು ಲೇಖನಗಳಲ್ಲಿ ಕಾಣಬಹುದು. ಅನುಭೂತ್ಯಾಭಾಸದ ಬಗ್ಗೆ ಅವರ ಚಿಂತನೆಯು ಪಾಶ್ಚಾತ್ಯ ಕಾವ್ಯಚಿಂತನೆಯ ಸ್ವರೂಪಗಳನ್ನು ಅರ್ಥವತ್ತಾಗಿ ವಿಶ್ಲೇಷಿಸಿದೆ. ಟಿ.ಎಸ್.ಎಲಿಯಟ್, ರಸ್ಕಿನ್, ಕೋಲೆರಿಜ್ ಇತ್ಯಾದಿ ಪಾಶ್ಚಾತ್ಯ ವಿಮರ್ಶಕರ ಚಿಂತನೆಗಳ ಬಗ್ಗೆ ಚರ್ಚಿಸುತ್ತಾ, ಎಂ.ವಿ.ಸೀ. ಪರಸ್ಪರ ಇರುವ ಸಾರೂಪ್ಯಗಳು ಮತ್ತು ವೈರುಧ್ಯಗಳನ್ನು ಮನದಟ್ಟು ಮಾಡುತ್ತಾರೆ.

ಎಂ.ವಿ.ಸೀ. ಅವರಿಗೆ ಅಲಂಕಾರ ಶಾಸ್ತ್ರ ವಿಷಯಗಳ ಬಗ್ಗೆ ಅಪಾರ ಆಸಕ್ತಿ ಇತ್ತು. ಅವರ ಸಮಗ್ರ ಸಂಶೋಧನಾ ಲೇಖನಗಳ ಸಂಗ್ರಹದ ಹೆಸರು 'ಕದಂಬ'. ಆ ಸಂಗ್ರಹದಲ್ಲಿ ಅಲಂಕಾರ ಪ್ರಸ್ಥಾನದ ಬಗೆಗಿನ ಅವರ ಲೇಖನವು ಅಲಂಕಾರ ಪಂಥದ ಬೆಳವಣಿಗೆಯ ಸ್ಥೂಲ ಚಿತ್ರವನ್ನು ನೀಡುತ್ತಾ, 'ಕಾವ್ಯಪುರುಷನ ಶರೀರವೇ ಬೇರೆ, ಪರಮ ಅಲಂಕಾರವೇ ಬೇರೆ; ಇವು ಬಹು ಪರಿಕರ ರೂಪದವು ಎಂಬ ಮಾತಿನಿಂದ ಶಬ್ದಾಲಂಕಾರ ಅರ್ಥಾಲಂಕಾರ ಪ್ರಬೇಧಗಳೂ ಕಾವ್ಯಪುರುಷನ ಶರೀರದ ಶಬ್ದಾರ್ಥ ಗುಣ–ರೀತಿ (ಮಾರ್ಗ)ಗಳು ಸೂಚಿತವಾಗಿವೆ. ಮೊತ್ತಮೊದಲಿಗೆ ಕಾವ್ಯವನ್ನು ವಧುವಾಗಿ ರೂಪಕ ಮಾಡಿರುವವನೂ ಶ್ರೀವಿಜಯನೇ' ಎಂಬ ಮಾತನ್ನು ದಾಖಲಿಸಿ, ಶ್ರೀವಿಜಯನ ಸಾಧನೆಯನ್ನು ಪರಿಚಯಿಸಿದ್ದಾರೆ.[೯]

ಕಾವ್ಯದಲ್ಲಿನ 'ರಸ' ಗಳ ಬಗ್ಗೆ ಎಂದಿಗೂ ಮುಗಿಯದ ಚರ್ಚೆಗಳಿವೆ. ಕಾವ್ಯಗಳಲ್ಲಿ ಒಂಬತ್ತು ರಸಗಳು ಮಾತ್ರ ಇವೆ ಎಂಬ ಮಾತಿಗೂ ಸರ್ವಸಮ್ಮತಿ ಇಲ್ಲ. ಸಂಖ್ಯೆಯ ಬಗ್ಗೆಯೇ ಸಂಶಯಗಳು ಇರುವಾಗ ಕೆಲವು ರಸಗಳ ಬಗ್ಗೆ ಸರ್ವಸಮ್ಮತ

ಅಭಿಪ್ರಾಯಗಳು ಇಲ್ಲ. ರಸಗಳ ಪೈಕಿ 'ಶಾಂತರಸ'ವು ಸಂಸ್ಕೃತ ಮತ್ತು ದೇಶೀ ಭಾಷೆಯ ಕಾವ್ಯಗಳಲ್ಲಿ ಹಲವು ಅನುಮಾನಗಳಿಗೆ ಕಾರಣವಾಗಿದೆ. ಎಂ.ವಿ.ಸೀ.ಅವರ ಪ್ರಕಾರ 'ಶಾಂತರಸ'ವು ಜೈನಧರ್ಮದ ಕೊಡುಗೆ.[೧೦]

ಛಂದಸ್ಸಿನ ಬಗೆಗೂ ಆಸಕ್ತಿ ಇದ್ದ ಎಂ.ವಿ.ಸೀ.ಕನ್ನಡ ಹಾಡಿನ ವಿಕಾಸ ಮತ್ತು ಲಯಸ್ವರೂಪದ ಬಗ್ಗೆ ವಿವೇಚಿಸುತ್ತಾ, ತ್ರಿಪದಿ, ಕಂದ, ಏಲಾ, ಇತ್ಯಾದಿ ಛಂದಸ್ಸ್ವರೂಪಗಳು ಹೇಗೆ ಹಾಡುಗಳಿಗೆ ದಾರಿ ಮಾಡಿಕೊಟ್ಟವು ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದ್ದ ಬಹುತೇಕ ಎಲ್ಲಾ ಛಂದೋರೂಪಗಳ ಬಗ್ಗೆ ಎಂ.ವಿ.ಸೀ. ತಮ್ಮ ಆಲೋಚನೆಗಳನ್ನು ದಾಖಲಿಸಿದ್ದಾರೆ.

ಹೀಗೆ ಪ್ರೊ.ಎಂ.ವಿ.ಸೀ. ಕಥೆ, ಕಾದಂಬರಿ, ಕವನಗಳಷ್ಟಕ್ಕೇ ಸೀಮಿತಗೊಳ್ಳದೆ, ತಮ್ಮ ಅಧ್ಯಯನ ಮತ್ತು ಅಧ್ಯಾಪನಗಳ ನೆವದಿಂದಾದರೂ, ಕೆಲವು ಶಾಸ್ತ್ರ ವಿಚಾರಗಳತ್ತ ಗಮನ ಹರಿಸಿ, ಆ ವಿಚಾರಗಳಲ್ಲಿಯೂ ತಮಗಿರುವ ಪ್ರತಿಭೆ ಮತ್ತು ವ್ಯುತ್ಪತ್ತಿ ಜ್ಞಾನಗಳ ಪರಿಚಯ ಮಾಡಿಕೊಟ್ಟಿದ್ದಾರೆ.

ಆ ನಿಟ್ಟಿನಲ್ಲಿ ಎಂ.ವಿ.ಸೀ. ಪ್ರತ್ಯಕ್ಷವಾಗಿ ಕೆಲವರಿಗೆ ಮೇಷ್ಟ್ರಾದರೂ, ಪರೋಕ್ಷವಾಗಿ ಅನೇಕರಿಗೆ ಮೇಷ್ಟ್ರಾಗೇ ಉಳಿದಿದ್ದಾರೆ ಮತ್ತು ಉಳಿಯುತ್ತಾರೆ ಎನ್ನುವುದು ಅವರ ಅಧ್ಯಯನ ಮತ್ತು ಅಧ್ಯಾಪನ ಶಕ್ತಿಗಳ ಸಾಕ್ಷಿಯಾಗಿವೆ.

೧ ಸಂ: ಎಂ.ವೀ.ಸೀತಾರಾಮಯ್ಯ, ಶ್ರೀವಿಜಯಕೃತ ಕವಿರಾಜಮಾರ್ಗಂ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೪, ಪು. ಥಥಥತು

೨ ಅದೇ, ಪು.೧,

೩ ಸತತೋದಯನಪ್ರತಿಹತ
ಗತಿತೀವ್ರಂ ತದ್ದಿನಾಧಿನಾಥನುಮಸ್ತಂ
ಗತನಾದನಂತೆ ನಿಯತ
ಪ್ರತೀತಿಯಂ ಕಳೆಯಲಕ್ಕುಮೇ ವ್ಯಾಪಕಮಂ. ಅದೇ, ತೃತೀಯ ಪರಿಚ್ಛೇದ ೩, ಪದ್ಯ ೩೦ ಪು.೧೩೪

೪ ಅದೇ, ಪು.೩೧

೫ ಅದೇ, ಪು.೫೦

೬ ಎಂ.ವಿ.ಸೀತಾರಾಮಯ್ಯ, ಕವಿರಾಜಮಾರ್ಗ ವಿವಕ್ಷೆ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೫, ಪು.೫

೭ ಅದೇ, ಪು.೬೫

೮ ಅದೇ, ಪು.೮೧

೯ ಎಂ.ವಿ.ಸೀ. ಕದಂಬ ಸಮಗ್ರ ಸಂಶೋಧನಾ ಲೇಖನಗಳು, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ. ಬೆಂಗಳೂರು, ೧೯೯೩, ಪು.೫೭

೧೦ ಅದೇ, ಪು.೭೫

೭. ಎಂ.ವಿ.ಸೀ. ರಚಿತ ಜೀವನ ಚರಿತ್ರೆಗಳು

• ಪ್ರೊ. ಜಿ. ಅಶ್ವತ್ಥನಾರಾಯಣ

ಮೊದಲಿಗೆ ಎಂ.ವಿ.ಸೀ. ಅವರನ್ನು ಕುರಿತು ಎರಡು ಮಾತು :

ಎಂ.ವಿ.ಸೀ. ಅವರ ಪರೋಕ್ಷ ವಿದ್ಯಾರ್ಥಿಗಳಲ್ಲಿ ನಾನೊಬ್ಬ ಪರೋಕ್ಷ ವಿದ್ಯಾರ್ಥಿ ಎಂದರೆ ಕನ್ನಡ ವಿದ್ಯಾರ್ಥಿ ಅಲ್ಲ, ಅವರ ಕನ್ನಡ ತರಗತಿಯಲ್ಲಿ ಅವರ ಅಪ್ಪಣೆಯಿಲ್ಲದೆ ಕೂಡುತ್ತಿದ್ದ ಸಂಸ್ಕೃತ ವಿದ್ಯಾರ್ಥಿ. ನಾನು ಸಂಸ್ಕೃತ ವಿದ್ಯಾರ್ಥಿ ಎಂದು ತಿಳಿದಮೇಲೆ ಸಂಸ್ಕೃತ ತರಗತಿ ಬಿಟ್ಟು ಕನ್ನಡ ತರಗತಿಗೆ ಯಾಕೆ ಬರುತ್ತಿದ್ದೀರಿ ಎಂದು ಕೇಳಿದರು.

ಅದಕ್ಕೆ ಅವರಿಗೆ ನಾನು ಹೇಳಿದೆ. "ಕನ್ನಡದ ಮೂಲಕ ಸಂಸ್ಕೃತ ಕಲಿಯಬಹುದು. ಪಾಸಾಗಬಹುದು. ಸಂಸ್ಕೃತದ ಮೂಲಕ ಕನ್ನಡ ಕಲಿಯೋಕೆ ಆಗಲ್ಲ. ಸಂಸ್ಕೃತಕ್ಕಿಂತ ಕನ್ನಡ ನನಗೆ ತುಂಬ ಇಷ್ಟ" ಎಂದೆ. ಅವರು ನಕ್ಕು ಹೇಳಿದರು. "ಕನ್ನಡವನ್ನು ಇಷ್ಟಪಡುವವರಿಗೆ, ನಾನು ಅಡ್ಡಿ ಮಾಡುವುದಿಲ್ಲ, ಧಾರಾಳವಾಗಿ ನೀವು ನನ್ನ ತರಗತಿಯಲ್ಲಿ ಕೂಡಬಹುದು" ಎಂದು.

೧೯೫೮-೫೯ನೇ ವರ್ಷ ಇಂಟರ್‌ಮೀಡಿಯೇಟ್ ಕಾಲೇಜ್ (ಬೆಂಗಳೂರು ಗ್ಯಾಸ್ ಕಾಲೇಜು. ಆಗ ಕಲಾ ಕಾಲೇಜು ವಿಜ್ಞಾನ ಕಾಲೇಜು ಬೇರೆ ಬೇರೆ ಆಗಿರಲಿಲ್ಲ)ನಲ್ಲಿ ಐಚ್ಛಿಕ ಕನ್ನಡ ತರಗತಿಯ ವರ್ಷದ ಮೊದಲ ತರಗತಿಗೆ ಅವರು ಬಂದಿದ್ದರು. ನಾನು ಆ ತರಗತಿಗೆ ಹಾಜರಾಗಿದ್ದೆ. (ಆಗ ನಾನು ಪಿ.ಯು. ವಿದ್ಯಾರ್ಥಿ) ವಿದ್ಯಾರ್ಥಿಗಳೇ, ನೀವೆಲ್ಲಾ ಐಚ್ಛಿಕ ಕನ್ನಡವನ್ನು ತೆಗೆದುಕೊಂಡಿದ್ದೀರಿ ; ಬಹಳ ಸಂತೋಷ. ನಿಮಗೆಲ್ಲಾ ಕನ್ನಡ ಓದಲು-ಬರೆಯಲು ಬರುತ್ತದೆ ಅಲ್ಲವೇ ? ಎಂದು ಕೇಳಿದರು.

ಕೂಡಲೇ ವಿದ್ಯಾರ್ಥಿಗಳು ಹೋ ! ಹೋ ! ಎಂದು ಅಬ್ಬರಿಸಿದರು. ಬಲು ಸಂತೋಷ ! ಬಲು ಸಂತೋಷ ಎಂದ ಎಂ.ವಿ.ಸೀ. ಅವರು, ಒಬ್ಬ ವಿದ್ಯಾರ್ಥಿಯನ್ನು ಕರೆದು ಮಗೂ, ಈಗ ನಾನು ಕೆಲವು ಪದಗಳನ್ನು ಹೇಳುತ್ತೇನೆ. ನಿನಗೆ ಕನ್ನಡ ಅಕ್ಷರಗಳು ಗೊತ್ತಲ್ಲಾ ಬರಿ ಎಂದರು. ಸರ್ವೋತ್ಕೃಷ್ಟ, ಚಂಚಚ್ಚಕೋರಿ, ಪಿತ್ರಾರ್ಜಿತ, ಕನ್ನಡಿಗರಡಿಯಾಳು ಇತ್ಯಾದಿ ಹೇಳಿದರು. ಅವನು ಒಂದೊಂದಾಗಿ ಬರೆಯುತ್ತಾ

ಹೋದ. ಚಚಚ್ಚಕೋರಿ ಸರ್ವೋತ್ಕೃಷ್ಟ, ಕನ್ನಡ ಗರಡಿಯಾಳು, ಪಿತಾರ್ಜಿತ ಇತ್ಯಾದಿ. ನಾವು ಕೆಲವರು ನಕ್ಕೆವು. ಆಮೇಲೆ ಅವುಗಳ ಸರಿರೂಪ ತಿಳಿಸುತ್ತಾ ಕನ್ನಡದ ಸೊಗಸು ಹಿರಿಮೆಗಳ ಬಗ್ಗೆ ಹೇಳುತ್ತಾ ಹೋದರು....ಮಾರನೇದಿನ ಎಲ್ಲ ಹುಡುಗರೂ ತರಗತಿಗೆ ಮೊದಲೇ ಬಂದು ಕುಳಿತಿದ್ದರು.

ಕೆ. ವೆಂಕಟರಾಮಪ್ಪನವರ ದನಿಯ ಹಾಗೆ ಗತ್ತು-ಗಮ್ಮತ್ತು ಸಿಂಹಧ್ವನಿ, ನಾಟಕೀಯತೆ, ವ್ಯಕ್ತಿತ್ವ ಎಂ.ವಿ.ಸೀ. ಅವರಿಗಿರಲಿಲ್ಲ. ಅವರ ದನಿ ಮೆಲುವಾಗಿತ್ತು. ಮಾತಿನಲ್ಲಿ ವಾತ್ಸಲ್ಯ ತುಂಬಿತ್ತು. ವಿಷಯಭರಿತವಾಗಿ ವಿದ್ವತ್ಪೂರ್ಣವಾಗಿ ಪಾಠ ಮಾಡುತ್ತಿದ್ದರು. ಆಕರ್ಷಣೆ ದೃಷ್ಟಿಯಲ್ಲಿ. ಕೆ.ವೆಂ.ರಾ., ಎಂ.ವಿ.ಸೀ. ಉತ್ತರ ದಕ್ಷಿಣ ಧ್ರುವಗಳು ಎರಡರ ಚುಂಬಕಗಾಳಿಗೂ ವಿದ್ಯಾರ್ಥಿಗಳು ಸೆಳೆತಕ್ಕೆ ಒಳಗಾಗಿರುತ್ತಿದ್ದರು.

ಕರ್ಣಾಟಕದ ಸಂಘದ ಕಾರ್ಯದರ್ಶಿ ನಾನು ಆಗಿದ್ದಾಗ ಕಾರ್ಯಕಾರಿ ಸಮಿತಿಯಲ್ಲಿ ಅವರು ಸ್ಪಷ್ಟವಾಗಿ ದೃಢನಿಶ್ಚಯದಿಂದ ಪರಿಣಾಮಕಾರಿಯಾಗಿ ಮಾತಾಡುತ್ತಿದ್ದರು. ಅನಂತರ ಅನೇಕ ಸಂದರ್ಭಗಳಲ್ಲಿ ಪದೇ ಪದೇ ಭೇಟಿ ಮಾಡಿದಾಗಲೆಲ್ಲ ನನ್ನನ್ನು ವಿಶ್ವಾಸದಿಂದ ಕಾಣುತ್ತಿದ್ದರು. ಬಿ.ಎಂ.ಶ್ರೀ ಸ್ಮಾರಕ ಸಂಸ್ಥೆ ಪ್ರಾರಂಭಿಸುವಾಗ ಸ್ಥಾಪಕ ಸದಸ್ಯರು ನಿಮ್ಮಂಥ ಯುವಕರಾಗಬೇಕೆಂದು ಹೇಳಿದಾಗ ನಾನು ಸ್ಥಾಪಿತ ಸದಸ್ಯರಲ್ಲಿ ಒಬ್ಬನಾದೆ.

ಕೊನೆಗಾಲದವರೆಗೂ ಅನೇಕ ವಿಷಯಗಳಲ್ಲಿ ಅವರೊಡನೆ ಚರ್ಚಿಸುತ್ತಿದ್ದೆ. ಒಮ್ಮೆ ಅವರ ಪ್ರಾಚೀನ ಕನ್ನಡ ವ್ಯಾಕರಣಗಳು ಗ್ರಂಥದಲ್ಲಿ ಇದ್ದ ಅಚ್ಚಿನ ದೋಷಗಳನ್ನು ತೋರಿಸಿದೆ. ಆಗ ಅವರು ಶಾಸ್ತ್ರಗ್ರಂಥದಲ್ಲಿ ಅಚ್ಚಿನ ದೋಷಗಳಿರುವುದು ಅಕ್ಷಮ್ಯ ಈಗ ಇದರ ೨ನೇ ಮುದ್ರಣವಾಗುತ್ತದೆ. ಅದರ ಕರಡು ತಿದ್ದಲು ಬಂದಿದೆ. ಈ ಪುಸ್ತಕ ಕೊಡಿ. ಆ ತಪ್ಪುಗಳನ್ನೆಲ್ಲ ತಿದ್ದುವೆ. ನಿಮಗೆ ಆಮೇಲೆ ಪ್ರತಿ ಹಿಂದಿರುಗಿಸುತ್ತೇನೆ ಎಂದರು. ಕೊಟ್ಟೆ. ದ್ವಿತೀಯ ಮುದ್ರಣ ಆದದ್ದನ್ನು ತಿಳಿಸಿದಾಗ ನನ್ನ ಪ್ರತಿ ಹಿಂದಕ್ಕೆ ಕೊಟ್ಟರು. ಅವರಿಗೆ ದ್ವಿತೀಯ ಮುದ್ರಣದ ಪ್ರತಿಗಳು ಪ್ರಕಟವಾದ್ದು ತಿಳಿದಿರಲಿಲ್ಲ. ಮೈ. ವಿ.ವಿ.ಗೆ ಲೇಖಕರಿಗೆ ಕೊಡುವ ಗೌರವ ಪ್ರತಿಗಳಿಗಾಗಿ ಬರೆದರು. ನಿಮಗೊಂದು ಹೊಸಪ್ರತಿ ಕೊಡುತ್ತೇನೆ. ಅದರಲ್ಲಿ ಮತ್ತೇನಾದರೂ ತಪ್ಪುಗಳಿದ್ದರೆ ತಿದ್ದಿ ತಿಳಿಸಿ ಎಂದರು. ತುಂಬಿದ ಕೊಡ ತುಳುಕದು, ವಿನಯವಂತ ವಿದ್ವಾಸರು ಹೇಗಿರುತ್ತಾರೆ ಎಂಬುದಕ್ಕೆ ಅವರೊಂದು ಮಾದರಿ.ಆದರೆ ಗೌರವ ಪ್ರತಿಗಳು ಅವರಿಗೆ ಬರಲೇ ಇಲ್ಲ. ಯಾರೋ ಅವರ ಪರವಾಗಿ ಸ್ವೀಕರಿಸಿಬಿಟ್ಟಿದ್ದರೆಂದು ತಿಳಿಯಿತು. ಆಗ ಆ ವಿಷಯ ತಿಳಿಸುತ್ತಾ ನನಗೆ ಹೇಳಿದರು. "ನನ್ನ ಹೆಸರಿನಲ್ಲಿ ಹತ್ತಾರು ಪ್ರತಿ ತೆಗೆದುಕೊಂಡವರು, ಲೇಖಕರು ಒಂದು ಪ್ರತಿಯನ್ನಾಗಲಿ ನೋಡಲಿ ಅಂತ ನನಗೊಂದು ಪ್ರತಿಯನ್ನಾದರೂ ಕಳಿಸಬಹುದಿತ್ತು ಅಲ್ಲವೇ? ಎಂದು ಹೇಳಿ ನಕ್ಕರು.

ಎಂಥ ಸಂದರ್ಭದಲ್ಲೂ ಕೋಪಗೊಂಡು ಮಾತನಾಡಿದ್ದು ನಾನು ನೋಡೇ ಇಲ್ಲ. ಎಂಥ ಟೀಕೆಟಿಪ್ಪಣಿ ಮೂರು ದುಮ್ಮಾನಗಳನ್ನು ಶಾಂತಚಿತ್ತರಾಗಿ

ಸ್ವೀಕರಿಸುತ್ತಿದ್ದರು. ಒಪ್ಪುವುದು ಬಿಡುವುದು ಬೇರೆ ಮಾತು. ಅವರು ಪ್ರತಿಭಟಿಸುತ್ತಿರಲಿಲ್ಲ ಅಂತಲ್ಲ. ಸೌಮ್ಯ ಪ್ರತಿಭಟನೆ. ಅಹಿಂಸಾಯುತ ಪ್ರತಿಭಟನೆ. ಕನ್ನಡ ಚಳುವಳಿಗಳಲ್ಲಿ ಅವರು ಭಾಗವಹಿಸುತ್ತಿದ್ದುದೇ ಅದಕ್ಕೆ ಸಾಕ್ಷಿ.

ಎಂ.ವಿ.ಸೀ. ಅವರು ಕಾಲೇಜಿನಲ್ಲಿ ತರಗತಿಗೆ ಹೋಗುದಾಗಿ ಗೋಡೆಬದಿಯಲ್ಲಿ ನಡೆದು ಹೋಗುತ್ತಿದ್ದರು. ಮೌನವಾಗಿ ಸಾಗುತ್ತಿದ್ದರು. ಒಂದು ರೀತಿ ಮುದುಡಿಕೊಂಡು ಹೋಗುತ್ತಿದ್ದರು. ಕೆಲವು ಹುಡುಗರು ಅವರನ್ನು 'ಗುಬ್ಬಚ್ಚಿಮರಿ' ಅಂತ ಕೂಗುತ್ತಿದ್ದರು.

ಒಮ್ಮೆ ಆ ಮಾತು ಎಂ.ವಿ.ಸೀ. ಅವರ ಕಿವಿಗೆ ಬಿತ್ತು. ಆಗ ಆ ಹುಡುಗನನ್ನು ಕರೆದು ಹೇಳಿದರು : "ಮಗೂ, ನನ್ನ ಗುಬ್ಬಚ್ಚಿ ಅಂತಿದ್ದೀಯಾ ಸಂತೋಷ. ಅದು ನನ್ನ ಭಾಗ್ಯ. ಗುಬ್ಬಚ್ಚಿ ಇದ್ದರೆ ಮಕ್ಕಳು ಅನ್ನತಿನ್ನುತ್ತವೆ. ಅವರೆಕಾಯಿ ಕಾಲದಲ್ಲಿ ಹುಳುಹುಪ್ಪಟೆ ತಿನ್ನುತ್ತವೆ. ಅವುಗಳ ಚಿಲಿಪಿಲಿ ದನಿ ಮಕ್ಕಳಿಗೆ ಕೇಳಲು ಚಂದ. ಪುಟ್ಟ ಗುಬ್ಬಚ್ಚಿಗಳನ್ನು ನೋಡಲು ಚಂದ. ಗುಬ್ಬಚ್ಚಿ ಯಾರನ್ನೂ ಕಚ್ಚೋಲ್ಲ. ಯಾರನ್ನೂ ಕೊಕ್ಕನಿಂದ ಚುಚ್ಚೋಲ್ಲ. ಇಂಥ ಸಾಧು ಉಪಕಾರಿ ಗುಬ್ಬಚ್ಚಿ ಹೆಸರಿನಲ್ಲಿ ನನ್ನ ಕರೀತಿದ್ದಿಯಲ್ಲಾ ಬಹಳ ಸಂತೋಷವಾಯಿತು...' ಎಂದರು. ಆಹುಡುಗನಿಗೆ ನಾಚಿಕೆ ಆಯಿತು. ತಪ್ಪಾಯಿತು ಸಾರ್ ಅಂದ. ಇಂಥಾ ಹತ್ತಾರು ಪ್ರಸಂಗಗಳು ಅವರೊಡನಾಟದಲ್ಲಿ ನಡೆದದ್ದು ನನ್ನ ಸ್ಮೃತಿಪಟಲದಲ್ಲಿದೆ. ಇಂಥ ಸಜ್ಜನ ವಿದ್ವಾಂಸರ ಕೆಲವು ಕೃತಿಗಳನ್ನು ಕುರಿತು ಅವರು ಕಟ್ಟಿದ ಗುರುಸ್ಮರಣಾಭವನದಲ್ಲಿ ಮಾತನಾಡುವುದು ನನ್ನ ಭಾಗ್ಯ ವಿಶೇಷವಾಗಿದೆ.

ಅವರ ಶತಮಾನೋತ್ಸವದ ಕಾರ್ಯಕ್ರಮದ ಉಪನ್ಯಾಸ ಮಾಲೆ ನಮ್ಮ ಜನಕ್ಕೆ ಅವರ ಸಾಹಿತ್ಯ ಸೇವೆಯ ವೈಶಿಷ್ಟ್ಯ, ಹಿರಿಮೆ ಗರಿಮೆಗಳು ತಿಳಿಯಬೇಕೆಂಬ ಹಿನ್ನೆಲೆಯಲ್ಲಿ ಪರಿಚಯಾತ್ಮಕವಾಗಿ ಜೀವನ ಚರಿತ್ರೆಗಳಿಗೆ ಸಂಬಂಧಿಸಿದ ಕೃತಿಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ.

ಎಂ.ವಿ.ಸೀ.ಅವರು ಎಂಬತ್ತು ವರ್ಷಗಳ ಕಾಲ (ಜನನ ೯ ಸೆಪ್ಟೆಂಬರ್, ೧೯೧೦ ಮರಣ : ೯–೯–೧೯೯೦) ಬದುಕಿ ಬಾಳಿದರು. ಸುಮಾರು ಅರ್ಧ ಶತಮಾನದ ಕಾಲ ಹೊಸಗನ್ನಡದ ನವೋದಯ ಕಾಲದಿಂದ ನಮ್ಮ ದಲಿತ ಬಂಡಾಯದ ಚಳವಳಿ ಕಾಲದವರೆಗೆ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಕಣ್ಣಾರೆ ಕಂಡವರಾಗಿದ್ದರು. ಅಧಿಕವಾಗಿ ನವೋದಯ ಕಾಲದ ಕೃತಿಗಳನ್ನು ರಚಿಸಿದರು. ಕುವೆಂಪು ಅನಕೃ ಅವರಂತೆ ಸಾಹಿತ್ಯ ಕೃತಿಗಳನ್ನು ಶಾಸ್ತ್ರಕೃತಿಗಳನ್ನು ಹತ್ತಾರು ಪ್ರಕಾರಗಳಲ್ಲಿ ರಚಿಸಿದ ಸೃಜನಶೀಲತೆ ಪಾಂಡಿತ್ಯ ಅವರದು.

ಕವನ, ಮಕ್ಕಳ ಸಾಹಿತ್ಯ, ಸಣ್ಣಕಥೆ, ಕಾದಂಬರಿ, ವಿಮರ್ಶೆ, ನಾಟಕ, ಜೀವನ ಚರಿತ್ರೆ, ವ್ಯಕ್ತಿಚಿತ್ರ, ಕಾವ್ಯ ಮೀಮಾಂಸೆ, ವ್ಯಾಕರಣ, ಅಲಂಕಾರ, ಗ್ರಂಥಸಂಪಾದನೆ ಗ್ರಂಥಗಳನ್ನು

ಸಂಪಾದಿಸಿದ್ದಾರೆ ಮತ್ತು ರಚಿಸಿದ್ದಾರೆ ಸುಮಾರು ೧೦೦ ಗ್ರಂಥಗಳನ್ನು ರಚಿಸಿ, ಸಂಪಾದಿಸಿರುವುದು ಕವಿರಾಜಮಾರ್ಗ, ಪ್ರಾಚೀನ ಕನ್ನಡ ವ್ಯಾಕರಣಗಳು, ಅರ್ಚನ, ಶಾಸ್ತ್ರ ಸಾಹಿತ್ಯ, ಕನ್ನಡ ಜೀವನ ಚರಿತ್ರೆ ಮುಂತಾದ ಕೃತಿಗಳು ಎಂ.ವಿ.ಸೀ. ಅವರು ಕನ್ನಡಕ್ಕೆ ಕೊಟ್ಟ ಶ್ರೇಷ್ಠಕಾಣಿಕೆಗಳಾಗಿವೆ. ಅವರು ಜೀವನ ಚರಿತ್ರೆ-ವ್ಯಕ್ತಿಚಿತ್ರ ಅನುವಾದಿತಕೃತಿಗಳು, ಆತ್ಮಕಥೆಗಳಿಗೆ ಸಂಬಂಧಿಸಿದಂತೆ ರಚಿಸಿದ ಕೃತಿಗಳ ವಿವರ ಹೀಗಿದೆ. ನಾಲ್ಕು ಬಗೆಯ ವರ್ಗೀಕರಣದಲ್ಲಿ ಇಲ್ಲಿ ಕೊಟ್ಟಿದೆ.

ಗ್ರಂಥಗಳು :

I. ೧. ಯುಧಿಷ್ಠಿರ (ಮಕ್ಕಳಿಗಾಗಿ) ರಾಷ್ಟ್ರೋತ್ಥಾನ ಪರಿಷತ್ ಪ್ರಕಟನೆ ೧೯೭೩.

೨. ಕವಿ ರನ್ನ (ಸಂಕ್ಷಿಪ್ತ ಜೀವನ) ರಾಷ್ಟ್ರೋತ್ಥಾನ ಪರಿಷತ್ ಪ್ರಕಟನೆ ೧೯೭೬

೩. ವೈಣಿಕ ವಿದ್ವಾನ್ ಎಲ್. ರಾಜಾರಾವ್ ಐ.ಬಿ.ಎಚ್. ಪ್ರಕಟನೆ ೧೯೮೩.

೪. ರಾಜರಾಜವರ್ಮ (ಇಂಗ್ಲಿಷಿನಿಂದ ಅನುವಾದ) ಕೆ. ಎಂ. ಜಾರ್ಜ್ ಮೂಲ ಲೇಖಕರು.) ಕೇಂದ್ರ ಸಾಹಿತ್ಯ ಅಕಾಡೆಮಿ

೫. ಪ್ರತಿಮಾಗೃಹ (ವ್ಯಕ್ತಿಚಿತ್ರಗಳು) ರಾಘವ ಪ್ರಕಾಶನ ೧೯೯೦

೬ ವಿವೇಕಾನಂದ (ತೆಲುಗಿವಿನಿಂದ ಅನುವಾದ ಮೂಲ ನೆಲ್ಲೂರಿನ ಶ್ರೀಮತಿ ಕೃಷ್ಣಕುಮಾರಿ). ವಿವೇಕ ಪಬ್ಲಿಷರ್ಸ್. ೧೯೫೧.

೭. ಗುರು-ಹಿರಿಯರು ಮತ್ತು ಗೆಳೆಯರು (ಅಪ್ರಕಟಿತ).

೮. ಟಿ. ಎಸ್. ವೆಂಕಣ್ಣಯ್ಯ (ಇಂಗ್ಲಿಷ್) ಮೈಸೂರು ವಿ. ವಿ. ೧೯೮೫.

೯. ಮುದ್ದಣ (ಇಂಗ್ಲಿಷ್) ಕೇಂದ್ರ ಸಾಹಿತ್ಯ ಅಕಾಡೆಮಿ ೧೯೮೯.

೧೦. ಶ್ರೀರಾಮಕೃಷ್ಣ ಪರಮಹಂಸರು ರಾಘವ ಪ್ರಕಾಶನ ೧೯೯೦.

೧೧. ನಾಡೋಜ ಶ್ರೀ.

II. ವ್ಯಕ್ತಿಚಿತ್ರಗಳು (ಬಿಡಿ ಬರಹಗಳು) ಕನ್ನಡ ವಿಶ್ವಕೋಶಕ್ಕೆ ಬರೆದವು).

ಕನ್ನಡ ವಿಶ್ವಕೋಶಕ್ಕೆ ೨೬ಕ್ಕೂ ಹೆಚ್ಚು ಲೇಖನಗಳನ್ನು ಕನ್ನಡ ಗ್ರಂಥಗಳ ಬಗ್ಗೆ ಸಾಹಿತಿಗಳ ಬಗ್ಗೆ ಬರೆದಿದ್ದಾರೆ. ಆ ಪೈಕಿ ವ್ಯಕ್ತಿಗಳನ್ನು ಕುರಿತು ಬರೆದ ಸಂಕ್ಷಿಪ್ತ ವ್ಯಕ್ತಿ ಪರಿಚಯದ ಬರಹಗಳು ಇಲ್ಲಿವೆ.

೧. ಅಯ್ಯಾಶಾಸ್ತ್ರಿ ಸೋಸಲೆ.

೨. ಕುಮಾರವ್ಯಾಸ.

೩. ಚೌಂಡರಸ

೪. ಕಾನಕಾನ ಹಳ್ಳಿ ವರದಾಚಾರ್ಯ

೫. ತಿಮ್ಮಪ್ಪದಾಸರು

೬. ತುಂಬಲೂರಾಚಾರ್ಯ

೭. ನೃಪತುಂಗ

೮. ನಾರಾಯಣದಾಸರು

೯. ನಾರಾಯಣಶಾಸ್ತ್ರಿ

೧೦. ಪಂಪ

೧೧. ಮೊಟಗಾನಹಳ್ಳಿ ಶಂಕರಶಾಸ್ತ್ರಿ

೧೨. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ

೧೩. ರಾಜಪುರೋಹಿತ ನಾರಾಯಣ ಶ್ರೀನಿವಾಸ

೧೪. ವಾಸುದೇವಾಚಾರ್ಯ

೧೫. ಶ್ರೀ ವಿಜಯ

III ಇತರರ ಗ್ರಂಥಗಳಲ್ಲಿ/ಪತ್ರಿಕೆಗಳಲ್ಲಿ ಬರೆದ ವ್ಯಕ್ತಿಚಿತ್ರಗಳು

೧. ವಿ.ಸೀ. ನಾನು ತಿಳಿದಹಾಗೆ (ವಿ.ಸೀ.೭೫ ಗ್ರಂಥ, ಬೆಂಗಳೂರು. ೧೯೭೩

೨. ನನ್ನನ್ನು ಕಡೆದ ರೂವಾರಿ ಡಿ.ವಿ.ಜಿ. (ಕರ್ಮವೀರ ೮-೨-೧೯೭೦)

೩. ನಾನು ಕಂಡ ತೀನಂಶ್ರೀ (ಕನ್ನಡ ನುಡಿ ೨೯-೧೦-೧೯೬೬)

೪. ನಾನುಕಂಡಶಿವರುದ್ರಪ್ಪನವರು (ಸ್ನೇಹಕಾರ್ತೀಕ, ಬೆಂಗಳೂರು, ೧೯೭೭

೫. ಕಲಾತಪಸ್ವಿ ಕೆ. ವೆಂಕಟಪ್ಪ (ಕನ್ನಡ ನುಡಿ).

೬. ವಾಗ್ಗೇಯಿಕಾರ ವಾಸುದೇವಾಚಾರ್ಯ (ವಾಗ್ಗೇಯಿಕಾರ ವಾಸುದೇವಾ ಚಾರ್ಯ ೧೯೬೫, ಪುಟ ೨೪೧-೨೪೮, ಮೈಸೂರು).

೭. ನಾನು ಕಂಡ ಕೆ. ಗೋಪಾಲಕೃಷ್ಣರಾವ್ (ಕನ್ನಡ ನುಡಿ ೧-೩೧, ೧೯೬೮ ಪುಟ ೪)

೮. ಡಿ. ವಿ. ಗುಂಡಪ್ಪನವರ ಪೂರ್ಣ ವ್ಯಕ್ತಿತ್ವ (ಸಾರ್ವಜನಿಕ, ಬೆಂಗಳೂರು, ೧೦-೧೧-೧೯೭೯)

೯. ಎತ್ತರದ ವ್ಯಕ್ತಿ (ಬೆಳ್ಳಾವೆ ವೆಂಕಟನಾರಣಪ್ಪ) (ಅಪ್ರಕಟಿತ)

೧೦. ಗುರುವಿನ ಒಂದು ಭಾವಚಿತ್ರ (ಟಿ. ಎಸ್. ವೆಂಕಣ್ಣಯ್ಯ) ಸವಿನೆನಪು ಗ್ರಂಥ ೧೯೭೦.

೧೧. ಗುರುಸ್ಮರಣೆ (ವೆಂಕಣ್ಣಯ್ಯ) ಅನಂತರಂಗ ಪ್ರಕಾಶನ ಮೈಸೂರು, ೧೯೭೭.

೧೨. ವಿನಯಶಾಲಿ ವೀರ ಕನ್ನಡಿಗ-ರಸಷಷ್ಠಿ ಮೈಸೂರು, ೧೯೮೦. ಪುಟ ೯೫

೧೩. ಬಳ್ಳಾರಿ ಸಮ್ಮೇಳನ (೧೯೭೮) ಅದರ ಅಧ್ಯಕ್ಷರು : ಕನ್ನಡ ನಾಡಿ ೨೧-೫-೧೯೭೮, ಪುಟ ೧೧೬-೧೧೮.

೧೪. ಪೂಜ್ಯ ಕೃಷ್ಣಶಾಸ್ತ್ರಿಗಳಿಂದ ನಾನು ಕಲಿತ ಪಾಠ (ಎ.ಆರ್.ಕೃ. ಜೀವನ ಸಾಧನೆ. ಪ್ರಕ. ವಿಶೇಷ ಸಂಚಿಕೆ, ಮೈಸೂರು ವಿ.ವಿ. ೧೯೭೧).

೧೫. ಕನ್ನಡದ ಹೊಸಗನ್ನಡ ಸಾಹಿತ್ಯದಲ್ಲಿ ಎ. ಆರ್. ಕೃಷ್ಣಶಾಸ್ತ್ರಿಗಳ ಸ್ಥಾನ, ಜೀವನ (೧೩-೪) ೧೯೫೨. ಪುಟ ೧೧೩.

೧೬. ಕಲೆಯಲ್ಲಿ ಪರಿಪಕ್ವ ಸ್ಥಿತಿಯನ್ನು ಮುಟ್ಟಿರುವವರು. (ಗಾನಕೋಕಿಲ ಜಿ. ಚನ್ನಮ್ಮ ಸನ್ಮಾನ ಸಂಚಿಕೆ, ಬೆಂಗಳೂರು, ಪುಟ ೧೯–೨೦).

೧೭. ಜ್ಯೋತಿರ್ಲಿಂಗಾನುಭವಿ ಶ್ರೀ ಜಚನಿ (ದಾಸೋಹ ಗೌರವ ಗ್ರಂಥ, ಬೆಂಗಳೂರು, ೧೯೬೩, ಪುಟ ೧–೧೮).

೧೮. ನುಡಿಸೇವೆ : ಸ್ವರ್ಣರಶ್ಮೀ ಸಂಚಿಕೆ, ಬೆಂಗಳೂರು, ೧೯೭೬, ಪುಟ ೧೧–೧೨.

೧೯. ಪೂಜ್ಯ ಎ. ಆರ್. ಕೃ ಅವರನ್ನು ಕುರಿತು ನಾಲ್ಕು ನೆನಪಿನ ಮಾತು. (ಕನ್ನಡ ನುಡಿ ೩೧–೪/೫ ೧೯೬೮).

೨೦. ಸಾಹಿತ್ಯ–ರಾಜರತ್ನಂ ಅವರ ಪರಿಚರ್ಯೆ – ರಾಜಮಾರ್ಗ, ಬೆಂಗಳೂರು–೧೯೮೦.

IV **ವ್ಯಕ್ತಿಚಿತ್ರ/ಜೀವನ ಚರಿತ್ರೆ ಗ್ರಂಥಗಳನ್ನು ಕುರಿತ ವಿಮರ್ಶಾ ಬರಹಗಳು :**

೧. ಕನ್ನಡ ಜೀವನ ಚರಿತ್ರೆ (ವಿಮರ್ಶಾ ಗ್ರಂಥ) : ಕ.ಸಾ.ಪ. (೧೯೭೩). (ಆಧುನಿಕ ಸಾಹಿತ್ಯ ಸಮೀಕ್ಷೆ–೧ ರಲ್ಲಿ ಪುನರ್ಮುದ್ರಿತವಾಗಿದೆ. ೨೦೦೦. ಪ್ರ : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಬೆಂಗಳೂರು).

೨. ವಿದೇಶೀ ಲೋಕೋಪಕಾರಿಗಳು (ಜೀವನ ಚರಿತ್ರೆ, ಎಲ್. ಸ್ವಾಮಿರಾವ್, ಈ ಗ್ರಂಥದ ವಿಮರ್ಶೆ (ಕನ್ನಡ ನುಡಿ).

V **ವ್ಯಕ್ತಿಗಳನ್ನು ಕುರಿತು ಅನೇಕ ಉಪನ್ಯಾಸಗಳನ್ನು ಮಾಡಿದ್ದಾರೆ. (ವಿವರಗಳು ಲಭ್ಯವಿಲ್ಲ).**

VI **ಎಂ.ವಿ.ಸೀ. ಅವರ ಇತರ ಗ್ರಂಥಗಳಲ್ಲಿ (ಜೀವನ ಚರಿತ್ರೆಯ ಲೇಖನಗಳು). ಬಾಳಿನ ಬುತ್ತಿ ಗ್ರಂಥದಲ್ಲಿ ಶ್ರೀ ಬಸವಣ್ಣನವರು, ಪುರಂದರದಾಸರು ಲೇಖನಗಳು.**

ಎಂ.ವಿ.ಸೀ. ಅವರು ಸಾಕಷ್ಟು ಜೀವನ ಚರಿತ್ರೆ ಸಾಹಿತ್ಯವನ್ನು ವೈವಿಧ್ಯಮಯವಾಗಿ ಕನ್ನಡಕ್ಕೆ ನೀಡಿದ್ದಾರೆ ಎಂಬುದು ಮೇಲಿನ ಪಟ್ಟಿಯಿಂದ ವಿದಿತವಾಗುತ್ತದೆ. ಈ ಪೈಕಿ ಕೆಲವು ಸಣ್ಣ ಗ್ರಂಥಗಳಾಗಿ ಬಂದಿವೆ. (ವೈಣಿಕ ವಿದ್ವಾನ್ ಎಲ್. ರಾಜಾರಾವ್, ಯುಧಿಷ್ಠಿರ, ಕವಿರತ್ನ ಇತ್ಯಾದಿ) ವ್ಯಕ್ತಿಚಿತ್ರಗಳಲ್ಲಿ ಕೆಲವು ಪ್ರತಿಮಾಗೃಹ ಎಂಬ ಗ್ರಂಥದಲ್ಲಿ ಬಂದಿದೆ. ಆದರೆ ಉಳಿದೆಲ್ಲ ಲೇಖನಗಳು ಪ್ರತ್ಯೇಕ ಗ್ರಂಥರೂಪದಲ್ಲಿ ಬಂದಿಲ್ಲ. ಬರುವುದು ಅಗತ್ಯವಿದೆ.

ಈ ಬರಹದಲ್ಲಿ ಕೆಲವು ಜೀವನಚರಿತ್ರೆಯ ಗ್ರಂಥಗಳನ್ನು ಹಾಗೂ ವ್ಯಕ್ತಿಚಿತ್ರದ ಲೇಖನಗಳನ್ನು ಮತ್ತು ವಿಮರ್ಶಾ ಜೀವನಚರಿತ್ರೆ ಗ್ರಂಥವನ್ನು ಕುರಿತು ಪ್ರಸ್ತಾಪಿಸಲಾಗಿದೆ. ಎಂ.ವಿ.ಸೀ. ಅವರ "ಜೀವನ ಚರಿತ್ರೆ ಸಾಹಿತ್ಯ" ಎಂಬ ವಿಷಯವಾಗಿ ಮಹಾಪ್ರಬಂಧವನ್ನು ಯಾರಾದರೂ ರಚಿಸಬಹುದಾಗಿದೆ. ಎಂ.ವಿ.ಸೀ ಅವರ ಅಪ್ರಕಟಿತ ಬರಹಗಳು ಪತ್ರಿಕೆಗಳಲ್ಲಿ ಬರೆದವು (ಗಮನಕ್ಕೆ ಬಾರದವು) ಇವೆ. ಅವುಗಳನ್ನು ಪತ್ತೆ ಹಾಕಿ ಪ್ರಕಟಿಸುವ ಅಗತ್ಯವಿದೆ.

ಕನ್ನಡ ಸಾಹಿತ್ಯದ ಜೀವನ ಚರಿತ್ರೆಗಳಿಗೆ ಆತ್ಮಕಥೆಗಳಿಗೆ ಸಂಬಂಧಿಸಿದಂತೆ ಹಲವು ಪಿಎಚ್.ಡಿ. ಗ್ರಂಥಗಳು ಬಂದಿವೆ. ಅವುಗಳಲ್ಲಿ ಎಂ.ವಿ.ಸೀ. ಅವರ ಜೀವನ ಚರಿತ್ರೆ ಸಾಹಿತ್ಯದ ಬಗ್ಗೆ ವಿಶೇಷ ಗಮನಕೊಟ್ಟಿಲ್ಲ. ಎಂ.ವಿ.ಸೀ. ಅವರಿಗೆ ಇಂಗ್ಲಿಷಿನಲ್ಲಿ

ಪ್ರಭುತ್ವವಿತ್ತು. ಮುದ್ದಣನನ್ನು ಕುರಿತು ಬರೆದಿದ್ದಾರೆ. ಅದು ಕನ್ನಡಕ್ಕೆ ಅನುವಾದ ಆಗಬೇಕು. ಅವರ ಇಂಗ್ಲಿಷ್ ಬರಹಗಳಲ್ಲಿ ಕನ್ನಡದಿಂದ ಆದ ಅನುವಾದಗಳಿವೆ. ಇಂಗ್ಲಿಷಿನಲ್ಲೇ ಸ್ವತಂತ್ರವಾಗಿ ಬರೆದವು ಇವೆ. ಇಂಗ್ಲಿಷಿನಿಂದಲೂ ಅನುವಾದಿಸಿದ್ದಾರೆ. ಅವರ ಇಂಗ್ಲಿಷ್ ಬರಹಗಳ ಸಮಗ್ರ ಸಂಪುಟ ಪ್ರಕಟವಾದರೆ ಕನ್ನಡದ ಕೊಡುಗೆಯನ್ನು ಇಂಗ್ಲಿಷಿನಲ್ಲಿ ಕೊಟ್ಟ ಶ್ರೇಷ್ಠ ಲೇಖಕರು ಒಬ್ಬರೆಂದು ತಿಳಿಯುತ್ತದೆ.

ಕನ್ನಡ ವಿಶ್ವಕೋಶದ ಲೇಖನಗಳು

ವ್ಯಕ್ತಿಚಿತ್ರಗಳನ್ನು ನಿರ್ಬಂಧರಹಿತ ರಚನೆಗಳು ಮತ್ತು ನಿರ್ಬಂಧಯುಕ್ತ ರಚನೆಗಳು ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಅಂಕಣ ಬರಹಗಳು ನಿರ್ಬಂಧ ಸಹಿತ ವ್ಯಕ್ತಿ ಚಿತ್ತಗಳಾಗಿರುತ್ತವೆ. ಕಾಲಮಿತಿ ಕಾರಣದಿಂದ (ಪ್ರತಿ ವಾರವೂ ಸಕಾಲಕ್ಕೆ ಬರೆಯಬೇಕು) ಪುಟದ ಮಿತಿ ಕಾರಣದಿಂದ, ವ್ಯಕ್ತಿ ಚಿತ್ರಗಳನ್ನು ತೃಪ್ತಿಕರವಾಗಿ ನೀಡಲಾಗುವುದಿಲ್ಲ. ಹಾಮಾನಾ-ಎಚ್ಚೆಸ್ಕೆ ಅವರ ಬರಗಳಲ್ಲಿ ಈ ಮಿತಿಗಳನ್ನು ಕಾಣಬಹುದು. ಉದಾಹರಣೆಗೆ ಮಹಾಪುರಾಣ ಕುರಿತು ೨೪,೦೦೦ ಶ್ಲೋಕಗಳ ಸಂಸ್ಕೃತ-ಕನ್ನಡಾನುವಾದದ ಬೃಹತ್ ಗ್ರಂಥದ ಕಿರುಪರಿಚಯವನ್ನು ಅಂಕಣಪುಟದ ಮಿತಿಯಲ್ಲಿ ಹಾಮಾನಾ ಒಂದೆಡೆ ಕೊಟ್ಟಿದ್ದಾರೆ. ಇದರಿಂದ ಕೃತಿಗೆ ನ್ಯಾಯ ಸಿಕ್ಕೀತೆ ? ಗುರು ಗ್ರಂಥದ ಬಗ್ಗೆ ಲಘು ಪರಿಚಯ ಲೇಖನವನ್ನು ಕರಿಯ ಕನ್ನಡಿಯಲ್ಲಿ ಹಿಡಿದಂತೆ ಎಂದು ವಾದಿಸಬಹುದು. ಆದರೆ ಅದರಲ್ಲಿ ಸತ್ಯ ಎಷ್ಟಿದೆ ? ಪ್ರತಿಮಾಗೃಹದಲ್ಲಿ ಎಂ.ವಿ.ಸೀ. ಅವರು ಮಿತಿಯಿಲ್ಲದೆ ಕಾಲದ ಮಿತಿಯಿಲ್ಲದೆ ಬರೆದಿರುವುದರಿಂದ ಕಾಲಂ ಸಂಕ್ಷಿಪ್ತತೆ ಕಾಣುವುದಿಲ್ಲ ಮತ್ತು ವ್ಯಕ್ತಿತ್ವ ನಿರೂಪಣೆ ಮುಖ್ಯವಾದುದರಿಂದ ಜೀವನ ಚರಿತ್ರಾಂಶಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಿಲ್ಲ.

ಆದರೆ ಕನ್ನಡ ವಿಶ್ವಕೋಶದಲ್ಲಿ ಎಂ.ವಿ.ಸೀ. ಅವರು ಬರೆದ ವ್ಯಕ್ತಿಪರಿಚಯದ ಟಿಪ್ಪಣಿ ರೂಪದ ಬರಹಗಳಿಗೆ ಅಂಕಣ ಬರಹದ ಮಿತಿಗಳು ಅನ್ವಯವಾಗುತ್ತವೆ. ಈ ಬರಹಗಳಲ್ಲಿ ಜೀವನದ ಮುಖ್ಯ ಘಟನೆಗಳು ಮತ್ತು ಕೃತಿಗಳ ಉಲ್ಲೇಖ ಅಲ್ಲೊಂದು ಇಲ್ಲೊಂದು ಮಾತು ಕೃತಿಗಳ ಬಗ್ಗೆ ಕಾಣುತ್ತದೆ. ಏಕೆಂದರೆ ವಿಶ್ವಕೋಶಕಾರರು ತಮ್ಮದೇ ಆದ ಚೌಕಟ್ಟನ್ನು ಹಾಕಿಕೊಂಡಿರುತ್ತಾರೆ. ಅನಿವಾರ್ಯವಾಗಿ ಅದನ್ನು ಲೇಖಕರು ಪಾಲಿಸಬೇಕಾಗುತ್ತದೆ. ಕನ್ನಡ ವಿಶ್ವಕೋಶಕ್ಕೆ ಎಂ.ವಿ.ಸೀ. ಅವರು ಬರೆದ ವ್ಯಕ್ತಿ ಪರಿಚಯದ ಲೇಖನಗಳಿವು : ೧. ಸೋಸಲೆಅಯ್ಯಾ ಶಾಸ್ತ್ರಿ. ೨. ಕಾನಕಾನಹಳ್ಳಿ ವರದಾಚಾರ್ಯ. ೩. ನಾರಾಯಣ ಶಾಸ್ತ್ರಿ ಎನ್. ಎಸ್. ೪. ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿ. ೫. ಮೋಟಗಾನಹಳ್ಳಿ ಶಂಕರಶಾಸ್ತ್ರಿ. ೬. ನಾರಾಯಣ ಶ್ರೀನಿವಾಸರಾಜ ಪುರೋಹಿತ. ೭. ವಾಸುದೇವಾರ್ಯ ಲೇಖನಗಳು ಮುಖ್ಯವಾದವು. ಇವರೆಲ್ಲರ ಸಾಧನೆ-ಕನ್ನಡಕ್ಕೆ ಕೊಟ್ಟ ಕೊಡುಗೆ ಅಪಾರವಾದರೂ ಇವರನ್ನು ಕುರಿತ ಬರಹಗಳಲ್ಲಿ ಪ್ರತಿ ಲೇಖನವೂ ೨ ಪುಟದ ಒಳಗೇ ಇದೆ. ಯಾರು? ಏನು? ಎಂದಷ್ಟೆ ಇವರ ಬಗ್ಗೆ ಪರಿಚಯ ಆಗುತ್ತದೆ. ವಿಶ್ವಕೋಶದ ವಿನ್ಯಾಸವೂ ಹಾಗೆಯೇ ಇರುತ್ತದೆ ಅನ್ನಿ.

ನಾಡೋಜ ಬಿ.ಎಂ.ಶ್ರೀ.

ಜೀವನ ಚರಿತ್ರೆಯ ಗುಂಪಿಗೆ ಸೇರುವ ಇನ್ನೊಂದು ಗ್ರಂಥ ನಾಡೋಜ ಬಿ.ಎಂ.ಶ್ರೀ. ಇದರಲ್ಲಿ ಜನನ ಮರಣ ಜೀವನ ಉದ್ಯೋಗ ಬಡ್ತಿ ಪ್ರಶಸ್ತಿಗಳ ಯಾಂತ್ರಿಕ ವಿವರಗಳಿಲ್ಲ ನಿಜ. ಆದರೆ ಒಬ್ಬ ನಾಡೋಜನ ಆತ್ಮ ಎಲ್ಲಿದೆ ? ಪ್ರತಿಭೆ ಎಲ್ಲಿದೆ ? ವ್ಯಕ್ತಿತ್ವದ ವೈಶಿಷ್ಟ್ಯ ಎಲ್ಲಿದೆ ಎಂಬುದನ್ನು ಎಂ.ವಿ.ಸೀ. ಗುರುತಿಸಿದ್ದಾರೆ. ಅವರ ಅಂತಶ್ಶಕ್ತಿ ಜೀವನದುದ್ದಕ್ಕೂ ಹೇಗೆ ಹೊರಹೊಮ್ಮಿತ್ತು ಎಂಬುದರ ಚರಿತ್ರೆ ಇಲ್ಲಿದೆ. ಅವರ ಸೇವೆಯ ಹಲವು ಮುಖಗಳಲ್ಲಿ ಹೊರಹೊಮ್ಮಿತ್ತು, ಪರಿಷತ್ತಿನ ಉಪಾಧ್ಯಕ್ಷರು, ಕನ್ನಡ ಪ್ರಾಧ್ಯಾಪಕರು ಮೈ.ವಿ.ವಿ. ರಿಜಿಸ್ಟ್ರಾರ್, ರಾಜಸೇವಾ ಪ್ರಸಕ್ತರು. ಸಂಸ್ಕೃತ ಪ್ರೇಮಿ ಗುರುಭಕ್ತ ಬಿ.ಎಂ.ಶ್ರೀ. ಅವರ ಷಣ್ಮುಖ ಪ್ರೇಮ ಸಾಧನೆಗಳನ್ನು ಎಂ.ವಿ.ಸೀ. ಚಿತ್ರಿಸಿದ್ದಾರೆ. ಒಂದು ರೀತಿಯಲ್ಲಿ ವಿಮರ್ಶಾತ್ಮಕ ಗ್ರಂಥ–ಪ್ರಬಂಧ ಸಂಗ್ರಹ ಗ್ರಂಥ. ಬಿ.ಎಂ.ಶ್ರೀ ಅವರ ಅಂತರಂಗದ ಚರಿತ್ರೆಯ ಗ್ರಂಥ ಇದು. ಇನ್ನೊಂದು ವೈಶಿಷ್ಟ್ಯವೆಂದರೆ ಒಮ್ಮೆ ಕುರಿತು ಬರೆದ ಗ್ರಂಥವಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಬಿ.ಎಂ.ಶ್ರೀ. ಅವರ ಒಂದೊಂದು ಮುಖವನ್ನು ಚಿತ್ರಿಸಿದ ಬರಹಗಳ ಸಂಕಲನ ಇದು. ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯನ್ನು ಹೀಗೂ ಬರೆಯಬಹುದು ಎನ್ನಿಸುವ ಗ್ರಂಥ ಇದು. ವಿಮರ್ಶಾತ್ಮಕ ಚಿಂತನೆಯ ಗುರುಭಕ್ತಿ ಗ್ರಂಥ.

ಎಂ.ವಿ.ಸೀ. ಅವರ ವ್ಯಕ್ತಿಚಿತ್ರಗಳು (ಇತರ ಕೃತಿಗಳಲ್ಲಿ)

ಕನ್ನಡ ಜೀವನ ಚರಿತ್ರಕಾರರಲ್ಲಿ ಎಂ.ವಿ.ಸೀ. ವಿಶಿಷ್ಟ ಬರಹಗಾರರಾಗಿದ್ದಾರೆ. ಆತ್ಮಕಥೆಯನ್ನು ಪ್ರತ್ಯೇಕವಾಗಿ ಬರೆದಿರುವುದರ ಜತೆಗೆ ಅಲ್ಲಲ್ಲಿ ಬಿಡಿಲೇಖನಗಳಲ್ಲಿ ಆತ್ಮಕಥೆಯ ತುಣುಕುಗಳು ಸಿಗುತ್ತವೆ. ಉದಾಹರಣೆಗೆ ನಾನು ಮತ್ತು ನನ್ನ ಸಾಹಿತ್ಯ ಎಂಬ ಪ್ರಾಚೀನ ಕನ್ನಡ ವ್ಯಾಕರಣಗಳು ಗ್ರಂಥದ ಬಗ್ಗೆ ಮಾಡಿದ ಭಾಷಣದ ಲಿಖಿತರೂಪದ ಲೇಖನದಲ್ಲಿ ಗ್ರಂಥ ರಚನೆಯ–ಹಿನ್ನೆಲೆಯನ್ನು ಹೇಳಿಕೊಂಡಿದ್ದಾರೆ. (ಪುಟ ೨೫೦–೨೫೩ ನಾನು ಮತ್ತು ನನ್ನ ಸಾಹಿತ್ಯ ಎಂ.ವಿ.ಸೀ. : ಸಂಪುಟ ೩ ಪ್ರಬಂಧಗಳು ಮತ್ತು ವ್ಯಕ್ತಿ ಚಿತ್ರಗಳು–ಸಂ. ಮಧುಸೂದನ್–ಕಸಂನಿ.

ಬಾಳಿನ ಬುತ್ತಿ

ಬಾಳಿನ ಬುತ್ತಿ ಗ್ರಂಥವನ್ನು ಎಂ.ವಿ.ಸೀ. ಅವರು ಕಥಾ ಪ್ರಬಂಧ ಸಂಕಲನವೆಂದು ಕರೆದಿದ್ದಾರೆ. ಆದರೆ ಅದರಲ್ಲಿ ಕೆಲವು ಜೀವನ ಚಿತ್ರಣಗಳಿವೆ.

ಶ್ರೀ ಬಸವಣ್ಣನವರು ಲೇಖನ (ಪುಟ ೩೦೧–೩೨೦) ಬಸವಣ್ಣನವರ ಜೀವನ–ವಚನಗಳ ವಿಮರ್ಶೆಯ ಲೇಖನವಾಗಿದೆ. ಶ್ರೀ ಪುರಂದರದಾಸರು ಲೇಖನವೂ (ಪುಟ ೩೩೪–೩೪೩) ದಾಸರ ವ್ಯಕ್ತತ್ವದ ಚಿತ್ರಣ ನೀಡುವ ವ್ಯಕ್ತಿಚಿತ್ರವಾಗಿದೆ. ಇಲ್ಲಿ ತೌಲನಿಕ ನೋಟವಿದೆ. ಪುರಂದರದಾಸರ 'ಧರ್ಮವೇ ದಿವ್ಯವೆಂಬ ಮಂತ್ರ'ವನ್ನು ಕುರಿತು ಬರೆಯುತ್ತಾ ಇದರಲ್ಲಿ ಬುದ್ಧದೇವನ ಬೋಧೆ ಬಿಂಬಿತವಾಗಿದೆ. ಕ್ರಿಸ್ತನವಾಣಿ ಕೇಳಿ

ಬರುತ್ತದೆ, ಮಹಾತ್ಮಾಗಾಂಧಿ ಅವರ ಮನೋಧರ್ಮದ ಮುಂದಾಣಿಕೆ ಇದೆ. ಮಹಾತ್ಮರೆಲ್ಲ ಕಾಣವುದೊಂದೇ ಸತ್ಯದರ್ಶನ ಎಂದು (ಪು. ೩೪೩. ಎಂ.ವಿ.ಸೀ. ಸಮಗ್ರ ಸಂಪುಟ (೩) ಸಂ.) ಮಧುಸೂದನ್ ಎಂದಿದ್ದಾರೆ.

ಶ್ರೀರಾಮಕೃಷ್ಣ ಪರಮಹಂಸರು

ಎಂ.ವಿ.ಸೀ. ಅವರು ಬರೆದಿರುವ ೧೬ ಪುಟಗಳ ಜೀವನ ಚರಿತ್ರೆ ರೋಮೇರೋಲಾ ಅವರು ಬರೆದ ಗ್ರಂಥದ ಸಾರಸಂಗ್ರಹ ಇದು. ೧೯೨೮-೨೯ರ ಅವಧಿಯಲ್ಲಿ ರಚಿತವಾದುದು. ೧೯೯೦ ರಲ್ಲಿ ಮುದ್ರಿತವಾಗಿದೆ. ಸಾರವತ್ತಾದ ಒಂದು ದೀರ್ಘ ಲೇಖನ ಈ ಗ್ರಂಥ ಎನ್ನಬಹುದು. ಸಾಮಾನ್ಯರಿಗೆ ವಿದ್ಯಾರ್ಥಿಗಳಿಗೆ ಶ್ರೀ ರಾಮಕೃಷ್ಣ ಪರಮಹಂಸರ ಪರಿಚಯ ಸುಲಭವಾಗಿ ಈ ಗ್ರಂಥ ಮಾಡಿಕೊಡುತ್ತದೆ. (ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟಗಳಲ್ಲಿ ೮ನೇ ಸಂಪುಟಕ್ಕೆ ಸೇರಬೇಕಾದದ್ದು ಸಂಪುಟ ೩ ರಲ್ಲಿ ಸೇರಿದೆ).

ಆತ್ಮಕಥೆ

ಕಂಡವರ ಕಥೆ ಬರೆದರೆ ಜೀವನ ಚರಿತ್ರೆ, ತಮ್ಮ ಕಥೆಯನ್ನು ತಾವೇ ಬರೆದುಕೊಂಡರೆ ಆತ್ಮಕಥೆ. ಕಂಡವರ ಜೀವನದ ಒಂದು ಮುಖವನ್ನು ಸಾಂಕೇತಿಕವಾಗಿ ಅರ್ಥಗರ್ಭಿತವಾಗಿ ಚಿತ್ರಿಸಿದರೆ ಸಣ್ಣಕಥೆ. ವಾಚ್ಯವಾಗಿ ಚಿತ್ರಿಸಿದರೆ ವ್ಯಕ್ತಿಚಿತ್ರ, ವ್ಯಕ್ತಿಯ ಗುಣ ಪ್ರಸಂಗವನ್ನು ಮನಸ್ಸಿನಲ್ಲಿಟ್ಟುಕೊಂಡು ಬೇರೆ ರೂಪದ ಗದ್ಯದಲ್ಲಿ ಬರೆದರೆ ಪ್ರಬಂಧ. ಸಂಭಾಸಣೆ ರೂಪದಲ್ಲಿ ಬರೆದರೆ ನಾಟಕ. ಇಡೀ ಜೀವನವನ್ನೇ ಕಥಾ ರೂಪದಲ್ಲಿ ಬರೆದರೆ ಕಾದಂಬರಿ. ಒಟ್ಟಿನಲ್ಲಿ ಮನುಷ್ಯನ ಬಾಳಿನ ವಿವಿಧ ಮುಖಗಳ ಚಿತ್ರಣ ಸಾಹಿತ್ಯ ಎಂಬ ಮಾತು ಅರ್ಥವತ್ತಾದುದು. ನಾಟಕ, ಕಾವ್ಯ, ಜೀವನ ಚರಿತ್ರೆ, ಪ್ರಬಂಧ, ವಿಮರ್ಶೆ ಬರೆಯಲು ವಿಶಿಷ್ಟ ಬರಹ ಸಿದ್ಧಿಸಬೇಕು. ಆತ್ಮಕಥೆ ಬರೆಯಲು ಪ್ರಾಮಾಣಿಕತೆ ಇರಬೇಕು. ಲೋಕಕ್ಕೆ ನೀತಿಹೇಳಿ ಮಾದರಿ ಆಗುವ ನಡೆ ನುಡಿ ಒಂದಾದ ಜೀವನ ಇರಬೇಕು. ಕನ್ನಡಿಯಲ್ಲಿ ನಮ್ಮನ್ನು ನಾವೇ ನೋಡಿಕೊಂಡಂತೆ ಬರೆದರೆ ಆತ್ಮಕಥೆ. ಕ್ಯಾಮರಾದಲ್ಲಿ ಫೋಟೋ ತೆಗೆದಂತೆ ಚಿತ್ರಕಲಾವಿದ ಚಿತ್ರ ಬರೆದಂತೆ ವರ್ಣರಂಜಿತವಾಗಿ ಚಿತ್ರಿಸಿದರೆ ಜೀವನಚರಿತ್ರೆ, ಜೀವನ ಚರಿತ್ರೆಯನ್ನು ಕಂಡವರದನ್ನೆ ಅನೇಕರು ಬರೆದಿದ್ದಾರೆ. ಆತ್ಮಕಥೆಯನ್ನು ಕೆಲವರೇ ಬರೆದಿದ್ದಾರೆ. ಆ ಪೈಕಿ ಮಾಸ್ತಿ ಭಾವ, ಭೈರಪ್ಪನವರ ಭಿತ್ತಿ ನವರತ್ನರಾಯರ ಕೆಲವು ನೆನಪುಗಳು, ಶಿವರಾಮ ಕಾರಂತರ ಹುಚ್ಚು ಮನಸ್ಸಿನ ಹತ್ತು ಮುಖಗಳು, ಸ್ಮೃತಿಪಟಲದಿಂದ, ಜಿ. ಪಿ. ರಾಜರತ್ನಂ ಅವರ ಹತ್ತುವರುಷ ಹೀಗೇ ಆಲೂರು ಶ್ರೀರಂಗ ಮೊದಲಾದವರ ಆತ್ಮಕಥೆಗಳು ಕನ್ನಡದಲ್ಲಿ ಪ್ರಸಿದ್ಧವಾಗಿವೆ. ಗಾತ್ರದಲ್ಲಿ ಗುಣದಲ್ಲಿ ಎಂ.ವಿ.ಸೀ. ಅವರ ಆತ್ಮಕಥೆ ಆ ಮಟ್ಟಕ್ಕೆ ಬಾರದಿದ್ದರೂ ಕೆಲವು ಗಮನಾರ್ಹ ಅಂಶಗಳು ಅದರಲ್ಲಿವೆ.

ವೈಣಿಕ ವಿದ್ವಾನ್ ಎಲ್. ರಾಜಾರಾವ್

ಈ ಗ್ರಂಥ ಐಬಿಎಚ್‌ನ ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯಲ್ಲಿ (ಪ್ರ. ೫೧೯) ಪ್ರಕಟವಾಗಿದೆ ೧೯೮೩ ರಲ್ಲಿ. ೫೨ ಪುಟಗಳ ಈ ಗ್ರಂಥದಲ್ಲಿ ವೀಣೆ ರಾಜಾರಾಯರ ವಿದ್ವತ್, ವ್ಯಕ್ತಿತ್ವ, ಜೀವನದ ಸುಂದರ ನಿರೂಪಣೆಯಿದೆ. ರಾಜಾರಾಯರ ಆತ್ಮೀಯತೆ ಲೇಖಕರಿಗೆ ಎಷ್ಟಿದೆ ಎಂದರೆ ಅವರ ಬಗ್ಗೆ ಬರೆಯುತ್ತ ತಮ್ಮ ಕಥೆಗೆ ಇಳಿದುಬಿಡುತ್ತಾರೆ. ತೃತೀಯ ಪುರುಷ ನಿರೂಪಣೆಯಿಂದ ಪ್ರಥಮ ಪುರುಷ ನಿರೂಪಣೆಗೆ ಇಳಿದುಬಿಡುತ್ತಾರೆ. ಉದಾಹರಣೆಗೆ ಈ ಮಾತನ್ನು ನೋಡಬಹುದು (ಪುಟ ೫) "ನಮ್ಮ ರಾಜ ಬೆಳೆದಿದ್ದು ಇಂಥಾ ಸಂಗೀತ ವಾತಾವರಣದಲ್ಲಿ ಈ ಪುಸ್ತಕದ ಲೇಖಕನೂ ಆ ಗೋಷ್ಠಿಗಳ ಸ್ವರೂಪವನ್ನು ಬಲ್ಲವನಾದ್ದರಿಂದ......." ವೈಯಕ್ತಿಕ ಟೀಕೆಗಳನ್ನು ಅನಗತ್ಯವಾಗಿ ಸೇರಿಸಿದ್ದಾರೆ ಆತ್ಮೀಯತೆ ಕಾರಣದಿಂದ. ಉದಾಹರಣೆಗೆ (ಪುಟ ೫೨).....ಅವರಿಗೆ ೩ನೇ ಮದುವೆ ೪೦ನೇ ವಯಸ್ಸಿನಲ್ಲಿ ಆಯಿತು. ೧೫ ವರ್ಷಗಳಲ್ಲಿ ೧೦ ಮಕ್ಕಳ ತಂದೆ ಆದರು; ಎಲ್ಲ ಭಾಗ್ಯಗಳ ಜತೆಗೆ ಸಂತಾನ ಭಾಗ್ಯ ಸ್ವಲ್ಪ ಮಿತಿಮೀರಿಯೇ ದೊರೆಯಿತು ಎನ್ನಬೇಕು..." ವಿಷಯ ನಿರೂಪಣೆ ಹೇಗೇ ಇರಲಿ. ಭಾಷಾ ಶೈಲಿ ಕಣ್ಣಿಗೆಕಟ್ಟುವಂತಿದೆ. ರಾಜಾರಾಯರ ತಂದೆ ಲಕ್ಷ್ಮಿನಾರಣಪ್ಪನವರು ಮೈಸೂರಿನ ಬಂಡಿಕೇರಿಯಲ್ಲಿದ್ದಾಗ ಆ ಮನೆಯ ಪರಿಸರದ ವರ್ಣನೆಯನ್ನು ಎಂ.ವಿ.ಸೀ. ಮಾಡಿರುವುದು ಹೀಗೆ (ಪು. ೫-೬) ಸುತ್ತಮುತ್ತ ಗೊಲ್ಲರ ಹಟ್ಟಿಗಳು ; ಯಾವ ಗಲ್ಲಿ ಹೊಕ್ಕರೂ ಅಲ್ಲಿ ಓಡಾಡುವ ಜನಕ್ಕಿಂತ, ಓಡಾಡುವ, ಮಲಗಿ ಮೆಲಕುಹಾಕುವ ಹಸುಕರುಗಳು ಅಡ್ಡನಿಂತ ಮಹಿಷಪುರಿಯ ಮಹಿಷಗಳು : ಅರ್ಧ ಮೇದ ಜೋಳದ ಕಡ್ಡಿಯ ನೆಲ್ಲು ಹುಲ್ಲಿನ ಕಸಕಡ್ಡಿಯ ಹರವು ಗೋಮಯ, ಗಂಜಳಗಳ ಪರಿಮಳ ; ಕೆಸರಿನಲ್ಲಿ ಕಮಲ ಹುಟ್ಟುವಂತೆ ಕಲಾಕುಸುಮ ಅರಳುವುದು ಇಂಥಲ್ಲಿಯೇ ಎಂದು ಕಾಣುತ್ತದೆ. ಈ ಭಾಗ ಮೈಸೂರಿನಲ್ಲಿ ಬಂಡಿಕೇರಿ ಎಂಬ ಪ್ರಸಿದ್ಧವಾಗಿತ್ತು". ಹೀಗೆ ಪರಿಸರವನ್ನು ವಿವರಿಸಿ ಇಲ್ಲಿ ೨೫-೩-೧೯೦೯ ರಲ್ಲಿ ಭೈರವಿ ಲಕ್ಷ್ಮಿನಾರಾಣಪ್ಪನವರ ೩ನೇ ಮಗನಾಗಿ ರಾಜಾರಾಯರು ಜನಿಸಿದರು ಎನ್ನುತ್ತಾರೆ, ಲೇಖಕರು. ವೀಣೆ ರಾಜಾರಾಯರ ಬಗ್ಗೆ ಬಂದ ಮೊದಲ ಜೀವನ ಚರಿತ್ರೆ ಇದಾದ್ದರಿಂದ ಇದಕ್ಕೆ ಸಂಗೀತ ಪ್ರಪಂಚದಲ್ಲಿ ವಿಶೇಷ ಮಹತ್ವವಿದೆ.

ಯುಧಿಷ್ಠಿರ ಮತ್ತು ರನ್ನ (ಮಕ್ಕಳ ಗ್ರಂಥಗಳು)

ಯುಧಿಷ್ಠಿರ ಪುಸ್ತಕದಲ್ಲಿ ಧರ್ಮರಾಯನ ವ್ಯಕ್ತಚಿತ್ರಣವಿದೆ. ಮಹಾಭಾರತದಲ್ಲಿ ಬರುವ ಯಕ್ಷಪ್ರಶ್ನೆಯ ಪ್ರಸಂಗ ಮತ್ತು ಸ್ವರ್ಗಾರೋಹಣ ಪ್ರಸಂಗವನ್ನು ಪುಟ್ಟ ಪುಟ್ಟ ವಾಕ್ಯಗಳಲ್ಲಿ ಮಕ್ಕಳಿಗೆ ತಿಳಿಯುವಂತೆ ಬರೆದಿದ್ದಾರೆ. ನಮ್ಮ ನಾಡಿನ ಮಹಾಕಾವ್ಯಗಳ ಭಾಗಗಳನ್ನು ಮಕ್ಕಳಿಗೆ ಹೇಗೆ ತಿಳಿಸಬೇಕು ಎಂಬುದಕ್ಕೆ ಈ ಪುಟ್ಟ ಗ್ರಂಥ ಒಂದು ಮಾದರಿ ಅಗಿದೆ.

ರನ್ನ ಗ್ರಂಥವೂ ೪೦ ಪುಟಗಳ ಪುಟ್ಟಗ್ರಂಥ. ವಿದ್ಯಾರ್ಥಿಗಳಿಗಾಗಿ ಬರೆದದ್ದು. ನಮ್ಮಲ್ಲಿ ಮಕ್ಕಳ ಸಾಹಿತ್ಯವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮಕ್ಕಳ ಯಾವ ಯಾವ ವಯಸ್ಸಿಗೆ ಯಾವ ಮಟ್ಟದಲ್ಲಿ ಬರೆಯಬೇಕೆಂದು ತಿಳಿದು ಬರೆದವರು ಕೆಲವೇ ಮಂದಿ. ದೇವುಡು, ಹೊಯ್ಸಳ, ಪಂಜೆ, ಜಿ.ಪಿ. ರಾಜರತ್ನಂ ಅಂಥವರು. ನರ್ಸರಿ ಮಟ್ಟದ (೬ ವರ್ಷದವರೆಗೆ) ಸಾಹಿತ್ಯ ; ಪ್ರಾಥಮಿಕ ಶಾಲಾಮಟ್ಟದ (೬-೧೨) ವಯಸ್ಸಿನವರೆಗೆ) ಕಿಶೋರ ಸಾಹಿತ್ಯ ; ಹೈಸ್ಕೂಲ್ ಮಟ್ಟದ (೧೨ ರಿಂದ ೧೮ರ ವರೆಗೆ) ವಿದ್ಯಾರ್ಥಿ ಸಾಹಿತ್ಯ ಅಥವಾ ಯುವಕ ಸಾಹಿತ್ಯ ಎಂದು ತಿಳಿದು ಅವರವರ ಮಟ್ಟಕ್ಕೆ ತಕ್ಕ ಭಾಷೆ, ವಿಷಯ ನಿರೂಪಣೆ ಮಾಡಬೇಕು ಎಂದು ದೇವುಡು ಹೇಳುತ್ತಿದ್ದರು. ರನ್ನ ಕೃತಿ ಮಕ್ಕಳ ಸಾಹಿತ್ಯ (೧೨ರ ವರೆಗೆ) ಅಲ್ಲ ೧೨ ರಿಂದ ೧೮ರ ವರೆಗಿನ ಟೀನ್ ಏಜರ್ಸ್ (ಹದಿವಯಸ್ಕರು) ಎಂದು ಕರೆಯಲ್ಪಡುವ ವಿದ್ಯಾರ್ಥಿಗಳಿಗೆ (ಹೈಸ್ಕೂಲ್, ಪಿ.ಯು.ಸಿ.) ರಚಿಸಿದ ವಿದ್ಯಾರ್ಥಿ ಸಾಹಿತ್ಯ ರನ್ನ ಗ್ರಂಥ ಇದಕ್ಕೆ ಒಂದು ಉದಾಹರಣೆಯನ್ನು ಈ ಗ್ರಂಥದಿಂದ ಕೊಡಬಹುದು. ಗದಾಯುದ್ಧದಲ್ಲಿ ಅಜಿತ ಪುರಾಣದಲ್ಲಿರುವಂತೆ ಕಥೆಗ ಬೇಕಿಲ್ಲದ ವರ್ಣನೆಗಳ ಹಾವಳಿಯಿಲ್ಲ; ಓದುಗರು ಮತವಿಚಾರ ಶಾಸ್ತ್ರದ ಮರುಭೂಮಿಯಲ್ಲಿ ಪ್ರಯಾಣ ಮಾಡಿ ಬಳಲಬೇಕಾಗಿಲ್ಲ; ಮೊದಲಿಂದ ಕಡೆಯವರೆಗೆ ವೀರ, ಕರುಣ, ರೌದ್ರ, ಅದ್ಭುತ ರಸಗಳ ಪ್ರವಾಹದಲ್ಲಿ ರನ್ನ ನಮ್ಮನ್ನು ತೇಲಿಸಿಕೊಂಡು ಹೋಗುತ್ತಾನೆ; ರಸಘಟ್ಟಿ ಎಂಬ ಮಾತು ಅಜಿತಪುರಾಣಕ್ಕಿಂತ ಹೆಚ್ಚಾಗಿ ಈ ಕಾವ್ಯಕ್ಕೆ ಸಲ್ಲುತ್ತದೆ. (ಪುಟ ೩೦).

ಹೂವಾಡಿಗಿತ್ತಿಯಲ್ಲಿ ಕವನಗಳನ್ನು ಮಕ್ಕಳಿಗಾಗಿ ಸೊಗಸಾಗಿ ಬರೆದ ಎಂ.ವಿ.ಸೀ. ಅವರ ಈ ಗ್ರಂಥವನ್ನು ಮಕ್ಕಳಿಗಾಗಿ ಬರೆದಿಲ್ಲ ಎನಿಸುತ್ತದೆ. ಆದರೆ ಮಕ್ಕಳ ಸಾಹಿತ್ಯ ವಿಭಾಗದಲ್ಲಿ ಇದು ಪರಿಗಣಿತವಾಗಿದೆ.

ಪ್ರತಿಮಾಗೃಹ

ವ್ಯಕ್ತಿತ್ವದ ವಿಶಿಷ್ಟ ಮುಖಗಳನ್ನು ಎತ್ತಿ ತೋರಿಸುವುದು ವ್ಯಕ್ತಿ ಚಿತ್ರಗಳ ವೈಶಿಷ್ಟ್ಯ. ಕನ್ನಡದಲ್ಲಿ ವ್ಯಕ್ತಿಚಿತ್ರಗಳ ಸರಮಾಲೆಯನ್ನು ಮೊದಲಿಗೆ ಬರೆದವರಲ್ಲಿ ಅನಕೃ, ಭಾರದ್ವಾಜ್, ಸಿದ್ಧವನಹಳ್ಳಿ ಕೃಷ್ಣಶರ್ಮ, ಎಚ್ಚೆಸ್ಕೆ ಮುಖ್ಯರು. ಅಲ್ಲಿಂದ ಈಚೆಗೆ ಅನೇಕರು ವ್ಯಕ್ತಿಚಿತ್ರಗಳನ್ನು ಬರೆದಿದ್ದಾರೆ ; ಬರೆಯುತ್ತಿದ್ದಾರೆ. ಸುಮಾರು ೩೦ಕ್ಕೂ ಹೆಚ್ಚಿನ ವ್ಯಕ್ತಿಚಿತ್ರಗಳ ಸಂಗ್ರಹದ ಪುಸ್ತಕಗಳು ಕನ್ನಡದಲ್ಲಿ ಬಂದಿವೆ. ಎಂ.ವಿ.ಸೀ. ಅವರು ಮೊದಲಿಗೆ ವ್ಯಕ್ತಚಿತ್ರಗಳನ್ನು ಬರೆದವರಲ್ಲಿ ಒಬ್ಬರು. 'ಪ್ರತಿಮಾಗೃಹ' ಗ್ರಂಥದಲ್ಲಿ ಕನ್ನಡ ಪ್ರಸಿದ್ಧ ವಿದ್ವಾಂಸರ ಕವಿಗಳ ಪ್ರತಿಭಾ ಮುಖದ ಪರಿಚಯವಿದೆ. ಈ ವ್ಯಕ್ತಿಚಿತ್ರಗಳ ಗ್ರಂಥದಲ್ಲಿ ವ್ಯಕ್ತಿಗಳ ಹೆಸರನ್ನು ಕೆಲವೆಡೆ ಸೂಚಿಸಿದ್ದಾರೆ ಮತ್ತೆ ಕೆಲವೆಡೆ ವಿಶೇಷಣಗಳಿಂದ ಶೀರ್ಷಿಕೆ ಕೊಟ್ಟಿದ್ದಾರೆ. ತಕ್ಷಣ ಓದುಗನಿಗೆ ಲೇಖನ ಓದದ ಹೊರತು ಯಾರು ಎಂದು ತಿಳಿಯುವುದಿಲ್ಲ. ಉದಾಹರಣೆಗೆ ಈ ಶೀರ್ಷಿಕೆಗಳನ್ನು ಗಮನಿಸಿ :

೧. ನುಡಿನಾಡಿಯ ಗೊಮ್ಮಟ (ಎಂ. ಗೋವಿಂದ ಪೈ).
೨. ವಿದ್ಯಾರ್ಥಿಯಾಗಿ ನಾನು ಕಂಡಂತೆ (ಬಿ.ಎಂ.ಶ್ರೀ.)
೩. ಗುರುವಿನ ಒಂದು ಭಾವಚಿತ್ರ (ಟಿ. ಎಸ್. ವೆಂಕಣ್ಣಯ್ಯ)
೪. ಗುರುಸ್ಥಾನೀಯರು (ಮಾಸ್ತಿ)
೫. ಕಲಾ ತಪಸ್ವಿ (ಕೆ. ವೆಂಕಟಪ್ಪ)
೬. ಸ್ನೇಹ–ಸಾಹಿತ್ಯ ಪರಿಚಯ (ಜಿ. ಪಿ. ರಾಜರತ್ನಂ)

ಉಳಿದ ವ್ಯಕ್ತಿಚಿತ್ರಗಳ ಶೀರ್ಷಿಕೆಗಳಲ್ಲಿ ವ್ಯಕ್ತಿಗಳ ಹೆಸರನ್ನು ಹೇಳಿದ್ದಾರೆ :

೧. ಪೂಜ್ಯ ಎ. ಆರ್. ಕೃ ಅವರನ್ನು ಕುರಿತು ನಾಲ್ಕು ನೆನಪಿನ ಮಾತು.
೨. ನನ್ನನ್ನು ಕಂಡರಿಸಿದ ರೂವಾರಿ ಡಿ.ವಿ.ಜಿ.
೩. ನಾನು ಕಂಡ ತೀ.ನಂ.ಶ್ರೀ
೪. ಕಾಂಚಾಣ ಕವಿ ಬೇಂದ್ರೆ.
೫. ವಿ.ಸೀ. ನಾನು ತಿಳಿದ ಹಾಗೆ.

ಈ ಲೇಖನಗಳಲ್ಲಿ ಕಂಡುಬರುವ ಲೇಖಕರ ಅನುಭವ ವಿಶಿಷ್ಟವಾಗಿದೆ.

ಇಲ್ಲಿ ಬಂದ ಲೇಖನಗಳೆಲ್ಲ ಈಗಾಗಲೇ ಪತ್ರಿಕೆಗಳಲ್ಲಿ ವಿವಿಧ ಸಂಭಾವನೆ ಗ್ರಂಥಗಳಲ್ಲಿ ಬಂದಿವೆ. ಅವುಗಳಲ್ಲಿ ಆಯ್ದ ಲೇಖನಗಳ ಸಂಗ್ರಹ ಈ ಗ್ರಂಥವಾಗಿದೆ. ಎಂ.ವಿ.ಸೀ. ಅವರ ನಿಧನದ ನಂತರ ಪ್ರಕಟವಾಗಿದೆ. ಈ ರೀತಿ ಸಂಗ್ರಹವನ್ನು ತರಲು ಅವರೇ ನಿರ್ಧರಿಸಿ ಗುರುಹಿರಿಯರು ಗೆಳೆಯರು ಎಂದು ಹೆಸರಿಟ್ಟಿದ್ದರು. ಆಮೇಲೆ ಪ್ರತಿಮಾಗೃಹ ಎಂದು ಅವರು ಬದಲಿಸಿದ್ದರು. ಪ್ರತಿ ವ್ಯಕ್ತಿಚಿತ್ರ ಕುರಿತು ಒಂದು ಕವನವನ್ನೂ ಆ ವ್ಯಕ್ತಿಯ ಭಾವಚಿತ್ರವನ್ನೂ ಸೇರಿಸಬೇಕೆಂದೂ ಪ್ರಯತ್ನಿಸುತ್ತಿದ್ದರು. ನಿಜಕ್ಕೂ ಇದು ವಿನೂತನ ಚಿಂತನೆ ಆಗಿತ್ತು. ಈ ಸಂಗ್ರಹದಲ್ಲಿ ದಿವಂಗತರಾದವರ ಬಗೆಗಿನ ವ್ಯಕ್ತಿಚಿತ್ರಗಳನ್ನು ಮಾತ್ರ ಕೊಡಲು ಉದ್ದೇಶಿಸಿದ್ದರಿಂದ ಪ್ರತಿಮಾಗೃಹವೆಂಬ (ಭಾಸನ ಪ್ರತಿಮಾ ನಾಟಕದ ಸ್ಫೂರ್ತಿ) ಅಥಪೂರ್ಣ ಹೆಸರನ್ನು ಇಟ್ಟಿದ್ದರು. ಈ ಕೃತಿಯಲ್ಲಿ ಹತ್ತು ಜನರು ಸಾಹಿತ್ಯ–ಕಲಾಕ್ಷೇತ್ರಗಳಲ್ಲಿ ದಿಗ್ಗಜರೆನ್ನಿಸಿಕೊಂಡಿದ್ದಾರೆ. ಈ ವ್ಯಕ್ತಿಚಿತ್ರಗಳ ವ್ಯಕ್ತಿಗಳಲ್ಲಿ ಕೆಲವರನ್ನು ಹತ್ತಾರುಬಾರಿ ಕಂಡಿದ್ದಾರೆ. ಅವರ ಬಳಿಯಲ್ಲಿ ಕೆಲಸ ಮಾಡಿ ಅವರಿಂದ ಬಾಳಿಗೆ ಬೆಳಕನ್ನು ಪಡೆದಿದ್ದಾರೆ. ಮತ್ತೆ ಕೆಲವರನ್ನು ಒಂದೆರಡು ಬಾರಿ ಅಷ್ಟೆ ಕಂಡಿದ್ದಾರೆ ಎರಡುಸಲವಷ್ಟೆ ಗೋವಿಂದ ಪೈ ಅವರನ್ನು ಎಂ.ವಿ.ಸೀ. ಕಂಡಿದ್ದಾರೆ. ಮೊದಲಸಲ ಪರಿಷತ್ತಿನಲ್ಲಿ ಎಂ.ವಿ.ಸೀ. ಸಹಾಯಕ ಕಾರ್ಯದರ್ಶಿ ಆದಾಗ (೧೯೪೧). ಆಗ ಅವರ ರೇಖಾಚಿತ್ರ ಪಡೆದು ಅವರಿಂದಲೇ ಸಹಿಪಡೆದಿದ್ದರು. ಎರಡನೇಬಾರಿ ೧೯೫೧ ರಲ್ಲಿ ಮಾಸ್ತಿ ಅವರ ಮನೆಯಲ್ಲಿ ಕಂಡಿದ್ದರು. ಆ ಸಮಯದಲ್ಲಿ ಎಂ.ವಿ.ಸೀ. ಅವರ ಮನೆಗೂ ಬಂದಿದ್ದರು. ಹಲವಾರು ಬಾರಿ ಪತ್ರವ್ಯವಹಾರ ಮಾಡಿದ್ದರು ಮಾತು, ಚಿತ್ರ ಎರಡೂ ಮಾಧ್ಯಮಗಳಲ್ಲೂ ಭಾವನಿರೂಪಣೆಯನ್ನೂ ವ್ಯಕ್ತಿತ್ವ ನಿರೂಪಣೆ ಮಾಡಲು ಎಂ.ವಿ.ಸೀ. ಎಷ್ಟು

ಸಮರ್ಥರಾಗಿದ್ದರು ಎಂಬುದನ್ನು ಈ ಲೇಖನ ತಿಳಿಸುತ್ತದೆ. ಗೋವಿಂದ ಪೈ ಅವರನ್ನು ಕುರಿತು ಅವರು ನೀಡುವ ಶಬ್ದಚಿತ್ರ ಇದು.

"ಗೋವಿಂದ ಪೈ ಅವರನ್ನು ನೆನೆದಾಗಲೆಲ್ಲ ನನ್ನ ಮುಂದೆ ಬರುವುದು ಅವರ ಭವ್ಯ ವ್ಯಕ್ತಿತ್ವ, ಅವರ ಸ್ಥೂಲ ಶರೀರ. ಸ್ಥೂಲತೆಗೆ ತಕ್ಕ ಎತ್ತರ ; ಎತ್ತರಕ್ಕೆ ತಕ್ಕ ದುಂಡು ಮುಖ, ಮುಖದ ಮಾಟಕ್ಕೆ ತಕ್ಕ ತುಂಬುಗೆನ್ನೆ ; ಅಗಲ ಹಣೆ, ಹಣೆಯ ಅಂಚಿನಲ್ಲಿ ತೂಗುವ ತುರುಗಲು ಹುಬ್ಬು ; ಮುಂದಕ್ಕೆ ಚಾಚಿದ ಗೆಡ್ಡೆಮೂಗು ; ಮೇಲ್ತುಟಿಯನ್ನು ಮುಚ್ಚಲು ಎಳಸಾದ ಉಬ್ಬಿ ಬಾಗಿದ ಮೀಸೆ ; ಉಪ್ಪು ಮೆಣಸ ಬೆರೆಸಿದ ಬಣ್ಣದ್ದು ; ಕ್ರಾಪು ಕತ್ತರಿಸಿದ ನರೆತ ಕೂದಲಿನ ದಪ್ಪ ತಲೆಯ ಮೇಲೆ ಸಣ್ಣದಾಗಿ ಕಾಣುವ ಬಿಳಿಯ ಖಾದಿ ಟೊಪ್ಪಿಗೆ, ಗುಜ್ಜುಗೊರಳು ; ಉಬ್ಬಿದೆದೆ, ತೊಟ್ಟಿದ್ದು ಉಟ್ಟಿದ್ದು ಒರಟು ಖಾದಿ ಬಟ್ಟೆಯ ಬನೀನು, ಜುಬ್ಬ ಅಥವಾ ಮೋಟು ಷರಟು (ಪುಟ ೧ ಪ್ರತಿಮಾಗೃಹ).

ಕಣ್ಣೆದುರಿಗೆ ಒಬ್ಬ ವ್ಯಕ್ತಿಯನ್ನುಸಚಿತ್ರವಾಗಿ ವರ್ಣಿಸುವ ಹಾಗೆಯೇ ಒಬ್ಬ ವ್ಯಕ್ತಿಯ ಕಾರ್ಯ ವೈಖರಿಯನ್ನು ಬಣ್ಣಿಸಬಲ್ಲರು "ಎಷ್ಟೇ ಸಣ್ಣ ಕೆಲಸವಾಗಲಿ ಅದನ್ನು ಹೊತ್ತಿಗೆ ಗೊತ್ತಿಗೆ ಮಾಡಬೇಕು, ಅವರದ್ದು ಮರೆವಿನ ಸ್ವಭಾವ ಅಲ್ಲ ; ಆದರೂ ಸ್ಮರಣಶಕ್ತಿಯ ಮೇಲೆ ಎಲ್ಲ ಭಾರವನ್ನೂ ಹಾಕಕೂಡದು ಎಂದು ಅವರ ಅನುಭವಸಿದ್ಧವಾದ ಅಭಿಪ್ರಾಯ. ಆದರೆ ಕಾರ್ಯಕ್ರಮವನ್ನು ನೆನಪು ಮಾಡಿಕೊಡುವ ಆಲೇಖ್ಯಪಟ್ಟಿ ಅವರ ಮೇಜಿನ ಮೇಲೆ ಇರುತ್ತಿರಲಿಲ್ಲ ; ಅವರ ಜೇಬಿನಲ್ಲಿ ಸದಾ ಒಂದು ಬಿಳಿಯ ಕಾರ್ಡು ಅದರ ಮೇಲೆ ಮಾಡಬೇಕಾದ ಕೆಲಸಗಳನ್ನು ಬರೆದಿಟ್ಟುಕೊಂಡಿರುತ್ತಿದ್ದರು. ಪ್ರತಿ ಕಾರ್ಯಸೂಚಿಯನ್ನೂ ಒಂದು ಚೌಕಳಿ ಹಾಕಿ ಅದರಲ್ಲಿ ಗುರುತಿಸುತ್ತಿದ್ದರು. ಕೆಲಸ ಮಾಡಿಯಾದಮೇಲೆ ಚೌಕಳಿಯನ್ನು ಕ್ರಾಸ್ ಮಾಡುತ್ತಿದ್ದರು. ಈ 'ಕೆಲಸ ಮಾಡಿಯಾಯಿತು' ಎಂದು ಎರಡೂ ಕಡೆಯೂ ಕಾಡು ಭರ್ತಿಯಾದಮೇಲೆ ಕ್ರಾಸ್ ಮಾಡದೆ ಉಳಿದಿದ್ದ ಕಾರ್ಯ ಸೂಚಿಗಳನ್ನು ಹೊಸಕಾರ್ಡಿಗೆ ವರ್ಗಾಯಿಸಿಕೊಂಡು ಅದನ್ನು ಬಳಿಯಲ್ಲಿ ಇಟ್ಟುಕೊಳ್ಳುತ್ತಿದ್ದರು." (ಪುಟ ೩೯) ನಿಕಟವರ್ತಿಗಳಿಗಾರಿಗೂ ತಿಳಿಯದ ಸಂಗತಿಯನ್ನು ಎಂ.ವಿ.ಸೀ. ಇಲ್ಲಿ ಹೇಳಿದ್ದಾರೆ.

ಈ ವ್ಯಕ್ತಚಿತ್ರಗಳ ವಿಶೇಷವೆಂದರೆ ಈ ವ್ಯಕ್ತಿಗಳ ಬಗ್ಗೆ ಕೆಲವು ವಿಶಿಷ್ಟ ವ್ಯಕ್ತಿತ್ವದ ಸಂಗತಿಗಳನ್ನು (ಮತ್ತೆಲ್ಲೂ ಸಿಗದ ಸಂಗತಿಗಳನ್ನು) ತಿಳಿಸುತ್ತಾರೆ. ಈ ಕೆಳಕಂಡ ನಿದರ್ಶನಗಳನ್ನು ಗಮನಿಸಿದರೆ ತಿಳಿಯುತ್ತದೆ. ನಮ್ಮಲ್ಲಿ ಅನೇಕರು ಬರೆದ ವ್ಯಕ್ತಚಿತ್ರಗಳಲ್ಲಿ ಸಾಮಾನ್ಯ ಸಂಗತಿಗಳೇ ಇದ್ದು ಈ ರೀತಿಯ ಅಪರೂಪದ ವಿವರಗಳು ಸಿಗುವುದಿಲ್ಲ. ಗೋವಿಂದ ಪೈ ಅವರ ಬಗ್ಗೆ ಬರೆಯುತ್ತಾ ಹೇಳುತ್ತಾರೆ. "೧೯೪೪ ಏಪ್ರಿಲ್ ೧೨ ರಂದು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ವಸಂತ ಸಾಹಿತ್ಯೋತ್ಸವದಲ್ಲಿ ಪಾಲ್ಗೊಂಡು ಒಂದು ಉಪನ್ಯಾಸ ನೀಡಲು ಬೆಂಗಳೂರಿಗೆ ಬಂದಿದ್ದರು.ಅವರು ಉಪನ್ಯಾಸ ಮಾಡುವ ಮುನ್ನಾದಿನ "ಪರಿಷತ್ತಿನ ಸಭಾಂಗಣದ

ಮಧ್ಯಭಾಗದಲ್ಲಿ ಪೂರ್ವಾಭಿಮುಖವಾಗಿ ಸಜ್ಜುಗೊಳಿಸಿದ್ದ ವೇದಿಕೆಯ ಮೇಲೆ ನಿಂತು ಉಪನ್ಯಾಸ ಮಾಡುತ್ತಿದ್ದವರ ಎದುರಿನಲ್ಲಿ ಗೋವಿಂದ ಪೈ ಜಮಖಾನದ ಮೇಲೆ ಸಾಮಾನ್ಯ ಶ್ರೋತೃವಿನಂತೆ ಪದ್ಮಾಸನಾಸೀನರಾಗಿ ಕುಳಿತಿದ್ದರು. ಆಗಿನ ದಿನಗಳಲ್ಲಿ ಈಗಿನಂತೆ ಶ್ರೋತೃಗಳಿಗೆ ಕುರ್ಚಿಗಳನ್ನು ಒದಗಿಸಿರಲಿಲ್ಲ" (ಪು.೧) ಈ ಜಮಖಾನದ ಪರಿಸ್ಥಿತಿ ಎಂ.ಆರ್.ಶ್ರೀ ಕಾಲದಲ್ಲೂ ಇತ್ತು. ಇನ್ನೊಂದು ಪ್ರಸಂಗ ಹೀಗಿದೆ :

ಬಿ.ಎಂ.ಶ್ರೀ. ಬಗ್ಗೆ ಬರೆಯುತ್ತಾ ಹೇಳುತ್ತಾರೆ. ೧೯೩೮ ರ ಮಾರ್ಚಿ ತಿಂಗಳಿನಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆ ಪಾಠಮಾಡಿದರು. ಸೆಂಟ್ರಲ್ ಕಾಲೀಜಿನಲ್ಲಿ ಮಹಡಿ ಮೇಲಿನ ಉತ್ತರ ದಿಕ್ಕಿನ ಕಡೆಯ ಮೂಲೆ ಕೋಣೆಯಲ್ಲಿ ಪಾಠ ನಡೆಯಿತು. ಏಳು ದಿನಗಳ ಕಾಲ ಪ್ರತಿದಿನ ೧೧ ಗಂಟೆಯಿಂದ ೫ ಗಂಟೆವರೆಗೂ ಅವಿಶ್ರಾಂತ ೬ ಗಂಟೆಗಳ ನಿರಂತರ ಉಪನ್ಯಾಸ" ಆ ಉಪನ್ಯಾಸಗಳನ್ನು ಕೇಳಿದ ಎಂ.ವಿ.ಸೀ. ಈ ಸಂಗತಿ ಬಗ್ಗೆ ಹೇಳುವ ಮಾತು. ಕನ್ನಡ ಕಾವ್ಯಾ ಕಾವೇರಿಯ ಪ್ರವಾಹ, ರಸಸಮಾರಾಧನ ಸಪ್ತಾಹ.... ಜಗತ್ತಿನಲ್ಲಿ ಎಲ್ಲಿಯೇ ಆಗಲಿ ಈ ರೀತಿ ಏಳು ದಿನ ಅಖಂಡ ಪಾಠ ಪ್ರವಚನವನ್ನು ಮಾಡಿದ ದಾಖಲೆ ಇದೆಯೋ ಇಲ್ಲವೋ ನಾ ಕಾಣೆ ! ಷೇಕ್ಸ್‌ಪಿಯರಿನ ನಾಟಕವನ್ನು ಸೆಂಟ್ರಲ್ ಕಾಲೇಜಿನಲ್ಲಿ ಒಂದೇ ದಿನ ೮ ಗಂಟೆಗಳ ಕಾಲ ಮಾಡಿದರೆಂದು ಅವರ ವಿದ್ಯಾರ್ಥಿನಿ ಜಯಲಕ್ಷ್ಮಿ ಎಂಬವರು ನನಗೆ ಹೇಳಿದ್ದಾರೆ.

'ಪ್ರತಿಮಾಗೃಹ' ಓದುತ್ತಿದ್ದರೆ. ಜೀವಂತ ವ್ಯಕ್ತಿಗಳ ಪ್ರದರ್ಶನ ಶಾಲೆಯಾಗಿ ಕಾಣುತ್ತದೆ. ವರ್ಣನೆ, ಪ್ರಸಂಗಗಳ ನಿರೂಪಣಾ ವೈಖರಿ ನಮ್ಮನ್ನು ಬೆರಗು ಗೊಳಿಸುತ್ತವೆ. ಅನೇಕ ಕಡೆಗಳಲ್ಲಿ ಲೇಖಕರು ಸ್ವಾನುಭವವನ್ನು ನಿರೂಪಿಸುವಲ್ಲಿಯೂ ಅವರ ಬದುಕಿನ ವೈಯಕ್ತಿಕ ಸಂಗತಿಗಳೂ ಕುತೂಹಲಕಾರಿಯಾಗಿ ನಿರೂಪಿತವಾಗಿವೆ. ನಮ್ಮಲ್ಲಿ ಅನೇಕ ಜನ ಬರೆದ ವ್ಯಕ್ತಿಚಿತ್ರಗಳಲ್ಲಿ ಲೇಖಕರ ಬದುಕಿನ ಅನುಭವಗಳು ಹೀಗೆ ನಿಕಟವಾಗಿ ನಿರೂಪಿತವಾಗಿರುವುದು ಕಂಡುಬರುವುದಿಲ್ಲ. ತೀ.ನಂ.ಶ್ರೀ.ಗೂ, ಎಂ.ವಿ.ಸೀ. ಅವರಿಗೂ ಎಂಥ ನಿಕಟಬಾಂಧವ್ಯ ಇತ್ತು ಎಂದರೆ ನಿಜಕ್ಕೂ ನಮ್ಮ ಜೀವನದಲ್ಲಿ ಅಂಥ ವ್ಯಕ್ತಿ ಸಿಗಬಾರದು ಎನ್ನಿಸುತ್ತದೆ. ನಾ ಕಂಡ ತೀ.ನಂ.ಶ್ರೀ. ಬರಹದಲ್ಲಿ ಎಂ.ವಿ.ಸೀ. ಹೇಳುತ್ತಾರೆ.

"ತೀ.ನಂ.ಶ್ರೀ. ಅವರನ್ನು, ಭೇಟಿ ಆದಾಗ ೧೯೨೭ರಲ್ಲಿ ನಾನು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ ೧೬ ವರ್ಷ ನನಗೆ, ತೀ.ನಂ.ಶ್ರೀ.ಗೆ ೨೦ ವರ್ಷ ಎಂ.ಎ. ವಿದ್ಯಾರ್ಥಿ. ಇಡೀ ಬಾಳಿನ ಉದ್ದಕ್ಕೂ ಸುಪ್ರೀಂಕೋರ್ಟು ಆಗಿದ್ದರು ನನಗೆ" ಎನ್ನುತ್ತಾರೆ ಎಂ.ವಿ.ಸೀ. ಅವರ ಗುರು-ಶಿಷ್ಯ ಸಂಬಂಧ ಕೇವಲ ಪಾಠ ಪ್ರವಚನಗಳಿಗೂ ಸೀಮಿತ ಆಗಿರಲಿಲ್ಲ. ಬಾಳಿಗೆ ಅವಿಭಾಜ್ಯ ಸಂಬಂಧ ಆಗಿತ್ತು. ಎಂ.ವಿ.ಸೀ. ಅವರ ಬಾಳಿನ ಪ್ರತಿ ಸಮಸ್ಯೆಯನ್ನು ತೀನಂಶ್ರೀ ಅವರಲ್ಲಿ ನಿವೇದನೆ ಮಾಡಿಕೊಳ್ಳುತ್ತಿದ್ದರು. ಅವರ

ಅಪ್ಪಣೆಯಂತೆ ನಡೆದುಕೊಳ್ಳುತ್ತ "ನಾನು ಬರೆದ ಚಿತ್ರಕ್ಕೆ ಏನು ಹೆಸರಿಡಬೇಕು ?-ನಾನು ಬರೆದ ಪದ್ಯ, ಕಥೆ ಪ್ರಬಂಧ ಹೇಗಿದೆ ?-ನನ್ನ ತಂದೆ ನನಗೊಂದು ಹೆಣ್ಣನ್ನು ನೋಡಿ ಒಪ್ಪಿಗೆ ಕೊಟ್ಟಿದ್ದಾರೆ. ನಾನು ಒಪ್ಪಿಕೊಳ್ಳಲೇ? ಬಿ.ಎ. ಪರೀಕ್ಷೆಗೆ ಐಚ್ಛಿಕ ವಿಷಯ ಯಾವುದನ್ನು ಆರಿಸಿಕೊಳ್ಳಲಿ? ಎಂ.ಎ. ಪಾಸಾಯಿತು,ಏನು ಮಾಡಲಿ ? ನನ್ನ ತಂದೆ ಸಾಲವನ್ನು ನನ್ನ ಪಾಲಿನದು ಮಾತ್ರ ತೀರಿಸಲೇ ? ಅಷ್ಟನ್ನೂ ತೀರಿಸಲೇ ? ಈ ಎಲ್ಲ ಸಮಸ್ಯೆಗಳಿಗೂ ತೀನಂಶ್ರೀ ಫೈನಲ್ ಆಗಿತ್ತು.ಇದರಿಂದ ತೀನಂಶ್ರೀ ಅವರ ವ್ಯಕ್ತಿತ್ವ ಏನೆಂದು ತಿಳಿಯುತ್ತದೆ. ತೀನಂಶ್ರೀ ಇವರಿಗಷ್ಟೇ ಅಲ್ಲ ಎಷ್ಟೋ ಜನ ವಿದ್ಯಾರ್ಥಿಗಳ ಪಾಲಿಗೂ ಬಾಳಿನಗುರು ಆಗಿದ್ದರು. ನನಗೆ ನೆನಪಿರುವ ಹಾಗೆ, ತೀನಂಶ್ರೀ ಅವರು ಕನ್ನಡ ನಿಘಂಟಿನ ಸಂಪಾದಕರಾಗಿದ್ದಾಗ ಸಾಹಿತ್ಯ ಪರಿಷತ್ತಿಗೆ ನಿಘಂಟು ಸಭೆಗಳಿಗೆ ಬಂದಾಗ, ಸಂಜೆ ಸಭೆ ಮುಗಿಯುವ ವೇಳೆಗೆ ಅವರ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅವರನ್ನು ಮನೆಗೆ ಕರೆದುಕೊಂಡು ಹೋಗಲು-ಗಂಡ ಮಕ್ಕಳು ಕುಟುಂಬದವರಲ್ಲಿ ಹೇಳಿಕೊಳ್ಳಲಾರದ ಸಂಕಟಗಳನ್ನು ತೀ.ನಂ.ಶ್ರೀ. ಅವರಲ್ಲಿ ತೋಡಿಕೊಂಡು ಪರಿಹಾರ ಸಮಾಧಾನ ಹೊಂದುತ್ತಿದ್ದರು. ಒಮ್ಮೆ ಅಂಥ ವಿದ್ಯಾರ್ಥಿನಿಯ ಮಗ-ನನ್ನ ಮಿತ್ರ ಹೇಳಿದ ಮಾತಿದು. ತೀನಂಶ್ರೀ ನಮ್ಮಮ್ಮನಿಗೆ ಕಾಲೇಜು ಮೇಷ್ಟ್ರು ಅಷ್ಟೇ. ಅಲ್ಲ ಬಾಳಿ ಸಂಜೀವಿನೀ ಮೇಷ್ಟ್ರು. "ಅವರು ಬಂದು ಮಾತಾಡಿ ಹೋದರೆ ನಮ್ಮಮ್ಮ ನಿಶ್ಚಿಂತೆ ಆಗುತ್ತಾರೆ. ನೆಮ್ಮದಿ ತಾಳಿ ಸಂತೋಷದಿಂದ ಇರುತ್ತಾರೆ" ಎಂ.ವಿ.ಸೀ. ಅವರು ಎಂಥ ವಾಸ್ತವದ ಚಿತ್ರಣ ಕೊಟ್ಟಿದ್ದಾರೆ ಎಂಬುದಕ್ಕಾಗಿ ಈ ಮಾತನ್ನು ಹೇಳುತ್ತಿರುವೆ. ಹೀಗೆ ಡಿ.ವಿ.ಜಿ. ವೆಂಕಣ್ಣಯ್ಯ ವೆಂಕಟಾದ್ರಿ, ಎ.ಆರ್.ಕೃ. ಬಗ್ಗೆ ಬರೆದ ವ್ಯಕ್ತಿಚಿತ್ರಗಳು ಅವರ ಜೀವನಚರಿತ್ರೆಯ ಮೆಟ್ಟಿಲುಗಳನ್ನು ಕಾಣುತ್ತೇವೆ.

ಒಬ್ಬ ವ್ಯಕ್ತಿಯ ಜೀವನದ ಏಕನಿಷ್ಠೆಯನ್ನು ಎಂ.ವಿ.ಸೀ. ಅವರು ಈ ವ್ಯಕ್ತಿ ಚಿತ್ರಗಳಲ್ಲಿ ಗುರುತಿಸುತ್ತಾರೆ. ಇದು ವ್ಯಕ್ತಿಚಿತ್ರಗಳ ವಿಶೇಷಗಳಲ್ಲಿ ಒಂದು. ವಿ.ಸೀ. ಬಗ್ಗೆ ಬರೆಯುತ್ತಾ ಹೇಳುತ್ತಾರೆ. ಅವರ ರುಮಾಲು ಮುಚ್ಚು ಕೊರಳಪಟ್ಟಿಯ, ಕೆನೆ ಬಣ್ಣದ ಅಂಗಿ ತೆಳ್ಳಗೆ ನಿರಿನಿರಿಯಾಗಿ ಚೆಲ್ಲಾಡುವ ಬಿಳಿಯದೋತ್ರ, ಒಂದೇ ಮಾದರಿಯ ಚಪ್ಪಲಿಗಳು ಎಂದು ಅವರ ಉಡುಪನ್ನು ವರ್ಣಿಸುತ್ತಾ ಹೇಳುವ ಮಾತಿದು. "೩೦ ರ ಹರೆಯಲ್ಲಿ ಪೋಷಾಕಿನ ಮಾದರಿಯಲ್ಲಿ ತಾವು ತೋರಿದ ನಿಷ್ಠೆಯನು ೪೦ ವರ್ಷಗಳ ಕಾಲ ಏಕಪ್ರಕಾರವಾಗಿ ಕಾಯ್ದುಕೊಂಡು ಬರಲು ಅದು ಯಾವ ಬಟ್ಟೆಯ ಅಂಗಡಿಯ ದರ್ಜಿಯನ್ನು ಗುತ್ತಿಗೆ ಹಿಡಿದಿದ್ದರೊ ಕಾಣೆ" ಎನ್ನುತ್ತಾರೆ.

ಅವರು ಉಡುಪಿನ ವಿಷಯದಲ್ಲಷ್ಟೇ ಅಲ್ಲ. ಉಳಿದ ವಿಷಯಗಳಲ್ಲೂ ಅಷ್ಟೆ. ನಾನು ಕಂಡಂತೆ. ಜೀವಿತ ಪೂರ್ತಿ. ಕಾಫಿಪೌಡರನ್ನು ಮನೆಗೆ ವಿಶ್ವೇಶ್ವರಪುರದ ಸಜ್ಜನರಾವ್ ದೇವಸ್ಥಾನದ ಬಳಿಯ ಫ್ಲೇವರ್ ಕಾಫಿ ಸೆಂಟರ್‌ನಿಂದ ತರುತ್ತಿದ್ದರು. ಅವರ ಕ್ಷೌರಕ್ಕೆ ಕ್ಷೌರಿಕ ಮನೆಗೆ ಬರುತ್ತಿದ್ದ. ಸುಮಾರು ೪೦ ವರುಷಗಳ ಕಾಲ ಒಬ್ಬನೇ ಕ್ಷೌರಿಕ. ಹೀಗೆ

ಓದಲು ಪ್ರಾರಂಭಿಸಿದರೆ ಕೆಳಗಿಡಲಾಗದ ಪುಸ್ತಕ ಎಂ.ವಿ.ಸೀ. ಬದುಕಿನ ಪ್ರಭಾವಗಳನ್ನು ಕುರಿತ ಸ್ವಾರಸ್ಯಕರ ಗ್ರಂಥ ಪ್ರತಿಮಾಗೃಹ, ವ್ಯಕ್ತಿಚಿತ್ರಗಳ ಅಪೂರ್ವಗ್ರಂಥ.

ನನ್ನ ಸಾಹಿತ್ಯ ಜೀವನಸ್ಮೃತಿಗಳು (ಆತ್ಮಕಥೆ)

ನನ್ನ ಸಾಹಿತ್ಯ ಜೀವನಸ್ಮೃತಿಗಳು ಎಂಬ ದೀರ್ಘ ಲೇಖನ ಎಂ.ವಿ.ಸೀ. ಅವರ ಸಾಹಿತ್ಯ ಕೃತಿಗಳ ರಚನೆಯ ಹಿನ್ನೆಲೆಯನ್ನು ತಿಳಿಸುತ್ತದೆ. ಪ್ರಾಸಂಗಿಕವಾಗಿ ಅವರ ಆತ್ಮಕಥೆ ಸುಳಿಯುತ್ತದೆ. ಮಾಸ್ತಿ ಅವರ ಸಾಹಿತ್ಯ ಪ್ರೇರಣೆಯಿಂದ ಗ್ರಂಥ ಇದು. ಜೀವನಕ್ಕೆ ಪ್ರಾಶಸ್ತ ಕೊಟ್ಟಿದ್ದೀರಿ. ಹುಚ್ಚು ಮನಸ್ಸಿನ ಹತ್ತು ಮುಖಗಳು ಬರೆದ ಕಾರಂತರು ಕೃತಿ ಸಾಧನೆಗಳಿಗೇ ಪ್ರಾಶಸ್ತ್ಯ ನೀಡಿ ಸ್ಮೃತಿಪಟಲದಿಂದ (೩ ಭಾಗಗಳನ್ನು) ಬರೆದರು. ಈ ರೀತಿ ಆತ್ಮಕಥೆಯನ್ನು ಎರಡೂ ಬಗೆಗಳಲ್ಲಿ ಬರೆದವರಿದ್ದಾರೆ. ಎಂ.ವಿ.ಸೀ. ಅವರು ಒಂದು ಬಗೆಯ ಆತ್ಮಕಥೆ ಬರೆದ ವರ್ಗಕ್ಕೆ ಸೇರಿದವರು. ಜೀವನಕ್ಕಿಂತ ಸಾಹಿತ್ಯ ಮುಖವೆಂದು ತಿಳಿದು ಅದನ್ನು ಪ್ರಸ್ತಾಪಿಸಿದರು.

ಉದಯಭಾನು ಕಲಾ ಸಂಘದವರು ೧೯೮೩ ರಲ್ಲಿ ಪ್ರಕಟಿಸಿದ 'ಆಸ್ವಾದ' ಎಂಬ ಎಂ.ವಿ.ಸೀ. ಅವರ ಅಭಿನಂದನ ಗ್ರಂಥದಲ್ಲಿ ದೀರ್ಘ ಲೇಖನವಾಗಿ (೨೭ ಪುಟಗಳು) ಪ್ರಕಟವಾಗಿದೆ. ಬಾಲ್ಯದಲ್ಲಿ ಶಾಲಾ ವಿದ್ಯಾರ್ಥಿ ಆಗಿದ್ದಾಗ ಮೈಸೂರಿನಲ್ಲಿ ಅವರ ಮೇಲೆ ಸಾಹಿತ್ಯಿಕವಾಗಿ ಪ್ರಭಾವ ಬೀರಿದ ಅಂಶಗಳು, ಚಿತ್ರಕಲೆಯಲ್ಲಿ ಆಸಕ್ತಿ ಮೂಡಿದ ಬಗ್ಗೆ, ಕಾದಂಬರಿ ರಚನೆಗೆ ದೊರೆತ ಪ್ರೇರಣೆ, ಕಾವ್ಯಾಸಕ್ತಿ ಮೂಡಿಬಂದ ಬಗೆ. ೧೬ನೇ ವಯಸ್ಸಿಗೆ ಬರಹಗಾರನಾದದ್ದು ತೀ.ನಂ.ಶ್ರೀ. ಅವರ ಮಾರ್ಗದರ್ಶನ ಮಹಾರಾಜ ಕಾಲೇಜಿನಲ್ಲಿದ್ದಾಗ ದೊರೆತ ಪ್ರೋತ್ಸಾಹ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಡಿವಿಜಿ ಜತೆ ಸಹ ಕಾರ್ಯದರ್ಶಿ ಆಗಿ ಕೆಲಸ ಮಾಡಿದ ಅನುಭವ, ನಿಘಂಟು ಕಚೇರಿ ಕೆಲಸದ ಪ್ರಭಾವ, ಶಾಸ್ತ್ರ ಸಾಹಿತ್ಯ ಸಂಪುಟ ರಚನೆ ವಿಚಾರ, ಮಾದನಮಗಳು ಕಾದಂಬರಿ ರಚನೆ ವಿಚಾರ, ಇಲ್ಲಿಗೆ ಆತ್ಮಕಥೆ ನಿಂತಿದೆ. ಎಂ.ವಿ.ಸೀ. ಅವರ ಸಾಹಿತ್ಯದ ಪ್ರೇರಣೆಗಳು, ಕೃತಿಗಳ ರಚನೆಗಳ ಹಿನ್ನೆಲೆ ತಿಳಿಯುತ್ತದೆ. ಅಷ್ಟೆ. ಅವರ ಆತ್ಮಕಥೆಯ ಒಂದು ಅಧ್ಯಾಯದಂತಿದೆ. ಅವರ ಸಾಧನೆಗಳ ಜೀವನ ವೃತ್ತಾಂತದ ವಿವರಗಳು ಬೇರೆಡೆ ಲೇಖನ ಗ್ರಂಥಗಳಲ್ಲಿ ಚೆದರಿವೆ. ಎಲ್ಲವನ್ನೂ ಕೂಡಿಸಿ ಸಮಗ್ರ ಜೀವನ ಕೃತಿಯನ್ನು ಯಾರಾದರೂ ಬರೆಯಬೇಕಾಗಿದೆ. ಅವರು ಕಾಲವಾಗಿರುವುದರಿಂದ ಅವರ ಆತ್ಮಕಥೆ ಕನ್ನಡಕ್ಕೆ ಪೂರ್ಣವಾಗಿ ಸಿಗುವಂತಿಲ್ಲ. ಸಿಕ್ಕಿದ್ದಷ್ಟಕ್ಕೆ ತೃಪ್ತಿಪಡಬೇಕಾಗಿದೆ.

ಕನ್ನಡ ಜೀವನ ಚರಿತ್ರೆ

ಕೊನೆಯದಾಗಿ, ಕನ್ನಡ ಜೀವನ ಚರಿತ್ರೆ ಗ್ರಂಥದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಇದು ಜೀವನ ಚರಿತ್ರೆ ಗ್ರಂಥವಲ್ಲ. ಕನ್ನಡ ಜೀವನ ಚರಿತ್ರೆಗಳ ಇತಿಹಾಸದ ಗ್ರಂಥ. ವಿಮರ್ಶೆಯ ಗ್ರಂಥ. ಒಂದು ವರುಷದ ಕಾಲ ಕನ್ನಡದಲ್ಲಿ ಬಂದಿದ್ದ (ಅವರಿಗೆ ದೊರೆತಷ್ಟು) ಜೀವನ ಚರಿತ್ರೆಗಳನ್ನು ಅಧ್ಯಯನ ಮಾಡಿ ಬರೆದ ಗ್ರಂಥ ಇದು.

ಕನ್ನಡದಲ್ಲಿ ಈ ಬಗೆಯ ಗ್ರಂಥ ಇದೇ ಮೊದಲು ಈ ಗ್ರಂಥದಲ್ಲಿ ಜೀವನ ಚರಿತ್ರೆಯ ಸ್ವರೂಪ ಕುರಿತು ಹೇಳಿರುವ ಮಾತುಗಳು ಗಮನಾರ್ಹವಾಗಿವೆ. ಎಂ.ವಿ.ಸೀ. ಅವರು ಜೀವನ ಚರಿತ್ರೆ ಸಾಹಿತ್ಯವನ್ನು ೪ ಭಾಗಗಳಾಗಿ ವರ್ಗೀಕರಿಸುತ್ತಾರೆ.

ಜೀವನ ವಿವರ : ಜನನ, ಮರಣ ದಿನಾಂಕ, ವಿದ್ಯಾಭ್ಯಾಸ, ವೃತ್ತಿ ರಚಿಸಿದ ಕೃತಿಗಳ ವಿವರಗಳನ್ನೊಳಗೊಂಡದ್ದು ಜೀವನ ವಿವರ ಬರಹ. ವೆಂಕಟೇಶ ಸಾಂಗ್ಲಿ ಅವರ ಸಿರಿಗನ್ನಡ ಗ್ರಂಥಕರ್ತರ ಕೋಶ ಇದಕ್ಕೆ ನಿದರ್ಶನ.

ಜೀವನ ವೃತ್ತಾಂತ : ಕವಿಯ ಕಾಲ, ಜೀವನ, ಕೃತಿಗಳ ಪರಿಚಯ ನೀಡುವ ಜೀವನ ವೃತ್ತಾಂತವು, ಜೀವನ ವಿವರಕ್ಕಿಂತ ಹೆಚ್ಚಿನ ಮೈತುಂಬಿಕೊಂಡಿದ್ದು ಲೇಖಕನ ವೈಯಕ್ತಿಕ ದೃಷ್ಟಿಯನ್ನು ಸ್ವಲ್ಪಮಟ್ಟಿಗೆ ಪ್ರತಿಬಿಂಬಿಸುತ್ತದೆ.

ಕನ್ನಡ ವಿಶ್ವಕೋಶದ ಲೇಖನಗಳು ಆರ್. ನರಸಿಂಹಾಚಾರ್ಯರ ಕವಿಚರಿತೆಯ ಬರಹಗಳು ಇದಕ್ಕೆ ನಿದರ್ಶನವಾಗಿವೆ.

ಜೀವನ ಚರಿತ್ರೆ : ಪ್ರಸಂಗಮಣಿಮಾಲೆಯ ನಡುವೆ ಲೇಖಕನ ಬಂಧು ಬಂಧುರ ವ್ಯಾಖ್ಯಾನವಾಹಿನಿ ಸೂತ್ರಪ್ರಾಯವಾಗಿ ಹರಿದಾಗ ಜೀವನ ಚರಿತ್ರೆ ಮೈದಾಳುತ್ತದೆ. ಉದಾ : ಕೆ. ವಾಸುದೇವಾಚಾರ್ಯರು.

ವ್ಯಕ್ತಿಚಿತ್ರ : ಜೀವನ ವೃತ್ತಾಂತಕ್ಕೂ ಪೂರ್ಣಪ್ರಮಾಣದ ಜೀವನ ಚಿತ್ರಕ್ಕೂ ಮಧ್ಯಸ್ಥ ರಚನೆ. ಸಿದ್ಧವನಹಳ್ಳಿ ಕೃಷ್ಣಶರ್ಮರ ದೀಪ-ಮಾಲೆ, ಎಚ್ಚೆಸ್ಕೆ ಅವರ 'ಬದುಕು ಬೆಳಕು' ಉದಾಹರಣೆಗಳು.

ಆತ್ಮಕಥೆ : ಕೃತಿನಾಯಕನೇ ಲೇಖಕ ಸಾಕ್ಷಿಸ್ಥಾನದಲ್ಲಿ ಲೇಖಕ ನಿಂತು ತಮ್ಮ ಒಳ ಹೊರಗು ಎಲ್ಲವನ್ನೂ ಇದ್ದಂತೆ ತೋರುವ ಜೀವನ ಕಥೆ. ಸತ್ಯವ್ರತರ ಸ್ಥಿತಿಪ್ರಜ್ಞರ ಆತ್ಮದರ್ಶನವಿದು. ಗಾಂಧಿ, ವಿಶ್ವೇಶ್ವರಯ್ಯರ ಆತ್ಮಕಥೆ. ಸಂಖ್ಯಾದೃಷ್ಟಿಯಿಂದ ಹೇಳಬಹುದಾದರೆ ಸ್ವಾತಂತ್ರಪೂರ್ವದಲ್ಲಿ ಸು. ೫೦೦ ಜೀವನಚರಿತ್ರೆಗಳು ೫೦ ವರ್ಷಗಳ ಅವಧಿಯಲ್ಲಿ ಪ್ರಕಟವಾಗಿವೆ. ೧೯೪೭ ರಿಂದ ೧೯೭೨ರ ವರೆಗೆ ಸ್ವಾತಂತ್ರೋತ್ತರ ಕಾಲದಲ್ಲಿ ಸು. ೬೧೨ ಜೀವನ ಬರಹ ಪುಸ್ತಕಗಳು ಪ್ರಕಟವಾಗಿವೆ. (ಎಂ.ವಿ.ಸೀ. ಅವರ ಪ್ರಕಾರ) ೧೯೭೨ ರಿಂದ ಈಚೆಗೆ ಸುಮಾರು ೪೦ ವರ್ಷಗಳಲ್ಲಿ ೪೦೦ ಜೀವನ ಚರಿತ್ರೆಗಳು ಪ್ರಕಟವಾಗಿರಬಹುದೆಂದು ನನ್ನ ಅಂದಾಜು. ಒಟ್ಟಿನಲ್ಲಿ ಎಂದರೆ ೨೦ನೇ ಶತಮಾನದ ಅಂತ್ಯದವರೆಗೆ (೨೦೦೦ ವರೆಗೆ) ೧೬೦೦ ರಿಂದ ೨೦೦೦ ಜೀವನ ಚರಿತ್ರೆಗಳು ಕನ್ನಡದಲ್ಲಿ ಪ್ರಕಟವಾಗಿವೆ ಎಂದು ಊಹಿಸಬಹುದು. ಈ ಬಗ್ಗೆ ಸಮಗ್ರ ಜೀವನ ಚರಿತ್ರೆ ಸೂಚಿ ಸಿದ್ಧಪಡಿಸಬೇಕಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು, ಹಂಪಿ ಕನ್ನಡ ವಿಶ್ವವಿದ್ಯಾಲಯಗಳು ಇಂಥ ಯೋಜನೆಗಳನ್ನು ಕೈಗೊಳ್ಳಬೇಕು. ಸಂಶೋಧಕರಿಗೆ ಆಗ ಉಪಯುಕ್ತ ಸಾಮಗ್ರಿ ಸಿಗುತ್ತದೆ.

ಜೀವನ ಚರಿತ್ರೆಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಕಟಿಸಿದ ಲೇಖಕರಲ್ಲಿ ಸುಬೋಧ

ಎಂ. ರಾಮರಾಯರು ಅಗ್ರಗಣ್ಯರು. ಕನ್ನಡ ಜೀವನ ಚರಿತ್ರಕಾರರಲ್ಲಿ ಇತಿಹಾಸ ನಿರ್ಮಿಸಿದವರು. ಎಲ್ಲ ಬಗೆಯ ಜೀವನ ಚರಿತ್ರೆಗಳನ್ನು ೨೦೦ಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅಪಾರ ಮಾಹಿತಿ, ಸುಲಭದ ಭಾಷೆ, ಅಗ್ಗದ ಬೆಲೆ ವಿಶಾಲದೃಷ್ಟಿಯ ಬರಹ ಅವರ ಜೀವನ ಚರಿತ್ರೆಗಳ ವೈಶಿಷ್ಟ್ಯ. ಅವರ ದಾರಿಯಲ್ಲೇ ನಡೆದು ನೂರಾರು ಗ್ರಂಥಗಳನ್ನು ಪ್ರಕಟಿಸಿದ ಪ್ರಕಾಶಕರು ಇನ್ನಿಬ್ಬರು ಎಂದರೆ ಐ.ಬಿ.ಎಚ್. ಪ್ರಕಾಶನ ಮತ್ತು ರಾಷ್ಟ್ರೋತ್ಥಾನ ಪ್ರಕಾಶನ. ಇನ್ನು ಖಾಸಗಿ ಪ್ರಕಾಶಕರು, ಲೇಖಕರು ಶಕ್ತ್ಯಾನುಸಾರ ಜೀವನಚರಿತ್ರೆಗಳನ್ನು ಪ್ರಕಟಿಸಿದ್ದಾರೆ.

ಈ ಎಲ್ಲ ಜೀವನ ಚರಿತ್ರೆಗಳನ್ನು ಎಂ.ವಿ.ಸೀ.ಅವರು ಧಾರ್ಮಿಕ ಮಹಾಪುರುಷರು (ಇವರನ್ನು ಕುರಿತು ಕೃತಿಗಳೇ ಕನ್ನಡದಲ್ಲಿ ಜಾಸ್ತಿ) ಸಮಾಜ ಸುಧಾರಕರು, ರಾಷ್ಟ್ರಪುರುಷರು, ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರ ಆತ್ಮಚರಿತ್ರೆಗಳು–ವ್ಯಕ್ತಿಚಿತ್ರಗಳು–ಸಂಭಾವನಾ ಗ್ರಂಥಗಳು ಎಂದು ವರ್ಗೀಕರಿಸಿ ಕನ್ನಡ ಜೀವನ ಚರಿತ್ರೆಗಳು ಗ್ರಂಥದಲ್ಲಿ ವಿಮರ್ಶಿಸಿದ್ದಾರೆ.

ಎಂ.ವಿ.ಸೀ.ಅವರು ತಮ್ಮ ವಿಮರ್ಶಾ ಗ್ರಂಥದಲ್ಲಿ ತಾವು ಓದಿ ಪರಿಶೀಲಿಸಿದ ಗ್ರಂಥಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಕೆಲವೆಡೆ ಕೃತಿಗಳ ಪರಿಚಯವನ್ನಷ್ಟೇ ಮಾಡಿದ್ದಾರೆ. ಕೆಲವೆಡೆ ಉಲ್ಲೇಖ ಮಾತ್ರ ಮಾಡಿದ್ದಾರೆ. ಕೆಲವೆಡೆ ವಿಮರ್ಶೆಮಾಡಿ ಮೌಲ್ಯಮಾಪನ ಮಾಡಿದ್ದಾರೆ. ಈ ಬಗ್ಗೆ ಅವರು ಹೇಳಿದ ಮಾತು ಗಮನಾರ್ಹವಾಗಿದೆ. (ಪು. ೨೧೬) "ಈ ಎರಡೂವರೆ ದಶಕಗಳಲ್ಲಿ (೧೯೪೭ ರಿಂದ ೧೯೭೨ರ ವರೆಗೆ) ಪ್ರಕಟವಾದ ೬೧೨ ಜೀವನ ಚರಿತ್ರೆಗಳ ಒಟ್ಟು ಬೆಳೆಯ ಬೇರೆ ಬೇರೆ ತೆನೆಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಇಂದಿಗೂ ಜೊಳ್ಳಿನ ಕಾಳಿನ ಭಾಗವೇ ಹೆಚ್ಚು. ರಾಶಿಯೇನೋ ದೊಡ್ಡದಾಗಿಯೇ ಕಂಡಿದೆ. ಒಂದೆರಡುಮೂರನ್ನು ತೂರಿ ಕೇರಿ ನೋಡಿದ್ದರ ಫಲಿತಾಂಶವನ್ನು ಮಾತ್ರ ಇಲ್ಲಿ ತಿಳಿಸಿದೆ" ಎಂದಿದ್ದಾರೆ. ಎಂ.ವಿ.ಸೀ. ಅವರು ತಾವೇ ಓದಿದ ಗ್ರಂಥಗಳ ಬಗ್ಗೆ ವಿಸ್ತಾರವಾಗಿ ಬರೆದಿದ್ದಾರೆ. ವಿಶ್ವೇಶ್ವರಯ್ಯನವರನ್ನು ಕುರಿತು ಡಿ.ವಿ.ಜಿ., ತಿ. ತಾ. ಶರ್ಮ, ಮಾಸ್ತಿ ವಿಶ್ವೇಶ್ವರಯ್ಯನವರೇ ಬರೆದ, ನನ್ನ ಕಾರ್ಯನಿರತ ಜೀವನದ ನೆನಪುಗಳು, ಈ ನಾಲ್ಕು ಗ್ರಂಥಗಳ ಸಮೀಕ್ಷೆಯನ್ನು ನೋಡಬಹುದು. ವಿ. ಎಸ್. ನಾರಾಯಣರಾಯರ ಸರ್ ಎಂ.ವಿ. ಅವರನ್ನು ಕುರಿತ ಬೃಹದ್ಗ್ರಂಥ ಆ ಕಾಲಕ್ಕೆ ಪ್ರಕಟವಾಗಿರಲಿಲ್ಲ. ಕನ್ನಡದಲ್ಲಿ ವಿಶ್ವೇಶ್ವರಯ್ಯ ಸಾಹಿತ್ಯವೆಂದೇ ಎಂ.ಫಿಲ್ ಪ್ರಬಂಧವನ್ನು ಯಾರಾದರೂ ಸಿದ್ಧಪಡಿಸಬಹುದು. ಎಂ.ವಿ.ಸೀ ಅವರು ತಾವು ಓದಲು ಸಿಗದ ಗ್ರಂಥಗಳ ಬಗ್ಗೆ ಪತ್ರಿಕೆಗಳ ವಿಮರ್ಶೆಯನ್ನು ಅವಲಂಬಿಸಿದ್ದಾರೆ. ಅಂತಹವುಗಳ ಬಗ್ಗೆ ಆಕರಗಳನ್ನು ಸೂಚಿಸಿ ಪ್ರಾಮಾಣಿಕತೆಯನ್ನು ಮೆರೆದಿದ್ದಾರೆ. ಒಂದು ಉದಾಹರಣೆ :

ಆಲ್ಬರ್ಟ್ ಐನ್‌ಸ್ಟೈನ್‌ರನ್ನು ಕುರಿತ ಶ್ರೀ ರಂಗರಾಜು ಅವರ ಗ್ರಂಥ ಸ್ವತಃ ಓದಿ ಆ

ಬಗ್ಗೆ ಬರೆದ ಮೇಲೆ ತಮಗೆ ಸಿಗದ ಐನ್‌ಟ್ಸ್ಟೈನ್‌ರ ಕುರಿತು. ಸಂ. ವಾ. ಕೃಷ್ಣಮೂರ್ತಿ. ಅವರ ೨೫೦ ಪುಟಗಳ ಗ್ರಂಥವನ್ನು ಕುರಿತು ಹೀಗೆ ಹೇಳಿದ್ದಾರೆ :

"ಈ ಗ್ರಂಥ ಈಚೆಗೆ ಬಂದಿದೆ. ಶ್ರೀಮತಿ ಆಂಟೋನಿನ ವಾರೆಂಟಿ ಅವರು ಫ್ರೆಂಚಿನಲ್ಲಿ ಬರೆದ ದಿ. ಡ್ರಾಮ ಆಫ್ ಆಲ್ಬರ್ಟ್ ಐನ್‌ಸ್ಟೈನ್ ಗ್ರಂಥ ೧೯೫೪ ರಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಯಿತು. ಅದರ ಕನ್ನಡ ಭಾಷಾಂತರ ಈ ಪುಸ್ತಕ. ಮೂಲಗ್ರಂಥದ ಹೆಸರು ಗ್ರಂಥನಾಯಕನ ಬಗೆಗೆ ಕುತೂಹಲ ಕೆರಳಿಸುವಂತಿದೆ. (ಪ್ರತಿ ದೊರಕದ ಕಾರಣ ಗ್ರಂಥವನ್ನು ಪರಿಶೀಲಿಸುವುದು ಸಾಧ್ಯವಾಗಿಲ್ಲ) ಒಟ್ಟಿನಲ್ಲಿ ಅನುವಾದ ಓದಿಸಿಕೊಂಡು ಹೋಗುತ್ತದೆ. ವಿದ್ಯಾರ್ಥಿಗಳಿಗೂ ಐನ್‌ಸ್ಟೈನ್‌ರ ವಿಚಾರದಲ್ಲಿ ಆಸಕ್ತಿಯುಳ್ಳವರಿಗೂ ಖಂಡಿತವಾಗಿ ಉಪಯುಕ್ತವಾದ ಗ್ರಂಥ ಇದು" ಎಂದು ವಿಮರ್ಶಕರೊಬ್ಬರ (ಕಟಕ) ಮಾತನ್ನು ಎತ್ತಿ ಹೇಳಿ ತೃಪ್ತಿಪಡೆಯಬೇಕಾಗಿದೆ. ಭಾಷಾಂತರ ಕನ್ನಡ ವಿಮರ್ಶಕರಿಗೆ ಒಪ್ಪಿತವಾಗಿಲ್ಲ. (ಆಧಾರ : ಕನ್ನಡ ಪ್ರಭ ೧೦-೭-೧೯೭೨). ವಿಷಯದ ಸಮಗ್ರತೆಗಾಗಿ ಪರೋಕ್ಷ ಆಧಾರಗಳನ್ನು ಅವಲಂಬಿಸಿದಾಗ ಅವುಗಳ ಆಕರಗಳನ್ನು ಪೂರ್ಣ ವಿವರಗಳನ್ನು ನೀಡಿರುವುದನ್ನು ಮೇಲಿನ ಉಲ್ಲೇಖಗಳಲ್ಲಿ ಕಾಣಬಹುದು. ಎಂ.ವಿ.ಸೀ. ಅವರ ಬರಹದ ಪ್ರಾಮಾಣಿಕತೆಗೆ ನಿದರ್ಶನವಾಗಿದೆ.

ಓಗೆ ಸಾಧಾರವಾಗಿ ಬರೆದ ಪಾಂಡಿತ್ಯಪೂರ್ಣ ಸಾಹಿತ್ಯ ಚರಿತ್ರೆ ಗ್ರಂಥವೆನಿಸಿದ 'ಕನ್ನಡ ಜೀವನ ಚರಿತ್ರೆ' ಶಾಸ್ತ್ರ ಗ್ರಂಥಗಳು ಗ್ರಂಥದಂತೆ. ಎಂ.ವಿ.ಸೀ. ಅವರ ಬಹುಶ್ರುತ ಪಾಂಡಿತ್ಯಕ್ಕೆ ಆಳವಾದ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಕನ್ನಡ ಜೀವನ ಚರಿತ್ರೆಗಳನ್ನು ಕುರಿತ ಪ್ರಮಾಣ ಗ್ರಂಥವಾಗಿದೆ.

ಹೀಗೆ ಎಂ.ವಿ.ಸೀ. ಅವರು ಕನ್ನಡ ಜೀವನ ಚರಿತ್ರೆಯ ವಿಮರ್ಶಕರಲ್ಲಿ ಪ್ರಮುಖರಾಗಿ ಬರಹಗಾರರಲ್ಲಿ ಒಬ್ಬರಾಗಿ ಕನ್ನಡಕ್ಕೆ ಶ್ರೇಷ್ಠ ಕೊಡುಗೆ ಕೊಟ್ಟ ಜೀವನ ಚರಿತ್ರಕಾರರಲ್ಲಿ ಒಬ್ಬರಾಗಿದ್ದಾರೆ.

ವ್ಯಕ್ತಿ ಚಿತ್ರದ ಇನ್ನೊಂದು ರೂಪ ವ್ಯಕ್ತಿ ಕಥೆಗಳು–ಜೀವನ ನಾಟಕ ಕೃತಿ

ಎಂ.ವಿ.ಸೀ. ಅವರು ೧೯೬೧ ರಲ್ಲಿ ಜೀವನ ನಾಟಕವೆಂಬ ವ್ಯಕ್ತಿ ಕಥಾ ಸಂಕಲನ ಹೊರತಂದಿದ್ದಾರೆ. ಇದು ಕಥಾರೂಪ ಹೊಂದಿದ ವ್ಯಕ್ತಿ ಚಿತ್ರಗಳಾಗಿವೆ. ಸಣ್ಣ ಕಥೆಗಳ ಅಥವಾ ಪ್ರಬಂಧದ ಲಕ್ಷಣ ಕಂಡುಬಂದರೂ ಆ ಗುಂಪಿಗೆ ಸೇರುವುದಿಲ್ಲ ಏಕೆಂದರೆ ಇಲ್ಲಿಯ ಕೇಂದ್ರಬಿಂದು ಎಂ.ವಿ.ಸೀ. ಅವರ ಬಾಳಿನಲ್ಲಿ ಕಂಡ ವ್ಯಕ್ತಿಗಳ ಚಿತ್ರಣವಿಲ್ಲದೆ. "ಕೆಲವು ವ್ಯಕ್ತಿಗಳ ಕಥೆಗಳನ್ನು ಹೇಳುವುದರ ಜೊತೆಗೆ ಅಥವಾ ಅದಕ್ಕಿಂತ ಹೆಚ್ಚಾಗಿ ಈಗ್ಗೆ ಕಾಲುಶತಮಾನಕ್ಕೂ ಹಿಂದಿನ (ಸ್ವಾತಂತ್ರ್ಯಪೂರ್ವದ) ಕಣ್ಮರೆಯಾಗುತ್ತಿರುವ ತಲೆಮಾರಿನ ಜೀವನಚಿತ್ರವನ್ನು ನಾನು ಬಲ್ಲಮಟ್ಟಿಗೆ ರೇಖಿಸಬೇಕೆಂಬುದು ಈ ವ್ಯಕ್ತಿ

ಕಥಾ ಮಾಲಿಕಾಬಂಧದ ಮುಖ್ಯ ಉದ್ದೇಶ" ಎಂದಿದ್ದಾರೆ. ಪ್ರತಿ ಕಥೆಗೂ ನಾನು ಬಲ್ಲ ಜೀವಂತರಾಗಿದ್ದ ಒಬ್ಬರು ಸ್ಫೂರ್ತಿ ನೀಡಿದ್ದರೂ ಆ ಮೂಲವ್ಯಕ್ತಿಗೂ ಕಥೆಯ ವ್ಯಕ್ತಿಗೂ ಅಜಗಜಾಂತರ ಎಂದಿದ್ದಾರೆ. ನಿಜವಾದ ವ್ಯಕ್ತಿಗಳು ಮರುಹುಟ್ಟು ಪಡೆದಿದ್ದಾರೆ. ಇದರರ್ಥ ವೈಯಕ್ತಿಕ ವಿವರಗಳು ನೇರವಾಗಿ ವ್ಯಕ್ತಿಚಿತ್ರ-ಜೀವನಚರಿತ್ರೆಗಳಲ್ಲಿ ಬರುವ ಹಾಗೆ ವಾಚ್ಯವಾಗಿ ಬಂದಿಲ್ಲ ಅಷ್ಟೆ. ಪರಿಚಯವಿದ್ದವರು ಈ ಬರಹಗಳನ್ನು ಓದಿದರೆ ಖಂಡಿತ ಆ ವ್ಯಕ್ತಿಗಳನ್ನು ಇಲ್ಲಿನ ವಿವರಣೆಗಳಿಂದ ಗುರುತಿಸಬಹುದು. ಆದಕಾರಣವೇ ಇದನ್ನು ಲೇಖಕರೇ ವ್ಯಕ್ತಿಕಥೆಗಳು ಎಂದು ಕರೆದಿದ್ದಾರೆ. ಇದಕ್ಕೆ ಸಮರ್ಥನೆ ಎಂಬಂತೆ ಎ.ಆರ್.ಕೃ. ಅವರು ಹರಕೆಯ ಈ ಮಾತು ಹೇಳಿದ್ದಾರೆ : "ನಾನೂ ಹಳೆಯ ಅಗ್ರಹಾರದಲ್ಲಿ ಅವರ ಪರಿಚಯ ಚನ್ನಾಗಿರುವುದರಿಂದ ನೀನು ಚಿತ್ರಿಸಿರುವ ಚಿತ್ರಗಳೆಲ್ಲಾ ಮನಸ್ಸಿಗೆ ಖಚಿತವಾಗಿದೆ. ಬೆನ್ನುಡಿ ಬರೆದ ಸಿ.ಕೆ ವೆಂಕಟರಾಮಯ್ಯನವರು ಹೇಳಿರುವ ಮಾತು ಗಮನಾರ್ಹವಾಗಿದೆ. "ಹಿಂದಿನ ಮೈಸೂರಿನ ಹಳೆಯ ಅಗ್ರಹಾರದ ಜನಜೀವನ ಚಿತ್ರ ಯಥಾವತ್ತಾಗಿ ನಮ್ಮ ಮನೋನೇತ್ರದ ಮುಂದೆ ನಿಲ್ಲುವಂತೆ ಮಾಡುತ್ತದೆ. ಇದರರ್ಥ ಒಳರೂಪ ಒಳಸತ್ವ ವ್ಯಕ್ತಿಚಿತ್ರ ಹೊರರೂಪದಲ್ಲಿ ವ್ಯವಸ್ಥೆ ಆಗಿದೆ.

ಗುಮಾಸ್ತೆ ಗುಂಡಪ್ಪ, ನಾಟಕದ ಸುಬ್ಬಣ್ಣ, ಅರಮನೆ ರಾಮರಾಯರು, ಆನೇಕಾಲು ರಾಮರಾಯರು, ಒಂಟಿ ಸಂಜೀವ, ಜಗಲಿ ಜೋಯಿಸರು ಪುರುಷ ಚಿತ್ರಣಗಳಾದರೆ ಭಿಕ್ಷಾನ್ನದ ಭಾಗೀರಥಮ್ಮ, ಹಾಲಿನ ಹನುಮಕ್ಕ, ಕೊಟ್ಟಣದ ನೀಲಮ್ಮ, ಕಡಲೆಪುರಿಯ ಕೆಂಪಮ್ಮ, ವೀಳ್ಯದೆಲೆಯ ಮಂಚಮ್ಮ ಸ್ತ್ರೀ ಚಿತ್ರಣಗಳಾಗಿವೆ. ಇವರನ್ನು ಲೇಖಕರು "ನನ್ನ ಬಾಲ್ಯ ಯೌವನಗಳನ್ನು ರಸಮಯಗೊಳಿಸಿದ ನಮ್ಮ ಬೀದಿಯ ನೆರೆಹೊರೆಯವರು" ಎಂದು ಹೇಳಿ ಅವರಿಗೆ ಈ ಕೃತಿಯನ್ನು ಅರ್ಪಿಸಿದ್ದಾರೆ. ಈ ಕತೆಗಳಲ್ಲಿ ಬರುವ ಮಾನವೀಯ ಚಿತ್ರಣ, ಹೃದಯಂಗಮ ವರ್ಣನೆ ಓದುಗರ ಮನಸ್ಸನ್ನು ಸೆರೆಹಿಡಿದು ನಿಲ್ಲಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಗುಂಡಪ್ಪನ ಕಥೆಯನ್ನೇ ನೋಡಬಹುದು. ಗುಂಡಪ್ಪನ ವೇಷಭೂಷಣ ವರ್ಣನೆ ತುಣುಕು ಇದು (ಪು. ೧೪) "ಗುಂಡಪ್ಪನ ರುಮಾಲು ಅನೇಕ ಕೆಲಸಗಳಿಗೆ ಬರುತ್ತಿದ್ದವು. ಬೆಳಿಗ್ಗೆ ಹೊದೆಯುವ ಉತ್ತರೀಯ ಹಾಗೇ ಪೇಟೆಗೆ ಹೋದರೆ ತರಕಾರಿ ಮುಂತಾದ ಸಣ್ಣ ಪುಟ್ಟ ಸಾಮಾನು ತರುವುದಕ್ಕೆ ಚೌಕ, ಕಚೇರಿಗೆ ರುಮಾಲು, ನಮ್ಮ ಮನೆಯ ಹಸು ಎಲ್ಲಾದರೂ ತೊಂಡುಬಿದ್ದು ಹೊರಟುಹೋಗಿದ್ದರೆ ಅದನ್ನು ಕರೆತರುವುದಕ್ಕೆ ಹಗ್ಗ. ರಾತ್ರಿ ಮಲಗುವಾಗ ಹೊದೆಯುವ ಹಚ್ಚಡ; ಇಷ್ಟೆಲ್ಲಾ ಕೆಲಸಕ್ಕೆ ಬಂದರೂ ನಮ್ಮ ತಂದೆ ಇನ್ನೊಂದು ಹಳೆ ರುಮಾಲನ್ನು ದಾನಮಾಡುವವರೆಗೆ ಗಟ್ಟಿಯಾಗಿಯೇ ಇರುತ್ತಿತ್ತು."

ಸಾವಿತ್ರಮ್ಮ ಯಜಮಾನರಿಗೆ "ನಿಮಗಾದರೆ ಪಂಚೆ ಒಗೆದುಕೊಡುತ್ತಾನೆ. ನನಗೂ ಸೀರೆ ಒಗೆದುಕೊಡುವುದಕ್ಕೆ ಯಾರಾದರೂ ಇದ್ದರೆ ಹೊತ್ತಿಗೆ ಸರಿಯಾಗಿ ಅಡಿಗೆ

ಮಾಡಬಹುದಾಗಿತ್ತು" ಎಂದು ಒಮ್ಮೆ ರೇಗಿದಾಗ ಮಾರನೇ ದಿನ ಗುಂಡಪ್ಪ ಅವರ ಸೀರೆಯನ್ನೂ ಒಗೆದು ಕಲ್ಲಮೇಲೆ ಸಿಂಬೆ ಸುತ್ತಿ ಇಟ್ಟಿದ್ದ. ಅದನ್ನು ಕಂಡು ತಾಯಿ ಸಾವಿತ್ರಮ್ಮ ಬೆರಗಾದರು, ಮರುಗಿದರು, ಕೊರಗಿದರು. ಇದೇನು ಗುಂಡಪ್ಪ ನಾನು ಕೋಪದಲ್ಲಿ ನಿನ್ನೆ ಏನೋ ಎರಡು ಮಾತಾಡಿದರೆ ಹೀಗೆ ಮಾಡುವುದೇ ? ಎಂದು ಕಂಬನಿಯಿಟ್ಟರು. ಆಗ ಗುಂಡಪ್ಪ ಹೇಳಿದರು. "ನಿಮ್ಮ ವೆಂಕಟರಮಣಯ್ಯ ನನಗಿಂತ ಮೂರು ತಿಂಗಳು ದೊಡ್ಡವನು. ನೀನು ನನ್ನ ಅತ್ತಿಗೆ ಸಮಾನ ಅತ್ತಿಗೆ ಆದವಳು ತಾಯಿಯ ಸಮಾನ. ತಾಯಿಯ ಸೀರೆ ಒಗೆದರೆ ಮಗನಿಗೆ ಪುಣ್ಯವೇ ಹೊರತು, ಪಾಪವಿಲ್ಲ. ಅವಮಾನವಂತೂ ಮೊದಲೇ ಇಲ್ಲ" ಎಂದರು ಗುಂಡಪ್ಪ. ಹೀಗೆ ಮಾನವೀಯ ಚಿತ್ರಣಗಳಿಂದ ತುಂಬಿದ ವ್ಯಕ್ತಿಕಥೆಗಳ ಸಂಪುಟ ಜೀವನ ನಾಟಕ ಕೃತಿ.

ಅನುಬಂಧ

[ಜೀವನ ಚರಿತ್ರೆಗಳಿಗೆ ಸಂಬಂಧಿಸಿದಂತೆ ಗ್ರಂಥಗಳು, (ಕನ್ನಡ) ಅನುವಾದಗಳು]

I (a) ೧. ವಿವೇಕಾನಂದ (ಮೂಲ : ಶ್ರೀಮತಿ ಕೃಷ್ಣಕುಮಾರಿ ಅವರ ತೆಲುಗು ಕೃತಿಯ ಅನುವಾದ) ಪ್ರ:ವಿವೇಕ ಪಬ್ಲಿಷರ್ಸ್, ಬೆಂಗಳೂರು, ೧೯೫೧.

೨. ಎ. ಆರ್. ರಾಜವರ್ಮ (ಮೂಲ : ಇಂಗ್ಲಿಷ್ ಕೃತಿ ಲೇಖಕರು ಕೆ. ಎಂ. ಜಾರ್ಜ್) ಪ್ರ : ಸಾಹಿತ್ಯ ಅಕಾಡೆಮಿ ದೆಹಲಿ.

ಸ್ವತಂತ್ರಗಳು :

೩. ವೈಣಿಕ ವಿದ್ವಾನ್ ಎಲ್. ರಾಜಾರಾವ್ (ಐ.ಬಿ.ಎಚ್. ಪ್ರಕಾಶನ ೧೯೮೩).

೪. ಯುಧಿಷ್ಠಿರ : (ರಾಷ್ಟ್ರೋತ್ಥಾನ ಪರಿಷತ್ತು ೧೯೭೩).

೫. ಕವಿ ರನ್ನ : (ರಾಷ್ಟ್ರೋತ್ಥಾನ ಪರಿಷತ್ತು ೧೯೭೬).

೬. ನಾಡೋಜ ಬಿ.ಎಂ.ಶ್ರೀ. (ರಾಘವ ಪ್ರಕಾಶನ, ೧೯೮೪).

೭ ಶ್ರೀರಾಮಕೃಷ್ಣಪರಮಹಂಸರು(ರಾಘವ ಪ್ರಕಾಶನ, ಬೆಂಗಳೂರು, ೧೯೯೦.

೮. ಕೆ. ವೆಂಕಟಪ್ಪ.

೯. ಟಿ. ಎಸ್. ವೆಂಕಣ್ಣಯ್ಯ, ಕನ್ನಡ ಅಧ್ಯಯನಸಂಸ್ಥೆ, ಮೈವಿ.ವಿ. ೧೯೮೫.

ವ್ಯಕ್ತಿಚಿತ್ರ :

೧೦. ಪ್ರತಿಮಾಗೃಹ : (ರಾಘವ ಪ್ರಕಾಶನ, ೧೯೯೦).

೧೧. ಕನ್ನಡ ವಿಶ್ವಕೋಶದಲ್ಲಿ ಪ್ರಕಟವಾದ ಲೇಖನಗಳು.

೧೨. ಗುರುಗಳು ಹಿರಿಯರು ಮತ್ತು ಗೆಳೆಯರು (ಅಪ್ರಕಟಿತ ಗ್ರಂಥದಲ್ಲಿ ಸಂಗ್ರಹವಾದ ವ್ಯಕ್ತಿಚಿತ್ರಗಳು).

೧೩. ಎತ್ತರದ ವ್ಯಕ್ತಿ (ಬೆಳ್ಳಾವೆ ವೆಂಕಟನಾರಾಯಣಪ್ಪ) ಅಪ್ರಕಟಿತ.

I (b) ಕನ್ನಡ ಲೇಖನಗಳು (ಜೀವನ ಚರಿತ್ರೆಗೆ ಸಂಬಂಧಿಸಿದಂತೆ).

೧. ಕಲಾತಪಸ್ವಿ ಕೆ. ವೆಂಕಟಪ್ಪ ಪತ್ರಿಕೆ ಗೌರವ ಗ್ರಂಥಗಳಲ್ಲಿ ಪ್ರಕಟಿತ. (ಕನ್ನಡನುಡಿ).

೨. ಡಿ.ವಿ. ಗುಂಡಪ್ಪನವರ ಪೂರ್ಣವ್ಯಕ್ತಿತ್ವ (ಸಾರ್ವಜನಿಕ, ಬೆಂಗಳೂರು,೧೦-೧೧-೭೫.
೩. ಕನ್ನಡ ಸಾಹಿತ್ಯದಲ್ಲಿ ಪ್ರೊ. ಎ.ಆರ್.ಕೃ. ಸ್ಥಾನ(ಜೀವನ ೧೩-೪-೧೯೫೨ ಪು.೧೧೩)
೪. ಪೂಜ್ಯ ಎ.ಆರ್.ಕೃ. ಅವರನ್ನು ಕುರಿತು ನಾಲ್ಕು ನೆನಪಿನ ಮಾತು (ಕನ್ನಡ ನುಡಿ ೩೧-೪/೫ ೧೯೬೮)
೫. ಪೂಜ್ಯ ಕೃಷ್ಣಶಾಸ್ತ್ರಿಗಳಿಂದ ನಾನು ಕಲಿತ ಪಾಠ (ಎ.ಆರ್.ಕೃ. ಜೀವನ ಮತ್ತು ಸಾಧನೆ. ಪ್ರ. ಕ. ಮೈಸೂರು ವಿ.ವಿ. ೧೯೭೧).
೬ ಬಳ್ಳಾರಿಯ ಸಮ್ಮೇಳನ-ಅಧ್ಯಕ್ಷರು ಕನ್ನಡನುಡಿ ೨೧-೫, ೧೯೭೮ ಪು.೧೧೬-೧೧೮
೭ ಕಲೆಯಲ್ಲಿ ಪರಿಪಕ್ವ ಸ್ಥಿತಿಯನ್ನು ಮುಟ್ಟಿರುವವರು : ಗಾನಕೋಗಿಲೆ ಜಿ. ಚನ್ನಮ್ಮ ಸನ್ಮಾನ ಸಂಚಿಕೆ. ಬೆಂಗಳೂರು ಪು. ೧೯-೨೦.
೮. ಗುರುವಿನ ಒಂದು ಭಾವ ಚಿತ್ರ (ಟಿ. ಎಸ್. ವೆಂಕಣ್ಣ) ಸವಿನೆನಪು, ಮೈಸೂರು ೧೯೭೦.
೯. ಗುರುಸ್ಮರಣೆ-ಅನಂತರಂಗ, ಮೈಸೂರು, ೧೯೭೭.
೧೦. ಜ್ಯೋತಿರ್ಲಿಂಗಾನುಭವಿ ಶ್ರೀ ಜಚನಿ : ದಾಸೋಹ ಬೆಂಗಳೂರು. ೧೯೬೩, ಪು. ೧-೧೮.
೧೧. ನನ್ನನ್ನು ಕಡೆದ ರೂವಾರಿ ಡಿ.ವಿ.ಜಿ. (ಕರ್ಮವೀರ ೮-೨-೧೯೭೦)
೧೨. ನಾನು ಕಂಡ ಕೆ. ಗೋಪಾಲಕೃಷ್ಣರಾಯರು (ಕನ್ನಡ ನುಡಿ. ೧-೩೧, ೧೯೬೮ ಪುಟ : ೪)
೧೩. ನಾನು ಕಂಡ ತೀ.ನಂ.ಶ್ರೀ. (ಕನ್ನಡ ನುಡಿ ೨೯-೧೦-೧೯೬೬)
೧೪. ನಾನು ಕಂಡ ಜಿ. ಎಸ್. ಶಿವರುದ್ರಪ್ಪನವರು (ಸ್ನೇಹ ಕಾರ್ತೀಕ ಬೆಂಗಳೂರು, ೧೯೭೭).
೧೫. ನುಡಿಸೇವೆ (?) ಸ್ವರ್ಣರಶ್ಮಿ, ಬೆಂಗಳೂರು, ೧೯೭೯, ಪು. ೧೧-೧೨.
೧೬. ವಾಗ್ಗೇಯಕಾರ ವಾಸುದೇವಾಚಾರ್ಯ-(ವಾಗ್ಗೇಯಕಾರ ವಾಸುದೇವಾಚಾರ್ಯ, ಮೈಸೂರು ೧೯೬೫, ಪು. ೨೪೧-೨೪೮)
೧೭. ವಿನಯಶಾಲಿ ವೀರ ಕನ್ನಡಿಗ (ರಸಷಷ್ಠಿ, ಮೈ. ವಿ.ವಿ. ೧೯೮೦, ಪು. ೯೫-೧೦೧)
೧೮. ವಿ.ಸೀ. ನಾನು ತಿಳಿದ ಹಾಗೆ (ವಿ.ಸೀ. ೭೫, ಬೆಂಗಳೂರು, ೧೯೭೩)
೧೯. ಸಾಹಿತ್ಯ-ರಾಜರತ್ನಂ ಅವರ ಪರಿಚರ್ಯ (ರಾಜಮಾರ್ಗ ಬೆಂಗಳೂರು, ೧೯೮೦).

I(c) ಕನ್ನಡ ವಿಶ್ವಕೋಶದಲ್ಲಿ ಪ್ರಕಟವಾದ ಬರಹಗಳು :

೧. ಅಯ್ಯಾಶಾಸ್ತ್ರಿ ಸೋಸಲೆ
೨. ಕುಮಾರವ್ಯಾಸ
೩. ಚೌಂಡರಸ
೪. ಕಾನಕಾನಹಳ್ಳಿ ವರದಾಚಾರ್ಯ
೫. ತಿಮ್ಮಪ್ಪದಾಸರು
೬. ತುಂಬಲೂರಾಚಾರ್ಯ
೭ ನೃಪತುಂಗ
೮. ನಾರಾಯಣದಾಸರು
೯. ನಾರಾಯಣಶಾಸ್ತ್ರಿ
೧೦. ಪಂಪ
೧೧. ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ
೧೨. ಮೋಟಗಾನಹಳ್ಳಿ ಶಂಕರಶಾಸ್ತ್ರಿ
೧೩. ರಾಜಪುರೋಹಿತ ನಾರಾಯಣ ಶ್ರೀನಿವಾಸ
೧೪. ವಾಸುದೇವಾಚಾರ್ಯ
೧೫. ಶ್ರೀ ವಿಜಯ

I(d) ಬಾನುಲಿ ಬರಹಗಳು :

೧. ಬಾಲ ಬಸವೇಶ್ವರ (ರೂಪಕ, ಮಕ್ಕಳ ಕಾರ್ಯಕ್ರಮ ಆಕಾಶವಾಣಿ)

೨. ಜಿ. ಪಿ. ರಾಜರತ್ನಂ (ಭಾಷಣ) (ಆಕಾಶವಾಣಿ)

೩. ಪುರಂದರದಾಸರು ಮತ್ತು ದಾಸಕೂಟ (ಭಾಷಣ) ಆಕಾಶವಾಣಿ)

II(a) ಇಂಗ್ಲಿಷ್ ಗ್ರಂಥಗಳು : (ಜೀವನ ಚರಿತ್ರೆಗೆ ಸಂಬಂಧಿಸಿದಂತೆ)

Muddanna, (Central Sahithya Academy 1989)

II(b) ಇಂಗ್ಲಿಷ್ ಲೇಖನಗಳು (ಜೀವನ ಚರಿತ್ರೆಗೆ ಸಂಬಂಧಿಸಿದಂತೆ)

(ಭಾರತೀಯ ಸಾಹಿತ್ಯ ವಿಶ್ವಕೋಶಕ್ಕೆ ಬರೆದ ಕಿರು ಲೇಖನಗಳು)

1. Brahma Shiva.
2. Chamarasa.
3. Chikkadevaraja
4. Durga Shiva.
5. Mummadi Krishna Raja.
6. Basavappa Sastry.
7. Halakatti P. G.
8. Sarvajna.
9. Ranna.
10. Sree Purandaradasa, life and thought (9th National Geetha Gayana Yagna. Bangalore 1981)
11. Chavunda Raya and Attimabbe (March of Karnataka Magazine 1981 March issue)

ಈ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ನೆರವಾದ ಗ್ರಂಥಗಳು :

೧. ಆಸ್ವಾದ ಎಂ.ವಿ.ಸೀ. ಅಭಿನಂದನಗ್ರಂಥ (೧೯೮೩, ಉದಯಭಾನು ಕಲಾಸಂಗ).

೨. ಎಂ.ವಿ.ಸೀ.–೮೦ ೧೯೮೯, ನಾ. ಗೀತಾಚಾರ್ಯ, ವೆಂಕಟರಾವ್.

೩. ಎಂ.ವಿ.ಸೀ. ಸ್ಮರಣೆ ೧೯೯೨, ನಾ. ಗೀತಾಚಾರ್ಯ.

೪. ಎಂ. ವಿ. ಸೀತಾರಾಮಯ್ಯ–ಎಸ್. ವಿ. ಶ್ರೀನಿವಾಸರಾವ್.

೫. ಕಲಾರಾಘವ : ಜಿ. ಎಸ್. ವೆಂಕಟರಾಜು, ನಾ. ಗೀತಾಚಾರ್ಯ.

೬. ಎಂ.ವಿ.ಸೀ. ಶತಮಾನೋತ್ಸವ ಸಮಿತಿ–ಬಿ.ಎಂ.ಶ್ರೀ. ಸ್ಮಾರಕ ಸಂಸ್ಥೆ ಪ್ರಕಟನೆ

೭. ಮಕ್ಕಳ ಎಂ.ವಿ.ಸೀ.–ಜೆ. ಗೊ. ರಮೇಶ್, ೨೦೧೦ ಎಂ.ವಿ.ಸೀ. ಶತಮಾನೋತ್ಸವ ಸಮಿತಿ.

೮. ಪ್ರಬಂಧಗಳು ಮತ್ತು ವ್ಯಕ್ತಿಚಿತ್ರಗಳು (ಸಂ.೩) ಸಂ. ಕೆ. ಎಸ್. ಮಧುಸೂದನ.

೮. ಎಂ. ವಿ. ಸೀ. ಅವರ ಕಾವ್ಯಮೀಮಾಂಸೆಯ ವಿಚಾರಗಳು

• ಪ್ರೊ. ಜಿ. ಅಬ್ದುಲ್ ಬಷೀರ್

ಎಂ.ವಿಸೀ.ಸಮಗ್ರ ಸಾಹಿತ್ಯ ಮಾಲೆ–೧ ರಲ್ಲಿ ಪ್ರೊ. ಎಂ. ವಿ. ಸೀತಾರಾಮಯ್ಯನವರ 'ಕದಂಬ' ಎಂಬ ಸಮಗ್ರ ಸಂಶೋಧನ ಲೇಖನಗಳ ಸಂಪುಟವನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ–೧೯೯೩ ರಲ್ಲಿ ಪ್ರಕಟಿಸಿದೆ. ಈ ಕೃತಿಯ ಮೊದಲನೆಯ ಭಾಗವೇ 'ಕಾವ್ಯಮೀಮಾಂಸೆ'. ಇಲ್ಲಿ ಕಾವ್ಯಮೀಮಾಂಸೆಯ ವಿಚಾರಗಳನ್ನೊಳ ಗೊಂಡ ಹತ್ತು ಮೌಲಿಕವಾದ ಲೇಖನಗಳಿವೆ.

೧. ಕಾವ್ಯದ ವಸ್ತು.
೨. ಉದಯಾದಿತ್ಯಾಲಂಕಾರ–ಕೆಲವು ಸಮಸ್ಯೆಗಳು.
೩. ಅನ್ವಯ ಜಿಜ್ಞಾಸೆ.
೪. ಅನುಭೂತ್ಯಾಭಾಸ – ಒಂದು ಅಲಂಕಾರ.
೫. ಕಾವ್ಯಮೀಮಾಂಸೆಯ ಬಗೆಗೆ ಷಡಕ್ಷರ ಕವಿಯ ಚಿಂತನ.
೬. ಅಲಂಕಾರ ಪ್ರಸ್ಥಾನ.
೭. ಕಾವ್ಯ, ಕವಿಯ ಅನುಭವ.
೮. ಶಾಂತರಸ ; ಜೈನಧರ್ಮದ ಕೊಡುಗೆ.
೯. ರಾಮಾಶ್ವಮೇಧದಲ್ಲಿ ಲಕ್ಷಣ ಪ್ರಜ್ಞೆ.
೧೦. ಪಂಪನ ಅಲಂಕಾರ ಧ್ವನಿ.

ಪ್ರತಿಯೊಂದು ಲೇಖನದಲ್ಲಿಯೂ ವ್ಯಕ್ತವಾಗುವ ಎಂ.ವಿ.ಸೀ.ಯವರ ಆಳವಾದ ಅಧ್ಯಯನ, ಪಾಂಡಿತ್ಯ, ಸೃಜನಶೀಲಗುಣ, ಕನ್ನಡ–ಸಂಸ್ಕೃತ–ಇಂಗ್ಲೀಷ್ ಭಾಷಾ ಪರಿಣತಿ, ಸಂಶೋಧನ ಪ್ರವೃತ್ತಿ, ಪ್ರಾಚೀನ–ಅರ್ವಾಚೀನ ಸಾಹಿತ್ಯ ಕೃತಿಗಳಿಂದ ಸುಂದರವಾದ ಕವಿತೆಗಳನ್ನು ಉಲ್ಲೇಖಿಸುವುದು, ಚಿಕಿತ್ಸಕ ದೃಷ್ಟಿ, ಚರ್ಚೆ, ತಮ್ಮದೇ ಆದ ರೀತಿಯ ಅಭಿಪ್ರಾಯ ಮಂಡನೆ, ಅಡಿ ಟಿಪ್ಪಣಿಗಳ ಮೂಲಕ ಸಮರ್ಥನೆ. ವಿಚಾರಗಳನ್ನು ಕಾಲಾನುಕ್ರಮವಾಗಿ ಮಂಡಿಸುವುದು ಇಲ್ಲಿ ಗಮನಿಸಬೇಕಾದ ವಿಚಾರಗಳು.

ಮೊದಲನೆಯ ಲೇಖನ 'ಕಾವ್ಯದ ವಸ್ತು': 'ಕವಿತೆ ಮಾನವನ ಮತ್ತು ಪ್ರಕೃತಿಯ ಪ್ರತೀಕ' ('Poetry is the image of man and nature') ಎಂಬ ವರ್ಡ್ಸ್‌ವರ್ತ್ ಕವಿಯ ಉಲ್ಲೇಖದೊಡನೆ ಕನ್ನಡ ಮತ್ತು ಸಂಸ್ಕೃತ ಕವಿಗಳು ಕಾವ್ಯದ ವಸ್ತುವಿನ ಬಗ್ಗೆ ಮಂಡಿಸಿರುವ ವಿಚಾರಗಳನ್ನು ತಿಳಿಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ. ಮಾನವನ ಹರ್ಷ, ವಿಷಾದ, ಆಶೆ ನಿರಾಶೆ, ಕೆಚ್ಚು ನೆಚ್ಚು, ಒಲವು ಹಗೆ, ಧರ್ಮಾ ಧರ್ಮ ಪ್ರಜ್ಞೆ, ಶಾಂತಿ ಸಮಾಧಾನ, ಭಕ್ತಿ ವೈರಾಗ್ಯ–ಇವೇ ಮೊದಲಾದ ಭಾವ–ಭಾವನೆಗಳಿಗೆ ಕಾರಣಗಳಾದ ಮಾನವ ಪ್ರಪಂಚದ ಮತ್ತು ಪ್ರಕೃತಿ ಪ್ರಪಂಚದ ಘಟನೆಗಳೇ ಕಾವ್ಯ ಸಾಮಗ್ರಿ (ವಿಭಾವ). ಕಾವ್ಯ ಗದ್ಯದಲ್ಲಿರಬಹುದು, ಪದ್ಯದಲ್ಲಿರಬಹುದು, ಚಂಪೂವಿನಲ್ಲಿರ ಬಹುದು. 'ಕಾವ್ಯ' ಎಂದರೆ ಸೌಂದರ್ಯ. 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬ ಮಾತಗಳೂ ಅದನ್ನೇ ಸಮರ್ಥಿಸುತ್ತವೆ. ಕಾವ್ಯಕ್ಕೆ ವಸ್ತು ಯಾವುದಾದರೂ ಆಗಬಹುದು, ಅದು ಸಿದ್ಧಿಸುವುದು ಕವಿತೆಯ ಶೈಲಿ, ಗುಣ ಸ್ವರೂಪಗಳಿಂದ ಎಂದರೂ ವಸ್ತುವಿನ ಪ್ರಮಾಣ ಯೋಗ್ಯತೆಗಳೂ ಮುಖ್ಯವಾಗುತ್ತವೆ. ಪ್ರಖ್ಯಾತ ರಾಮಾಯಣ, ಮಹಾಭಾರತಗಳಂತಹ ಬೃಹತ್ ಮಹಾಕಾವ್ಯಗಳು ಬಂದಮೇಲೆ ಮುಂದಿನ ಕೃತಿಗಳೆಲ್ಲವೂ ಅವುಗಳ ಮಾದರಿಯಲ್ಲಿಯೇ ಬಂದವು; ಏಕೆಂದರೆ ಅವುಗಳ ವಸ್ತು ಅಷ್ಟು ಗಂಭೀರವಾದದ್ದು. ಆದರೆ ಮೇಘದೂತ ಮಾತ್ರ ಕವಿ ಕಲ್ಪಿತ ಕೃತಿಯಾಗಿದೆ.

'ರಸವೇ ಕಾವ್ಯದ ಆತ್ಮ' ಎಂದರೂ ಅದು ನೆಲಸಲು ಯೋಗ್ಯವಾದ ವಸ್ತು ಬೇಕು. 'ನ್ಯಾಯಕನ್ ಅನನ್ಯನಾಗೆ ಕೃತಿ ವಿಶ್ರುತಂ ಆಗದು ; ಉದಾತ್ತ ರಾಘವಂ ನಾಯಕನಾಗೆ ವಿಶ್ರುತಂ ಎನಿಪ್ಪುದು ವಿಸ್ಮಯಕಾರಿಯಲ್ತು.........ವಿಷಯಂ ಒಪ್ಪದೊಡೆ ಆವುದುಂ ಒಪ್ಪಲಾರ್ಕುಮೆ' ಎಂಬ ನಾಗಚಂದ್ರ ಕವಿಯ ಕವಿತೆಯನ್ನು ಉದಾಹರಿಸುತ್ತಾರೆ. ಆಯಾ ಕಾಲಧರ್ಮಕ್ಕೆ ಅನುಗುಣವಾಗಿ ರಾಜಾಧಿರಾಜರು, ಧಾರ್ಮಿಕ ಮಹಾಪುರುಷರು, ಶ್ರೀಮಂತರು, ಬಡವರು–ಹೀಗೆ ಎಲ್ಲ ಬಗೆಯ ಜನರ ಜೀವನವೂ ಕಾವ್ಯಕ್ಕೆ ವಸ್ತುವಾಗಬಹುದು. ಇಂದು ಜನಸಾಮಾನ್ಯರ ಬದುಕೇ ಕಾವ್ಯದ ವಸ್ತುವಾಗುತ್ತಿದೆ. ಈ ಬಗ್ಗೆ ಕ್ರಾಂತಿಯ ಕಹಳೆಯನ್ನು ಊದಿದವನು ವರ್ಡ್ಸ್‌ವರ್ತ್ ಎಂಬುದನ್ನು ಎಂ.ವಿ.ಸೀ. ಜ್ಞಾಪಿಸಿಕೊಳ್ಳುತ್ತಾರೆ.

ಸಾಮಾನ್ಯವಾದ 'ಗುಬ್ಬಿಯ ಗೂಡಿನ ಬಗ್ಗೆ ಟರ್ಗೈನಿಫ್ ಕವಿ ಕವಿತೆ ಬರೆದಿದ್ದರೂ ಅದು ಮಹಾಕಾವ್ಯವಾದೀತೆ ? ಸೂಜಿಯ ಮೊನೆಯ ಮೇಲೆ ಎಷ್ಟು ಜನ ಕವಿತೆ ಬರೆದಿದ್ದಾರೆ ? ಎಂದು ಪ್ರಶ್ನಿಸುವ ಎಂ.ವಿ.ಸೀ.ಯವರು, 'ವಸ್ತು ವೈವಿಧ್ಯ, ಪಾತ್ರ ವೈವಿಧ್ಯ, ಭಾವಸಂಪತ್ತು, ರಸಪ್ರವಾಹ, ಜೀವನ ವಿಮರ್ಶೆಗಳನ್ನು ಮಹಾಭಾರತ ದಂತಹ ಮಹಾಕಾವ್ಯವನ್ನು ಬಿಟ್ಟು ಮುಂದಿನ ಸಾಹಿತ್ಯ ಕೃತಿಗಳಲ್ಲಿ ಎಲ್ಲಿ ತರೋಣ ಎಂದು ಪ್ರಶ್ನಿಸುತ್ತಾರೆ. ಮಹಾಕೃತಿಗಳ ವಸ್ತುವಿನಲ್ಲಿ ಮಹತ್ತು ಬೃಹತ್ತು ಎರಡೂ ಇರಬೇಕಾಗುತ್ತದೆ ಎಂಬ ನಿರ್ಣಯಕ್ಕೆ ಬರುತ್ತಾರೆ.

ಎರಡನೆಯ ಲೇಖನ 'ಉದಯಾದಿತ್ಯಾಲಂಕಾರ ಕೆಲವು ಸಮಸ್ಯೆಗಳು': ದಂಡಿಯ ಕಾವ್ಯಾದರ್ಶನವನ್ನು ಅನುಸರಿಸಿ ರಚಿತವಾದ 'ಉದಯಾದಿತ್ಯಾಲಂಕಾರ' ಎಂ.ವಿ.ಸೀ.ಯವರು ಸಂಪಾದಿಸಿರುವ ಕೃತಿ. ಕೃತಿಕಾರ, ಕೃತಿ ಮತ್ತು ಕಾಲದ ಬಗ್ಗೆ ವಿಶೇಷವಾದ ಚರ್ಚೆಯನ್ನು ಮಾಡಿದ್ದಾರೆ ಎಂ.ವಿ.ಸೀಯವರು ಕನ್ನಡದ ಮೊದಲನೆಯ ಅಲಂಕಾರ ಶಾಸ್ತ್ರಗ್ರಂಥ ಕವಿರಾಜಮಾರ್ಗ ; ನಂತರ ಬಂದದ್ದು ಕಾವ್ಯಾವಲೋಕನ. ಎಂ.ವಿ.ಸೀ.ಯವರ ಪ್ರಕಾರ ಉದಯಾದಿತ್ಯಾಲಂಕಾರ ಎರಡನೆಯ ಅಲಂಕಾರ ಶಾಸ್ತ್ರಗ್ರಂಥವಾಗುತ್ತದೆ. ಈ ಕೃತಿಯ ಕಾಲ ಕ್ರಿ.ಶ. ೧೧೪೦ ಇರಬಹುದು ಎಂದು ಹೇಳುವುದರ ಮುಖಾಂತರ ಅದನ್ನು ಎರಡನೆಯ ಸ್ಥಾನದಲ್ಲಿ ಇರಿಸಿದ್ದಾರೆ. ಉದಯಾದಿತ್ಯಾಲಂಕಾರ ಕೃತಿಯ ಕರ್ತೃ ಉದಯಾದಿತ್ಯನಲ್ಲ ; ಅವನ ಆಶ್ರಿತ ಕವಿ ಈ ಕೃತಿಯ ಕರ್ತೃ ಎಂದು ಸಮರ್ಥಿಸಿದ್ದಾರೆ. 'ಉದಯಾದಿತ್ಯಾಲಂಕಾರದ ಚೋಳೋದಯಾದಿತ್ಯನೇ ಶಾಸನಗಳ ಚೋಡೋದಯ ಎಂದು ಭಾವಿಸಲು ಅಡ್ಡಿಯಿಲ್ಲ. ಆದರೆ ಉದಾಯಾದಿತ್ಯಾಲಂಕಾರವನ್ನು ಬರೆದಾತ ಮಾತ್ರ ಚೋಳೊ(ಡೋ)ದಯಾದಿತ್ಯನಲ್ಲ, ಆತನ ಆಶ್ರಿತನಾದ ಬೇರೊಬ್ಬ ಕವಿ ಆತನ ಅಂಕಿತದಲ್ಲಿ ಅದನ್ನು (ಸು. ೧೧೪೦ ರಲ್ಲಿ) ರಚಿಸಿರಬಹುದು ಎಂಬ ವಿಚಾರದಲ್ಲಿ ಸ್ವಲ್ಪವೂ ಸಂದೇಹವಿಲ್ಲ' ಎಂಬ ಖಂಡಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೂರನೆಯ ಲೇಖನ 'ಅನ್ವಯ ಜಿಜ್ಞಾಸೆ'–ಪ್ರತಿಕ್ರಿಯೆ: ಉದಯಾದಿತ್ಯಾಲಂಕಾರದ ೧೯ನೆಯ ಪದ್ಯಕ್ಕೆ ಎಂ.ವಿ.ಸೀ.ಯವರು ಬರೆದ ಟಿಪ್ಪಣಿಗೆ ಎಂ ಕೃಷ್ಣ ಶರ್ಮರು ಬರೆದ ಪ್ರತಿಕ್ರಿಯೆ ಸರಿಯಲ್ಲ ಎಂಬುದನ್ನು ಖಚಿತಪಡಿಸಲು ಬರೆದದ್ದು ಈ ಸಣ್ಣ ಲೇಖನ.

"ಕನಕಚ್ಛವಿಯಾದುದು ಕೊಳ
ನೆನೆನೇಯಂ ಬಾರದಂದು ಸರಸಿಜರಜದಿಂ
ಕನಕಚ್ಛವಿಯಾದುದು ಕೊಳ
ನೆನೆ [ಸೂಕ್ತಮನೇಯಮಪ್ಪುದ]ರ್ಥವ್ಯಕ್ತಂ".

ಅರ್ಥವ್ಯಕ್ತಿ ಎಂಬ 'ಗುಣ'ವನ್ನು ವಿವರಿಸುವುದು ಈ ಪದ್ಯದ ಉದ್ದೇಶ, ನೇಯವೆಂಬ ದೋಷವನ್ನು ವಿವರಿಸುವುದಲ್ಲ ಎಂಬುದನ್ನು ಎಂ.ವಿ.ಸೀ.ಯವರು ಸ್ಪಷ್ಟ ಪಡಿಸಿದ್ದಾರೆ.

ನಾಲ್ಕನೆಯ ಲೇಖನ 'ಅನುಭೂತ್ಯಾಭಾಸ : ಒಂದು ಅಲಂಕಾರ : ಇದೊಂದು ಅಪೂರ್ವ ಲೇಖನವಾಗಿದೆ. ಬೇರೆ ಬೇರೆ ಗ್ರಂಥಗಳಲ್ಲಿ ಈ ಅಲಂಕಾರ ಉಕ್ತವಾಗಿದ್ದರೂ, ಈ ಅಲಂಕಾರವನ್ನು ನಿರೂಪಿಸಿ ಅದಕ್ಕೆ ಹೆಸರನ್ನು ನೀಡಿರುವುದು ಎಂ.ವಿ.ಸೀ.ಯವರು. ಕಾವ್ಯಮೀಮಾಂಸೆಯಲ್ಲಿ ಈ ಅಲಂಕಾರಕ್ಕೆ ಒಂದು ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ಎಂ.ವಿ.ಸೀ.ಯವರಿಗೆ ಸೇರುತ್ತದೆ. ಕನ್ನಡ, ಸಂಸ್ಕೃತ ಮತ್ತು ಇಂಗ್ಲೀಷ್ ಕವಿತೆಗಳಿಂದ ಸುಂದರವಾದ ಉದಾಹರಣೆಗಳನ್ನು ನೀಡಿದ್ದಾರೆ. ಅವರ ಬಹು ಶ್ರುತತೆಗೆ ಈ ಅಲಂಕಾರ ನಿರೂಪಣೆ ಸುಂದರವಾದ ನಿದರ್ಶನವಾಗಿದೆ.

೧೮೧೯-೧೯೦೦ ರಲ್ಲಿದ್ದ ಜಾನ್ ರಸ್ಕಿನ್ ಪ್ರಸ್ತಾಪಿಸಿದ್ದ 'Pathetic Fallacy' ಎಂಬ ಅಲಂಕಾರಕ್ಕೆ ಎಂ.ವಿ.ಸೀ.ಯವರು 'ಅನುಭೂತ್ಯಾಭಾಸ ಅಲಂಕಾರ' ಎಂದು ಹೆಸರಿಸಿದ್ದಾರೆ. ಅವರ ಪ್ರಕಾರ ಇದೊಂದು ಬಗೆಯ 'ವಿರೋಧಾಭಾಸ' ಅಲಂಕಾರ. ಕಲೆಯ ಅಭಿವ್ಯಕ್ತಿಯಲ್ಲಿ ಸತ್ಯದ ಸ್ವರೂಪ ಹೇಗಿರಬೇಕು? 'ಕೆಂಡ ಸಂಪಿಗೆ, 'ಹಾರುವ ಹೂ', 'ನೀರೊಳಗಿರ್ದುಂ ಬೆಮರ್ತನುರಗ ಪತಾಕಂ', 'ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ'-ಎಂಬ ಕವಿ ಮಾತುಗಳು ಅಸತ್ಯವಾದರೂ ಇಲ್ಲಿನ ಧ್ವನಿ ಪಾಚುರ್ಯವನ್ನು ಗಮನಿಸಬೇಕು. ಕವಿಗೆ ಅನಿಸಿದ್ದರ ಅನುಭವವೇ ಅವನ ಅನುಭೂತಿ. ಇದೊಂದು ಬಗೆಯ ಉಕ್ತಿ ವೈಚಿತ್ರ್ಯ. ಪ್ರಕೃತಿಯ ವ್ಯಾಪಾರಗಳಿಗೆ ಮಾನವ ಮನೋಭಾವಗಳನ್ನು ಆರೋಪಿಸುವಂಥದ್ದು ಈ ಅಲಂಕಾರ. 'ಕೂಡ ವೃಕ್ಷಲತೆಗಳ್ ಬಾಡಿ ಕೊರಗುತಿರ್ದುವು ಶೋಕಭಾರದಿಂ, ಕಲ್ಗಳುಂ ಕರಗುತಿರ್ದುವು' ಎಂಬಲ್ಲಿ ವರ್ಣನೆ ವಸ್ತು ನಿಷ್ಠ, ಅನುಭೂತಿ ಕವಿಯದೇ ! ಅದನ್ನು ಅಚೇತನ ವಸ್ತುಗಳಲ್ಲಿ ಆರೋಪಣ ಮಾಡುವ ಮೂಲಕ ದುಃಖದ ಸನ್ನಿವೇಶದ ಗಾಢತೆಯನ್ನು ನಮಗೆ ಲಕ್ಷ್ಮೀಶ ಕವಿ ಅರಿವು ಮಾಡಿಕೊಟ್ಟಿದ್ದಾನೆ.

"ಎಲೆಯ ಹಸುರು ತೊಟ್ಟಿಲಲ್ಲಿ ಹನಿಯ ಹಸುಳೆ ನಗುತಿದೆ", ಇದು ಕಾವ್ಯ ಸತ್ಯವೇ ಹೊರತು ಲೋಕ ಸತ್ಯವಲ್ಲ. ಆಚೇತನ ವಸ್ತುಗಳಲ್ಲಿ ಚೇತನವನ್ನೂ ಅನುಭೂತಿಯನ್ನೂ ಆರೋಪಣೆ ಮಾಡುವುದು ಈ ಅಲಂಕಾರದ ಗುಣ. ಅನುಭೂತ್ಯಾರೋಪಣ ದೋಷವೇ Pathetic Fallacy' ನಾಗವರ್ಮನು ಕವಿ ಸಮಯ ಪ್ರಕರಣದಲ್ಲಿ ಉಲ್ಲೇಖಿಸಿದ 'ಚೇತನಾರೋಪಣ ಅಲಂಕಾವೂ ಇದೇ ಆಗಿದೆ. ಇದೊಂದು ಕಾವ್ಯ ಸೌಂದರ್ಯವನ್ನು ತಿಳಿಸುವ ವಿಶೇಷ ಅಲಂಕಾರವಾಗಿದೆ ಎಂಬ ತೀರ್ಮಾನಕ್ಕೆ ಬರುತ್ತಾರೆ ಎಂ.ವಿ.ಸೀ.ಯವರು.

ಐದನೆಯ ಲೇಖನ 'ಕಾವ್ಯಮೀಮಾಂಸೆಯ ಬಗೆಗೆ ಷಡಕ್ಷರ ಕವಿಯ ಚಿಂತನ-ಮಂಥನ' : ಸ್ಫೂರ್ತಿ, ಶಾಸ್ತ್ರಜ್ಞಾನ, ಕಾವ್ಯ ಕಾರಣ, ಕಾವ್ಯ ರಚನೆಯ ಅಗತ್ಯ, ದುಷ್ಕಾವ್ಯ-ಸತ್ಕಾವ್ಯದ ಸ್ವರೂಪ, ದುಷ್ಕವಿ-ಸತ್ಕವಿ, ದುರ್ಜನ-ಸಜ್ಜನ ಸ್ವಭಾವ: ಕುವಿಮರ್ಶೆ-ಸಹೃದಯತೆ, ಕಾವ್ಯಪ್ರಯೋಜನಗಳನ್ನು ಕುರಿತು ಷಡಕ್ಷರ ಕವಿಯ ಕವಿತೆಗಳ ಹಿನ್ನೆಲೆಯಲ್ಲಿ. ಎಂ.ವಿ.ಸೀ.ಯವರು ವಿವರವಾಗಿ ಚರ್ಚಿಸಿದ್ದಾರೆ.

ಕವಿಗೆ ಇರಬೇಕಾದ ಅರ್ಹತೆಗಳಲ್ಲಿ ಬಹುಶ್ರುತತ್ವ ಮತ್ತು ಕಾವ್ಯಶಾಸ್ತ್ರಜ್ಞಾನ ಬಹು ಮುಖ್ಯ ಎಂಬುದನ್ನು ಷಡಕ್ಷರಾರ್ಯನನಘಂ ಸಾಹಿತ್ಯ ಶಾಸ್ತ್ರಜ್ಞಂ' ಎಂಬ ಷಡಕ್ಷರ ಕವಿಯ ಮಾತಿನಿಂದಲೇ ತಿಳಿಯುತ್ತದೆ. ಅದಕ್ಕೆ ಷಡಕ್ಷರ ಕವಿಯ ಕೃತಿಗಳೇ ಸಾಕ್ಷಿಯಾಗಿವೆ. ಕವಿತೆಯ ಸೃಷ್ಟಿಗೆ ಅನೇಕ ಕಾರಣಗಳಿವೆ. 'ಪ್ರತಿಭಾನಂ ಕಾವ್ಯ ವಿದ್ಯಾ ಪ್ರಚಯ ಪರಿಚಯಂ ವೃದ್ಧಸೇವಾನುರಾಗಂ. ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಎಂಬ ನಿಸೆಯ ನಾಗವರ್ಮನ ಮಾತನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಕವಿತಾ ಚಿಂತಾಮಣಿ ಪೂರ್ವಜನ್ಮ ಪುಣ್ಯಫಲ ಮಾತ್ರವಲ್ಲ ' ಅದಕ್ಕೆ ಈಶ್ವರ ಕೃಪೆಯೂ

ಬೇಕು ಎಂಬುದನ್ನು ಷಡಕ್ಷರ ಕವಿ ಈ ಕವಿತೆಯಲ್ಲಿ ತಿಳಿಸಿರುವ ರೀತಿ ವಿನೂತನವಾಗಿದೆ.

"ಆರಾರೇರರ್ ಶಾಸ್ತ್ರ
ಶ್ರೀ ರೋಹಣ ಗಿರಿಯನಲ್ಲಿ ನವ ಕವಿತಾ ಚಿಂ
ತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀ ತಳದೊಳ್"
(ರಾಜಶೀಖರ ವಿಳಾಸ : ೧–೨೯)

ಷಡಕ್ಷರ ಕವಿ ಅಧಮ ಕಾವ್ಯವನ್ನು ವೃದ್ಧೆಗೆ ಹೋಲಿಸಿ, ಅಧಮ ಕಾವ್ಯದಲ್ಲಿ ರಸಭಾವಗಳಿರುವುದಿಲ್ಲ ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾನೆ. ಕವಿ, ರಸಿಕ, ವಿದ್ವಾಂಸರನ್ನು ಆನಂದಪರವಶವನ್ನಾಗಿಸುವುದೇ ಉತ್ತಮ ಕಾವ್ಯ ; ಶ್ರೇಷ್ಠ ಕಾವ್ಯವನ್ನು ಅರ್ಥಮಾಡಿಕೊಳ್ಳಲು ಶ್ರಮಪಡಬೇಕು. ವಿದ್ವಾಂಸರ ನೆರವನ್ನು ಪಡೆಯಬೇಕು ; ಕಾವ್ಯ ಅರ್ಥವಾಗಲಿಲ್ಲ ಎಂದ ಮಾತ್ರಕ್ಕೆ ಅದು ಕೆಟ್ಟ ಕಾವ್ಯವಾಗುವುದಿಲ್ಲ ಎಂಬುದು ಅವನ ಅರ್ಥಪೂರ್ಣವಾದ ವಿಚಾರವಾಗಿದೆ. ಕಾವ್ಯದ ದೋಷ ಎತ್ತಿಎತ್ತಿ ಹೇಳುವುದು, ಗುಣವನ್ನು ಮುಚ್ಚುವುದು ಒಳ್ಳೆಯ ವಿಮರ್ಶಕರ ಲಕ್ಷಣವಲ್ಲ ; ದುರ್ಜನ ವಿಮರ್ಶಕ ದೋಷವನ್ನು ಸೃಷ್ಟಿಸಬಲ್ಲ. 'ರಸವತ್ಕಾವ್ಯದ ರಸವನ್ನು ರಸಿಕರು ಮಾತ್ರ ಸವಿಯಬಲ್ಲರು; ಗಾಂಪರಲ್ಲ ; ಬೆಳದಿಂಗಳ ಸವಿಯನ್ನು ಚಕೋರಂಗಳು ಅರಿಯಬಲ್ಲ ಹಾಗೆ ಉಳಿದ ಪಕ್ಷಿಗಳು ಅರಿಯಬಲ್ಲವೇ ಎಂಬ ವಿಚಾರಗಳನ್ನು ಷಡಕ್ಷರ ಕವಿ ಪ್ರಸ್ತಾಪಿಸಿದ್ದಾನೆ., ಅವನ್ನು ಎಂ.ವಿ.ಸೀ.ಯವರು ಸರಳವಾಗಿ ನಿರೂಪಿಸಿದ್ದಾರೆ.

ಆರನೆಯ ಲೇಖನ ಅಲಂಕಾರ ಪ್ರಸ್ಥಾನ : ಅಲಂಕಾರ ಶಬ್ದದ ಪರ್ಯಾಯ ಶಬ್ದಗಳು, ಅರ್ಥವ್ಯಾಪ್ತಿ, ಅಲಂಕಾರ ಪಂಥದ ಬೆಳವಣಿಗೆಯನ್ನು ನಿದರ್ಶನಪೂರ್ವಕವಾಗಿ ಎಂ.ವಿ.ಸೀ.ಯವರು ವಿವರಿಸಿದ್ದಾರೆ. ದಂಡಿ ಅಲಂಕಾರ ಶಬ್ದದ ಅರ್ಥವ್ಯಾಪ್ತಿಯನ್ನು 'ಭೂಷಣ' (ಒಡವೆ, ತೊಡಿಗೆ) ಮಟ್ಟದಿಂದ ವಿಶಾಲಾರ್ಥದ 'ಸೌಂದರ್ಯಕ್ಕೆ' ವಿಸ್ತರಿಸಿರುವುದನ್ನು ಎಂ.ವಿ.ಸೀ. ವಿಶೇಷವಾಗಿ ಗುರುತಿಸಿದ್ದಾರೆ. ಅಲಂಕಾರಗಳು ಕರ್ಣನಿಗೆ ಹುಟ್ಟಿನಿಂದ ಕವಚಕುಂಡಲಗಳು ಹುಟ್ಟಿಬಂದಂತೆ ಗಿಡಗಳಲ್ಲಿ ಸಹಜ ಹೂ ಹಣ್ಣುಗಳಿದ್ದಂತೆ ಸಹಜವಾಗಿ, ಅರ್ಥಪೂರ್ಣವಾಗಿ ಮೂಡಬೇಕು; ಹೊರಗಿನಿಂದ ತಂದು ತೊಡಿಸಿದ ಆಭರಣಗಳಲ್ಲ; ಸರಳವಾಗಿ ಹೇಳುವುದಾದರೆ ಅಲಂಕಾರಗಳು ಮಾಡಿದವಲ್ಲ, ಮೂಡಿದವು. ಕಾವ್ಯಕ್ಕೆ ಸೌಂದರ್ಯವುಂಟುಮಾಡುವ ಸಮಸ್ತ ವಿಚಾರಗಳೂ ಅಲಂಕಾರಗಳೆ! ಭೋಜನ ದೃಷ್ಟಿಯಲ್ಲಿ ಧ್ವನಿಯೂ ಅಲಂಕಾರವೇ! ಒಟ್ಟಾರೆ ಅಲಂಕಾರಗಳು ವಿಶ್ಲೇಷಣೆ ವಕ್ರೋಕ್ತಿಯ ಉದಯಕ್ಕೆ ದಾರಿಮಾಡಿಕೊಟ್ಟಿತು ಎಂಬ ಡಾ. ವಿ. ರಾಘವನ್ ಅವರ ಮಾತನ್ನೂ ಉದಾಹರಿಸಿದ್ದಾರೆ.

ಏಳನೆಯ ಲೇಖನ 'ಕಾವ್ಯ-ಕವಿಯ ಅನುಭವ'. ಕವಿಯ ಲೋಕಾನುಭವವನ್ನು ಕಾವ್ಯಪಾಕವಾಗಿ ಪರಿವರ್ತಿಸುವುದು ಪ್ರತಿಭೆ. ಇಂಥ ಪ್ರತಿಭಾವಂತನೇ ಕವಿ. ಕವಿಯ ಲೋಕಾನುಭವ ಎರಡು ತೆರನಾದುದು. ತಾನು ಕಂಡು ನೇರವಾಗಿ ಅನುಭವಿಸಿದ ಪ್ರಕೃತಿ ಸೌಂದರ್ಯ, ಸುಖ ದುಃಖ, ಲೋಕ-ಜೀವನ ಸ್ವರೂಪ ಸ್ವಭಾವಗಳು-ಪ್ರತ್ಯಕ್ಷಾನುಭವ. ಕೇಳಿ, ಓದಿ, ತಿಳಿದು ತನ್ನದನ್ನಾಗಿ ಮಾಡಿಕೊಂಡ, ಹಿಂದಿನವರ ಲೋಕಾನುಭವ ಮತ್ತು ತನ್ನ ಕಾಲದ ಲೋಕ ಜೀವನದ ಪರೋಕ್ಷ ಪರಿಚಯ-ಪರೋಕ್ಷಾನುಭವ. ಮಹಾಭಾರತದಲ್ಲಿ ತಾನೇ ತಾನಾಗಿ ಭೋರ್ಗರೆಯುವ ವ್ಯಾಸರ ಅನುಭವ ಸಾಗರದಂತೆ ಅದ್ಭುತವಾದದ್ದು. ಶಿವಶರಣರ ವಚನಗಳು, ಸರ್ವಜ್ಞನ ವಚನಗಳು, ಜನಪದ ಗೀತೆಗಳು. ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಇವೆಲ್ಲ ಅನುಭವಾಮೃತ ಬಿಂದುಗಳು ಎಂಬುದನ್ನೂ ನಿದರ್ಶನಪೂರ್ವಕವಾಗಿ ವಿವರಿಸಿದ್ದಾರೆ. ಅರಿಕೇಸರಿಯ ಆಸ್ಥಾನದಲ್ಲಿ ವಿದ್ವಾಂಸ ಕವಿಯಾಗಿದ್ದ ಪಂಪನು ರಾಜಸೇವೆಯ ಕಷ್ಟವನ್ನು ತಾನೂ ಕೊಂಚವಾದರೂ ಅನುಭವಿಸಿ, ಅದನ್ನು ಕಣ್ಣಾರೆಕಂಡಿರಬೇಕು. ಕವಿಗಳ ಸಿರಿ ಎಂದರೆ ಅವರ ಅನುಭವ ಸಂಪತ್ತು. ನಮ್ಮ ಕನ್ನಡ ಕವಿಗಳು ಸಂಸ್ಕೃತ-ಪ್ರಾಕೃತ-ಇಂಗ್ಲೀಷ್ ಸಾಹಿತ್ಯ ಭಂಡಾರದಿಂದ ಅನುಭವ ಸಾಮಾಗ್ರಿಯನ್ನು ಎರವಲು ಪಡೆದಿರುವುದನ್ನು ಎಂ.ವಿ.ಸೀ.ಯವರು ಗುರುತಿಸಿದ್ದಾರೆ. ಕಾವ್ಯಗಳ ಬೆಲೆಕಟ್ಟುವಾಗ ಕವಿಗಳ ಅನುಭವ ಸಾಮಗ್ರಿಯ ಸೊಮ್ಮು ಎಷ್ಟರಮಟ್ಟಿಗೆ ಅವರದ್ದು ಎಂಬುದನ್ನು ಗುರುತಿಸಬೇಕಾದದ್ದು ಅತ್ಯವಶ್ಯ ಎಂಬ ನಿರ್ಧಾರವನ್ನು ಮಾಡಿದ್ದಾರೆ.

ಎಂಟನೆಯ ಲೇಖನ 'ಶಾಂತರಸ, ಜೈನಧರ್ಮದ ಕೊಡುಗೆ' : ನವರಸಗಳಲ್ಲಿ ಒಂದಾದ ಶಾಂತರಸ ಜೈನಧಾರ್ಮಿಕ ಕಾವ್ಯಗಳಲ್ಲಿ ವಿಶೇಷವಾಗಿ ಬಂದಿರುವ ರಸ. ಶಾಂತ-ಎಂದರೆ ನಿರ್ವೇದ, ಎಂದರೆ ನಿರ್ವಿಕಾರವಾದ ಸ್ವಸ್ಥಚಿತ್ತ ಉಪಶಾಂತಿ. ಕೋಪ ಮುಂತಾದ ರಾಗಭಾವಗಳಿಂದ ಹುಟ್ಟಿದ ಮನಸ್ಸಿನ ಉದ್ರೇಕ ಸ್ಥಿತಿ ಅಡಗಿ ಶಾಂತವಾಗುವುದೇ ಪ್ರಶಾಂತ. ಜೈನ ಸಂಸ್ಕೃತ ಗ್ರಂಥಕಾರರು ಶಾಂತರಸಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದರು ಎಂಬುದನ್ನು ಅನೇಕ ನಿದರ್ಶನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಎಲ್ಲ ಜೈನ ಪುರಾಣಗಳ ಮುಖ್ಯ ಉದ್ದೇಶ ಶಾಂತರಸ ಪ್ರತಿಪಾದನೆಯೇ ಆಗಿದೆ. ಶಾಂತರಸ ಪ್ರಸ್ತಾಪವನ್ನು ಅನೇಕ ಆಲಂಕಾರಿಕರು ಮಾಡಿದ್ದರೂ ಕಾವ್ಯಗಳಲ್ಲಿ ವಿಶೇಷವಾಗಿ ಅದನ್ನು ಬಳಸಿ ಅದಕ್ಕೆ ವಿಶೇಷವಾದ ಸ್ಥಾನವನ್ನೂ ನೀಡಿದವರು ಜೈನ ಕವಿಗಳು. ನಾಗವರ್ಮ-೨, ಕವಿಸಾಳ್ವರೂ ಈ ರಸದ ಪ್ರಸ್ತಾಪ ಮಾಡಿದ್ದಾರೆ. ಪಂಪ, ರನ್ನ, ಜನ್ನ, ನಾಗಚಂದ್ರ ಮುಂತಾದ ಕವಿಗಳಲ್ಲಿ 'ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ' ಎಂಬ ರೀತಿಯಲ್ಲಿ ಬಂದಿದೆ. ಬೌದ್ಧರು-ಜೈನರು ಶಾಂತರಸವನ್ನು ಪ್ರಧಾನರಸವೆಂದು ಪರಿಗಣಿಸಿದರು. ಕನ್ನಡಕ್ಕಂತೂ ಶಾತರಸ ಜೈನಧರ್ಮದ ಕೊಡುಗೆ.

ಒಂಬತ್ತನೆಯ ಲೇಖನ 'ರಾಮಾಶ್ವಮೇಧದಲ್ಲಿ ಲಕ್ಷಣ ಪ್ರಜ್ಞೆ' : ಮುದ್ದಣನ ಗದ್ಯದ ಧಾಟಿಯನ್ನೂ, ಸೊಗಸನ್ನೂ ಪರಿಚಯ ಮಾಡಿಕೊಡುವುದು ಈ ಲೇಖನದ

ಉದ್ದೇಶವಾಗಿದೆ. ಸಂಸ್ಕೃತ ಕನ್ನಡಗಳ ಹದವಾದ ಮಿಶ್ರಣದ ಕನ್ನಡ ನುಡಿಗಟ್ಟಿನಲ್ಲಿ 'ಲಕ್ಷಣ' ಅತಿಶಯವಾಗಿ ತೋರಿಬರುವಂತೆ ಕಥೆ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡಿದ್ದಾನೆ ಮುದ್ದಣ.

"ಏಗಳ್ ಲಕ್ಷ್ಮಣಂ ಸೀತೆಯಂ ಕೊಂಡುಯ್ದನೆಂಬ ವಾರ್ತೆ ಕೇಳಿಸಿದಾಗಳೆ ಪಶ್ಚಾತ್ತಾಪದಿಂ ರಾಘವನ ಮನಮೊಳಗೊಳಗೆ ಬೆಂದು ಬೇಗುದಿಯೊಳಿರ್ದತ್ತು" ಎಂದು ತೊಡಗಿ ಮುದ್ದಣ ಎರಡು ಪುಟಗಳಷ್ಟು (೪೫-೪೬)ಮಾಡಿರುವ ರಾಮನ ವಿಯೋಗ ದುಃಖವರ್ಣನೆ ವಿಪ್ರಲಂಭ ಶೃಂಗಾರಕ್ಕೆ ಶ್ರೇಷ್ಠವಾದ ನಿದರ್ಶನವಾಗಿದೆ ಎಂದು ಎಂ.ವಿ.ಸೀ.ಯವರು ಮನದುಂಬಿ ಹೊಗಳಿದ್ದಾರೆ. ಮುದ್ದಣ-ಮನೋರಮೆಯರ ಸಂವಾದಗಳಲ್ಲಿ ಶೃಂಗಾರ ಹಾಸ್ಯಗಳು ಅವ್ಯಕ್ತ ಮಧುರವಾಗಿ ತೆಳುವಾಗಿ ಹರಡಿಕೊಂಡು, ಹಿತಮಿತವಾಗಿ ಸೊಗಸುಗೊಂಡಿವೆ. ನೀಲಾಚಲದ ವರ್ಣನೆಯಲ್ಲಿ ಉತ್ಪ್ರೇಕ್ಷೆ ಮತ್ತು ಅತಿಶಯೋಕ್ತಿಗಳು ಅದ್ಭುತ ರಸಕ್ಕೆ ಪೋಷಕವಾಗಿವೆ. ಮುದ್ದಣ ಎಲ್ಲ ಅಲಂಕಾರಗಳನ್ನೂ ಹಿತಮಿತವಾಗಿ ಉಚಿತವಾದ ಕಡೆಗಳಲ್ಲಿ ಬಳಸಿದ್ದಾನೆ.

ಹತ್ತನೆಯ ಲೇಖನ 'ಪಂಪನ ಅಲಂಕಾರ ಧ್ವನಿ' : 'ಸಾಳ್ವನ ಶಾರದಾ ವಿಲಾಸ' ಮತ್ತು 'ರಸರತ್ನಾಕರ' ಶ್ರೀ ವಿಜಯನ ಕವಿರಾಜಮಾರ್ಗ, ಪಂಪನ ಆದಿಪುರಾಣಗಳಲ್ಲಿ ಪ್ರಸ್ತಾಪಿತವಾಗಿರುವ ಧ್ವನಿ ವಿಚಾರಗಳ ಚರ್ಚೆಯನ್ನು ಮಾಡುತ್ತಾ ಡಾ. ಕೆ. ಕೃಷ್ಣಮೂರ್ತಿ, ತೀ.ನಂ.ಶ್ರೀ.ಯವರ ಅಭಿಪ್ರಾಯಗಳನ್ನು ನೀಡಿ ಎಂ.ವಿ.ಸೀ.ಯವರು ತಮ್ಮ ನಿಲುವನ್ನೂ ಸ್ಪಷ್ಟಪಡಿಸಿದ್ದಾರೆ.

"ಧ್ವನಿಯೆನಿಸಿದಲಂಕಾರ
ಧ್ವನಿಯೆಸೆವಿನ *ಮೆಸೆವುದಲ್ಲಿ* ಮಧುರ ವಿಪಂಚೀ
ಧ್ವನಿಯೊಡನನೇಕರಾಗ
ಧ್ವನಿಯೆನೆಸೊಗಯಿಪುದು ಕಿನ್ನರ ಧ್ವನಿನಗದೊಳ್"
[*ಪಾಠಾಂತರ : ಮೆಸೆದುದಿಲ್ಲ (ಅ) ಮೆಸೆವುವಿಲ್ಲಿ (ಅ॥) ಮೆಸೆವುವಲ್ಲಿ (ಬ)]

ಡಾ. ಕೆ. ಕೃಷ್ಣಮೂರ್ತಿ, ಪ್ರೊ. ತೀ.ನಂ.ಶ್ರೀ. ಯವರು ಮೇಲಿನ ಪಂಪನ ಆದಿಪುರಾಣದ ಪದ್ಯಕ್ಕೆ ನೀಡಿರುವ ಅರ್ಥಗಳನ್ನು ಉಲ್ಲೇಖಿಸಿ, ಪದ್ಯಕ್ಕೆ ಅನ್ವಯಾನುಸಾರ ಅರ್ಥಮಾಡಿ, ಅನಂತರ ಅಲಂಕಾರ ಧ್ವನಿಯ ವಿಶೇಷಾರ್ಥವನ್ನೂ ಹುಡುಕಹೊರಡುವುದು ಸರಿಯಾದ ಕ್ರಮ ಎಂದು ಹೇಳಿ ಹೀಗೆ ಅನ್ವಯ ಮಾಡಿದ್ದಾರೆ:

ಅಲ್ಲಿ ಮಧುರ ವಿಪಂಚೀಧ್ವನಿ 'ಧ್ವನಿಯೆನಿಸಿದ ಅಲಂಕಾರಧ್ವನಿ ಎಸೆವಿನಂ ಎಸೆವುದು ; (ನಗದೊಳ್) ಒಡನೆ ಕಿನ್ನರಧ್ವನಿ ಅನೇಕ ರಾಗಧ್ವನಿಯೆನೆ ಸೊಗಯಿಪುದು. ಸಂಗೀತ ಶಾಸ್ತ್ರದ ಪರಿಭಾಷೆಯ ಹಿನ್ನೆಲೆಯಲ್ಲಿ ಎಂ.ವಿ.ಸೀ.ಯವರು ಮೇಲಿನ ಪದ್ಯವನ್ನು ಅರ್ಥೈಸಿದ್ದಾರೆ.

ಪರ್ವತ ಪ್ರಾಂತದಲ್ಲಿ ಕಿನ್ನರರು ವಿಪಂಚಿಯನ್ನು ನುಡಿಸುತ್ತ, ಅದರೊಂದಿಗೆ (ಗೀತವನ್ನು ಹಾಡುತ್ತಿದ್ದರು. ಆಗ ವಿಪಂಚೀವಾದನದಲ್ಲಿ ಧ್ವನಿ'–ಎಂದು ವ್ಯವಹರಿಸಲ್ಪಡುವ 'ಅಲಂಕಾರ ಧ್ವನಿ' (=ಗಮಕ) ಶೋಭಿಸುವ ಹಾಗೆ (=ಎಸೆವಿನಂ) ಸವಿಯಾದ ವೀಣಾನಾದವು ಮೆರೆಯುತ್ತಿತ್ತು ; ಒಡನೆಯೇ (ಎಂದರೆ ಒಡಗೂಡಿ, ಜೊತೆಯಲ್ಲಿ) ಹಾಡುತ್ತಿದ್ದ ಕಿನ್ನರರ ಶಾರೀರದಲ್ಲಿ (ಕಂಠಧ್ವನಿಯಲ್ಲಿ) (ರಾಗಗಳ ಬದಲಾವಣೆಯಿಂದ ಧ್ವನಿಗಳ ಅಥವಾ ಸ್ವರಗಳ ಶ್ರುತಿ ಸಂಖ್ಯೆಯಲ್ಲಿ ಬದಲಾವಣೆಯಾಗಿ ತತ್ಪರಿಣಾಮವಾಗಿ ರಾಗಭಾವಗಳಲ್ಲಿ ಅನೇಕತ್ವ ಅಥವಾ ವೈವಿಧ್ಯವುಂಟಾಗಿ) ಅನೇಕ ರಾಗಭಾವಗಳು (= 'ಅನೇಕ ರಾಗಧ್ವನಿ') ಪ್ರಕಟವಾಗುತ್ತಿವೆಯೋ ಎಂಬಂತೆ, ಅವರ ಕಂಠಧ್ವನಿ (= 'ಕಿನ್ನರ ಧ್ವನಿ) ಸೊಗಸುತ್ತಿತ್ತು. ಪ್ರೊ. ಎಂ.ವಿ.ಸೀ.ಯವರ ಕಾವ್ಯಮೀಮಾಂಸೆಯ ವಿಚಾರಗಳಲ್ಲಿ ಅನೇಕ ನವೀನ ಅಂಶಗಳನ್ನು ಕಾಣಬಹುದಾಗಿದೆ. ಕೆಲವು ವಿಚಾರಗಳಂತೂ ಅವರು ಸ್ಥಾಪಿಸಿರುವ ಮೊಟ್ಟಮೊದಲ ವಿಚಾರಗಳಾಗಿವೆ.

■

೯. ಎಂ.ವಿ.ಸೀ. ಅವರ ಸಂಶೋಧನ ಲೇಖನಗಳು

• ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ*

ಪ್ರೊ. ಎಂ. ವಿ. ಸೀತಾರಾಮಯ್ಯನವರು ಕಾವ್ಯ, ಸಣ್ಣಕತೆ, ಕಾದಂಬರಿ, ನಾಟಕ ಮುಂತಾದ ಕ್ಷೇತ್ರಗಳಲ್ಲಿ ಗಣನೀಯವಾದ ಕೃಷಿಯನ್ನು ಮಾಡಿದ್ದಾರಾದರೂ ಅವರ ಮುಖ್ಯ ಆಸಕ್ತಿ ಇದ್ದದ್ದು ಕಾವ್ಯಮೀಮಾಂಸೆ, ಗ್ರಂಥಸಂಪಾದನೆ ಮುಂತಾದ ಶಾಸ್ತ್ರಸಂಬಂಧೀ ಅಧ್ಯಯನಗಳಲ್ಲಿ. ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ, ಅರ್ಜುನ, ಕೀರ್ತನ ಕುಸುಮಾಂಜಲಿ ಮುಂತಾದ ಕೃತಿಗಳನ್ನು ಅವರು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಆ ಮೂಲಕ ಸಂಶೋಧನ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

ಎಂ.ವಿ.ಸೀ. ಅವರು ತಮ್ಮ ಪೂರ್ವಸೂರಿಗಳಾದ ಬಿ.ಎಲ್. ರೈಸ್, ಆರ್. ನರಸಿಂಹಾಚಾರ್ಯ, ಎಂ.ಎ. ರಾಮಾನುಜ ಅಯ್ಯಂಗಾರ್, ಟಿ.ಎಸ್. ವೆಂಕಣ್ಣಯ್ಯ ಮುಂತಾದವರ ಪರಂಪರೆಯ ಸಮರ್ಥ ಉತ್ತರಾಧಿಕಾರಿಗಳು. ಅವರೆಲ್ಲರಂತೆಯೇ ಎಂ.ವಿ.ಸೀ.ಯವರೂ ತಾವು ಸಂಪಾದಿಸಿದ ಕೃತಿಗಳ ಪ್ರಸ್ತಾವನೆಗಳಲ್ಲಿ ಹಾಗೂ ಇತರ ಸಂಪ್ರಬಂಧಗಳಲ್ಲಿ ತಮ್ಮ ಸಂಶೋಧನ ಶಕ್ತಿಯನ್ನು ತೋರಿದ್ದಾರೆ. ತಮ್ಮ ಅಧ್ಯಯನದ ವಿಧಾನವನ್ನು ಅವರೇ ಒಂದೆಡೆ ಹೀಗೆ ವಿವರಿಸಿದ್ದಾರೆ.

"....ಗ್ರಂಥ ಸಂಪಾದನೆ ಮಾಡುವಾಗ ಪಾಠ ಪರಿಷ್ಕರಣ ಹೊಂದಿಗೆಯೇ ಗ್ರಂಥದ ವ್ಯಾಖ್ಯಾನ ಕಾರ್ಯವೂ (ಎಂದರೆ ಅಭ್ಯಾಸ ಪೂರ್ಣವಾದ ಟಿಪ್ಪಣಿ ಬರೆಯುವ ಕೆಲಸವೂ) ಕವಿಕಾವ್ಯ ವಿಚಾರ ವಿಮರ್ಶೆಯೂ ಜೊತೆ ಜೊತೆಯಾಗಿ ನಡೆಯಬೇಕು ಎನ್ನುವ ಪಂಥಕ್ಕೆ ಸೇರಿದವನು ನಾನು. ಹೀಗೆ ಮಾಡುವುದರಿಂದ, ಗ್ರಂಥದ ಆಳವಾದ ಅಭ್ಯಾಸಕ್ಕೆ ಅವಕಾಶವಾಗುತ್ತದೆ ; ಪೂರ್ವ ವಿದ್ವಾಂಸರ ಗಮನಕ್ಕೆ ಬಾರದಿದ್ದ ಎಷ್ಟೋ ಸಂಗತಿಗಳು ಗೋಚರವಾಗುತ್ತವೆ ; ಪರಿಹಾರವಾಗದಿದ್ದ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ, ಹೊಸ ಸಮಸ್ಯೆಗಳೂ ಹುಟ್ಟಿಕೊಳ್ಳುತ್ತವೆ..."[೧]

---

೧. 'ಉದಯಾದಿತ್ಯಾಲಂಕಾರ : ಕರ್ತೃವಿಚಾರ', ಕದಂಬ ಪು. ೨೬೨-೬೩.

ಎಂ.ವಿ.ಸೀ. ಸಂಸ್ಮರಣ ಸಮಿತಿಯ ಪರವಾಗಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ೧೯೯೩ ರಲ್ಲಿ 'ಕದಂಬ' ಎಂಬ ಶೀರ್ಷಿಕೆಯಲ್ಲಿ ಎಂ.ವಿ.ಸೀ.ಯವರ ಸಮಗ್ರ ಸಂಶೋಧನ ಲೇಖನಗಳ ಸಂಪುಟವನ್ನು ಹೊರತಂದಿದೆ. ಈ ಕೃತಿಯಲ್ಲಿ ಕಾವ್ಯಮೀಮಾಂಸೆ, ಗ್ರಂಥ ಸಂಪಾದನೆ, ವ್ಯಾಕರಣ, ಛಂದಸ್ಸು, ಕವಿಕಾಲ ವಿಚಾರ, ಸಂಗೀತ, ಇತಿಹಾಸ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಮೂವತ್ತೆರಡು ಸಂಪ್ರಬಂಧಗಳಿವೆ. ಅವುಗಳಲ್ಲಿ ಆಯ್ದ ಕೆಲವು ಲೇಖನಗಳನ್ನು ಇಲ್ಲಿ ಸಂಕ್ಷೇಪವಾಗಿ ವಿಶ್ಲೇಷಿಸಲಾಗಿದೆ.

ಕರ್ನಾಟಕವನ್ನು ಆಳಿದ ಪ್ರಾಚೀನ ರಾಜವಂಶಗಳಲ್ಲಿ ಒಂದಾದ ಶಿಲಾಹಾರರ ವಂಶನಾಮ ನಾಮದ ಅರ್ಥವನ್ನು ನಿರ್ಧರಿಸಲು ಎಂ.ವಿ.ಸೀ.ಯವರು 'ಶಿಲಾಹಾರ : ವಂಶನಾಮದ ನಿರ್ವಚನ' ಎಂಬ ಸಂಪ್ರಬಂಧವನ್ನು ರಚಿಸಿದ್ದಾರೆ. ಖ್ಯಾತ ವಿದ್ವಾಂಸರಾದ ಡಾ. ವಿ. ವಿ. ಮಿರಾಶಿಯವರು 'Corpus Inscriptionum Indicarum' ಗ್ರಂಥಮಾಲೆಯ ಆರನೆಯ ಸಂಪುಟವಾಗಿ 'ಶಿಲಾಹಾರರ ಶಾಸನಗಳು' ಎಂಬ ಗ್ರಂಥವನ್ನು ಸಂಪಾದಿಸುವಾಗ 'ಶಿಲಾಹಾರ' ಎಂಬ ವಂಶನಾಮದ ನಿಷ್ಪತ್ತಿಯ ಬಗ್ಗೆ ಎಂ.ವಿ.ಸೀ.ಯವರನ್ನು ಪತ್ರದ ಮುಖೇನ ವಿವರಣೆ ಕೋರಿದ್ದರು. ಆ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನ ರಚಿತವಾಗಿದೆ.

ಡಾ॥ ಮಿರಾಶಿಯವರ ಪ್ರಕಾರ ಶಿಲಾಹಾರರು ಕನ್ನಡಿಗರು. ಅವರು ತಮ್ಮನ್ನು 'ಸೆಲಾರ ವಂಶಸ್ಥರು' ಎಂದು ಕರೆದುಕೊಂಡಿದ್ದಾರೆ. 'ಸೆಲಾರ'ವೇ ಸಂಸ್ಕೃತೀಕರಣವಾಗಿ 'ಶಿಲಾಹಾರ' ಎಂದಾಗಿದೆ. 'ಶಿಲಾಹಾರ' ಎಂದರೆ ಕಲ್ಲುಪಲಗೆಯ ಮೇಲೆ ಆಹಾರವನ್ನು ತೆಗೆದುಕೊಳ್ಳುವವರು. ಈ ವಂಶನಾಮದ ಮೂಲವು ಜೀಮೂತವಾಹನನ ಕಥೆಗೆ ಸಂಬಂಧಪಟ್ಟಿದೆ. ಜೊತೆಗೆ ಪರಶುರಾಮನ ಶರಹತಿಯಿಂದ ಭೀತಿಗೊಳಗಾದ ಸಾಗರವನ್ನು ಶೀಲಾರನೆಂಬವನು ರಕ್ಷಿಸಿದನು. ಈ ಪೂರ್ವಜನಿಂದ ಶೀಲಾರನೆಂಬ ವಂಶನಾಮವು ನಿಷ್ಪನ್ನವಾಗಿದೆ.

'ಶಿಲಾಹಾರ' ಎಂಬ ಶಬ್ದಕ್ಕೆ ವಿದ್ವಾನ್ ಶೇಷಅಯ್ಯಂಗಾರ್ಯರು ಕೊಲ್ಲಾಪುರದ ಬಳಿಯ ಮುತ್ತಿಗೆ ಎಂಬ ಗ್ರಾಮದ ಶಾಸನ, ಹರ್ಷನ ನಾಗಾನಂದ ನಾಟಕ ಮುಂತಾದವುಗಳ ನೆರವಿನಿಂದ ನಿಷ್ಪತ್ತಿಯನ್ನು ಮಾಡಲು ಯತ್ನಿಸಿರುವುದನ್ನು ಎಂ.ವಿ.ಸೀ.ಯವರು ಗಮನಿಸಿದ್ದಾರೆ. ಮುತ್ತಿಗೆಯ ಶಾಸನದಲ್ಲಿ 'ಶಿಲಾಹಾರವ್ರತ' (ಕಲ್ಲನ್ನೇ ಆಹಾರವಾಗಿ ಭುಂಜಿಸುವ ವ್ರತ)ವನ್ನು ಆಚರಿಸಿ ಆ ವಂಶದ ಮೂಲ ಪುರುಷನು ರಾಜ್ಯವನ್ನು ಪಡೆದನೆಂಬ ಉಲ್ಲೇಖವಿದೆ. ಶೇಷ ಅಯ್ಯಂಗಾರ್ಯರು ಈ ನಿಷ್ಪನ್ನವನ್ನು ಒಪ್ಪದೆ 'ಶಿಲಾಹಾರ' ಎಂಬುದು ಮೂಲತಃ 'ಶಿಲಹಾರ' ಎಂದಿರಬೇಕು. ಅದು ಹೊಲಗದ್ದೆಗಳಲ್ಲಿ ಉದುರಿರುವ ಧಾನ್ಯದ ಕಾಳನ್ನು ಸಂಗ್ರಹಿಸುವ 'ಶಿಲವೃತ್ತಿ' ಸಂಬಂಧಪಟ್ಟಿದ್ದು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ.

ಎಂ.ವಿ.ಸೀ.ಯವರು ಮೇಲಿನ ಎಲ್ಲ ನಿಷ್ಪತ್ತಿಗಳನ್ನು ತಿರಸ್ಕರಿಸಿ ತಮ್ಮದೇ ಆದ ಹೊಸ ವ್ಯಾಖ್ಯೆಯನ್ನು ನೀಡಿದ್ದಾರೆ. ಅವರ ಪ್ರಕಾರ ಶಲ್ಯ, ಶಲ್ಲೆ, ಶಾಲೆ, ಶೆಲ್ಲೆ, ಸೇಲೆ, ಸೆಲೆ ಮುಂತಾದ ಎಲ್ಲ ಶಬ್ದಗಳು ಕನ್ನಡದಲ್ಲಿ 'ಬಟ್ಟೆ' ಎಂಬ ಅರ್ಥವನ್ನು ಸೂಚಿಸುತ್ತವೆ. ಇದಕ್ಕೆ ಆರ, ಕಾರ, ಗಾರ ಎಂಬ ತದ್ಧಿತ ಪ್ರತ್ಯಯಗಳು ಸೇರಿ 'ಸೆಲಾರ' ಎಂಬ ತದ್ಧಿತಾಂತ ಶಬ್ದವಾಗುತ್ತದೆ.

ಸೇಲೆ+ಗಾರ (<ಕಾರ) =ಸೇಲೆಗಾರ>ಸೇಲಾರ>ಸೆಲಾರ. ಹೀಗೆಂದರೆ ನೇಯ್ಗೆ ಯವರು. ಶಿಲಾಹಾರರ ಆಳ್ವಕೆಯ ಪ್ರದೇಶಗಳಾದ ಪುಣೆ, ನಾಸಿಕ್, ಕೊಲ್ಲಾಪುರ, ಧಾರವಾಡ, ಬೆಳಗಾವಿ ಮಂತಾದ ಜಿಲ್ಲೆಗಳಲ್ಲಿ ನೇಯ್ಗೆಯು ಪ್ರಮುಖ ವೃತ್ತಿಯಾಗಿತ್ತು ಎಂಬುದನ್ನು ಅವರು ಎತ್ತಿತೋರಿದ್ದಾರಲ್ಲದೆ ವಚನ ಸಾಹಿತ್ಯದ ಉಲ್ಲೇಖಗಳನ್ನೂ ಬಳಸಿಕೊಂಡಿದ್ದಾರೆ. ಮಿರಾಶಿಯವರು ಎಂ.ವಿ.ಸೀ.ಯವರ ಈ ವಾದವನ್ನು ಒಪ್ಪಿಲ್ಲವಾದರೂ ಮತ್ತೊಬ್ಬ ಹಿರಿಯ ಇತಿಹಾಸಕಾರರಾದ ಜಿ.ಎಸ್. ದೀಕ್ಷಿತರು ಇದನ್ನು ಪುರಸ್ಕರಿಸಿದ್ದಾರೆ.

ಸೆಲಾರ > ಸಿಲಾರ > ಶಿಲಾರ > ಶೀಲಾರ > ಶಿಲಾಹಾರ.

ಎಂಬ ನಿಷ್ಪತ್ತಿಯನ್ನು ಅವರು ನೀಡಿದ್ದಾರೆ. ಲೇಖನದ ಕಡೆಯಲ್ಲಿರುವ "ಬೇರೆ ಇನ್ನಾವ ರೀತಿಯಲ್ಲಿ 'ಸೆಲಾರ'ಕ್ಕೂ 'ಶಿಲಾಹಾರ'ಕ್ಕೂ ನಂಟಿನ ಗಂಟು ಹಾಕಬಹುದು ಎಂಬದನ್ನು ವಿದ್ವಾಂಸರು ವಿಚಾರ ಮಾಡಲಡ್ಡಿಯಿಲ್ಲ. ಈ ವಿಚಾರದಲ್ಲಿ ನಮ್ಮದೇ ಕೊನೆಯ ಮಾತು ಎಂದೇನೂ ಇಲ್ಲ" ಎಂಬ ಹೇಳಿಕೆ ಎಂ.ವಿ.ಸೀ.ಯವರ ವಿನಯಶೀಲತೆಯ ಸಾಕ್ಷಿಯಾಗಿದೆ.

ಗಮಕ ಕಲೆಯ ಸ್ವರೂಪ

ಪ್ರಸ್ತುತ ಸಂಪ್ರಬಂಧದಲ್ಲಿ ಪ್ರೊ॥ ಎಂ.ವಿ.ಸೀ.ಯವರು ಕಾವ್ಯವಾಚನದ ವಿಶಿಷ್ಟ ಕಲೆಯಾದ ಗಮಕ ಕಲೆಯ ಸ್ವರೂಪವನ್ನು ಕುರಿತು ಚರ್ಚಿಸಿದ್ದಾರೆ. ಆರ್. ನರಸಿಂಹಾಚಾರ್ಯ, ರಾಳ್ಳಪಲ್ಲಿ ಅನಂತ ಕೃಷ್ಣಶರ್ಮ, ಎಲ್. ರಾಜಾರಾವ್, ತೀ. ನಂ. ಶ್ರೀಕಂಠಯ್ಯ ಮುಂತಾದ ವಿದ್ವಾಂಸರು ಈ ಮೊದಲೇ ಚರ್ಚಿಸಿದ್ದ ವಿವರಗಳ ಹಿನ್ನೆಲೆಯಲ್ಲಿ ಮತ್ತಷ್ಟು ಹೊಸ ಸಂಗತಿಗಳನ್ನು ಮಂಡಿಸಲು ಅವರು ಇಲ್ಲಿ ಯತ್ನಿಸಿದ್ದಾರೆ.

"ಗಮಕ ಕಲೆ ವಾಚನ ನಿಷ್ಠವಾದುದೇ, ಗಾಯನ ನಿಷ್ಠವಾದುದೇ ? ಗಮಕ ಶಬ್ದ ಯಾವುದನ್ನು ಸೂಚಿಸುತ್ತದೆ ? ವಾಚನವನ್ನೇ, ಗಾಯನವನ್ನೇ" ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಅವರು ಇಲ್ಲಿ ಪ್ರಯತ್ನ ನಡೆಸಿದ್ದಾರೆ. ಮತಂಗನ 'ಬೃಹದ್ದೇಶಿ', ಶಾರ್ಙ್ಗದೇವನ 'ಸಂಗೀತ ರತ್ನಾಕರ', ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣ', ಶ್ರೀವಿಜಯನ 'ಕವಿರಾಜಮಾರ್ಗ' ಮುಂತಾದ ಕೃತಿಗಳಲ್ಲಿ ಇರುವ ಗಮಕ ಸಂಬಂಧಿ ವಿವರಗಳನ್ನು ಅವರು ದಾಖಲಿಸಿದ್ದಾರೆ. ಕೂಲಂಕಷವಾದ ಪರಿಶೀಲನೆಯ ನಂತರ ಅವರು ವ್ಯಕ್ತಪಡಿಸಿರುವ ಖಚಿತ ಅಭಿಪ್ರಾಯವಿದು :

"....ಸಾಹಿತ್ಯದ ರಥಕ್ಕೆ ಸಂಗೀತದ ಅಶ್ವಗಳನ್ನು ಹೂಡಿ ಅದನ್ನು ಸುಗಮವಾಗಿ ನಡೆಸುವ ಸಾರಥ್ಯ ಕೌಶಲವೇ ಗಮಕ....ಗಮಕ ಕಲೆಯ ಸ್ವರೂಪವನ್ನು ಖಚಿತವಾಗಿ ನಿರೂಪಿಸುವ ಶಾಸ್ತ್ರವೊಂದು ಇಲ್ಲದಿರುವುದು ದೊಡ್ಡ ಕೊರತೆ. ಕಾವ್ಯಶಾಸ್ತ್ರ, ಸಂಗೀತಶಾಸ್ತ್ರ ಮುಂತಾದ ಶಾಸ್ತ್ರಗಳು ಬೆಳೆದುಬಂದ ಹಾಗೆ "ಗಮಕ ಶಾಸ್ತ್ರ" ಬೆಳೆದು ಬರಲಿಲ್ಲ. ಗಮಕಕಲೆ ಇತರ ಕಲೆಗಳಂತೆ ಲಕ್ಷ್ಯಲಕ್ಷಿತವಾಗಿಲ್ಲದಿರುವುದು ಬಹುಶಃ ಈ ಶಾಸ್ತ್ರದ ಅಭಾವಕ್ಕೆ ಮುಖ್ಯ ಕಾಣ ಎಂದು ಕಾಣುತ್ತದೆ. ಗಮಕ ಕಲೆ ಎಂದಿನಿಂದಲೂ ಒಂದು ಕಡೆ ಗಾಯನವನ್ನೂ ಇನ್ನೊಂದು ಕಡೆ ಕಾವ್ಯವನ್ನೂ ಸ್ವಲ್ಪ ಮಟ್ಟಿಗೆ (ವಾಚಿಕ) ಅಭಿನಯವನ್ನೂ ಅವಲಂಬಿಸಿಕೊಂಡು ಬೆಳೆದು ಬಂದಿರುವ ಉಪಜೀವಿ ಕಲೆ. ಉಪಜೀವಿಯೆನಿಸಿದರೂ, ಗಾಯಕನ ಕಲೆಯ ನೆರವಿನಿಂದ ಕಾವ್ಯವನ್ನು-ಚಾಕ್ಷುಷ ಸಂಜ್ಞಾ ಶರೀರಿಯಾದ ಜಡಕಾವ್ಯವನ್ನು-ಅದರ ಸ್ವಸ್ವರೂಪದಲ್ಲಿ, ಚೈತನ್ಯಾತ್ಮಕವಾದ ಶ್ರವ್ಯರೂಪದಲ್ಲಿ ಉಜ್ಜೀವಿಸುವ ಕಲೆ. ಗಮಕದ ಪೌರೋಹಿತ್ಯವಿಲ್ಲದೆ ಕಾವ್ಯ-ಗಾಯನಗಳ ಸಂಲಗ್ನ ಸಿದ್ಧಿಸದು. ನಮಗೆ ನಾವೇ ಓದಿಕೊಳ್ಳುವಾಗ ಕೂಡ, ನಮಗೆ ನಾವೇ ಗಮಕಿಗಳೂ ಶ್ರೋತೃಗಳೂ ಆಗುತ್ತೇವೆ ; ನಮ್ಮ ಮಾನಸಿಕ ಗಮಕಕ್ಕೆ ಒಳಗಿವಿಯ ಮೂಲಕ ನಮ್ಮ ಹೃದಯವೇ ಶ್ರೋತೃ."[೨]

ಭಾಗವತ ಧರ್ಮ

'ವಾಸುದೇವ' ಸ್ವರೂಪನಾದ ಕೃಷ್ಣನನ್ನು ಆರಾಧಿಸುವ 'ಭಾಗವತ ಧರ್ಮ'ದ ಉಗಮ ಮತ್ತು ವಿಕಾಸಗಳನ್ನು ಪರಿಚಯಿಸುವ ಯತ್ನವನ್ನು ಎಂ.ವಿ.ಸೀ.ಯವರು ಪ್ರಸ್ತುತ ಸಂಪ್ರಬಂಧದಲ್ಲಿ ನಡೆಸಿದ್ದಾರೆ. ಭಾಗವತ ಧರ್ಮವು ವೈಷ್ಣವ ಸಂಪ್ರದಾಯದ್ದು ಎಂಬ ಪರಂಪರಾಗತವಾದ ಅಭಿಪ್ರಾಯಕ್ಕಿಂತಲೂ ಭಿನ್ನವಾದ ಚಿಂತನೆಯನ್ನು ಅವರು ಇಲ್ಲಿ ಮಂಡಿಸಿದ್ದಾರೆ.

ವೇದ, ಉಪನಿಷತ್ತು ಹಾಗೂ ಮಹಾಭಾರತದಲ್ಲಿನ ಭಾಗವತ ಪಂಥದ ವಿವರಗಳನ್ನು ಮೊದಲಿಗೆ ಅವರು ನಿರೂಪಿಸಿ ಅದೇ ನಂತರದಲ್ಲಿ 'ಪಾಂಚರಾತ್ರಮತ'ವೆಂದು ಹೆಸರಾಯಿತೆಂದು ಹೇಳಿದ್ದಾರೆ. ವಾಸುದೇವ-ಪ್ರದ್ಯುಮ್ನ-ಸಂಕರ್ಷಣ-ಅನಿರುದ್ಧ ಎಂಬ ನಾಲ್ವರು ಅರ್ಚಾಮೂರ್ತಿಗಳಿಂದ ಕೂಡಿದ ಚತುರ್ವ್ಯೂಹ ಕಲ್ಪನೆ ಪಂಚರಾತ್ರದ ವಿಷತೆ. ಪಂಚರಾತ್ರಮತವನ್ನು ಶಂಕರಾಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ನಿರೂಪಿಸಿರುವುದನ್ನು ವಿವರಿಸಿ "ಅದ್ವೈತ ವಿರುದ್ಧವಾದ ಅಂಶಗಳನ್ನು ಬಿಟ್ಟು ವಾಸುದೇವ ಪರಮಾರ್ಥ ತತ್ವದಲ್ಲಿ ವಿಶ್ವಾಸವಿಟ್ಟು, ಅಭಿಗಮನಾದಿ ಪೂಜಾ ಜಪ ಧ್ಯಾನಾದಿಗಳಿಂದ ಭಗವದಾರಾಧನೆ ಮಾಡುವ ಅದ್ವೈತಾನುಯಾಯಿಗಳನ್ನೇ ಭಾಗವತರು ಎಂದು ತಿಳಿಯುವುದು ಸೂಕ್ತ" ಎಂಬ

---

೨. 'ಗಮಕ ಕಲೆಯ ಸ್ವರೂಪ', ಕದಂಬ ಪು. ೩೧೦

ತೀರ್ಮಾನಕ್ಕೆ ಬಂದಿದ್ದಾರೆ.[೩] ತ್ರಿಮೂರ್ತಿಗಳಲ್ಲಿ ಏಕೋಭಾವ, ಹರಿಹರರಲ್ಲಿ ಅಭೇದ, ಸರ್ವದೇವತಾ ಸಮ ಪ್ರಾಧಾನ್ಯ, ವಿಷ್ಣುಭಕ್ತಿ ಪ್ರತಿಪಾದನೆ ಎಂಬ ನಾಲ್ಕು ತತ್ವಗಳು ಭಾಗವತದ ಮತದ ಮೂಲ ಸೂತ್ರಗಳಾಗಿದ್ದು ಇವು ದ್ವೈತ ಹಾಗೂ ವಿಶಿಷ್ಟಾದ್ವೈತಗಳಿಗಿಂತ ಸ್ಮಾರ್ತ ಸಂಪ್ರದಾಯಕ್ಕೆ ಚೆನ್ನಾಗಿ ಹೊಂದುತ್ತವೆ ಎಂಬುದನ್ನು ಅವರು ಸೋದಾಹರಣವಾಗಿ ತೋರಿಸಿಕೊಟ್ಟಿದ್ದಾರೆ.

ಲೇಖನದ ಉತ್ತರಾರ್ಧದಲ್ಲಿ ಸಮಗ್ರ ಭಾರತದಲ್ಲಿ, ಹಾಗೂ ವಿಶೇಷವಾಗಿ ಕರ್ನಾಟಕದಲ್ಲಿ ಚಾರಿತ್ರಿಕವಾಗಿ ವ್ಯಾಪಿಸಿದ ಬಗೆಯನ್ನು ವಿವರಿಸಲಾಗಿದೆ. ಶಾತವಾಹನ, ಗುಪ್ತ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮುಂತಾದ ರಾಜವಂಶಗಳ ಕಾಲದಲ್ಲಿ ಭಾಗವತಮತವು ಪ್ರಚಾರಗೊಂಡ ಬಗೆಯನ್ನು ಅವರು ನಿರೂಪಿಸಿದ್ದಾರಲ್ಲದೆ ರುದ್ರಭಟ್ಟ, ಚೌಂಡರಸ, ಕುಮಾರವ್ಯಾಸ, ಲಕ್ಷ್ಮೀಶ, ನಿತ್ಯಾತ್ಮಶುಕಯೋಗಿ ಮುಂತಾದ ಕನ್ನಡದ ಪ್ರಾಚೀನ ಕವಿಗಳು ಸ್ಮಾರ್ತಭಾಗವತರೆಂಬ ಸಿದ್ಧಾಂತವನ್ನು ಮಂಡಿಸಿದ್ದಾರೆ. ಆಧುನಿಕ ಯುಗದಲ್ಲಿ ಭಾಗವತಮತವೇ ರಾಮಕೃಷ್ಣಪರಮಹಂಸ, ಥಿಯಾಸೋಫಿ ಪಂಥ ಮುಂತಾದವರ ಮೂಲಕ 'ಕಾಲ ಧರ್ಮೋಚಿತ'ವಾಗಿ ಪರಿಷ್ಕಾರಗೊಂಡಿದೆ ಎಂದು ಹೇಳುವುದರ ಮೂಲಕ ಲೇಖನಕ್ಕೆ ಸಮಗ್ರತೆಯನ್ನು ನೀಡಿದ್ದಾರೆ.

ಮೇಲಿನ ಮೂರು ಸುಪ್ರಬಂಧಗಳಲ್ಲಿ ಪ್ರಧಾನವಾಗಿ ಕಂಡುಬರುವ ಅಂಶಗಳೆಂದರೆ ಪೂರ್ವಸೂರಿಗಳ ಬಗೆಗೆ ಲೇಖಕರಿಗಿರುವ ಗೌರವ, ಪೂರ್ವೋತ್ತರ ಪಕ್ಷಗಳ ಸಮತೂಕದ ಪ್ರಸ್ತುತಿ, ಇತರರ ಅಭಿಪ್ರಾಯಗಳನ್ನು ಖಂಡಿಸುವಲ್ಲಿ ಇರುವ ಸಂಯಮ ಹಾಗೂ ತಮ್ಮ ವಾದವೇ ಸರಿ ಎಂಬ ಹಟಮಾರಿತನ ಇಲ್ಲದಿರುವಿಕೆ. ಈ ಎಲ್ಲ ಕಾರಣಗಳಿಂದಾಗಿ ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಮುಂದಿನ ಪೀಳಿಗೆಯ ಎಲ್ಲ ಸಂಶೋಧಕರಿಗೆ ಮೇಲ್ಪಂಕ್ತಿಯಾಗಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ.

■

೩. 'ಭಾಗವತ ಧರ್ಮ', ಕದಂಬ ಪು. ೩೩೦

೧೦. ಹಸ್ತಪ್ರತಿ ಅಧ್ಯಯನದ ಕಾರಣಪುರುಷ

• ರಾ. ನಂ. ಚಂದ್ರಶೇಖರ್

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧ ಮತ್ತು ಇಡೀ ೨೦ನೇ ಶತಮಾನವೆಂದರೆ ಅದು ಕನ್ನಡದ ಮಹಾನ್ ಪ್ರತಿಭೆಗಳ ಸುಗ್ಗಿ ಎಂದೇ ಹೇಳಬೇಕು. ಕನ್ನಡ ಸಂಸ್ಕೃತಿಯನ್ನು ಸಮಕಾಲೀನವಾಗಿ ಪೊರೆದು, ಅದನ್ನು ಮುಂದಿನ ತಲೆಮಾರುಗಳಿಗೆ ದಾಟಿಸಬೇಕು ಎಂದು ಆಗ ಸಾಮೂಹಿಕವಾಗಿ ಮೂಡಿದ ಕಳಕಳಿಯೇ ಇದಕ್ಕೆ ಕಾರಣ. ಆಚಾರ್ಯ ಬಿ.ಎಂ.ಶ್ರೀ ಅವರಿಂದ ಬಹುದೊಡ್ಡ ಮಟ್ಟದಲ್ಲಿ ಆರಂಭವಾದ ಈ 'ಕನ್ನಡ ಕಾಯಕ' ನೂರು ವರ್ಷಗಳ ನಂತರವೂ ತನ್ನ ನಿರಂತರತೆಯನ್ನು ಕಾಪಾಡಿಕೊಂಡಿರುವುದು ಕರ್ನಾಟಕದ ಕಲಶಪ್ರಾಯ ಸಂಗತಿಗಳಲ್ಲೊಂದು. ಹೀಗೆ ಬಿ.ಎಂ.ಶ್ರೀ. ಅವರಿಂದ ಕನ್ನಡ ದೀಕ್ಷೆಕೈಗೊಂಡು, ತಮ್ಮ ಪ್ರತಿಭೆಯ ದಿಗ್ದರ್ಶನ ಮಾಡಿಸಿದವರಲ್ಲಿ ಎಂ. ವಿ. ಸೀತಾರಾಮಯ್ಯ (ಎಂ.ವಿ.ಸೀ. ಅವರ ಕಾವ್ಯನಾಮ 'ರಾಘವ')ಅವರು ಕೂಡ ಒಬ್ಬರು. ಅವರು ಇಂದು ನಮ್ಮೊಂದಿಗಿದಿದ್ದರೆ ಸರಿಯಾಗಿ ೧೦೦ನೇ ವರ್ಷಕ್ಕೆ (ಜನನ : ಸೆ. ೯, ೧೯೧೦) ಕಾಲಿಡುತ್ತಿದ್ದರು.

ಆ ಕಾಲಕ್ಕೆ ಮೈಸೂರು, ಕನ್ನಡ ಸಂಸ್ಕೃತಿಯ ತೊಟ್ಟಿಲು. ಮೈಸೂರು ಒಡೆಯರು ಲಲಿತ ಕಲೆಗಳಿಗೆಲ್ಲ ನೀಡಿದ ಔದಾರ್ಯಪೂರ್ಣ ಪ್ರೋತ್ಸಾಹ ಮತ್ತು ಕವಿ-ಕಲಾವಿದರಿಗೆ ನೀಡಿದ ಆಶ್ರಯದ ಫಲವಿದು. ಅಲ್ಲಿ ಆಗ ಕೇವಲ ಮಲ್ಲಿಗೆಯ ಘಮವಷ್ಟೇ ಇರಲಿಲ್ಲ. ವೀಣೆಯ ಬೆಡಗೂ ಅಕ್ಷರಗಳ ವಿಲಾಸವೂ ಮನೆಮಾಡಿತ್ತು. ಇಂಥ ಪರಿಸರದಲ್ಲೇ ಹುಟ್ಟಿದ ಎಂ.ವಿ.ಸೀ, ಬಹುಮುಖ ಆಸಕ್ತಿಗಳನ್ನು ಬೆಳೆಸಿಕೊಂಡಿದ್ದು ತೀರಾ ಸಹಜವೇ ಆಗಿತ್ತು. ಕೌಟುಂಬಿಕ ಹಿನ್ನೆಲೆಯ ದೃಷ್ಟಿಯಿಂದ ಹೇಳುವುದಾದರೆ ಎಂ.ವಿ.ಸೀ. ಅವರು ದಾಸಕೂಟದ ಪರಂಪರೆಗೆ ಸೇರಿದವರು. ೧೭೦೦ರ ಆಸುಪಾಸಿನಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿದ್ದ ಶ್ರೀವಾಸುದೇವಾರ್ಯರು ಇವರ ವಂಶಸ್ಥರು : ಹರಿದಾಸರಾಗಿದ್ದ ತಿಮ್ಮಪ್ಪದಾಸರು ಎಂ.ವಿ.ಸೀ. ಅವರ ಮುತ್ತಜ್ಜ. ಮುಂದೆ ಎಂ.ವಿ.ಸೀ. ಅವರೇ ಹಸ್ತಪ್ರತಿಗಳ ವ್ಯಾಪಕ ಅಧ್ಯಯನ ನಡೆಸಿ ಈ ತಿಮ್ಮಪ್ಪ ದಾಸರ ಕೀರ್ತನೆಗಳನ್ನೆಲ್ಲ

ಪತ್ತೆ ಹಚ್ಚಿ ಅವನ್ನೆಲ್ಲ ಒಂದು ಅಚ್ಚುಕಟ್ಟಾದ ಸಂಪುಟವಾಗಿ ಹೊರತಂದರು. ಹಾಗೆ ನೋಡಿದರೆ ಈಗ ರಾಜ್ಯದ ವಿಶ್ವವಿದ್ಯಾಲಯಗಳಲ್ಲೆಲ್ಲ ಬೇರೂರಿರುವ ಹಸ್ತಪ್ರತಿ ಅಧ್ಯಯನ ಶಾಸ್ತ್ರದ ಮೂಲಪುರುಷ ಎಂ.ವಿ.ಸೀ. ಎಂದೇ ಹೇಳಬೇಕು !

ಎಂ.ವಿ.ಸೀ. ಎಂದರೆ, ಈಗ ಅವರ ಭಾವಗೀತಾತ್ಮಕ ಸಾಹಿತ್ಯ ಹಲವರಿಗೆ ನೆನಪಾಗುತ್ತದೆ. ಆದರೆ ಅವರ ಆಸಕ್ತಿ ಅಷ್ಟಕ್ಕೇ ಸೀಮಿತವಾಗಿರಲಿಲ್ಲ. ಸಂಗೀತ, ಚಿತ್ರಕಲೆ, ಮೃದಂಗವಾದನ, ಗ್ರಂಥ ಸಂಪಾದನೆ, ನಿಘಂಟು ರಚನೆ, ವ್ಯಾಕರಣ, ಸಣ್ಣಕಥೆ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ ಹೀಗೆ ಎಲ್ಲವನ್ನೂ ಅವರು ಕರಗತ ಮಾಡಿಕೊಂಡಿದ್ದರು. ಚಿತ್ರಕಲೆಯಲ್ಲಂತೂ ಅವರು ವರ್ಣಶಿಲ್ಪಿ. ಕೆ. ವೆಂಕಟಪ್ಪನವರ ಖಾಸಾ ಶಿಷ್ಯ. ಬಹಳ ಹಿಂದೆ ಪ್ರಕಟವಾಗಿರುವ ಕುವೆಂಪು, ರಾಜರತ್ನಂ, ನಾ. ಕಸ್ತೂರಿ ಮುಂತಾದವರ ಅನೇಕ ಪುಸ್ತಕಗಳಲ್ಲಿ ಇವರು ಬಿಡಿಸಿದ ಮೋಹಕ ರೇಖಾಚಿತ್ರಗಳನ್ನು ನೋಡಬಹುದು. ಆ ಕಾಲಕ್ಕೇ ಅವರಿಗೆ ಚಿತ್ರಕಲೆಗಾಗಿ ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಮದ್ರಾಸ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಗಳಲ್ಲಿ ಬಹುಮಾನ ಸಿಕ್ಕಿತ್ತು. ಇನ್ನು ಮೃದಂಗವಾದನದಲ್ಲಂತೂ ಅವರು ಬಾಲ್ಯದಲ್ಲೇ ವೀಣೆ ಶೇಷಣ್ಣನವರಂಥ ಘಟಾನುಘಟಿಗೆ ಪಕ್ಕವಾದ್ಯಗಾರರಾಗಿ ಗಮನ ಸೆಳೆದಿದ್ದರು. ಇದರ ಜತೆಗೆ ಅವರ ಮನೆಯಲ್ಲೇ ಪದೇಪದೇ ಭಜನೆ ಮೇಳ ಮತ್ತು ಸಂಗೀತ ಕಛೇರಿಗಳ ಸಾಂಗತ್ಯ ಬೇರೆ !

ಹೀಗಿದ್ದ ಎಂ.ವಿ.ಸೀ. ಅವರಲ್ಲಿ ಸಾಹಿತ್ಯದ ರುಚಿ ಹತ್ತಿಸಿದ್ದು ತೀ.ನಂ. ಶ್ರೀಕಂಠಯ್ಯನವರ ಒಡನಾಟ. ನಂತರ ಟಿ. ಎಸ್. ವೆಂಕಣ್ಣಯ್ಯ, ಡಿ. ಎಲ್. ನರಸಿಂಹಾಚಾರ್, ಬಿ.ಎಂ.ಶ್ರೀ, ಎ. ಎನ್. ಮೂರ್ತಿರಾವ್, ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ, ನಾ. ಕಸ್ತೂರಿ ಮುಂತಾದವರ ಸಂಪರ್ಕ ಲಭ್ಯವಾಯಿತು. ಪ್ರಗತಿಶೀಲ ಸಾಹಿತ್ಯ ಪಂಥ ಮುಂಚೂಣಿಗೆ ಬಂದಾಗಲಂತೂ ಎಂ.ವಿ.ಸೀ. ಅವರದು ಕೂಡ ಅದರಲ್ಲೊಂದು ಅಗ್ರಮಾನ್ಯ ಹೆಸರಾಗಿತ್ತು. ವಿದ್ಯಾರ್ಥಿಯಾಗಿದ್ದಾಗಲೇ ಅವರುತಮ್ಮ ಕಾವ್ಯ ರಚನೆಗೆ 'ಬಿ.ಎಂ.ಶ್ರೀ. ರಜತೋತ್ಸವ ಸ್ವರ್ಣ ಪದಕ'ಕ್ಕೆ ಪಾತ್ರರಾಗಿದ್ದವರು. ನಂತರ ೧೯೩೩ ರಿಂದ ೧೯೩೯ರ ವರೆಗೆ ಡಿ.ವಿ.ಜಿ. ಅವರ ಜೊತೆಗೂಡಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಅವರು ಸಲ್ಲಿಸಿದ ಸೇವೆ ಮೌಲಿಕ. ಇದಾದ ಮೇಲೆ ೧೯೩೯ ರಿಂದ ೧೯೪೬ರ ವರೆಗೆ ಅವರದು ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್–ಕನ್ನಡ ನಿಘಂಟಿನ ಸಹಸಂಪಾದಕರಾಗಿ ತಪಸ್ಸಿಗೆ ಸಮನಾದ ಸಾಧನೆ. ಅನಂತರ ೧೯೪೬ ರಿಂದ ೧೯೬೭ರ ವರೆಗೆ ಬೆಂಗಳೂರಿನ ಸರಕಾರಿ ಕಲಾ ಕಾಲೇಜಿನಲ್ಲಿ ಕನ್ನಡ ಬೋಧನೆ. ಇಷ್ಟಾದ ಮೇಲೂ ಅವರು ಬೆಂಗಳೂರು ವಿ.ವಿ.ಯಲ್ಲಿ ಐದು ವರ್ಷಗಳ ಮಟ್ಟಿಗೆ ಯು.ಜಿ.ಸಿ. ಗೌರವ ಪ್ರಾಧ್ಯಾಪಕರಾಗಿದ್ದರು. ಅವರ ಕನ್ನಡ ಕಳಕಳಿ ಇಷ್ಟೇ ಅಲ್ಲ, ಗೋಕಾಕ್ ಚಳವಳಿ ನಡೆದಾಗ ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ಅವರು ಕನ್ನಡದ ಪರವಾಗಿ ಬೀದಿಗಿಳಿದರು. ಇಂಥ ಎಂ.ವಿ.ಸೀ. ಅವರ ಇನ್ನೊಂದು ಕಲಶಪ್ರಾಯ ಸಾಧನೆ ಎಂದರೆ, ಅವರು ತಮ್ಮ ಮನೆಯಲ್ಲೇ

ಹುಟ್ಟುಹಾಕಿದ 'ಬಿ.ಎಂ.ಶ್ರೀ. ಪ್ರತಿಷ್ಠಾನ'. ಇದು ಅವರು ತಮ್ಮ ನೆಚ್ಚಿನ ಗುರುವಿಗೆ ಸಲ್ಲಿಸಿದ ದಕ್ಷಿಣೆ! ಬಿ.ಎಂ.ಶ್ರೀ. ಪ್ರತಿಷ್ಠಾನವು ಇಂದು ರಾಜ್ಯದ ಪ್ರಮುಖ ಸಂಶೋಧನಾ ಸಂಸ್ಥೆಗಳ್ಲಿ ಒಂದಾಗಿದೆ. ಇದರಿಂದ ಸ್ಫೂರ್ತಿ ಪಡೆದೇ ಬಿ.ಎಂ.ಶ್ರೀ. ಅವರ ಹುಟ್ಟೂರಾದ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನಲ್ಲಿ ಕೂಡ ಭವ್ಯವಾದ ಶತಮಾನೋತ್ಸವ ಭವನವನ್ನು ಕಟ್ಟಲಾಗಿದೆ.

ಅವರು ಬಹಳ ಶ್ರಮಪಟ್ಟು ಸಂಪಾದಿಸಿದ 'ಕವಿರಾಜಮಾರ್ಗ' ಕನ್ನಡ ಅಧ್ಯಯನ ಮಾಡುವವರಿಗೆ ಇಂದಿಗೂ ಒಂದು ಗಟ್ಟಿ ಆಧಾರ ಗ್ರಂಥ. 'ಪ್ರಾಚೀನ ಕನ್ನಡ ವ್ಯಾಕರಣಗಳು', 'ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ', 'ಅರ್ಚನಾ' ಮುಂತಾದ ಅವರ ಕೃತಿಗಳಿಗೂ ಈ ಮೆಚ್ಚುಗೆ ಸಲ್ಲಬೇಕು. ಕನ್ನಡದಲ್ಲಿ ಸ್ನಾತಕೋತ್ತರ ಅಧ್ಯಯನ ಮಾಡುವವರಿಗಂತೂ ಈ ಕೃತಿಗಳ ಅಧ್ಯಯನ ಕಡ್ಡಾಯ ಎಂದರೂ ತಪ್ಪಿಲ್ಲ. ಇದಲ್ಲದೆ ಅವರ 'ರಾಬಿನ್ಸನ್ ಕ್ರೂಸೊ', 'ಸಾಹಿತ್ಯ ಮತ್ತು ಚಿತ್ರಕಲೆ', 'ಸೂತ ಭಾರತ', 'ಕೀರ್ತನ ಕುಸುಮಾಂಜಲಿ', 'ಕನ್ನಡ ಸಾಹಿತ್ಯದಲ್ಲಿ ಶಾಂತ ರಸ', 'ಯುಧಿಷ್ಠಿರ', 'ಕವಿ ರನ್ನ', 'ರಾಜಾ ರಾಜವರ್ಮ' ಮುಂತಾದ ಕೃತಿಗಳು ಗಮನಾರ್ಹ. ಕನ್ನಡದ ಪುಟಾಣಿಗಳ ನಾಲಿಗೆಯ ಮೇಲೆ ಸದಾ ಜೀವಂತವಾಗಿರುವ 'ಹೂವನು ಮಾರುವ ಹೂವಾಡಗಿತ್ತಿ ಹಾಡುತ ಬರುತಿಹಳು....' ಎನ್ನುವ ಶಿಶುಗೀತೆ ಇರುವ 'ಹೂವಾಡಗಿತ್ತಿ', 'ಹಾವಾಡಿಗ' ಮತ್ತು 'ಕೋಡಂಗಿ'–ಈ ಮೂರು ಸಹ ಕನ್ನಡ ಶಿಶು ಸಾಹಿತ್ಯಕ್ಕೆ ಅವರ ಅನನ್ಯ ಕೊಡುಗೆಗಳು. ಕಾವ್ಯಾಸ್ವಾದನೆಯ ಅಭಿರುಚಿಯನ್ನು ನಮ್ಮ ಮಕ್ಕಳಿಗೆ ಬಾಲ್ಯದಿಂದಲೇ ರೂಢಿಸಬೇಕು ಎಂದು ಒತ್ತಿ ಹೇಳುತ್ತಿದ್ದ ಅವರು, ಈ ಸಂಕಲನಗಳಲ್ಲಿ ಎಳೆಯ ಮಕ್ಕಳಿಗೆ ತಕ್ಕುದಾದ, ಅತ್ಯಂತ ಸರಳ ಪದ, ಲಯ ಮತ್ತು ಪ್ರಾಸಗಳಿಂದ ಕೂಡಿದ ನೂರಾರು ಪದ್ಯಗಳನ್ನು ರಚಿಸಿದ್ದಾರೆ.

ಕನ್ನಡ ಅಧ್ಯಯನ ಕ್ರಮದ ಸಾಧ್ಯತೆಗಳನ್ನು ವಿಸ್ತರಿಸಿದವರಲ್ಲಿ ಎಂ.ವಿ.ಸೀ ಅಗ್ರಗಣ್ಯರು. ತಮ್ಮ ಮನೆಯ ಅಟ್ಟದಲ್ಲೇ ಬಿದ್ದಿದ್ದ ನೂರಾರು ಹಸ್ತಪ್ರತಿಗಳ ಬಗ್ಗೆ ಕುತೂಹಲ ತಾಳಿದ ಅವರು ಅದನ್ನೊಂದು ಗಂಭೀರ ಅಧ್ಯಯನವಾಗಿ ಬೆಳೆಸಿದರು ಅವರಿಲ್ಲದಿದ್ದರೆ ಇಂದು ನಮ್ಮಲ್ಲಿ ಗ್ರಂಥಸಂಪಾದನೆ ಮತ್ತು ಹಸ್ತಪ್ರತಿ ಶಾಸ್ತ್ರವೇ ಅಸ್ತಿತ್ವದಲ್ಲಿ ಇರುತ್ತಿರಲಿಲ್ಲ. ಹಸ್ತಪ್ರತಿ ಅಧ್ಯಯನ ಶಾಸ್ತ್ರ ಈಗ ಬಹಳ ಮಹತ್ವದ ಅಂತರ್ ಶಾಸ್ತ್ರೀಯ ಅಧ್ಯಯನವಾಗಿ ಬೆಳೆದಿದೆ. ಇದಕ್ಕೆ ಶಾಸ್ತ್ರೀಯವಾದ ಚೌಕಟ್ಟು ಹಾಕಿಕೊಟ್ಟವರು ಎಂ.ವಿ.ಸೀ. ಅವರೇ! ಕನ್ನಡದಲ್ಲಿ ಇವತ್ತು ಸಂಶೋಧನಾ ರಂಗ ತೀರಾ ದುಸ್ಥಿತಿಯಲ್ಲಿದೆ. ಅತ್ಯಂತ ಅಸಂಗತ ವಿಚಾರಗಳನ್ನೆಲ್ಲ ಕುರಿತು ಮತ್ತು ಅತ್ಯಂತ ಬಾಲಿಶವಾದ ರೀತಿಯಲ್ಲಿ ನಮ್ಮ ಮಹಾಪ್ರಬಂಧಗಳನ್ನು ಈಗ 'ಸಿದ್ಧ'ಗೊಳಿಸುತ್ತಿದೆ. ಸಂಶೋಧನೆಗೆ ತೊಡಗುವವರು ಎಂ.ವಿ.ಸೀ. ಅವರು ಮನ್ನಣೆಯ ದಾಹವಿಲ್ಲದೆ ವರ್ಷಗಟ್ಟಲೆ ಶ್ರಮಪಟ್ಟು ರಚಿಸಿದ ಕೆಲವು ಪುಸ್ತಕಗಳನ್ನಾದರೂ ಪಟ್ಟಾಗಿ ಕೂತು

ಓದಬೇಕು. ಇದೇ ರೀತಿ ಕನ್ನಡ ವಾಙ್ಮಯ ಲೋಕ ಅದ್ವೈತ ಹರಿದಾಸ ಸಾಹಿತ್ಯವನ್ನು ಪರಿಚಯಿಸಿದ ಕೀರ್ತಿಯೂ ಇವರಿಗೇ ಸಲ್ಲಬೇಕು.

ಎಂ.ವಿ.ಸೀ ತಮ್ಮ ಬದುಕಿನ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಸಮರ್ಥವಾಗಿ ಮೀರಿ ಕನ್ನಡಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡವರು ಎಂಬುದರಲ್ಲಿ ಎರಡು ಮಾತಿಲ್ಲ. ಅವರು ಹಾಕಿದ ಆಸ್ತಿಭಾರದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತೂ ಸೇರಿದಂತೆ ಸಾಂಸ್ಕೃತಿಕ ಸಂಸ್ಥೆಗಳು ಇನ್ನೂ ಗಟ್ಟಿಯಾಗಿ ನಿಂತುಕೊಂಡಿವೆ. ಎಲ್ಲ ಬಗೆಯಿಂದಲೂ ಎಂ.ವಿ.ಸೀ. ನಾನೆಲ್ಲರೂ ನೆನಪಿಸಿಕೊಳ್ಳಬೇಕಾದ ಅರ್ಹರಾದ ವ್ಯಕ್ತಿ. ಅವರ ನೆನಪೆಂದರೆ, ಅದು ನಮ್ಮ ಪರಂಪರೆಯ ಮಹಾಪ್ರವಾಹದಲ್ಲಿ ಒಂದಾಗುವ ಸುಯೋಗ. ಹೀಗಾಗಿಯೇ ಎಂ.ವಿ.ಸೀ. ಅವರ ಶತಮಾನೋತ್ಸವ ವರ್ಷ 'ಹಸ್ತಪ್ರತಿ ಅಧ್ಯಯನ ವರ್ಷ'ವನ್ನಾಗಿ ಆಚರಿಸಲಾಗುತ್ತದೆ.

■

೧೧. ಪ್ರತಿಭಾ ಸಂಪನ್ನ–ಪ್ರೊ. ಎಂ. ವಿ. ಸೀತಾರಾಮಯ್ಯ

• ಎಸ್. ವಿ. ಶ್ರೀನಿವಾಸರಾವ್

"ಹಿಂದೆ ಇಂಗ್ಲಿಷಿನ ವ್ಯಾಮೋಹ ಕಲಿತವರಲ್ಲಿ ಮಾತ್ರ ಇತ್ತು. ಕೆಲವರಲ್ಲಿ ಪ್ರೌಢಿಮೆಯು ಇತ್ತು. ಇಂಥವರಿಂದ ಕನ್ನಡಕ್ಕೆ ಉಪಕಾರವೂ ಆಯಿತು ಈಗ ಇಂಗ್ಲಿಷ್ ಮೀಡಿಯಂ ಸ್ಕೂಲುಗಳ ಹಾವಳಿಯಿಂದ ಇಂಗ್ಲಿಷ್ ಹುಚ್ಚು ಇದೆಯೇ ಹೊರತು ಪ್ರೌಢಿಮೆ ಗಳಿಸಿಕೊಳ್ಳುವ ಕಡೆಗೆ ಒಲವಿಲ್ಲ. ಇದು ಅಪಾಯಕಾರಿ ಪ್ರವೃತ್ತಿ." (ಹಿತಚಿಂತನ).

"ಕನ್ನಡವರಿಯದ ಕನ್ನಡಿಗರು ! ನಾಡಿನಲ್ಲಿ ಕಾಡು ಜನ. ಇಳಿಗೆಲ್ಲ ಸಾರಬೇಕು ನಮ್ಮ ನಾಚಿಕೆಗೇಡಿನ ಇರವನ್ನು' (ಕನ್ನಡಮ್ಮನ ಕೊರಗು).

"ಹಚ್ಚಿರೋ ಹಿಡಿಯಿರೋ ಕನ್ನಡದ ಪಂಜು ನೆಚ್ಚಿನ ನಂದದ ಕನ್ನಡದ ಪಂಜು' (ಕನ್ನಡಮ್ಮನ ಕೊರಗು).

ಕನ್ನಡಾಭಿಮಾನದ ಮೂರ್ತವೆತ್ತ ರೂಪದಂತಿದ್ದ ಪ್ರೊ. ಎಂ. ವಿ. ಸೀತಾರಾಮಯ್ಯನವರು ಹುಟ್ಟಿನಲ್ಲಿ ವಾಮನಮೂರ್ತಿಯಾಗಿದ್ದರೂ ದಿಟ್ಟತನದಲ್ಲಿ ಭೀಮನಾಗಿದ್ದರು. ವೀರೋದಾತ್ತ ನುಡಿಗಳಿಂದ ಜನತೆಯನ್ನು ಬಡಿದೆಬ್ಬಿಸಲು ಶಕ್ತರಾಗಿದ್ದ ಚತುರ ವಾಗ್ಮಿಗಳೂ ಆಗಿದ್ದರು ಎಂಬುದನ್ನು ಮೇಲ್ಕಂಡ ಅವರ ಉಕ್ತಿಗಳು ಶ್ರುತಪಡಿಸುತ್ತವೆ.

ಕನ್ನಡ ಕಣ್ವ, ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ ಶಿಷ್ಯರಾಗಿ ಬೆಳೆದು ತಮ್ಮದೇ ಆದ ಆದರಣೀಯ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದ ಮೈಸೂರು ವೆಂಟದಾಸಪ್ಪ ಸೀತಾರಾಮಯ್ಯನವರು ಜನಿಸಿದ್ದು ಸೆಪ್ಟೆಂಬರ್ ೯, ೧೯೧೦.

ನನಗೆ ಕಾಲೇಜಿನಲ್ಲಿ ಅವರ ಶಿಷ್ಯನಾಗಿರುವ ಭಾಗ್ಯ ಲಭಿಸಿರಲಿಲ್ಲ. ಆದರೆ ಸುಮಾರು ೨೦ ವರ್ಷಗಳ ಕೆಳಗೆ 'ಮಕ್ಕಳೇ, ಇವರನ್ನು ನೀವು ಬಲ್ಲಿರಾ' ಅಂಕಣವನ್ನು ಪ್ರಜಾಮತಕ್ಕೆ ನಾನು ಬರೆಯುತ್ತಿದ್ದೆ. ಲೇಖನ ಮಾಲೆಗೆ ಮಕ್ಕಳ ಸಾಹಿತಿಯಾಗಿ ಎಂ.ವಿ.ಸೀ.ರವರನ್ನು ಸಂದರ್ಶಿಸಿದ ಮೇಲೆ ನಾನು ಅವರ ಮಾನಸ ಶಿಷ್ಯನಾದೆ. ಮಿಗಿಲಾಗಿ ಅಭಿಮಾನಿಯಾದೆ.

ಆಗ ಅವರು ತೋರಿದ ಅಂತಃಕರಣ, ಮಕ್ಕಳ ಸಾಹಿತ್ಯದ ಮೇಲೆ ಅವರು ನೀಡಿದ ವಿಚಾರಪೂರ್ಣ ಮಾಹಿತಿ, ಲೇಖನ ಮಾಲೆ ಯಶಸ್ವಿಯಾಗಲು ಬೇಕಾಗುವ ಹಲವು ಸೂಕ್ತ ಸಲಹೆ–ಸೂಚನೆಗಳನ್ನಿತ್ತು ಉಪಕರಿಸಿದ್ದರು.

"ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು" ಎಂಬ ಉಕ್ತಿ ವಾಮನಮೂರ್ತಿ ಪ್ರೊ. ಸೀತಾರಾಮಯ್ಯನವರಿಗೆ ಹೇಳಿ ರಚಿಸಿದಂತಿದೆ. ಸುಮಾರು ಐದು ಅಡಿ ಎತ್ತರದ ಪೀಚು ದೇಹ ಅವರದು. ವಿದ್ವತ್ತಿನ ಮಿಂಚು ಹರಿಸುತ್ತಿರುವ ಹೊಳಪು ಕಣ್ಣುಗಳು, ಸುರಟಿಕೊಂಡಿರುವ ಕೈ ಬೆರಳುಗಳು. ಆದರೆ ಕಾವ್ಯ ಮೀಮಾಂಸೆ, ಕವಿರಾಜಮಾರ್ಗ, ಶ್ರೀಕೃಷ್ಣ ಬಾಲಲೀಲೆ, ಹಸ್ತಪ್ರತಿಶಾಸ್ತ್ರ, ಪ್ರಾಚೀನ ಕನ್ನಡ ವ್ಯಾಕರಣಗಳು ಮುಂತಾದ ಬೃಹತ್ ಗ್ರಂಥಗಳನ್ನು ರಚಿಸುವಷ್ಟು ಶಕ್ತಿಯುತವಾಗಿದ್ದವು. ವಿದ್ಯಾರ್ಥಿಗಳನ್ನು ಮರಳುಮಾಡುವ ವಿಚಾರ ತೀಕ್ಷ್ಣತೆ ಅವರ ಮಾತಿನಲ್ಲಿ ಅಡಗಿತ್ತು. ವಿಷಯ ನಿರೂಪಣೆಯಲ್ಲಿ ಖಚಿತತೆ, ಸಂಪಾದನೆಯಲ್ಲಿ ಸಂಪ್ರದಾಯಬದ್ಧ ಶಿಸ್ತು. ಸೃಜನಾತ್ಮಕ ಪದ್ಯ ಹಾಗೂ ಗದ್ಯ ರಚನೆಯಲ್ಲಿ ಜೀವನಾನುಭಾವದ ನವ್ಯ ಪ್ರಜ್ಞೆ, ಮಾನವೀಯ ಮಿಡಿತ, ಸುಂದರ ಕಲ್ಪನೆಯ ನೈಜ ತುಡಿತ ತುಂಬಿರುತ್ತದೆ. ಸಹೃದಯ ಕವಿ ಮನಸ್ಸನ್ನು ಅವರೆಲ್ಲ ಲೇಖನಗಳಲ್ಲಿ ನಾವು ಕಾಣಬಹುದು. ಒಟ್ಟಿನಲ್ಲಿ ಅವರದು ಅಭೂತಪೂರ್ವ, ಆದರಣೀಯ ಅಷ್ಟೇ ಅಲ್ಲದೆ, ಅನುಕರಣೀಯ ವ್ಯಕ್ತಿತ್ವ ಎಂಬುದು ಎಲ್ಲರ ಗಮನಕ್ಕೂ ಬಂದೇಬರುತ್ತದೆ.

ಸಂಪ್ರದಾಯಬದ್ಧ, ಸುಸಂಸ್ಕೃತ ಕುಟುಂಬದಲ್ಲಿ ತಂದೆ ವೆಂಕಟದಾಸಪ್ಪ, ತಾಯಿ ಅರಕಲಗೂಡಿನ ಸಾವಿತ್ರಮ್ಮನವರ ಮೂರನೆಯ ಗಂಡು ಸಂತಾನವಾಗಿ ಸೀತಾರಾಮಯ್ಯ ಮೈಸೂರಿನಲ್ಲಿ ಜನಿಸಿದರು. ಬಿ. ಎ. ಡಿಗ್ರಿ ತನಕ ಇವರ ವಿದ್ಯಾಭ್ಯಾಸ, ಮೈಸೂರಿನ ಬನುಮಯ್ಯ ಹೈಸ್ಕೂಲು ಹಾಗೂ ಮಹಾರಾಜ ಕಾಲೇಜಿನಲ್ಲಿ ನಡೆಯಿತು. ಮನೆಯಲ್ಲಿ ನಡೆಯುತ್ತಿದ್ದ ಅಳಸಿಂಗಾಚಾರ್ಯರ ಕನ್ನಡ ರಾಮಾಯಣ ಪಾರಾಯಣ ದಿಂದ ಪ್ರಭಾವಿತರಾಗಿದ್ದ ಸೀತಾರಾಮಯ್ಯನವರಿಗೆ ಸಾಹಿತ್ಯದಲ್ಲಿ ಒಲವು ಮೂಡಿತು. ಹಾಗೆ ಇವರ ಮನೆಯಲ್ಲಿ ಇವರ ದೊಡ್ಡಪ್ಪನ ಮಗ ಅಜ್ಜಿಯ ಮುಂದೆ ಓದುತ್ತಿದ್ದ ಬಿ. ವೆಂಕಟಾರ್ಯ ಮತ್ತು ಗಳಗನಾಥರ ಕಾದಂಬರಿಗಳು ಇವರ ಆಸಕ್ತಿಯನ್ನು ಕಾದಂಬರಿ ಯತ್ತ ಸೆಳೆದವು.

ಎಳೆಯ ಮನಸ್ಸು ಬಹು ಚಂಚಲ. ಲೇಖಕ, ಚಿತ್ರಗಾರ, ಸಂಗೀತಗಾರ ಎಲ್ಲಾ ಆಗುವ ಹುಮ್ಮಸ್ಸು, ಮನೆಯ ಸನಿಹದಲ್ಲಿದ್ದ 'ಆನೇಕರೋಟಿ' (ಗಜಶಾಲೆ)ಯಲ್ಲಿನ ಆಂಜನೇಯನ ಚಿತ್ರ ಹಾಗೂ ಆನೆಗಳನ್ನು ನೋಡಿ ಅವುಗಳ ಚಿತ್ರ ಬಿಡಿಸಲು ಪ್ರಾರಂಭಿಸಿದರು. ಅದರಲ್ಲೇ ಆಸಕ್ತಿ ಬೆಳೆದು, ಇದಕ್ಕೆ ಚಿತ್ರ ಕಲಾವಿದ ಕೆ. ವೆಂಕಪಟ್ಟನವರ ಆಶೀರ್ವಾದ, ಟಿ.ಎಸ್. ವೆಂಕಣ್ಣಯ್ಯನವರ ಮೆಚ್ಚುಗೆ ಲಭ್ಯವಾದಾಗ ಇವರ ಚಿತ್ರಕಲಾಭ್ಯಾಸ ವೃದ್ಧಿಸಿತು. ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ಗೆ ಸೇರಿ

ಚಿತ್ರಕಲೆಯಲ್ಲಿ ಪ್ರಾವೀಣ್ಯತೆ ಗಳಿಸಿಕೊಂಡರು. ಶಾಂತಿನಿಕೇತನಕ್ಕೆ ಹೋಗಿ ಶಾಸ್ತ್ರೀಯವಾಗಿ ಚಿತ್ರಕಲೆಯಲ್ಲಿ ಪ್ರೌಢಿಮೆಗಳಿಸಿಕೊಳ್ಳಲು ಆಶಿಸಿದ್ದರು. ಆದರೆ ಮನೆಯಲ್ಲಿನ ಆರ್ಥಿಕ ಸ್ಥಿತಿ ಸರಿಯಿಲ್ಲದ್ದರಿಂದ ಅಲ್ಲಿಗೆ ಹೋಗಲಾಗಲಿಲ್ಲ. ಆದರೆ ಅವರು ರಚಿಸಿದ ಚಿತ್ರಗಳಿಗೆ ಮೈಸೂರು ದಸರಾ ವಸ್ತುಪ್ರದರ್ಶನ ಹಾಗೂ ಮದರಾಸಿನಲ್ಲಿ ನಡೆದ ಕಾಂಗ್ರೆಸ್ಸು ವಸ್ತುಪ್ರದರ್ಶನಗಳಲ್ಲಿ ಬಹುಮಾನ ದೊರೆತಾಗ ಚಿತ್ರಕಲೆಯಲ್ಲಿನ ಇವರ ಆಸಕ್ತಿ ಮತ್ತಷ್ಟು ಬೆಳೆಯಿತು. ಇವರ ಮೊದಲ 'ಬೀದಿಯೊಳಗಲೆಯುತಿಹಳಾರಿವಳು ಚೆಲುವೆ' ಕವನಕ್ಕೆ ಇವರೇ ಚಿತ್ರ ರಚಿಸಿದ್ದರು.

ಕಾಲೇಜಿನಲ್ಲಿ ಇವರಿಗೆ ಟಿ. ಎಸ್. ವೆಂಕಣ್ಣಯ್ಯ, ತೀ.ನಂ.ಶ್ರೀ. ಬಿ.ಎಂ.ಶ್ರೀ. ಡಿ.ಎಲ್.ಎನ್., ಮೂರ್ತಿರಾವ್, ರಾಳ್ಳಪಲ್ಲಿ, ನಾ. ಕಸ್ತೂರಿ ಮುಂತಾದ ಸಾಹಿತ್ಯ ದಿಗ್ಗಜರುಗಳು ಗುರುಗಳಾಗಿದ್ದರು. ಇವರೆಲ್ಲರ ಪ್ರಭಾವಿ ಲವಯಕ್ಕೆ ಸಿಲುಕಿ ಇವರು ಲೇಖಕರಾಗಿ ರೂಪುಗೊಂಡರು. ಅನಂತರ ಉಪಾಧ್ಯಾಯರಾಗಿಯೂ ಖ್ಯಾತರಾದರು.

ಗುರುಗಳಾದ ತೀ.ನಂ.ಶ್ರೀಯವರ ಉತ್ತೇಜನ ಹಾಗೂ ಮಾರ್ಗದರ್ಶನದಿಂದ ಇವರು ರಚಿಸಿ, ರಜತ ಮಹೋತ್ಸವ ಸ್ವರ್ಣಪದಕ ಕವಿತಾ ಸ್ಪರ್ಧೆಗೆ ಕಳುಹಿಸಿದ್ದ 'ಆ ಚಿತ್ರಗಳು' ಕವನಕ್ಕೆ ಸ್ವರ್ಣ ಪದಕ ದೊರೆಯಿತು. ಹೀಗೆ ದೊರೆತ ಈ ಉತ್ತೇಜನ ಇವರನ್ನು ಪೂರ್ಣ ರೂಪದ ಕವಿಯನ್ನಾಗಿಸಿತು.

ಕಾವ್ಯ ರಚನೆಯ ಪ್ರಯತ್ನಗಳ ಜೊತೆ ಜೊತೆಯಲ್ಲಿ ಪ್ರಬಂಧ, ಸಣ್ಣಕಥೆ, ನಾಟಕ, ಕಾದಂಬರಿ ಪ್ರಕಾರಗಳಲ್ಲೂ ಇವರ ಸಾಹಿತ್ಯ ಕೃಷಿ ಮುಂದುವರಿಯಿತು. ೧೯೩೪ ರಲ್ಲಿ ಎಂ.ಎ. ಪದವಿಗಳಿಸಿಬ ನಂತರ ಉದ್ಯೋಗಕ್ಕಾಗಿ ಅಲೆದಾಟ ಪ್ರಾರಂಭವಾಯಿತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಡಿ. ವಿ. ಗುಂಡಪ್ಪನವರು ಇವರನ್ನು ಪರಿಷತ್ತಿನಲ್ಲಿ ಸಂಬಳ ಪಡೆಯುವ ಕಾರ್ಯದರ್ಶಿಯಾಗಿ ನೇಮಿಸಿಕೊಂಡರು. ಇಲ್ಲಿ ಇವರು ೧೯೩೪–೩೯ರ ತನಕ ಇದ್ದರು. ಈ ಕಾಲದಲ್ಲಿ ಇವರಿಗೆ ಸಾಹಿತಿಗಳ ಸಂಪರ್ಕ ವೃದ್ಧಿಸಿತು. ಇವರು ರಚಿಸಿದ ಹಲವು ಕವನಗಳು 'ಕನ್ನಡ ನುಡಿ'ಯಲ್ಲಿ ಪ್ರಕಟಗೊಂಡವು.

೧೯೩೯ ರಲ್ಲಿ ಇವರು ಕ.ಸಾ. ಪರಿಷತ್ತಿನ ಕೆಲಸವನ್ನು ಬಿಟ್ಟು ೧೯೩೯ ರಿಂದ ೧೯೪೬ರ ವರೆಗೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ–ಇಂಗ್ಲಿಷ್ ಕೋಶದ ಸಹ ಸಂಪಾದಕರಾಗಿ ದುಡಿದರು. ಇದೇ ಅವಧಿಯಲ್ಲಿ ಇವರು ರಚಿಸಿದ 'ಹಕ್ಕಿಹಾಡು' ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ ಲಭ್ಯವಾಯಿತು.

೧೯೫೧ ರಲ್ಲಿ ಇವರು ತಮ್ಮದೇ ಆದ 'ರಾಘವ' ಪ್ರಕಟಣಾ ಸಂಸ್ಥೆಯನ್ನು ಸ್ಥಾಪಿಸಿ 'ಮಾದನ ಮಗಳು' ಕಾದಂಬರಿಯನ್ನು ಪ್ರಕಟಿಸಿದರು. ಇದೂ ಸಹ ದೇವರಾಜ ಬಹದ್ದೂರ್ ಬಹುಮಾನಕ್ಕೆ ಪಾತ್ರವಾಯಿತು.

ಶಾಲಾ ಕಾಲದಿಂದಲೂ ಇವರಿಗೆ ನಾಟಕಗಳಲ್ಲಿ ಬಹಳ ಆಸಕ್ತಿಯಿತ್ತು. ನಾಟಕಗಳನ್ನು ರಚಿಸಿ ಆಡಿಸುತ್ತಿದ್ದರು. ತಾವೂ ಅವುಗಳಲ್ಲಿ ಪಾತ್ರ ವಹಿಸುತ್ತಿದ್ದರು. ಮೊದ ಮೊದಲು ಇವರು ಹೆಚ್ಚಾಗಿ ಸ್ತ್ರೀಪಾತ್ರಗಳನ್ನೇ ವಹಿಸುತ್ತಿದ್ದರು. ಇವರೇ ರಚಿಸಿದ್ದ 'ಹೂವಿನ ಆಸೆ' ಅಪಾರ ಜನ ಮೆಚ್ಚುಗೆ ಪಡೆದು ಮೂವತ್ತಕ್ಕೂ ಹೆಚ್ಚು ಬಾರಿ ಶಾಲಾ-ಕಾಲೇಜುಗಳಲ್ಲಿ ಪ್ರದರ್ಶನಗೊಂಡು ವಿಕ್ರಮ ಸಾಧಿಸಿತ್ತು. ನಾ. ಕಸ್ತೂರಿಯವರ 'ವರ ಪರೀಕ್ಷೆ' ಮತ್ತು ಕೈಲಾಸಂ ಅವರ 'ಪೋಲಿ ಕಿಟ್ಟಿ' ನಾಟಕಗಳಲ್ಲಿ ಸಮರ್ಥವಾಗಿ ಅಭಿನಯಿಸಿ ಉತ್ತಮ ನಟರೆಂದು ಹೆಸರುಗಳಿಸಿದ್ದರು.

ಇವರಿಗೆ ಸಂಗೀತದಲ್ಲಿ ಬಾಲ್ಯದಿಂದಲೂ ಆಸಕ್ತಿ ಬೆಳೆದುಬಂದಿತ್ತು. ಇದರಿಂದಾಗಿಯೇ ಇವರು ಮೃದಂಗ ಅಭ್ಯಾಸ ಮಾಡಿ ಅದರಲ್ಲೂ ಪ್ರಾವೀಣ್ಯಗಳಿಸಿಕೊಂಡಿದ್ದ ಹೆಗ್ಗಳಿಕೆಗೆ ಪಾತ್ರರಾದರು.

೧೯೪೬ ರಿಂದ ೧೯೬೩ರ ವರೆಗೆ ಇವರು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು ೧೯೬೩ ರಲ್ಲಿ ರೀಡರ್ ಆಗಿ ಬಡ್ತಿ ಪಡೆದು ೧೯೬೭ ರಲ್ಲಿ ನಿವೃತ್ತರಾದರು. ಆಗ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳು ಸೇರಿ 'ರಾಘವ ಸನ್ಮಾನ ಸಮಿತಿ' ವತಿಯಿಂದ ಇವರನ್ನು ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿ ಗೌರವ ಸೂಚಿಸಿದ್ದರು. ಇದಾದ ನಂತರವೂ ಕೆಲ ಕಾಲ ಇವರು ಯು.ಜಿ.ಸಿ. ಗೌರವ ಪ್ರಾಧ್ಯಾಪಕರಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ್ದರು.

೧೯೭೯ ರಲ್ಲಿ ಇವರು ತಮ್ಮ ಪೂಜ್ಯ ಗುರುಗಳಾಗಿದ್ದ ಬಿ.ಎಂ. ಶ್ರೀ ಅವರ ಹೆಸರಿನಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವನ್ನು ತಮ್ಮ ಸ್ವಗೃಹದಲ್ಲಿ ಸ್ಥಾಪಿಸಿ ಅದರ ಅಭ್ಯುದಯಕ್ಕಾಗಿ ಅಹರ್ನಿಶಿ ಜೀವನದುದ್ದಕ್ಕೂ ಶ್ರಮಿಸಿದರು. ಅದೇ ಪ್ರತಿಷ್ಠಾನ ಈಗ ಬೃಹತ್ತಾಗಿ ಬೆಳೆದು ಎರಡು ಅಂತಸ್ತಿನ ಸ್ವಂತ ಕಟ್ಟಡದಲ್ಲಿ ಬಿಎಂ.ಶ್ರೀ ಕಲಾಭವನವಾಗಿ ವಿಜೃಂಭಿಸುತ್ತಿದೆ.

ಪ್ರಸ್ತುತ ಇಲ್ಲಿ ಸುಸಜ್ಜಿತ ಸಂಶೋಧನಾ ಯೋಗ್ಯ ಗ್ರಂಥಾಲಯ, ಪ್ರಾಚೀನ ಹಸ್ತಪ್ರತಿ/ಓಲೆಗರಿಗಳ ಸಂಗ್ರಹಗಳಿರುವುದಲ್ಲದೆ ಪ್ರಾಚೀನ ಹಸ್ತಪ್ರತಿ ಸಂಗ್ರಹ, ಸಂರಕ್ಷಣೆ, ಗ್ರಂಥ ಸಂಪಾದನೆ, ಹಸ್ತಪ್ರತಿ ಶಾಸ್ತ್ರ ತರಬೇತಿ, ಹಳೆಗನ್ನಡ ಕಾವ್ಯಾಭ್ಯಾಸ ಶಿಬಿರ, ಸಿರಿಕಂಟ ವೇದಿಕೆಯಾಗಿ ವಿಭಿನ್ನ ರೀತಿಯ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಕರ್ನಾಟಕ ಲೋಚನ ಎಂಬ ವಿದ್ವತ್ ಪತ್ರಿಕೆ ನಡೆಸುತ್ತಿದೆಯಲ್ಲದೆ ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದು ಪಿಎಚ್.ಡಿ. ಹಾಗೂ ಎಂ.ಫಿಲ್ ಸಂಶೋಧನಾ ಕೇಂದ್ರವಾಗಿಯೂ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಯನ್ನು ಸಲ್ಲಿಸುವ ಮೂಲಕ ಸ್ಥಾಪಕ ಎಂ.ವಿ.ಸೀ. ಅವರಿಗೆ ಗೌರವ ಸಲ್ಲಿಸುತ್ತಿದೆ. ಇದೇ ಪ್ರತಿಷ್ಠಾನ ಈಗ ಬೆಳ್ಳೂರಿನಲ್ಲೂ ಒಂದು ಘಟಕವನ್ನು ಹೊಂದಿ, ಸ್ಥಾಪಕರ ಆಶಯಗಳನ್ನು ಸಾಕಾರಗೊಳಿಸಲು ಶ್ರಮಿಸುತ್ತಿದೆ.

ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ ಸಂಪನ್ನ ಕೊಡುಗೆಗಳನ್ನು ನೀಡಿರುವ ಶ್ರೀಯುತರು ಮೂಲತಃ ಸೃಜನಾತ್ಮಕ ಸಾಹಿತಿ. ಇವರು ಕಥೆ, ಕಾದಂಬರಿ, ನಾಟಕ, ಕವನ, ಪ್ರಬಂಧ, ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ೭೫ ಕೃತಿಗಳನ್ನು ರಚಿಸಿದ್ದಾರೆ. ಕಾವ್ಯ ೧೫, ಮಕ್ಕಳ ಸಾಹಿತ್ಯ ೭, ಕಥಾ ಸಂಕಲನ ೧೦, ಕಾದಂಬರಿ ೧೧, ನಾಟಕ ೯, ಪ್ರಬಂಧ ೩, ವ್ಯಕ್ತಿಚಿತ್ರ ೧, ಗ್ರಂಥ ಸಂಪಾದನೆ ೧೪, ಸಂಕೀರ್ಣ ೫ ಇವುಗಳಲ್ಲಿ ಹಲವು ಪ್ರಶಸ್ತಿ/ಪುರಸ್ಕಾರಕ್ಕೆ ಭಾಜನವಾಗಿವೆ. ಆದರೂ ಇವರು ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಖ್ಯಾತಿಗಳಿಸಿರುವುದು ಸಂಶೋಧನೆ, ಗ್ರಂಥ ಸಂಪಾದನೆ ಮತ್ತು ವಿದ್ವತ್ ಕ್ಷೇತ್ರಗಳಲ್ಲಿ.

ಇವರಿಗೆ ಲಭಿಸಿರುವ ಪ್ರಮುಖ ಪ್ರಶಸ್ತಿ/ಪುರಸ್ಕಾರಗಳು ; ಬಿ.ಎಂ.ಶ್ರೀ. ರಜತೋತ್ಸವ ಸ್ವರ್ಣಪದಕ (೧೯೩೩) ; ಹಕ್ಕಿಹಾಡು ಕವನ ಸಂಕಲನಕ್ಕೆ ದೇವರಾಜ ಬಹದ್ದೂರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ (೧೯೪೬), 'ಮಾದನ ಮಗಳು' ಕಾದಂಬರಿಗೆ ದೇವರಾಜ ಬಹದ್ದೂರ್ ಬಹುಮಾನ (೧೯೫೧), ಮುಗಿಯದ ಮಾಯೆ ಕವನ ಸಂಕಲನಕ್ಕೆ ದೇವರಾಜ ಬಹದ್ದೂರ ಬಹುಮಾನ (೧೯೫೭), 'ತೊಟ್ಟಿಲು ತೂಗದ ಕೈ' ನಾಟಕಕ್ಕೆ ರಾಜ್ಯ ಸರ್ಕಾರ ಪ್ರಶಸ್ತಿ (೧೯೫೭), ಜೀವನ ನಾಟಕ (ವ್ಯಕ್ತಿ ಕಥೆಗಳು) ಕೃತಿಗೆ ರಾಜ್ಯ ಸರ್ಕಾರದ ಪ್ರಶಸ್ತಿ (೧೯೬೦), ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೭೩), ಪ್ರಾಚೀನ ಕನ್ನಡ ವ್ಯಾಕರಣಗಳು ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ (೧೯೮೦), ಡಾ. ಜಚನಿಯವರಿಂದ ವಿಚಾರ ರತ್ನಾಕರ ಪ್ರಶಸ್ತಿ (೧೯೬೭), ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ (೧೯೭೫), ಅಸ್ವಾದ ಅಭಿನಂದನ ಗ್ರಂಥ ಸಮರ್ಪಣೆ ಉದಯ ಭಾನು ಕಲಾ ಸಂಘದಿಂದ (೧೯೮೩). ಇವರು ಬಳಸುತ್ತಿದ್ದ ಕಾವ್ಯನಾಮಗಳು : ರಾಘವ, ಕವಿಮಿತ್ರ, ಮೈ.ವೆಂ.ಸೀ. ಎಂ.ವಿಸೀ.

ದಿನಾಂಕ : ೧೨-೩-೧೯೯೦ ರಂದು ಅವರು ನಿಧನರಾದರು.

ಪ್ರೊ. ಎಂ. ವಿ. ಸೀತಾರಾಮಯ್ಯನವರು ಇಂದು ನಮ್ಮ ಮುಂದೆ ಇಲ್ಲದಿದ್ದರೂ ಅವರ ವಿದ್ವತ್‌ಪೂರ್ಣ ಕೃತಿಗಳಲ್ಲಿ, ಸ್ಥಾಪಿಸಿರುವ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ರೂಪದಲ್ಲಿ ಅಮರವಾಗುಳಿದಿದ್ದಾರೆ.

■

೧೨. ಎಂ.ವಿ.ಸೀ. ಅವರ ಪ್ರಾಚೀನ ಕನ್ನಡ ವ್ಯಾಕರಣಗಳು : (೨ನೇ ಮುದ್ರಣ) ಗ್ರಂಥವನ್ನು ಕುರಿತು

• ಪ್ರೊ. ಜಿ. ಅಶ್ವತ್ಥನಾರಾಯಣ

ಎಂ.ವಿ.ಸೀ. ಅವರು ಕವಿಗಳು, ಜೀವನ ಚರಿತ್ರಕಾರರು, ಗ್ರಂಥ ಸಂಪಾದನಾಕಾರರು, ಸಾಹಿತ್ಯ ಚರಿತ್ರಕಾರರು, ಕಾದಂಬರಿಕಾರರು, ಕಥೆಗಾರರು ವಿಮರ್ಶಕರು, ಪ್ರಬಂಧಕಾರರು, ದಾಸಸಾಹಿತಿಗಳು–ಹೀಗೆ ಬಹುಮುಖ ಪ್ರತಿಭೆಯ ಸಾಹಿತಿ–ವಿದ್ವಾಂಸರಾಗಿದ್ದರು. ವಿದ್ವಾಂಸರು ಆದವರಿಗೆ ವಿನಯಭಾವ ಸ್ವಾಭಾವಿಕ. ವಿನಯಭಾವ ಅಪರೂಪ. ಎಂ.ವಿ.ಸೀ. ಅವರು ಅಪರೂಪದ ವರ್ಗಕ್ಕೆ ಸೇರಿದವರು. ಯಾರಿಂದಲೇ ಆಗಲಿ ಏನೇ ಕಿರು ಸಲಹೆಗಳಿರಲಿ ಅದನ್ನು ವಿನಯಪೂರ್ವಕವಾಗಿ ಸ್ವೀಕರಿಸುವುದರಲ್ಲಿ ಅಗ್ರಗಣ್ಯರಾಗಿದ್ದರು.

ತಾವು ಎಷ್ಟೇ ಅನಾರೋಗ್ಯದಲ್ಲಿದ್ದರೂ ಮನೆಗೆ ಬಂದವರನ್ನು ಸತ್ಕರಿಸುವುದರಲ್ಲಿ ಬರಮಾಡಿಕೊಳ್ಳುವಲ್ಲಿ ಆತುರರಾಗಿದ್ದರು. ಒಮ್ಮೆ ಅವರು ಅನಾರೋಗ್ಯದಿಂದ ಮಲಗಿದ್ದರು. ವೈದ್ಯರು ವಿಶ್ರಾಂತಿಯಲ್ಲಿರಬೇಕೆಂದು ಹೇಳಿದ್ದರು. ನಾನು ಅವರ ವ್ಯಾಕರಣ ಗ್ರಂಥದ ಬಗ್ಗೆ ಪ್ರಸ್ತಾಪಿಸಲು ಅವರಲ್ಲಿ ಹೋದೆ. ಸಾರ್ ಸಾರ್ ಎಂದು ಬಾಗಿಲು ತಟ್ಟಿದೆ. ಅವರ ಮನೆಯವರು ಬಂದು ಅವರೀಗ ಮಲಗಿದ್ದಾರೆ, ಆಮೇಲೆ ಬನ್ನಿ ಎಂದರು. ಎಂ.ವಿ.ಸೀ ಅವರಿಗೆ ಕಿವಿಚುರುಕು, ಒಳಗಿಂದಲೇ, ಅವರನ್ನು ಒಳಗೆ ಕಳಿಸು' ಎಂದರು. ನಾನು ಒಳಗೆ ಹೋದಾಗ ಹಾಸಿಗೆ ಮೇಲೆ ಎದ್ದು ಕುಳಿತು ಅವರನ್ನು ಕಂಡು ನೀವು ಸುಧಾರಿಸಿಕೊಳ್ಳಿರಿ ಆಮೇಲೆ ಬರುವೆ ಎಂದೆ. ಅಯ್ಯೋ ನನ್ನ ಆರೋಗ್ಯ ಗೊತ್ತಲ್ಲಾ ಅದು ಇರೋದೆ ಹಾಗೆ ಬಿಡಿ, ಆ ವಿಷಯ ಏನು ಸಮಾಚಾರ ಏನು ಬಂದಿರಿ, ಎಂದು ವಿಚಾರಿಸಿದರು.

ನಿಮ್ಮ ಪ್ರಾಚೀನ ಕನ್ನಡ ವ್ಯಾಕರಣಗಳು ಗ್ರಂಥ ಓದಿದೆ. ಪರಮಾನಂದವಾಯಿತು. ಇಂಥ ವ್ಯಾಕರಣ ವಿಮರ್ಶಾ ಗ್ರಂಥವನ್ನು ತೌಲನಿಕ ದೃಷ್ಟಿಯಿಂದ ಬರೆದಿರುವ ಗ್ರಂಥವನ್ನು ನಾನು ಓದಿರಲಿಲ್ಲ, ಓದಿ ಬಹಳ ಸಂತೋಷವಾಯಿತು. ವಿದ್ಯಾರ್ಥಿಗಳಿಗಷ್ಟೆ ಅಲ್ಲದೆ ವಿದ್ವಾಂಸರಿಗೂ ಉಪಯುಕ್ತ ಗ್ರಂಥವಾಗಿದೆ. ಆದರೆ.....ಎಂದು ಮಾತು

ನಿಲ್ಲಿಸಿದೆ. ಹೇಳಿ ಸಂಕೋಚ ಬೇಡ. ನನಗೆ ವಿಮರ್ಶಾತ್ಮಕವಾಗಿ ನಿಮ್ಮಂಥ ಯುವಕರು ಮಾತಾಡಿದರೆ ಬಹಳ ಸಂತೋಷವಾಗುತ್ತದೆ. ಆದರೆ ನಾನು ನನ್ನ ಅಜ್ಞಾನದಿಂದ ತಪ್ಪು ಹೇಳುತ್ತಿದ್ದೇನೋ ಎಂದು ಅನ್ನಿಸುತ್ತಿದೆ ಎಂದೆ. ಇಲ್ಲ ಹಾಗೇನಿಲ್ಲ. ಯಾವುದೇ ವಿಷಯದಲ್ಲಿ ತಪ್ಪಾಗುತ್ತದೆ ಎಂದು ಅಂಜಬೇಕಿಲ್ಲ ನಮಗೆ ಪ್ರಾಮಾಣಿಕವಾಗಿ ಅನ್ನಿಸಿದೆ ಎಂಬುದು ಮುಖ್ಯ. ಮತ್ತು ನನ್ನ ಗ್ರಂಥ ಇಂಥವರಿಗೆ ಹೀಗೂ ಎನ್ನಿಸಲು ಸಾಧ್ಯ ಎಂದು ತಿಳಿಯುತ್ತೇನೆ. ನಾನೆಂದೂ ಯಾರ ಮಾತನ್ನೇ ಹೇಳಿದರೂ ಅದನ್ನು ಸಂತೋಷದಿಂದ ಸ್ವೀಕರಿಸಿ ವಿಮರ್ಶಿಸುತ್ತೇನೆ ಎಂದರು. ನನಗೆ ಅವರ ಮಾತುಗಳನ್ನು ಕೇಳಿ ಸಂತೋಷ ಆಯಿತು. ಧೈರ್ಯವೂ ಬಂದಿತು. ಅವರ ವ್ಯಾಕರಣ ಗ್ರಂಥ ಓದಿದಾಗ ನಾವು ಗುರುತು ಮಾಡಿಕೊಂಡಿದ್ದ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಿದೆ. ಅವರು ಶಾಂತಚಿತ್ತರಾಗಿ ಕೇಳಿ, ನನ್ನ ಪುಸ್ತಕವನ್ನು ನೋಡಿ ದಯವಿಟ್ಟು ನಿಮ್ಮ ಪ್ರತಿ ಕೊಡಿ, ಅವುಗಳಲ್ಲಿ ನೀವು ಗುರುತು ಹಾಕಿರುವ ಅಂಶಗಳನ್ನು ನಾನು ಎರಡನೇ ಮುದ್ರಣದಲ್ಲಿ ತಿದ್ದುತ್ತೇನೆ. ವಿಶ್ವವಿದ್ಯಾಲಯದವರು ಅದನ್ನು ಮರು ಮುದ್ರಣ ಮಾಡುತ್ತಿದ್ದಾರೆ. ಕರಡಚ್ಚುಗಳನ್ನು ತಿದ್ದಲು ಕಳಿಸಿಕೊಡಿ ಎಂದಿದ್ದೇನೆ" ಎಂದರು. ನನ್ನ ಪುಸ್ತಕವನ್ನು ತೆಗೆದುಕೊಟ್ಟುಕೊಂಡರು. ಮರುಮುದ್ರಣವಾದಮೇಲೆ ನಿಮ್ಮ ಪ್ರತಿಯನ್ನು ಹೊಸ ಪ್ರತಿಯೊಡನೆ ಹಿಂತಿರುಗಿಸುತ್ತೇನೆ ಎಂದು ಹೇಳಿದರು.

ಹಲವು ತಿಂಗಳುಗಳು ಆದಮೇಲೆ ಪ್ರಾಚೀನ ಕನ್ನಡ ವ್ಯಾಕರಣಗಳು ೨ನೇ ಮುದ್ರಣ ೧೯೮೮ ರಲ್ಲಿ ಬಂದಿತು. ಮೊದಲ ಮುದ್ರಣವಾದದ್ದು ೧೯೭೬.

ಗ್ರಂಥ ರಚನೆಯ ಹಿನ್ನೆಲೆ ಸ್ವಾರಸ್ಯಕರವಾಗಿದೆ. ಡಾ. ಹಾ. ಮಾ. ನಾಯಕರು "ಕನ್ನಡ ಭಾಷೆಯ ಇತಿಹಾಸಕ್ಕೆ ಸಂಬಂಧಪಟ್ಟ ಲೇಖನಗಳ ಸಂಪುಟಕ್ಕೆ 'ಕನ್ನಡ ಪ್ರಾಚೀನ ವ್ಯಾಕರಣಗಳು' ಎಂಬ ವಿಷಯವನ್ನು ಕುರಿತು ಒಂದು ಲೇಖನವನ್ನು ಬರೆದುಕೊಡಲು ಎಂ.ವಿ.ಸೀ. ಅವರನ್ನು ಕೇಳಿದರು. ಅದರಲ್ಲಿ "ಶಾಸ್ತ್ರ ವಿಷಯ ವಾದುದರಿಂದ ಪುಟಮಿತಿ ಹಾಕಿಲ್ಲ. ಪುಟಗಳನ್ನು ವಿಷಯ ನಿರೂಪಣೆಗೆ ಅಗತ್ಯವಾದ ಹದ, ಹರವುಗಳೊಂದಿಗೆ ಬಳಸಿಕೊಳ್ಳಬೇಕು" ಎಂಬ ಸೂಚನೆ ಇತ್ತು. ಈ ಸೂಚನೆಯನ್ನು ಲೇಖನದ ದೃಷ್ಟಿಯಿಂದ ಹೇಳಿದ್ದನ್ನು ಗಮನಿಸದೆ ವಿಷಯದ ದೃಷ್ಟಿಯಿಂದ ತಮ್ಮ ಪಾಂಡಿತ್ಯದ ಬಲದಿಂದ ಒಂದು ಗಥವನ್ನೇ ರಚಿಸಿ ಕಳಿಸಿದರು. ಆಗ ಹಾ.ಮಾ.ನಾ. ಆ ಗ್ರಂಥವನ್ನು ನೋಡಿ ನಕ್ಕು ನಮಗೆ ಬೇಕಾಗಿದ್ದುದು ಲೇಖನ. ಇದು ಗ್ರಂಥ. ಇದನ್ನು ಪ್ರಕಟಿಸೋಣ. ಬೇರೆ ೩೦–೪೦ ಪುಟಗಳ ಲೇಖನ ಬರೆದುಕೊಡಿ ಎಂದರು. ಮತ್ತೆ ಬೇರೆ ಲೇಖನವನ್ನು ಎಂ.ವಿ.ಸೀ. ಅವರು ಬರೆದುಕೊಟ್ಟರು. ಈ ಗ್ರಂಥವನ್ನು ಪ್ರತ್ಯೇಕವಾಗಿ ಹಾ.ಮಾ.ನಾ. ಪ್ರಕಟಿಸಿದರು.

ಹೀಗೆ ಪ್ರಕಟವಾದ ಈ ಗ್ರಂಥದಲ್ಲಿ ಉಳಿದಿದ್ದ ಅಚ್ಚಿನ ದೋಷಗಳನ್ನು ಪುಸ್ತಕದ ಕೊನೆಯಲ್ಲಿ ತಿದ್ದುಪಾಟು ಎಂಬ ಶೀರ್ಷಿಕೆಯಲ್ಲಿ ಕೊಟ್ಟಿದ್ದರು. ಅವುಗಳನ್ನು ೨ನೇ

ಮುದ್ರಣದಲ್ಲಿ ತಿದ್ದಿ ಅಳವಡಿಸಿದರು. ಉದಾಹರಣೆಗೆ ೧೧ನೇ ಪುಟದಲ್ಲಿ (ಮೊದಲನೇ ಮುದ್ರಣದಲ್ಲಿ) ನಿನಗೇನೆಂಬೆನೊ....ವಾರ್ಧಿವೀತೋರ್ವಿಯೊಳ್' ಎಂಬ ಗ್ರಂಥಭಾಗ ಗದ್ಯದಂತೆ ಅಚ್ಚಾಗಿತ್ತು. ಅದನ್ನು ವರ್ಣವೃತ್ತದ ಪದ್ಯವಾಗಿ ತಿಳಿಯಬೇಕು ಎಂದು ಸೂಚಿಸಿದ್ದರು. ಎರಡನೇ ಮುದ್ರಣದಲ್ಲಿ (ಪುಟ ೧೨)ರಲ್ಲಿ ವರ್ಣವೃತ್ತವಾಗಿ ಅಚ್ಚುಮಾಡಿದ್ದಾರೆ. ಹೀಗೆ ಹಲವಾರು ತಿದ್ದುಪಡಿಗಳನ್ನು ಮಾಡಿದ್ದರು. ಗ್ರಂಥ ಅಚ್ಚಾದಮೇಲೆ ನಾನು ಓದಿದಾಗ ಮತ್ತೆ ಕೆಲವು ಲೋಪದೋಷಗಳು ಕಂಡುಬಂದವು, ಅದನ್ನು ಪ್ರಸ್ತಾಪಿಸಿದೆ.

ಅವುಗಳನ್ನೆಲ್ಲ ಗಮನಿಸಿ ೨ನೇ ಮುದ್ರಣದಲ್ಲಿ ಸೂಕ್ತ ಬದಲಾವಣೆ ಮಾಡಿದ್ದಾರೆ. ಆದರೆ ೨ನೇ ಮುದ್ರಣಕ್ಕೆ ಎಂ.ವಿ.ಸೀ. ಕರಡನ್ನು ತಿದ್ದಿದರೇ ಹೊರತು ಆ ಬಗ್ಗೆ ಮುನ್ನುಡಿಯನ್ನು ಬರೆಯಲಿಲ್ಲ. ಪ್ರಧಾನ ಸಂಪಾದಕರಾದ ಜೀಶಂಪ ಅವರು "ಇದನ್ನು ಎಂ.ವಿ.ಸೀ. ಅವರು ಪರಿಷ್ಕರಿಸಿಕೊಟ್ಟಿದ್ದಾರೆ" ಎಂಬ ಮಾತನ್ನಷ್ಟೇ ಹೇಳಿದ್ದಾರೆ ಬಹುಶಃ ಅನಾರೋಗ್ಯದಿಂದ ೨ನೇ ಮುದ್ರಣಕ್ಕೆ ಪೀಠಿಕೆ ಬರೆಯಲಿಲ್ಲ ಎಂದು ಕಾಣುತ್ತದೆ.

೨ನೇ ಮುದ್ರಣದ ಪುಸ್ತಕ ಪ್ರಕಟವಾದಾಗ ನಾನೊಂದು ಪ್ರತಿಯನ್ನು ಕೊಂಡುಕೊಂಡೆ. ಪುಸ್ತಕ ಪ್ರಕಟವಾದುದ್ದು ಎಂ.ವಿ.ಸೀ. ಅವರಿಗೆ ತಿಳಿದಿರಲಿಲ್ಲ. ನಾನು ತಿಳಿಸಿದೆ. ನನ್ನ ಪ್ರತಿ ಹಿಂದಕ್ಕೆ ಕೊಡಿ ಎಂದೆ, ನನಗೆ ಕೊಡುವ ಗೌರವ ಪ್ರತಿಗಳನ್ನು ತರಿಸಿಕೊಂಡು ನಾನು ಹೇಳಿದಂತೆ ನಿಮಗೊಂದು ಪ್ರತಿ ಕೊಡುವೆ ಎಂದರು. ನನಗೆ ಗೌರವ ಪ್ರತಿಗಳನ್ನು ಕಳಿಸಿಕೊಡಿ ಎಂದು ಬರೆದರು. ಆದರೆ ಗೌರವ ಪ್ರತಿಗಳು ಬರಲೇ ಇಲ್ಲ. ಏಕೆಂದರೆ ಯಾರೋ ಅವರ ಪರವಾಗಿ ಗೌರವ ಪ್ರತಿಗಳನ್ನು ತೆಗೆದುಕೊಂಡು ಹೋಗಿದ್ದರು. ಈ ವಿಷಯ ಅವರೇ ಹೇಳಿದರು ಹೀಗಾಗಿ ಅವರು ೨ನೇ ಮುದ್ರಣದ ಪ್ರತಿಗಳನ್ನು ಪಡೆಯಲೇ ಇಲ್ಲ.

೨ನೇ ಮುದ್ರಣದಲ್ಲಿ ಅವರು ಮಾಡಿದ ಬದಲಾವಣೆಗಳನ್ನು ಅವರು ಸೂಚಿಸಿಲ್ಲದೆ ಇರುವುದರಿಂದ ಓದುಗರಿಗೆ ಅವರೇನು ಬದಲಾವಣೆ ಮಾಡಿದ್ದಾರೆ ಎಂದು ತಿಳಿಯುವುದಿಲ್ಲ. ನಾನು ಕುತೂಹಲದಿಂದ ನಾನು ಹಲವಾರು ಸೂಚನೆಗಳನ್ನು ಕೊಟ್ಟಿದ್ದನ್ನು ಅವರು ಗಮನಿಸುತ್ತೇನೆ ಎಂದು ಹೇಳಿದ್ದರಿಂದ ನಾನು ಆಮೂಲಾಗ್ರವಾಗಿ ಎರಡು ಮುದ್ರಣಗಳ ಪ್ರತಿಗಳನ್ನು ಹೋಲಿಸಿ ನೋಡಿದಾಗ ಕಂಡುಬಂದ ಮಾರ್ಪಾಟು ತಿದ್ದುಪಾಡುಗಳನ್ನು ಗುರುತಿಸಿದ್ದೇನೆ. ಹಳೆಯತಲೆಮಾರಿನವರು ಡಿ.ವಿ.ಜಿ., ವಿ.ಸೀ., ಪು.ತಿ.ನ. ಮೊದಲಾದವರು ತಮ್ಮ ಗ್ರಂಥಗಳ ಮರುಮುದ್ರಣವನ್ನು ಯಥಾವತ್ತಾಗಿ ಮಾಡಿಸಿದವರಲ್ಲಿ ಸೂಕ್ತ ಬದಲಾವಣೆಗಳನ್ನು ಪರಿಷ್ಕರಣವನ್ನು ಮಾಡಿದ್ದಾರೆ. ಆ ಪರಂಪರೆಗೆ ಸೇರಿದವರು ಎಂ.ವಿ.ಸೀ. ಅವರು.

ಮೂಲಭೂತ ಬದಲಾವಣೆಗಳನ್ನೇನೂ ಮಾಡಿಲ್ಲ. ಆದರೂ ಮೊದಲ ಮುದ್ರಣದ ನಂತರ ಬಂದ ವ್ಯಾಕರಣ ಗ್ರಂಥ ಲೇಖನಗಳನ್ನು ಕುರಿತು ಬರೆಯಬಹುದಾಗಿತ್ತು. ಆದರೆ ಬರೆಯಲಿಲ್ಲ.

೨ನೇ ಮುದ್ರಣದಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೆಲವನ್ನು ಗುರುತಿಸಿದ್ದೇನೆ.

೧. ಮೊದಲ ಮುದ್ರಣದಲ್ಲಿದ್ದ ಅಚ್ಚಿನ ದೋಷಗಳ ಪಟ್ಟಿಯನ್ನು ತಿದ್ದುಪಾಟುಗಳು ಎಂದು ಅನುಬಂಧದಲ್ಲಿ ಕೊಟ್ಟಿದ್ದರು. ಅದನ್ನು ೨ನೇ ಮುದ್ರಣದಲ್ಲಿ ಅಳವಡಿಸಿದ್ದಾರೆ.

೨. ಅನೇಕ ಕಡೆಗಳಲ್ಲಿ ಉಪಶೀರ್ಷಿಕೆಗಳನ್ನು ಕೊಡದೆಬಿಟ್ಟಿದ್ದರು. ಅದನ್ನು ತೋರಿಸಿದ್ದೆ. ಅವುಗಳಿಗೆಲ್ಲಾ ಉಪಶೀರ್ಷಿಕೆ ಕೊಟ್ಟಿದ್ದಾರೆ. ಮೊದಲ ಮುದ್ರಣದಲ್ಲಿ ೧೦.೧ (ಪುಟ ೩೮) ೮.೩, ೮.೪ (ಪುಟ ೩೧) ಮೊದಲಾದ ಕಡೆಗಳಲ್ಲಿ ಶೀರ್ಷಿಕೆಗಳಿಲ್ಲ ಎಂದು ಗುರುತಿಸಿದ್ದೆ. ಅವುಗಳಿಗೆ ಅವರು ಶೀರ್ಷಿಕೆಗಳನ್ನು ೨ನೇ ಮುದ್ರಣದಲ್ಲಿ ಕೊಟ್ಟಿದ್ದು ೮.೩ ವೃತ್ತಿ ವ್ಯಾಖ್ಯಾನಗಳು ೮.೪ ಕನ್ನಡದಲ್ಲಿ ಅನುಸರಣೆ ೧೦.೧ ಸಂಪ್ರದಾಯದ ಹುಟ್ಟು. ಹೀಗೆ ಉದ್ದಕ್ಕೂ ನಾನು ಸೂಚಿಸಿರುವ ಕಡೆಗಳೆಲ್ಲಾ ಶೀರ್ಷಿಕೆ ಕೊಟ್ಟಿದ್ದಾರೆ.

೩. ಶಬ್ದಮಣಿದರ್ಪಣದ ಸೂತ್ರ ಸಂಖ್ಯೆಗಳನ್ನು ಕೊಡುವಾಗ, ಉದ್ಧೃತಿಗಳನ್ನು ಕೊಡುವಾಗಲೂ ಡಿ.ಎಲ್.ಎನ್. ಅವರ ೧೯೬೪ರ ಮುದ್ರಣದ ಪ್ರತಿಯನ್ನು ಅನುಸರಿಸಿದೆ ಎಂದು ಪುಟ ೨ ಅಡಿಟಿಪ್ಪಣಿಯಲ್ಲಿ ಹೇಳಿದ್ದಾರೆ. ಇದನ್ನು ಪ್ರತ್ಯೇಕವಾಗಿ ಸಂಕ್ಷಿಪ್ತಗಳು 'ಆದಮೇಲೆ ಸೂಚಿಸಿ ಎಂದಾಗ' ಒಪ್ಪಿದರು. ಆದರೆ ಅದು ಪ್ರತ್ಯೇಕವಾಗಿ ಪ್ರಕಟವಾಗಿಲ್ಲ.

೪. ಮೊದಲ ಮುದ್ರಣದಲ್ಲಿ ಪುಟ ೮ ರಲ್ಲಿ "ಕೇಶಿರಾಜನು ಶಬ್ದಮಣಿದರ್ಪಣವನ್ನು ಬರೆಯುವ ವೇಳೆಗೆ (ಸು. ೧೨೭೫) ಕನ್ನಡ ಭಾಷೆಯಲ್ಲಿ ಗಮನಾರ್ಹವಾದ ಮಾರ್ಪಾಟುಗಳು ಉಂಟಾಗಿ.................ಎಂಬಲ್ಲಿ, ನೀವೇ ಪುಟ ೭೨ ರಲ್ಲಿ "ಕೇಶಿರಾಜನ ಕಾಲವನ್ನು ಸು. ೧೨೫೦–೬೦ ಎಂದು ಇಟ್ಟುಕೊಳ್ಳಬಹುದು ಎಂದಿದ್ದೀರಿ. ಇದು ಸರಿಯೇ ? ಎಂದು ಕೇಳಿದಾಗ, ಇದನ್ನು ನಾನು ಗಮನಿಸಿಲ್ಲ, ಮುಂದಿನ ಮುದ್ರಣದಲ್ಲಿ ತಿದ್ದುತ್ತೇನೆ ಎಂದು ಹೇಳಿದರು. ೨ನೇ ಮುದ್ರಣದಲ್ಲಿ ಈ ಬಗ್ಗೆ ಪುಟ ೮ ರಲ್ಲಿ ಈ ಟಿಪ್ಪಣಿ ಹೊಸದಾಗಿ ಹಾಕಿದ್ದಾರೆ. ಟಿಪ್ಪಣಿ ೧೨ಕೇಶಿರಾಜನ ಕಾಲವನ್ನು ೧೨೬೯ ಎಂದು ಇಟ್ಟುಕೊಂಡಿದೆ ಅಷ್ಟೆ. (ನೋಡಿ ೧೬.೩) ಶಬ್ದಮಣಿದರ್ಪಣವನ್ನು ೧೨೭೫ ರಲ್ಲಿ ಬರೆದ ಎನ್ನುವುದು ಕೇವಲ ಊಹೆ.

೫. ಅಲ್ಲಲ್ಲಿ ಬಿಟ್ಟುಹೋದ ಪದಗಳನ್ನು ಸೂಚಿಸಿದ್ದೆ. ಅವುಗಳನ್ನು ೨ನೇ ಮುದ್ರಣದಲ್ಲಿ ಸೇರಿಸಿದ್ದಾರೆ.

ಮೊದಲ ಮುದ್ರಣದಲ್ಲಿ ಪುಟ ೧೯೯ ರಲ್ಲಿ ಅಡಿಟಿಪ್ಪಣಿ ೧೨೬೦ ರಲ್ಲಿ ಧರಿತ್ರಿ ಎಂಬ ಪಾಠ ತಪ್ಪು. 'ಧಾತ್ರಿ' ಎಂದಿರಬೇಕು ಎಂದು ಬರೆದಿದ್ದರು. ಇಲ್ಲಿ ಛಂದಸ್ಸಿನ ದೃಷ್ಟಿಯಿಂದ ಎಂದು ಸೇರಿಸಬೇಕು ಎಂದು ಗುರುತಿಸಿದ್ದೆ. ಆ ವಿವರಗಳನ್ನು ೨ನೇ ಮುದ್ರಣದಲ್ಲಿ ೧೨೮ ರಲ್ಲಿ ಅಡಿಟಿಪ್ಪಣಿ ೧೨೪ ರಲ್ಲಿ ಸೇರಿಸಿದ್ದಾರೆ.

೬ ತಿದ್ದುಪಾಟು ಅನುಬಂಧದಲ್ಲಿ ಸೂಚಿಸದೇ ಇರುವ ಅನೇಕ ಅಕ್ಷರಗಳ ಅಚ್ಚಿನ ದೋಷಗಳನ್ನು ಗುರುತಿಸಿದ್ದೆ. ನನ್ನ ಪ್ರತಿಯಲ್ಲಿ ಅವುಗಳನ್ನೆಲ್ಲ ಗಮನಿಸಿ ೨ನೇ ಮುದ್ರಣದಲ್ಲಿ ತಿದ್ದಿದ್ದಾರೆ.

ಉದಾ : ಮೊದಲ ಮುದ್ರಣದ ಪುಟ ೧೧೧ರ ಅಡಿಟಿಪ್ಪಣಿ. ವ್ಯವಹರಿಸಿದರು– ವ್ಯವಹರಿಸಿರುವವರು (೨ನೇ ಮುದ್ರಣ ಪು. ೧೨೦).

೭ ಹಲವು ಕಡೆಗಳಲ್ಲಿ ನೀವು ಸೂಚಿಸಿದ ತಿದ್ದುಪಾಟುಗಳು ನನಗೆ ಒಪ್ಪಿಗೆಯಿಲ್ಲ ಎಂದಿದ್ದರು. ಅಂಥ ಕಡೆ ತಮ್ಮ ಪಾಠವನ್ನೇ ಇರಿಸಿಕೊಂಡಿದ್ದಾರೆ.

ಮೊದಲ ಮುದ್ರಣ ಪುಟ ೧೧೧ ರಲ್ಲಿ ೧೭.೭ ರಲ್ಲಿ ವಿಷಯ ವಿವರ : ಎಂಬಲ್ಲಿ ವಿಷಯ ವಿವರ ಹೀಗಿದೆ : ಎಂದಿರಬೇಕಲ್ಲವೇ ಎಂದಿದ್ದೆ. ಹಾಗೇನಿಲ್ಲ ವಿಷಯ ವಿವರ : ಸಾಕು ಎಂದಿದ್ದರು. ೨ನೇ ಮುದ್ರಣದಲ್ಲಿ ಹಾಗೇ ಇದೆ. ಹೀಗಿದೆ ಪದ ಸೇರಿಸಿಲ್ಲ.

೮. ಮುದ್ರಣ ವಿನ್ಯಾಸದ ಬಗ್ಗೆ ಮೊದಲ ಮುದ್ರಣದ ಪುಟ ೪೨ ರಲ್ಲಿ ಕೆಲವು ಗ್ರಂಥಗಳ ಹೆಸರುಗಳು ಸಾಮಾನ್ಯ ಅಕ್ಷರಗಳಲ್ಲಿ (ನಾರ್ಮಲ್) ಅಚ್ಚಾಗಿದ್ದವು ಅವು ದಪ್ಪಕ್ಷರಗಳಲ್ಲಿ (ಬೋಲ್ಡ್) ಅಚ್ಚಾಗಬೇಕು ಎಂದು ಸೂಚಿಸಿದ್ದೆ. ಎರಡನೇ ಮುದ್ರಣದಲ್ಲಿ ಆ ಹೆಸರುಗಳನ್ನು ದಪ್ಪಕ್ಷರಗಳಲ್ಲಿ ಅಚ್ಚಿಸಿದ್ದಾರೆ.

ಹೀಗೆ ನನ್ನ ಪ್ರತಿಯನ್ನಿಟ್ಟುಕೊಂಡು ತಮಗೆ ಸೂಕ್ತವೆನಿಸಿದ ಎಲ್ಲ ಮಾರ್ಪಾಟುಗಳನ್ನು ಅಳವಡಿಸಿದ್ದಾರೆ. ನಾನು ಅವರ ಅನಧಿಕೃತ ವಿದ್ಯಾರ್ಥಿ ಎಂದರೆ ಅವರು ಕನ್ನಡ ತರಗತಿಗಳಲ್ಲಿ ಕುಳಿತಿರುತ್ತಿದ್ದ ಸಂಸ್ಕೃತ ವಿದ್ಯಾರ್ಥಿ ಆಗಿದ್ದೆ. ನನ್ನ ಪರಿಚಯ ಅವರಿಗೆ ಚೆನ್ನಾಗಿತ್ತು. ಕರ್ನಾಟಕ ಸಂಘದಲ್ಲಿ ನಾನು ಕಾರ್ಯದರ್ಶಿ ಆಗಿದ್ದೆ. ಅವರು ಅಧ್ಯಕ್ಷರಾಗಿದ್ದರು. ಪಾಂಡಿತ್ಯದಲ್ಲಿ ನಾನು ವಿದ್ಯಾರ್ಥಿ, ಅವರು ವಿದ್ವಾಂಸರು. ಆದರೂ ವಿನಯದಿಂದ ಎಷ್ಟೇ ಸಣ್ಣಪುಟ್ಟ ತಪ್ಪುಗಳನ್ನು ಯಾರೇ ತೋರಿಸಲಿ ಅದನ್ನು ಪ್ರಾಮಾಣಿಕವಾಗಿ ತಿದ್ದಿಕೊಳ್ಳುವ ಅವರ ಸ್ವಭಾವ ಅನೇಕ ವಿದ್ವಾಂಸರಿಗೆ ಆದರ್ಶಪ್ರಾಯವಾಗಿದೆ. ಅವರು ಎಷ್ಟೇ ತಿಳಿದವರಾಗಿದ್ದರೂ ತಮ್ಮ ವಿನಯವನ್ನು ಬರಹದಲ್ಲಿ ವ್ಯಕ್ತಪಡಿಸದೇ ಇರುತ್ತಿರಲಿಲ್ಲ. ಪ್ರಾಚೀನ ಕನ್ನಡ ವ್ಯಾಕರಣ ಗ್ರಂಥದಲ್ಲಿ ಅವರ ಗುರುಗಳಾದ ಯು. ಆರ್. ವರದಾಚಾರ್ಯರು ವಿದ್ಯಾರ್ಥಿ ಎಂ.ವಿ.ಸೀ. ಅವರಿಗೆ

ಸಂಸ್ಕೃತ–ಕನ್ನಡ ವ್ಯಾಕರಣಗಳಲ್ಲಿ ಎಷ್ಟು ಪಾಂಡಿತ್ಯವಿತ್ತೆಂದು ಸೊಗಸಾಗಿ ಹೇಳಿದ್ದಾರೆ. "ಸೂತ್ರಕಾರ ಪಾಣಿನಿಯಿಂದಾರಂಭಿಸಿ ಪತಂಜಲಿಯ ಮಹಾಭಾಷ್ಯ'ವನ್ನು ಪೂರ್ತಿಯಾಗಿ ಸುಮಾರು ೧೨ ವರ್ಷಗಳ ಕಾಲ ಸುಂಸ್ಕೃತ ವ್ಯಾಕರಣ ವಿದ್ವತ್ ಪರೀಕ್ಷೆಗಾಗಿ ವ್ಯಾಸಂಗ ಮಾಡಿರುವ, ಮಾಡುವ ವಿದ್ವಾಂಸರನೇಕರೂ ಆಧುನಿಕ ಸಂಸ್ಕೃತ ಪದವೀಧರನೇಕರೂ ನಿಮ್ಮಂತೆ ಸಂಸ್ಕೃತ ವ್ಯಾಕರಣಕಾರರೆಲ್ಲರ ವ್ಯಾಕರಣಗಳ ಸಂಪ್ರದಾಯಾದಿ ವಿಚಾರಗಳನ್ನು ತಿಳಿದಿರಲಾರರು" (ಪು. X) ಎಂದು ಅವರ ಸಂಸ್ಕೃತ ವ್ಯಾಕರಣಗಳ ಪಾಂಡಿತ್ಯದ ಬಗ್ಗೆ ಹೇಳಿದರೆ, ಕನ್ನಡ ವ್ಯಾಕರಣಗಳ ಪಾಂಡಿತ್ಯದ ಬಗ್ಗೆ ಹೇಳಿರುವ ಮಾತುಗಳಿವು :

"ಯಾವ ಎಂ.ಎ. ಪದವೀಧರರಾಗಲಿ ಪಂಡಿತರಾಗಲಿ ವ್ಯಾಕರಣ ವಿಚಾರವಾಗಿಯಾಗಲಿ ಸಾಹಿತ್ಯ ವಿಚಾರದಲ್ಲಿಯಾಗಲಿ ನಿಮ್ಮಷ್ಟು ತಿಳಿದಿರಲಾರರು. ನನ್ನ ಜ್ಞಾನವು ಒಂದು ಕುಂಟೆ ಅಥವಾ ಕೆರೆಯದ್ದಾದರೆ ನಿಮ್ಮದು ಕೃಷ್ಣರಾಜಸಾಗರದಷ್ಟು ಆಗಿದೆ". ಒಬ್ಬ ಮಹಾ ವಿದ್ವಾಂಸರಾದ ಶಿಷ್ಯನೊಬ್ಬನಿಗೆ ಇಂಥ ಪ್ರಶಸ್ತಿ ದೊರೆತಿರುವುದಕ್ಕಿಂತ ಬೇರೆ ಪ್ರಶಸ್ತಿ ಬೇಕೇ ?

ಎಂ.ವಿ.ಸೀ. ಇಷ್ಟು ಘನಪಂಡಿತರಾದರೂ ದಂತಗೋಪುರವಾಸಿ ಆಗಿರಲಿಲ್ಲ. ಅರಮನೆ ವಿದ್ವಾಂಸರ ವೈಭವದಿಂದ ಮೆರೆಯಲಿಲ್ಲ. ತೋಡಾ ಕಿರೀಟ ಕಂಕಣಾದಿ ವೇಶಭೂಷಣಗಳಿಂದ ವಿಜೃಂಭಿಸಲಿಲ್ಲ. ಜನಸಾಮಾನ್ಯರ ನಡುವೆ ಶ್ರೀಸಾಮಾನ್ಯರ ಹಾಗೆ ಬದುಕಿಬಾಳಿದರು. ಕನ್ನಡ ಚಳುವಳಿಗಳಲ್ಲಿ ಧರಣಿ ಮುಷ್ಕರಗಳಲ್ಲಿ ಭಾಗವಹಿಸಿದರು. ಪ್ರತಿಭಟನಾ ಸಭೆಗಳಲ್ಲಿ ಮಾತನಾಡಿದರು. ನನ್ನಂಥ ಸಾಮಾನ್ಯ ವಿದ್ಯಾರ್ಥಿಯನ್ನು ಗಣ್ಯವ್ಯಕ್ತಿಯ ಹಾಗೆ ಕಾಣುತ್ತಿದ್ದರು. ಅವರ ಒಂದೊಂದು ಮಾತೂ ಉದ್ಬೋಧಕವಾಗಿರುತ್ತಿತ್ತು ಆತ್ಮೀಯವಾಗಿರುತ್ತಿತ್ತು. ಅವರ ಸ್ನೇಹಪರತೆ, ಪ್ರೀತಿ ವಿಶ್ವಾಸಗಳು ಎಂಥವರಿಗೂ ಆದರ್ಶಪ್ರಾಯವಾಗಿದ್ದವು. ಕೇವಲ ಒಬ್ಬ ವಿದ್ಯಾರ್ಥಿ ತನ್ನ ಗ್ರಂಥವನ್ನು ಓದಿ ಸಣ್ಣಪುಟ್ಟ ಸೂಚನೆಗಳನ್ನು ಕೊಟ್ಟರೆ, ಅಚ್ಚಿನ ಕೆಲವು ದೋಷಗಳನ್ನು ತೋರಿಸಿದರೆ, ತನ್ನದೇ ಆದ ಅಭಿಪ್ರಾಯ ವ್ಯಕ್ತಪಡಿಸಿದರೆ, ಅವುಗಳ್ನು ಕಡೆಗಣಿಸದೆ ತೀವ್ರವಾಗಿ ಪರಿಗಣಿಸಿ ಇನ್ನೊಂದು ಮುದ್ರಣದಲ್ಲಿ ಅಳವಡಿಸಿಕೊಂಡ ರೀತಿ ಕಂಡ ಸಂದರ್ಭದಲ್ಲಿ ನನಗೆ ಅವರಿಂದ ಬಾಳಿಗೆ ಬೆಳಕಾಗುವ ಪಾಠಗಳನ್ನು ಕಲಿತಿದ್ದೇನೆ. ಎಲ್ಲ ವಿದ್ವಾಂಸರೂ ಹೀಗೆ ವಿನಯಶಾಲಿಗಳಾಗಿದ್ದರೆ ನಮ್ಮಂಥ ಸಾಮಾನ್ಯ ವಿದ್ಯಾರ್ಥಿಗಳಿಗೆ ಜ್ಞಾನಪ್ರಪಂಚದ ಎಷ್ಟೊಂದು ಬಾಗಿಲುಗಳು ತೆರೆದುಕೊಳ್ಳುತ್ತಿದ್ದವಲ್ಲಾ ಎನ್ನಿಸಿದೆ.

ಎಂ.ವಿ.ಸೀ. ಅವರಂಥ ಗುರುಗಳ ಶಿಷ್ಯರಾದವರು ಅವರ ಸ್ನೇಹವಲಯಕ್ಕೆ ಬಂದವರಲ್ಲಿ ಧನ್ಯರು, ಪುಣ್ಯರು.

■

೧೩. ಬಿ.ಎಂ.ಶ್ರೀ ಪ್ರತಿಷ್ಠಾನ ಸ್ಥಾಪನೆ, ಹಿನ್ನೆಲೆ : ಒಂದು ಕಿರುನೋಟ

• ಎಂ. ಎಸ್. ಭಾಸ್ಕರ್

ದಿ॥ ಬಿ.ಎಂ.ಶ್ರೀ ಅವರು ದಿ॥ ಎಂ.ವಿ.ಸೀ. ಅವರ ಪರೋಕ್ಷ ಗುರು. "ಇಂಗ್ಲೀಷ್ ಗೀತೆಗಳು" ಪುಸ್ತಕವನ್ನು ತೀ.ನಂ.ಶ್ರೀ ಅವರು ಇವರಿಗೆ ಹುಟ್ಟುಹಬ್ಬದ ಉಡುಗೊರೆಯಾಗಿ ಕೊಟ್ಟಿದ್ದರಂತೆ. ಇದಕ್ಕಿಂತ ಮೊದಲೇ ಎಂ.ವಿ.ಸೀ. ಅವರು ಕವನಗಳ ರಚನೆಯಲ್ಲಿ ತೊಡಗಿದ್ದರು. ಬಿ.ಎಂ.ಶ್ರೀ ಆರಾಧಕರಾದ ಎಂ.ವಿ.ಸೀ. ಅವರು ಬಿ.ಎಂ.ಶ್ರೀ ಪ್ರತಿಷ್ಠಾನ ಹುಟ್ಟಿಹಾಕಿದ್ದು ೬-೫-೧೯೭೯ ಭಾನುವಾರ, ೪.೦೦ ಗಂಟೆಗೆ, ಗೋಖಲೆ ಸಾರ್ವಜನಿಕ ಸಂಸ್ಥೆಯ ಆವರಣದಲ್ಲಿ ನಡೆದ ಪ್ರಥಮ ಸ್ಥಾಪಕರ ಸದಸ್ಯರ ಔಪಚಾರಿಕ ಸಭೆಯಲ್ಲಿ. ಅದಕ್ಕೆ ಮೊದಲೇ ಎಂ.ವಿ.ಸೀ. ಅವರು ಸಂಸ್ಥೆಯನ್ನು ಶುರು ಮಾಡಲು ಸುಮಾರು ೧೦೦ ಅಂತರ್ದೇಶಿ ಪತ್ರಗಳನ್ನು ತಾವೇ ಬೆರಳಚ್ಚು ಮಾಡಿ ತಮ್ಮ ಹಿರಿಯ ಲೇಖಕರ ಬಿ.ಎಂ.ಶ್ರೀ ಬಂಧುಗಳ, ಸಂಶೋಧಕರ ಸಂಘ ಸಂಸ್ಥೆಗಳ ಅಭಿಪ್ರಾಯ ಸಂಗ್ರಹಣೆ ಮಾಡಿದ್ದರು. ನನ್ನ ತಿಳಿವಳಿಕೆ, ಜ್ಞಾಪಕದಂತೆ ಮೊದಲ ಪತ್ರ ಇಂಗ್ಲೀಷ್‌ನಲ್ಲಿತ್ತು. ಕಾರಣ ಆಗ ನಮ್ಮ ಮನೆಯಲ್ಲಿ ಇದ್ದಿದ್ದು ದಿ॥ ರಾಮಚಂದ್ರ ಶರ್ಮ, ನಮ್ಮ ತಂದೆಗೆ ಕೊಟ್ಟಿದ್ದ Portable Typewrite ಇಂಗ್ಲೆಂಡಿನಿಂದ ತಂದುಕೊಟ್ಟಿದ್ದು, ಎಂ.ವಿ.ಸೀ. ಅವರೇ ಎಲ್ಲರಿಗೂ ಪತ್ರಗಳನ್ನು ಅಂಚೆಯಲ್ಲಿ ಹಾಕಿ ಅಭಿಪ್ರಾಯ ಸಂಗ್ರಹಣೆ ಮಾಡುತ್ತಿದ್ದ ಸಂಭ್ರಮ ನನ್ನ ಕಣ್ಣ ಮುಂದೆ ಈಗಲೂ ಮರೆಯಲಾಗದ ನೆನಪು. ಅವರು ವ್ಯವಹರಿಸಿದ ಹಲವು ಹಿರಿಯರ ಹೆಸರು ಪ್ರಥಮವಾಗಿ ನಮ್ಮ ಮನೆ ಮುಂದಿನ ರಸ್ತೆಯಲ್ಲಿ ವಾಸವಾಗಿದ್ದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು. ಆಮೇಲೆ ನಿಟ್ಟೂರು ಶ್ರೀನಿವಾಸರಾವ್, ಶ್ರೀ ಜಿ. ನಾರಾಯಣ, ಶ್ರೀ ಎ. ಎನ್. ಮೂರ್ತಿರಾವ್, ವಿ. ಸೀತಾರಾಮಯ್ಯ, ಡಿ. ವಿ. ಗುಂಡಪ್ಪ ಮೊದಲಾದ ಹಿರಿಯರನ್ನು ಸ್ವತಃ ಭೇಟಿಯಾಗಿ ಅವರ ಸಹಾಯ ಸಲಹೆ ಪಡೆದಿದ್ದರು. ಮೈಸೂರಿನಲ್ಲಿ ಡಾ॥ ಡಿ. ಜವರೇಗೌಡ, ಡಾ॥ ಹಾ. ಮಾ. ನಾಯಕ್, ಪರಮೇಶ್ವರ ಭಟ್ಟ, ಡಾ॥ ಪ್ರಭುಶಂಕರ ಅವರೊಡನೆಯೂ ಪತ್ರ ವ್ಯವಹಾರ ಮಾಡಿದ್ದ ನೆನಪು.

೧೦-೩-೧೯೮೦ ರಂದು ವಿದ್ಯುಕ್ತವಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಉದ್ಘಾಟನೆಯನ್ನು ಡಾ॥ ಕುವೆಂಪು ಅವರು ನೆರವೇರಿಸಿಕೊಟ್ಟರು. ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಲೇಖಕರಾದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಹಿಸಿದ್ದರು. ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಾಲಯ, ಗ್ರಂಥಾಲಯ, ತಾಳೇಗರಿ ಹಸ್ತಪ್ರತಿ ಸಂಗ್ರಹ ಮತ್ತೆಲ್ಲ ಅದಕ್ಕೆ ಸಂಬಂಧಪಟ್ಟ ಸಮಿತಿಯ ಸಭೆಗಳು ಆಗಾಗ್ಗೆ ವಿಚಾರಗೋಷ್ಠಿ, ಭಾಷಣ, ಕವಿತಾ ವಾಚನ, ಸಹೃದಯ ಗೋಷ್ಠಿ ಮುಂತಾದ ಕಾರ್ಯಕ್ರಮ ನಮ್ಮ ಮನೆಯಲ್ಲೇ ಮುಂಭಾಗದಲ್ಲಿ ಕಟ್ಟಿಸಿದ್ದ ಒಂದು ಸುಮಾರಾಗಿ ದೊಡ್ಡದಾಗಿದ್ದ ಅಂಕಣದಲ್ಲಿ ಸುಮಾರು ೧೫ ವರ್ಷಗಳ ಕಾಲ (೧೯೯೪ರ ಕಡೆಯವರೆಗೆ) ಪ್ರತಿಷ್ಠಾನದಿಂದ ಯಾವುದೇ ಬಾಡಿಗೆ ವಸೂಲು ಮಾಡದೆ ಜಾಗವನ್ನು ಬಿಟ್ಟುಕೊಟ್ಟಿದ್ದರು. ನಮ್ಮ ತಂದೆಯವರು ದಿವಂಗತರಾದ ಮೇಲೆ ನಾವು (೪ ಜನ ಗಂಡುಮಕ್ಕಳು) ನಮ್ಮ ತಂದೆಯವರ ಆಸೆಯಂತೆ ಪ್ರತಿಷ್ಠಾನ ಕಾರ್ಯನಿರ್ವಹಿಸಲು ೫-೬ ವರ್ಷಗಳ ಕಾಲ ಜಾಗವನ್ನು ಬಿಟ್ಟುಕೊಟ್ಟಿದ್ದೆವು. ಅನಂತರ ನಮ್ಮ ಮನೆಯನ್ನು ಬೇರೆಯವರಿಗೆ ಕ್ರಯ ಮಾಡಿ ಹಸ್ತಾಂತರ ಮಾಡುವಾಗ ಬೇರೆ ವ್ಯವಸ್ಥೆ ಮಾಡಿಕೊಳ್ಳಲು ಕೆಲವು ಸಮಯ ಡಾ॥ ಮಾಸ್ತಿ ಅವರ ಮನೆಯಲ್ಲಿ ಮಹಡಿಯ ಮೇಲೆ ಆನಂತರ ನಿಟ್ಟೂರು ಶ್ರೀನಿವಾಸರಾವ್ ಅವರ ಸಲಹೆ ಮೇರೆ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ೪ ರೂಮಿನಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಆಮೇಲೆ ಸರ್ಕಾರ ಕೊಡಮಾಡಿದ ನಿವೇಶನದಲ್ಲಿ ಒಂದು ಅಂಕಣದ ಕಟ್ಟಡ ನಿರ್ಮಾಣವಾದ ಮೇಲೆ ಸ್ವಂತ ಕಟ್ಟಡಕ್ಕೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಕೆಲಸ ಅಡ್ಡಿ ಆತಂಕವಿಲ್ಲದೆ ನಡೆಯುತ್ತಿತ್ತು.

ನಿವೇಶನ ಪಡೆಯಲು ಎಂ.ವಿ.ಸೀ. ಅವರ ಶ್ರಮ, ಜಿ. ನಾರಾಯಣ ಅವರ ಸಹಾಯ, ನಿಟ್ಟೂರು ಶ್ರೀನಿವಾಸರಾವ್ ಅವರ ಸಲಹೆ, ಬಹಳ ಮುಖ್ಯವಾಗಿತ್ತು. ಆ ನಿವೇಶನದಲ್ಲಿ ಮುಂಭಾಗದಲ್ಲಿ ಇದ್ದ ಎಲೆಕ್ಟ್ರಿಕ್ ಟ್ರಾನ್ಸ್‌ಫಾರ್ಮರ್ ಅನ್ನು ಬೇರೆ ಕಡೆ ಸ್ಥಳಾಂತರಿಸಲು ಸಂಬಂಧಪಟ್ಟವರೊಡನೆ ಮಾಡಿದ ಪತ್ರ ವ್ಯವಹಾರ. ಆ ಕಾರ್ಯ ನಿಧಾನವಾದಾಗ ನಮ್ಮ ತಂದೆಯವರೆ ಆಗಿನ ರಾಜ್ಯಪಾಲರಲ್ಲಿ ಮನವಿ ಮಾಡಿಕೊಂಡು ಟ್ರಾನ್ಸ್‌ಫಾರ್ಮರ್ ಸ್ಥಳಾಂತರಿಸಲು ಆದೇಶ ಹೊರಡಿಸುವುದರಲ್ಲಿ ವಿಜಯಿಗಳಾದಾಗ ಆದ ಸಂತೋಷ ವರ್ಣಿಸಲಾಗದ್ದು. ಆದರೆ ಆ ಸ್ವಂತ ಕಟ್ಟಡದ ರೂಪರೇಶೆಗಳನ್ನು (ಪ್ಲಾನ್) ಅದಕ್ಕೆ ತಗಲಬಹುದಾದ ಖರ್ಚು (ಅಂದಾಜು) ಸಂಪತ್ತನ್ನು ಕ್ರೋಢೀಕರಿಸುವುದು ಇದೆಲ್ಲದರ ಬಗ್ಗೆ ಹಿರಿಯರೊಡನೆ ಸಮಾಲೋಚನೆ ಮಾಡಿ ಆದಷ್ಟು ಬೇಗ ಕಟ್ಟಡ ನಿರ್ಮಾಣವಾಗಲು ಬಹಳ ಆಸಕ್ತಿ, ಉತ್ಸಾಹ ಆಗ ಕಂಡುಬಂದಿತು. ಆದರೆ ಆ ಕಟ್ಟಡದ ನಿರ್ಮಾಣದ, ಅದರ ಉದ್ಘಾಟನೆಯನ್ನು ನೋಡುವ ಭಾಗ್ಯ ಮಾತ್ರ ಅವರದಾಗಿರಲಿಲ್ಲ ಎಂದು ಅವರ ಹಿತೈಷಿಗಳಿಗೆಲ್ಲ ನೋವಿನ ಸಂಗತಿಯಾಗಿದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸ್ಥಾಪಿಸಲು ಎಷ್ಟು ಕಷ್ಟ-ನಿಷ್ಠೂರ ಕೆಲವರಿಂದ ಆಕ್ಷೇಪಣೆ ಅದನ್ನೆಲ್ಲ ಮರೆತಿದ್ದರು. ಎಲ್ಲರನ್ನು ಒಟ್ಟುಗೂಡಿಸಿ ಅವರು ಹಿಡಿದ ಕಾರ್ಯವನ್ನು ಒಂದು

ವ್ರತದಂತೆ ಅಂತ್ಯ ಕಾಣಿಸಿದ ಕೀರ್ತಿ ಎಂ.ವಿ.ಸೀ. ಅವರಿಗೇ ದಕ್ಕಬೇಕಾದ್ದು ನ್ಯಾಯವಾಗಿದೆ. ಈ ಒಂದು ಕಾರಣದಿಂದಲೇ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಈಗಲೂ ತನ್ನ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಅದರ ಸಭಾಂಗಣಕ್ಕೆ ಎಂ.ವಿ.ಸೀ. ಸಭಾಂಗಣ ಎಂದು ನಾಮಕರಣ ಮಾಡಿದ್ದಾರೆ. ಪ್ರಥಮವಾಗಿ ಎಂ.ವಿ.ಸೀ. ಅವರನ್ನು ನೆನೆದು ಇತರೆ ಕೆಲಸ ಕಾರ್ಯ ನಿರ್ವಹಿಸುತ್ತಿರುವುದು ಸಂತೋಷದ ವಿಚಾರ. ಎಂ.ವಿ.ಸೀ. ಅವರ ಸಾಕಷ್ಟು ಸಾಹಿತ್ಯ ಕೃತಿಗಳನ್ನು ಪ್ರತಿಷ್ಠಾನ ಪ್ರಕಟಿಸಿದೆ. ಎಂ.ವಿ.ಸೀ ಅವರ ಸಾಹಿತ್ಯದ ಪ್ರಚಾರವನ್ನು ನಾಡಿನಲ್ಲೆಲ್ಲ ಹರಡುವಂತೆ ಎಂ.ವಿ.ಸೀ. ಜನ್ಮಶತಮಾನೋತ್ಸವವನ್ನು ಯಶಸ್ವಿಯಾಗಿ ಮಾಡಿದ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯನಿರ್ವಾಹಕ ಮಂಡಳಿ. ಮುಖ್ಯವಾಗಿ ಡಾ॥ ಪಿ. ವಿ. ನಾರಾಯಣ, ಶ್ರೀ ಜಿ. ನಾರಾಯಣ, ನಾಡೋಜ ಶ್ರೀ ವೆಂಕಟಸುಬ್ಬಯ್ಯ, ಶ್ರೀ ಎಲ್. ಎಸ್. ಶೇಷಗಿರಿರಾವ್, ನಾ. ಗೀತಾಚಾರ್ಯ, ಶ್ರೀ ಎಸ್. ವಿ. ಶ್ರೀನಿವಾಸರಾವ್, ಶ್ರೀ. ಎಸ್. ಟಿ. ರಾಧಾಕೃಷ್ಣ ಅವರ ನಿಸ್ವಾರ್ಥ ಸೇವೆ ನೆನೆಯತಕ್ಕದ್ದು.

ಪ್ರಸ್ತುತ ಎಂ.ವಿ.ಸೀ. ಸಂಶೋಧನ ಕೇಂದ್ರ (Hampi Kannada V.V.) ಮಾನ್ಯತೆ ಪಡೆದು M.Phil, Phd. ಪದವಿ ಕೊಡಿಸುತ್ತಿರುವುದು, ಎಂ.ವಿ.ಸೀ. ಅವರ ಮುಂದಾಲೋಚನೆಯ ಫಲ ಎಂದರೆ ತಪ್ಪಾಗಲಾರದು. ಎಂ.ವೀ.ಸಿ. ಅವರಿಗೆ ಪ್ರಿಯವಾದ ಗ್ರಂಥ ಸಂಪಾದನೆ, ಹಳೆಗನ್ನಡ ತರಗತಿಗಳು, ಹಸ್ತಪ್ರತಿ ಅಧ್ಯಯನ ಶಾಖೆ ಇವೆಲ್ಲಾ ನಡೆಸುತ್ತಿರುವ ಬಿ.ಎಂ.ಶ್ರೀ. ಪ್ರತಿಷ್ಠಾನ ಬೆಂಗಳೂರಿನ ಕನ್ನಡಿಗರಿಗೆ ಸಾಹಿತಿಗಳ ಸರ್ಕಾರದ ಮೆಚ್ಚುಗೆಗೆ ಪಾತ್ರವಾಗಿರುವುದು ಸಂತೋಷದ ಸಂಗತಿ. ಈ ಎಲ್ಲ ಕಾರ್ಯವನ್ನು ನಿಷ್ಠೆಯಿಂದ ನಡೆಸುತ್ತಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಕಾರ್ಯಸಮಿತಿ, ಪದಾಧಿಕಾರಿಗಳ ಶ್ರಮ ಪ್ರತಿಷ್ಠಾನ ಒಂದು ಹೆಮ್ಮೆಯಾದ ಸಂಶೋಧನ ಸಂಸ್ಥೆಯಾಗಿ ರೂಪುಗೊಂಡಿದೆ. ಅಪರೂಪದ (ವಿದ್ವತ್) ಕನ್ನಡ ಗ್ರಂಥಗಳನ್ನು ಮುದ್ರಣಕ್ಕೆ ಸಿದ್ಧಪಡಿಸುವ ಕಾರ್ಯ ಚುರುಕುಗೊಳ್ಳಬೇಕಾಗಿದೆ ಎಂದು ಸೂಚಿಸಲು ಇಷ್ಟಪಡುತ್ತೇನೆ. ಬಿ.ಎಂ.ಶ್ರೀ ಪ್ರತಿಷ್ಠಾನದ ಉದ್ಘಾಟನೆಯ ಸಂದರ್ಭದಲ್ಲಿ ಎಂ.ವಿ.ಸೀ. ಅವರು ಮಾಡಿದ ಭಾಷಣದ ಭಾಗವನ್ನು ಕೇವಲ ಮಾಹಿತಿಯ ಉದ್ದೇಶದಿಂದ ಕೊಟ್ಟಿದ್ದೇನೆ.

■

೧೪. ದಾಸಯ್ಯ

• ಎಸ್. ಟಿ. ರಾಧಾಕೃಷ್ಣ

ಜೋಳಿಗೆ ಹಿಡಿದು ಹೊರಟ ದಾಸಯ್ಯ
ಕನ್ನಡ ಕಾಣಿಕೆ
ಕೇಳಲೆಂದು.

ಹೊಟ್ಟೆಪಾಡಿಗಲ್ಲ,
ಹಿಟ್ಟುತಿನ್ನಲಲ್ಲ,
ಗುರುಸ್ಮರಣೆ ಮಾಡಲೆಂದು.

ಜೋಳಿಗೆ ಹಿಡಿದು ಹೊರಟ ದಾಸಯ್ಯ,
ಕನ್ನಡ ಕಾಣಿಕೆ ಕೇಳಲೆಂದು.

ಮೈ ತುಂಬ ಕಾಯಿಲೆ ಇತ್ತು,
ಕೈ ತುಂಬ ಕೆಲಸ ಇತ್ತು,
ಆದರು ಅಲೆದು ಊರಲೆಲ್ಲ.

ಜೋಳಿಗೆ ಹಿಡಿದು ಹೊರಟ ದಾಸಯ್ಯ,
ಕನ್ನಡ ಕಾಣಿಕೆ ಕೇಳಲೆಂದು.

ಶಿಷ್ಯರ ಪಡೆಯನೆ ನಿರ್ಮಿಸಿದ,
ಕನ್ನಡ ಕೃಷಿಯಲಿ ತೊಡಗಿಸಿದ,
ಗುರುಸ್ಮರಣೆಗೆ ಜೀವನವನರ್ಪಿಸಿದ.

ಜೋಳಿಗೆ ಹಿಡಿದು ಹೊರಟ ದಾಸಯ್ಯ,
ಕನ್ನಡ ಕಾಣಿಕೆ ಕೇಳಲೆಂದು.

ಶೀ ಭವನದ ಕನಸ ಕಂಡನನವರತ,
ಕಂಡ ಕಂಡವರಿಗೆ ಕೈ ಮುಗಿಯುತ,
ತನ್ನಾರೋಗ್ಯವ ಕಡೆಗಣಿಸುತ.

ಜೋಳಿಗೆ ಹಿಡಿದು ಹೊರಟ ದಾಸಯ್ಯ,

೧೫. ಎಂಬತ್ತರ ಹೊಸ್ತಿಲಲ್ಲಿದ್ದ ಅಪ್ಪ

• ಎಂ. ಎಸ್. ಭಾಸ್ಕರ್

ನನ್ನವಳು ಕೊಟ್ಟ –
ಎರಡನೇ ಕಪ್ ಕಾಫಿ ಹೀರಿ
ಶುಭ್ರವಾಗಿ ಸ್ನಾನ ಮಾಡಿ
ಮಡಿ ಪಂಚೆ – ಹಳದಿ ಶಾಲು –
ಹೊದೆದು – ನಲ್ಲಿ ನೀರು
ತಾವೇ ಹಿಡಿದು.,
ತಾಮ್ರದ –ಪಂಚಪಾತ್ರೆ
ಉದ್ಧರಣೆ
ತಾಮ್ರದ ಚಿಕ್ಕ ತಟ್ಟೆ
ಹಿಡಿಯಲಾರದ ಕೈಲಿ
ಹಿಡಿದುಕೊಂಡು
ಏದುಸಿರು ಬಂದರೂ
ಧೃತಿಕೆಡದ ಅಪ್ಪ
ಆಮೇಲೆ, ಚಿಕ್ಕ ದೇವರ ಮನೆ –
ಮುಂದೆ ಕೂತು
ಎರಡು ತುಂಬೆ ಹೂವು ಹಾಕಿ
ಎರಡು ನಿಮಿಷದ ಧ್ಯಾನ ಮಾಡಿ
ನಮಿಸುತ್ತಿದ್ದ ನಮ್ಮಪ್ಪ

* * *

ಎಳೆಬಿಸಿಲ ಹಿತವಾದ ಶಾಖ –
ತಂಪಾಗಿ ಬೆಳೆದ
ತೆಂಗಿನ ನೆರಳು –
ಅವರ ಆಸ್ತಮ ಮರೆತಂತೆ
ಇದ್ದ ಕಾಲ
ಅಲ್ಲೇ, ಅವರ ಶಾಸ್ತ್ರದ
ಐದು ನಿಮಿಷದ
ಸಂಧ್ಯಾವಂದನೆ
ನಿತ್ಯ ಬಿಡದ ಅಭ್ಯಾಸ

ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮಗಳ ವರದಿ

[ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕರೂ ಪ್ರಸಿದ್ಧ ವಿದ್ವಾಂಸರೂ ಸಾಹಿತಿಗಳೂ ಆಗಿದ್ದ ಪ್ರೊ. ಎಂ. ವಿ. ಸೀತಾರಾಮಯ್ಯನವರ ಜನ್ಮಶತಮಾನೋತ್ಸವವನ್ನು ೯-೯-೨೦೦೯ ರಿಂದ ನಾಡಿನಾದ್ಯಂತ ವರ್ಷಪೂರ್ತಿ ಆಚರಿಸಲಾಯಿತು. ಈ ವರ್ಷವನ್ನು 'ಹಸ್ತಪ್ರತಿ ಅಧ್ಯಯನ ವರ್ಷ' ಎಂದು ಘೋಷಿಸಲಾಗಿತ್ತು. ಪ್ರತಿ ಕಾರ್ಯಕ್ರಮದಲ್ಲೂ ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ವ್ಯವಸ್ಥೆ ಮಾಡಲಾಗಿತ್ತು. ಇಡೀ ವರ್ಷದ ಕಾರ್ಯಕ್ರಮಗಳ ಪಕ್ಷಿನೋಟ ಇಲ್ಲಿದೆ.]

೧. ಪ್ರೊ. ಎಂ.ವಿ.ಸೀತಾರಾಮಯ್ಯ ಅವರ ಜನ್ಮಶತಮಾನೋತ್ಸವ ಆಚರಣೆಯ ಪ್ರಾರಂಭೋತ್ಸವ :

೦೯-೦೯-೨೦೦೯ರಂದು ಗುರುವಾರ ಪ್ರೊ. ಎಂ.ವಿ.ಸೀ. ಅವರ ಜನ್ಮಶತಮಾನೋತ್ಸವದ ಉದ್ಘಾಟನಾ ಸಮಾರಂಭ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅದ್ದೂರಿಯಾಗಿ ಜರುಗಿತು. ಸನ್ಮಾನ್ಯ ಪದ್ಮಶ್ರೀ ನಾಡೋಜ ಡಾ. ದೇ. ಜವರೇಗೌಡರು ಕಾರ್ಯಕ್ರಮ ಉದ್ಘಾಟಿಸಿದರು. ನಗರಾಭಿವೃದ್ಧಿ ಸಚಿವ ಶ್ರೀ ಸುರೇಶ್‌ಕುಮಾರ್ ಅನಿವಾರ್ಯ ಕಾರಣಗಳಿಂದ ಸಭೆಗೆ ಆಗಮಿಸಲು ಸಾಧ್ಯವಾಗದ್ದರಿಂದ ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಕಾರ್ಯಕ್ರಮಗಳು ಪ್ರಾರಂಭವಾಗುವ ಮುನ್ನ ಎಂ.ವಿ.ಸೀ. ಅವರ ಗೀತೆಗಳ ಗಾಯನವನ್ನು ಶ್ರೀ ಆನಂದ ಮಾದಲಗೆರೆ ತಂಡದವರು ನಡೆಸಿಕೊಟ್ಟರು. ಪ್ರಾರ್ಥನೆ ಹಾಗೂ ನಾಡಗೀತೆಯನ್ನೂ ಶ್ರೀ ಆನಂದ ಮಾದಲಗೆರೆ ಹಾಡಿದರು. 'ಬೆಳಕು ಶಿಶು ನಿವಾಸ'ದ ಮಕ್ಕಳು ಎಂ.ವಿ.ಸೀ. ಅವರ 'ಹೂವನು ಮಾರುತ ಹೂವಾಡಗಿತ್ತಿ' ಕವನವನ್ನು ಸುಶ್ರಾವ್ಯವಾಗಿ ಹಾಡಿದರು. ನಾಡೋಜ ಜಿ. ನಾರಾಯಣ ಅವರು ಅತಿಥಿ ಅಭ್ಯಾಗತರನ್ನು; ಸ್ವಾಗತಿಸಿದರು. ಎಂ.ವಿ.ಸೀ. ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಡಾ. ಪಿ.ವಿ. ನಾರಾಯಣ ಅವರು ಪ್ರಾಸ್ತಾವಿಕ ಭಾಷಣ ಮಾಡಿ ಪ್ರೊ ಎಂ.ವಿ.ಸೀ. ಅವರ ಸಾಹಿತ್ಯ ಕೊಡುಗೆಗಳ ಮೇಲೆ ಬೆಳಕು ಚೆಲ್ಲಿ ಪ್ರತಿಷ್ಠಾನ ಹಮ್ಮಿಕೊಂಡಿರುವ ರಾಜ್ಯಾದಂತ ನಡೆಸಬೇಕೆಂದಿರುವ ಕಾರ್ಯಕ್ರಮಗಳ ವಿವರ ನೀಡಿ, ಉದ್ದಾಮ ಸಾಹಿತಿ, ಸಂಶೋಧಕ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕ ಪ್ರೊ.ಎಂ.ವಿ.ಸೀ. ಅವರ ಶತಮಾನೋತ್ಸವ ಕಾರ್ಯಕ್ರಮಗಳ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕೆಂದು ಕೋರಿದರು ಖ್ಯಾತ ಸಂಶೋಧಕ, ವಿದ್ವಾಂಸ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀಗಳು, ಡಾ. ನಾ. ಗೀತಾಚಾರ್ಯರು ರಚಿಸಿರುವ 'ಹಸ್ತಪ್ರತಿ ಅಧ್ಯಯನ ಶಾಸ್ತ್ರ' ಹಾಗೂ ಶ್ರೀ ಎಸ್.ವಿ. ಶ್ರೀನಿವಾಸರಾವ್ ಈ ವಿಶೇಷ ಸಂದರ್ಭಕ್ಕೆಂದೇ ಸಿದ್ಧಪಡಿಸಿರುವ

'ಎಂ.ವಿ. ಸೀತಾರಾಮಯ್ಯ – ಕಿರು ಪರಿಚಯ-ನುಡಿಮುತ್ತುಗಳು' ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಅವುಗಳಲ್ಲಿನ ವೈಶಿಷ್ಟ್ಯವನ್ನು ವಿವರಿಸಿದರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕ ಶ್ರೀ ಮನುಬಳಿಗಾರ್ ಅವರು ಎಂ.ವಿ.ಸೀ. ಅವರು ರಚಿಸಿರುವ ಗ್ರಂಥಗಳು ಚಿತ್ರಗಳು ಹಾಗೂ ಹಸ್ತಪ್ರತಿ ಪ್ರದರ್ಶನಗಳು ಉದ್ಘಾಟನೆಯನ್ನು ನೆರವೇರಿಸಿ ಎಂ.ವಿ.ಸೀ. ಅವರ ಶತಮಾನೋತ್ಸವ ಆಚರಣೆಗೆ ನಿರ್ದೇಶನಾಲಯ ಪೂರ್ಣ ಸಹಕಾರ/ಸಹಯೋಗ ನೀಡುವುದಾಗಿ ಹಾಗೆಯೇ ಪ್ರಸ್ತುತ ಪ್ರತಿಷ್ಠಾನಕ್ಕೆ ನೀಡುತ್ತಿರುವ ಅನುದಾನ ೫ಲಕ್ಷ ರೂಪಾಯಿಯನ್ನು ೧೦ ಲಕ್ಷಕ್ಕೆ ಏರಿಸುವ ಆಶ್ವಾಸನೆ ಸಹ ನೀಡಿ ಸರ್ವರ ಮೆಚ್ಚುಗೆಯ ಕರತಾಡನಕ್ಕೆ ಕಾರಣರಾದರು. ಎಂ.ವಿ.ಸೀ. ಅವರ ಸಮಗ್ರ ಸಾಹಿತ್ಯ ಕೃತಿಗಳನ್ನು ನಿರ್ದೇಶನಾಲಯದ ವತಿಯಿಂದ ಪ್ರಕಟಿಸುವುದಾಗಿಯೂ ಘೋಷಿಸಿದರು. ಎಂ.ವಿ.ಸೀ. ಬದುಕು-ಬರಹ ಕುರಿತು ನಾಡಿನ ಖ್ಯಾತ ಕವಿ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಡಾ. ದೊಡ್ಡರಂಗೇಗೌಡರು ಆತ್ಮೀಯವಾಗಿ ಮಾತನಾಡಿ ಗುರುಗಳಿಗೆ ನುಡಿ-ನಮನ ಸಲ್ಲಿಸಿದರು. ಹಾಗೆಯೇ ಶತಮಾನೋತ್ಸವ ಆಚರಣೆಗೆ ಶಾಸಕರ ನಿಧಿಯಿಂದ ೨ಲಕ್ಷ ರೂ. ಕೊಡುವುದಾಗಿ ಘೋಷಿಸಿದರು.

ಡಾ.ನಾ. ಗೀತಾಚಾರ್ಯರವರು ವಂದನಾರ್ಪಣೆ ಮಾಡಿದರು. ಶ್ರೀ ಎಸ್.ವಿ. ಶ್ರೀನಿವಾಸರಾಯರು ಸಮಿತಿಯ ಪರವಾಗಿ ಎಲ್ಲಾ ಅತಿಥಿಗಳಿಗೆ ಈ ಸಂದರ್ಭಕ್ಕೆಂದೇ ವಿಶೇಷವಾಗಿ ರೂಪಿಸಿದ್ದು ನೆನಪಿನ ಕಾಣಿಕೆಯನ್ನು ನೀಡಿದರು.

ಈ ಎಲ್ಲಾ ವೇದಿಕೆಯ ಕಾರ್ಯಕ್ರಮಗಳು ಮುಗಿದ ನಂತರ ಎಂ.ವಿ.ಸೀ. ಅವರ ಮಕ್ಕಳ ನಾಟಕ 'ಕುಮಾರಗೌತಮ'ವನ್ನು ಬೆಳಕು ಶಿಶುನಿವಾಸದ ಮಕ್ಕಳಿಂದ ಪ್ರದರ್ಶಿತಗೊಂಡು ಸರ್ವರ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಇದನ್ನು ಖ್ಯಾತ ರಂಗಕರ್ಮಿ ಶ್ರೀ ಜಿ.ಕೆ. ಅನಂತ್ ನಿರ್ದೇಶಿಸಿದ್ದರು, ಮಕ್ಕಳುಗಳ ಪರವಾಗಿ ಬೆಳಕು ಶಿಶುನಿವಾಸದ ನಿರ್ದೇಶಕ ಶ್ರೀ ಮೋಹನದಾಸ್ ಧಾವಸ್ಕರ್ ಅವರು ಡಾ.ಪಿ.ವಿ. ನಾರಾಯಣವರವರಿಂದ ನೆನಪಿನ ಕಾಣಿಕೆ ಸ್ವೀಕರಿಸಿದರು. ಕಾರ್ಯಕ್ರಮಗಳ ನಿರೂಪಣೆಯನ್ನು ಡಾ. ನಾ. ಗೀತಾಚಾರ್ಯ ಹಾಗೂ ಶ್ರೀ ಎಸ್.ವಿ. ಶ್ರೀನಿವಾಸರಾವ್ ನಡೆಸಿಕೊಟ್ಟರು.

೨. ೯-೧೦-೨೦೦೯ ರಂದು **ಶತಮಾನೋತ್ಸವ ತಿಂಗಳ ಉಪನ್ಯಾಸಮಾಲೆಯ ಮತ್ತು ಪ್ರತಿಷ್ಠಾನದಲ್ಲಿ ವರ್ಷವಿಡಿ ಪ್ರಾಚೀನ ಹಸ್ತಪ್ರತಿ ಪ್ರದರ್ಶನಗಳ ಉದ್ಘಾಟನಾ ಸಮಾರಂಭ** ಪ್ರತಿಷ್ಠಾನದಲ್ಲಿ ನಡೆಯಿತು. ಹಸ್ತಪ್ರತಿ ಉದ್ಘಾಟನ ಸಮಾರಂಭಕ್ಕೆ ಆಗಮಿಸಬೇಕಾಗಿದ್ದ ಶಾಸಕ ಶ್ರೀ ರವಿ ಸುಬ್ರಹ್ಮಣ್ಯ ಅವರ ಅನುಪಸ್ಥಿತಿಯಲ್ಲಿ ಈ ಕಾರ್ಯಕ್ರಮವನ್ನು ಪ್ರಸಿದ್ಧ ವಿದ್ವಾಂಸರಾದ ಡಾ. ಎಂ. ಚಿದಾನಂದಮೂರ್ತಿ ಅವರೇ ನೆರವೇರಿಸಿದರು. ಶ್ರೀ ರಾ. ನಂ. ಚಂದ್ರಶೇಖರ್ 'ಎಂ.ವಿ.ಸೀ ಮತ್ತು ಕನ್ನಡ ಜಾಗೃತಿ'

ಕುರಿತು ಭಾಷಣ ಮಾಡಿದರು. ಡಾ. ಪಿ. ವಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಶ್ರ.ದೇ. ಪಾರ್ಶ್ವನಾಥ ಅವರು ಕಾರ್ಯಕ್ರಮ ನಿರೂಪಿಸಿದರು.

೩. ೩೦-೧೦-೨೦೦೯ ರಂದು **ಶ್ರೀ ಸಿದ್ಧರಾಮೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು, ಬೇವೂರು.** ಚನ್ನಪಟ್ಟಣ ತಾಲ್ಲೂಕು ರಾಮನಗರ ಜಿಲ್ಲೆ ಇಲ್ಲಿ ವಿಶೇಷ ಉಪನ್ಯಾಸವನ್ನು ಹಾಗೂ ಓಲೆಗರೆ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು. ಡಾ. ನಾ. ಗೀತಾಚಾರ್ಯ ಉಪನ್ಯಾಸ ನೀಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಸಿಸಿರ ಕಾರ್ಯಕ್ರಮ ವ್ಯವಸ್ಥೆ ಮಾಡಿದ್ದರು.

೪. ೯-೧೧-೨೦೦೯ ರಂದು **ತಿಂಗಳ ಉಪನ್ಯಾಸಮಾಲೆ ೨** : ಖ್ಯಾತ ಸಂಶೋಧಕ ಡಾ. ಸೂರ್ಯನಾಥ ಕಾಮತ್ ಉದ್ಘಾಟಿಸಿದರು. ಪ್ರೊ. ಅ. ರಾ. ಮಿತ್ರ 'ಎಂ.ವಿ.ಸೀ. ಅವರ ಪ್ರಬಂಧ ಸಾಹಿತ್ಯ' ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮ ಆಯೋಜಿಸಿದ್ದ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಚ್. ಪಂಪಯ್ಯಶೆಟ್ಟಿ ಆಶಯ ನುಡಿ ನೀಡಿದರು. ಡಾ. ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಚಂದ್ರಶೇಖರ್ ಸ್ವಾಗತಿಸಿದರು. ಶ್ರೀ ಶ್ರ. ದೇ. ಪಾರ್ಶ್ವನಾಥ ಅವರು ವಂದನಾರ್ಪಣೆ ಮಾಡಿದರು.

೫. ೧೫-೧೧-೨೦೦೯ ರಂದು ಯುವಕರಲ್ಲಿ ಕನ್ನಡ ಭಾಷೆ-ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಲು '**ಎಂ.ವಿ.ಸೀ. ಶತಮಾನೋತ್ಸವ ಕನ್ನಡ ಸಂಸ್ಕೃತಿ ಶಿಬಿರ**'ವನ್ನು **ಕನ್ನಡ ಗೆಳೆಯರ ಬಳಗ, ಕಾರ್ಮಿಕ ಲೋಕ, ಕನ್ನಡ ಶ್ರೀಸಾಮಾನ್ಯರ ಕೂಟಗಳು** ಸಂಯುಕ್ತವಾಗಿ ಆಯೋಜಿಸಿದ್ದವು. ಈ ಕಾರ್ಯಕ್ರಮವನ್ನು ಹಿರಿಯ ಸಾಹಿತಿಗಳಾದ ಪ್ರೊ. ಎಲ್. ಎಸ್. ಶೇಷಗಿರಿರಾವ್ ಉದ್ಘಾಟಿಸಿದರು. ಡಾ. ಸೂರ್ಯನಾಥ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಡಾ. ಕೆ.ಪಿ. ಭಟ್ 'ಕನ್ನಡ ಭಾಷೆಯ ಪ್ರಾಚೀನತೆ'-ಕುರಿತು, ಡಾ. ಪಿ. ವಿ. ನಾರಾಯಣ 'ಕನ್ನಡ ಸಾಹಿತ್ಯ-ಅನನ್ಯತೆ'ಬಗ್ಗೆ, ಡಾ. ಸಿ. ಪಿ. ನಿರಂಜನಾರಾಧ್ಯ 'ಶಿಕ್ಷಣದಲ್ಲಿ ಕನ್ನಡ' ವಿಷಯ ಕುರಿತು ಮೌಲಿಕ ಉಪನ್ಯಾಸಗಳನ್ನು ನೀಡಿದರು. ಮಧ್ಯಾಹ್ನ ನಡೆದ ೨ನೇ ಗೋಷ್ಠಿಯಲ್ಲಿ ಜಯಪ್ರಕಾಶ ನಾರಾಯಣ ಅವರು 'ನಾಡು ನುಡಿಯ ಜಾಗೃತಿ' 'ಸಮೂಹ ಮಾಧ್ಯಮ'ದ ಬಗ್ಗೆ ಶ್ರೀ ಎನ್.ಎ.ಎಂ. ಇಸ್ಮಾಯಿಲ್ ಅವರು 'ಗಣಕದಲ್ಲಿ ಕನ್ನಡ ಆದದ್ದು ಆಗಬೇಕಾದ್ದು' ಬಗ್ಗೆ, ಈ ಹೃಷಿಕೇಶ್ ಅವರು, 'ಜಲಸಂಪತ್ತು- ಸಮಸ್ಯೆ' ಕುರಿತು, ಹಾಲ್ದೊಡ್ಡೇರಿ ಸುಧೀಂದ್ರ ಅವರು 'ವಿಜ್ಞಾನ-ತಂತ್ರಜ್ಞಾನ'ದ ಬಗ್ಗೆ ವಿಚಾರಪೂರ್ಣ ಉಪನ್ಯಾಸ ನೀಡಿದರು. ನೂರಕ್ಕೂ ಅಧಿಕವಾಗಿ ಶಿಬಿರಾರ್ಥಿಗಳು ಸಂವಾದದಲ್ಲಿ ಸಕ್ರಿಯವಾಗಿದ್ದರು. ರಾ. ನಂ. ಚಂದ್ರಶೇಖರ್ ಶಿಬಿರವನ್ನು ಸಂಘಟಿಸಿದ್ದರು. ಸಮಾರೋಪ ಕಾರ್ಯಕ್ರಮದಲ್ಲಿ 'ಕರ್ನಾಟಕ-ಪ್ರಾಚೀನತೆ' ಕುರಿತ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

೬. ೨೯-೧೧-೨೦೦೯ ರಂದು **ಎಂ.ವಿ.ಸೀ. ಶತಮಾನೋತ್ಸವ ಹಾಗೂ ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನವನ್ನು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ**

ನಗರ ಕಛೇರಿ ಸಭಾಂಗಣ ಕೋಟೆ ಆಂಜನೇಯಸ್ವಾಮಿಯ ದೇವಸ್ಥಾನದ ಪಕ್ಕ ಮೈಸೂರಿನಲ್ಲಿ ನಡೆಯಿತು. ಶ್ರೀ ಮಡ್ಡೀಕೆರೆಗೋಪಾಲ್ ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಇವರು ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಗಳು ಹಿರಿಯ ವಿದ್ವಾಂಸರು ಉದ್ಘಾಟಿಸಿದರು. ಡಾ. ಪಿ. ವಿ. ನಾರಾಯಣ ಅಧ್ಯಕ್ಷರು ಬಿ.ಎಂ.ಶ್ರೀ. ಪ್ರತಿಷ್ಠಾನ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಕೆ. ಎಸ್. ಮಧುಸೂದನ, ಡಾ. ನಾ. ಗೀತಾಚಾರ್ಯ, ಡಾ. ವಿ. ಕೃ. ರಾಮಶೇಷನ್ ಉಪನ್ಯಾಸಗಳನ್ನು ನೀಡಿದರು.

೭. ೩೦-೧೧-೨೦೦೮ನೇ **ಸೋಮವಾರದಂದು ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಮಡಕೇರಿಯಲ್ಲಿ ಫೀ.ಮಾ.ಕಾರ್ಯಪ್ಪ ವಿವಿಧೋದ್ದೇಶ. ಸಭಾಂಗಣದಲ್ಲಿ ಎಂ.ವಿ.ಸೀ. ಅವರ ಜನ್ಮಶತಮಾನೋತ್ಸವದ ಅಂಗವಾಗಿ ಪುರಾತನ ಓಲೆಗರಿ ಮತ್ತು ಹಸ್ತಪ್ರತಿಗಳ ಪ್ರದರ್ಶನ ಹಾಗೂ ಕನ್ನಡ ರಾಜ್ಯೋತ್ಸವವನ್ನು ಏರ್ಪಡಿಸಲಾಗಿತ್ತು** ಕಾರ್ಯಕ್ರಮವನ್ನು ಡಾ. ಪಿ.ವಿ. ನಾರಾಯಣ ಕಾರ್ಯಾಧ್ಯಕ್ಷರು ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಉದ್ಘಾಟಿಸಿದರು. ಪ್ರೊ. ಕೆ. ಎಸ್. ಮಧುಸೂಧನ ರವರು ಎಂ.ವಿ.ಸೀ. ಬದುಕು-ಬರಹ ಕುರಿತು ಉಪನ್ಯಾಸ ನೀಡಿದರು. ಪ್ರಾಚೀನ ಹಸ್ತಪ್ರತಿಗಳ ಬಗ್ಗೆ ಡಾ. ನಾ. ಗೀತಾಚಾರ್ಯರು ಮಾತನಾಡಿದರು. ಶ್ರೀ ನರಸಿಂಹಯ್ಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕೊಡುಗು. ಶ್ರೀ ಎಸ್. ಗಂಗಯ್ಯ ಪ್ರಾಚಾರ್ಯರು ಸರಕಾರಿ ಪದವಿಪೂರ್ವ ಕಾಲೇಜು, ಮಡಿಕೇರಿ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ. ಟಿ. ಸಿ. ರಮೇಶ್ ಅಧ್ಯಕ್ಷರು ಕೊಡುಗು ಜಿಲ್ಲಾ ಕನ್ನಡ ಪರಿಷತ್ತು. ಅಧ್ಯಕ್ಷತೆ ವಹಿಸಿದ್ದರು.

೮. ೯-೧೨-೨೦೦೮ ರಂದು ನಡೆದ ಎಂ.ವಿ.ಸೀ. ಅವರ **೩ನೇ ತಿಂಗಳ ಉಪನ್ಯಾಸ ಮಾಲೆಯನ್ನು ಕೇಂದ್ರೀಯ ಸದನ ಕನ್ನಡ ಸಂಘ ಕೋರಮಂಗಲ** ಆಯೋಜಿಸಿತ್ತು. ಸಂಶೋಧಕ ಡಾ. ಎಚ್. ಎಸ್. ಗೋಪಾಲರಾವ್ ಅವರು 'ಎಂ.ವಿ.ಸೀ. ಅವರ ಶಾಸ್ತ್ರಸಾಹಿತ್ಯ' ಕುರಿತು ಉಪನ್ಯಾಸ ನೀಡಿದರು. ಡಾ. ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರೀಯ ಸದನ ಕನ್ನಡ ಸಂಘದ ಅಧ್ಯಕ್ಷ ಶ್ರೀ ಮು. ಚಂದ್ರಶೇಖರ್ ಪ್ರಾರಂಭದಲ್ಲಿ ಆಶಯ ನುಡಿ ನೀಡಿದರು. ಶ್ರೀ ರಾ. ನಂ. ಚಂದ್ರಶೇಖರ್ ಸ್ವಾಗತಿಸಿದರು. ಶ್ರೀ ಪಾರ್ಶ್ವನಾಥ ಅವರು ವಂದಿಸಿದರು.

೯. ೧೩-೧೨-೨೦೦೮ ರಂದು **ಭಾನುವಾರ ಆರ್.ಟಿ. ನಗರದ ಶಿವರಾಮಕಾರಂತ ವೇದಿಕೆ. ತರಳಬಾಳು ಗ್ರಂಥಾಲಯ, ತರಳಬಾಳು ಕೇಂದ್ರದಲ್ಲಿ** ಎಂ.ವಿ.ಸೀ. ಅವರ **ಜನ್ಮಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು.** ಡಾ. ಪಿ. ವಿ. ನಾರಾಯಣರವರು ಉದ್ಘಾಟಿಸಿದರು. ಶ್ರೀ ಎಸ್. ವಿ. ಶ್ರೀನಿವಾಸರಾವ್, ನಂ. ನಂಜಪ್ಪ, ಶಾಂತಕುಮಾರಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀಮತಿ ರಾಧಾರಾಮಸ್ವಾಮಿ ಅಧ್ಯಕ್ಷರು ಶಿವರಾಮಕಾರಂತ ವೇದಿಕೆ ಅಧ್ಯಕ್ಷತೆ ವಹಿಸಿದ್ದರು.

ಉಪಸ್ಥಿತರಿದ್ದ ಸಾಹಿತ್ಯಾಸಕ್ತರು ಹಸ್ತಪ್ರತಿ ಪ್ರದರ್ಶನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ವೇದಿಕೆ ಕಾರ್ಯದರ್ಶಿ ಪ. ಚಂದ್ರಶೇಖರ ಅಡಿಗ ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕ ನುಡಿಯಲ್ಲಿ ಹಸ್ತಪ್ರತಿ ಮಹತ್ವ ತಿಳಿಸಿದರು.

೧೦. ೧೫-೧೨-೨೦೧೦ ರಂದು **ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಬೆಂಗಳೂರಿನಲ್ಲಿ** ಎಂ.ವಿ.ಸೀ. ಶತಮಾನೋತ್ಸವ ವಿಶೇಷ ಉಪನ್ಯಾಸವನ್ನು ಡಾ॥ ನಾ. ಗೀತಾಚಾರ್ಯ ನಡೆಸಿಕೊಟ್ಟರು. ಡಾ. ರಾಮಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

೧೧. ೨೦-೧೨-೨೦೦೯ರ ಭಾನುವಾರ ಬೆಳಿಗ್ಗೆ ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು ಹಾಗೂ **ತುಮಕೂರು ವಾರ್ತೆ ಮತ್ತು ನಗೆ ಮುಗುಳು ತುಮಕೂರು** ಇವರ ಸಹಯೋಗದಲ್ಲಿ ಪ್ರೊ. ಎಂ.ವಿ.ಸೀ. ಜನ್ಮಶತಮಾನೋತ್ಸವ ಕಾರ್ಯಕ್ರಮ ಮತ್ತು ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನವನ್ನು ವಿದ್ಯೋದಯ ಕಾನೂನು ಕಾಲೇಜು ಬಿ. ಎಚ್. ರಸ್ತೆ ಸಭಾಂಗಣ, ಎಚ್. ರಸ್ತೆ ತುಮಕೂರು ಇಲ್ಲಿ ನಡೆಯಿತು. ಡಾ. ಸಿ. ಸೋಮಶೇಖರ್ ಭಾ.ಆ.ಸೇ. ಜಿಲ್ಲಾಧಿಕಾರಿಗಳು ತುಮಕೂರು ಇವರು ಉದ್ಘಾಟಿಸಿದರು. ಪ್ರಾಸ್ತಾವಿಕ ನುಡಿ ಶ್ರೀಮತಿ ಕಮಲಾ ನರಸಿಂಹ ಲೇಖಕರು ತುಮಕೂರು ಇವರಿಂದ. ಡಾ. ಪಿ. ವಿ. ನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಎನ್. ಬಸವರಾಧ್ಯ, ಪ್ರೊ. ಡಿ. ಲಿಂಗಯ್ಯ, ಶ್ರೀ ಎಸ್. ವಿ. ಶ್ರೀನಿವಸರಾವ್, ಡಾ. ನಾ. ಗೀತಾಚಾರ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

೧೨. ೨೦-೧೨-೨೦೦೯ರ **ಭಾನುವಾರ** ಸಂಜೆ ೪-೩೦ಕ್ಕೆ **ಅಭಿರುಚಿ ಸಾಹಿತ್ಯ-ಸಾಂಸ್ಕೃತಿಕ ವೇದಿಕೆ ಚಿತ್ರದುರ್ಗ** ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಐ.ಎಂ.ಎ. ಸಭಾಂಗಣ. ಮದಕರಿ ವೃತ್ತದ ಬಳಿ ಚಿತ್ರದುರ್ಗದಲ್ಲಿ ಪ್ರೊ. ಎಂ.ವಿ.ಸೀ ಅವರ ಶತಮಾನೋತ್ಸವ ಹಾಗೂ ಹಸ್ತಪ್ರತಿ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಪ್ರೊ. ಎನ್. ಬಸವಾರಾಧ್ಯ ಹಿರಿಯ ಸಾಹಿತಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು ಪ್ರೊ. ಡಿ. ಲಿಂಗಯ್ಯ ಜಾನಪದ ತಜ್ಞರು ಎಂ.ವಿ.ಸೀ. ಅವರ ಕೃತಿಗಳ ಬಗ್ಗೆ ಉಪನ್ಯಾಸ ನೀಡಿದರು. ಎಸ್. ವಿ. ಶ್ರೀನಿವಾಸರಾವ್ ಹಿರಿಯ ಸಾಹಿತಿಗಳು ಎಂ.ವಿ.ಸೀ. ಅವರ ಜೀವನ ಸಾಧನೆಯ ಬಗ್ಗೆ ಮಾತನಾಡಿದರು. ಡಾ॥ ನಾ. ಗೀತಾಚಾರ್ಯ ಹಸ್ತಪ್ರತಿ ಕುರಿತು ಮಾತನಾಡಿದರು.

೧೩. ೨೧-೧೨-೨೦೦೯ ಸೋಮವಾರ ಬೆಳಗ್ಗೆ ೧೧ಕ್ಕೆ ಬಿ.ಎಂ.ಶ್ರೀ. ಪ್ರತಿಷ್ಠಾನ ಬೆಂಗಳೂರು, **ರೋಟರಿಕ್ಲಬ್, ಕನ್ನಡ ಸಾಹಿತ್ಯ ಪರಿಷತ್ತು, ಚಳ್ಳಕೆರೆ ಕರ್ನಾಟಕ ರಕ್ಷಣಾ ವೇದಿಕೆ ಚಳ್ಳಕೆರೆ** ಇವರ ಸಂಯುಕ್ತ ಆಶ್ರಯದಲ್ಲಿ ಪ್ರೊ. ಎಂ.ವಿ.ಸೀ. ಜನ್ಮಶತಾಬ್ದಿ ಸಮಾರಂಭ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು. ಡಾ. ಬೆಳಗೆರೆ ಕೃಷ್ಣಶಾಸ್ತ್ರಿಗಳು ಉದ್ಘಾಟಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪಿ. ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ. ಎನ್. ಬಸವಾರಾಧ್ಯ, ಹಿರಿಯ ವಿದ್ವಾಂಸರು. ಪ್ರೊ. ಡಿ. ಲಿಂಗಯ್ಯ, ಎಸ್. ವಿ. ಶ್ರೀನಿವಾಸರಾವ್, ಡಾ. ನಾ. ಗೀತಾಚಾರ್ಯ,

ಹೆಚ್. ಬಸವರಾಜ್ ಅಧ್ಯಕ್ಷರು ಕ.ರ.ವೆ., ಚಳ್ಳಕೆರೆ, ಉಮಾಪತಿ ಹಿರಿಯ ದೈಹಿಕ ಪ್ರಶಿಕ್ಷಕರು, ಶರಣ ಹರಳಯ್ಯ ಡಿ.ಇಡಿ ಕಾಲೇಜು ಚಳ್ಳಕೆರೆ ಉಪಸ್ಥಿತರಿದ್ದರು. ಡಾ. ಕೆ. ಎಂ. ಜಯಕುಮಾರ್ ರೋಟರಿಕ್ಲಬ್, ಚಳ್ಳಕೆರೆ ಸ್ವಾಗತ ಕೋರಿದರು. ಡಾ. ಸಿ. ಶಿವಲಿಂಗಪ್ಪ ಪ್ರಾಧ್ಯಾಪಕರು ಚಳ್ಳಕೆರೆ ಇವರಿಂದ ಪ್ರಾಸ್ತಾವಿಕ ನುಡಿ. ಪಿ. ತಿಪ್ಪೇಸ್ವಾಮಿ ವಂದನಾರ್ಪಣೆ ಮಾಡಿದರು. ರೋ. ಪರಮೇಶ್ವರಪ್ಪ ಕುದರಿ ಅಧ್ಯಕ್ಷರು, ರೋಟರಿ ಕ್ಲಬ್, ಚಳ್ಳಕೆರೆ ಕಾರ್ಯಕ್ರಮವನ್ನು ನಿರೂಪಿಸಿದರು.

೧೪. ೨೧-೧೨-೨೦೦೯ರ ಸಂಜೆ ೪ ಗಂಟೆಗೆ **ಸೀತಾರಾಮಶಾಸ್ತ್ರೀ ಪ್ರೌಢಶಾಲೆ, ನಾರಾಯಣಪುರ ಬೆಳಗೆರೆ ಚಿತ್ರದುರ್ಗ ಜಿಲ್ಲೆಯಲ್ಲಿ** ಎಂ.ವಿ.ಸೀ ಶತಮಾನೋತ್ಸವ ಸಮಿತಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಬೆಂಗಳೂರು ಇವರಿಂದ ಎಂ.ವಿ.ಸೀ. ಜನ್ಮಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು ಡಾ. ಪಿ. ವಿ. ನಾರಾಯಣ ಅಧ್ಯಕ್ಷರು, ಬಿ.ಎಂ.ಶ್ರೀ. ಪ್ರತಿಷ್ಠಾನ. ಉದ್ಘಾಟಿಸಿದರು. ಬೆಳಗೆರೆ ಕೃಷ್ಣಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಡಾ. ನಾ. ಗೀತಾಚಾರ್ಯ ಮತ್ತು ಶ್ರೀ ಎಸ್. ವಿ. ಶ್ರೀನಿವಾಸರಾವ್ ಮುಖ್ಯ ಅತಿಥಿಗಳಾಗಿದ್ದರು.

೧೫. **೨೨-೧೨-೨೦೦೯** ರಂದು ಬೆಳಿಗ್ಗೆ೧೦-೩೦ಕ್ಕೆ **ಸರ್ಕಾರಿ ಪದವಿಪೂರ್ವ ಕಾಲೇಜು, ವಾಣಿವಿಲಾಸಪುರ-ಮಾರಿಕಣಿವೆ. ಹಿರಿಯೂರು ತಾಲ್ಲೂಕು ಚಿತ್ರದುರ್ಗ ಜಿಲ್ಲೆ.** ಇಲ್ಲಿ ಎಂ.ವಿ.ಸೀ. ಜನ್ಮಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ಡಾ. ಪಿ. ವಿ. ನಾರಾಯಣ ಅವರು ಉದ್ಘಾಟಿಸಿದರು. ಸರ್ಕಾರಿ ಪ. ಪೂ. ಕಾಲೇಜಿನ ಪ್ರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

೧೬. ೨೨-೧೨-೨೦೦೯ ಮಧ್ಯಾಹ್ನ ೧೧-೪೦ಕ್ಕೆ ಸರ್ಕಾರಿ ಪ.ಪೂ. ಕಾಲೇಜು ಹುಳಿಯಾರು ಕೆಂಕೆರೆಯಲ್ಲಿ ಹಸ್ತಪ್ರತಿಪ್ರದರ್ಶನ ಏರ್ಪಡಿಸಲಾಗಿತ್ತು ಶ್ರೀ ಹಾಲಪ್ಪನವರು ಸ್ವಾಗತಿಸಿದರು, ಡಾ. ಪಿ. ವಿ. ನಾರಾಯಣ ಉದ್ಘಾಟಿಸಿದರು. ಶ್ರೀ ನಟರಾಜ್ ಪ್ರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕರು ಶ್ರೀ ಬಿ. ಚಿಕ್ಕಣ್ಣ ಹುಳಿಯಾರಿನ ಎಲ್ಲ ಶಾಲಾ ಕಾಲೇಜು ವಿದ್ಯಾರ್ಥಿಗಳ ಸರದಿಯಲ್ಲಿ ಹಸ್ತಪ್ರತಿಗಳನ್ನು ವೀಕ್ಷಿಸಿದ್ದು ವಿಶೇಷವಾಗಿತ್ತು.

೧೭. ೨೨-೧೨-೦೯ ಸಂಜೆ ೬-೦೦ ಗಂಟೆಗೆ ಹಿರಿಯೂರಿನ ರೋಟರಿ ಸಭಾ ಭವನದಲ್ಲಿ ಎಂ.ವಿ.ಸೀ. ಜನ್ಮಶತಮಾನೋತ್ಸವ ಮತ್ತು ಹಸ್ತಪ್ರತಿ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಉದ್ಘಾಟನೆ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿ, ಅಧ್ಯಕ್ಷತೆ ಡಾ. ಶ್ರೀಪತಿ, ಪ್ರೊ. ಎನ್. ಬಸವಾರಾಧ್ಯ, ಪ್ರೊ. ಡಿ. ಲಿಂಗಯ್ಯ ಡಾ॥ ನಾ. ಗೀತಾಚಾರ್ಯ, ಎಸ್. ವಿ. ಶ್ರೀನಿವಾಸರಾವ್ ಅತಿಥಿಗಳಾಗಿದ್ದರು. ಮತ್ತಿತರರು ಮುಖ್ಯ ಅತಿಥಿಗಳು ಭಾಗವಹಿಸಿದ್ದರು.

೧೮. **೨೬, ೨೭, ೨೮ ಡಿಸೆಂಬರ್ ೨೦೦೯** ರಂದು ಪ್ರತಿದಿನ ಬೆಳಿಗ್ಗೆ ೧೦ ರಿಂದ ಸಂಜೆ ೫ರ ವರೆಗೆ ಎಂ.ವಿ.ಸೀ. **ಶತಮಾನೋತ್ಸವದ ವಿಶೇಷ ಹಳಗನ್ನಡ ಕಾವ್ಯ ಶಿಬಿರವನ್ನು**

ಕನ್ನಡ ಪುಸ್ತಕ ಪ್ರಾಧಿಕಾರದ, ಸಹಯೋಗದೊಂದಿಗೆ ಎಂ.ವಿ.ಸೀ. ಶತಮಾನೋತ್ಸವ ಸಮಿತಿಯ ಬಿ.ಎಂ.ಶ್ರೀ. ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ನಡೆಸಲಾಯಿತು. ೧೦೦ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು. ಎಲ್ಲರಿಗೂ ಅರ್ಹತಾ ಪತ್ರ ವಿತರಿಸಲಾಯಿತು.

೧೮. ೨೬-೧೨-೨೦೦೯ ಶನಿವಾರ ಬೆಳಿಗ್ಗೆ ೧೦-೦೦ ರಿಂದ ೧೧-೪೫ರ ವರೆಗೆ **ಉದ್ಘಾಟನೆ** : ನಾಡೋಜ ಜಿ. ವೆಂಕಟಸುಬ್ಬಯ್ಯ ಗೌರವಾಧ್ಯಕ್ಷರು, ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಅಧ್ಯಕ್ಷತೆ ಡಾ. ಸಿದ್ಧಲಿಂಗಯ್ಯ ಅಧ್ಯಕ್ಷರು. ಕನ್ನಡ ಪುಸ್ತಕ ಪ್ರಾಧಿಕಾರ. ಪ್ರಸ್ತಾವನೆ ಡಾ. ಪಿ. ವಿ. ನಾರಾಯಣ ಅಧ್ಯಕ್ಷರು ಬಿ.ಎಂ.ಶ್ರೀ. ಪ್ರತಿಷ್ಠಾನ. ಗೋಷ್ಠಿ-೧ : ಬೆಳಿಗ್ಗೆ ೧೨ ರಿಂದ ೧-೧೫ರ ವರೆಗೆ ವಿಷಯ "ಚಂಪೂ ಪ್ರಕಾರದ ಸ್ವರೂಪ ಮತ್ತು ಹಿನ್ನೆಲೆ" ಉಪನ್ಯಾಸಕರು ಡಾ. ರಮೇಶ್‌ಚಂದ್ರದತ್ತ. ಗೋಷ್ಠಿ ೨ : ಮಧ್ಯಾಹ್ನ ೨-೧೫ ರಿಂದ ೩-೩೦ರ ವರೆಗೆ ವಿಷಯ : 'ಅಜಿವುದು ಕಾವ್ಯಧರ್ಮಮಂ ಧರ್ಮಮುಮಂ' ಪಂಪನ ಆದಿಪುರಾಣ. ಉಪನ್ಯಾಸಕರು ಡಾ. ಜಿ. ಬಿ. ಹರೀಶ್. ಗೋಷ್ಠಿ ೩ : ಸಂಜೆ ೩-೪೫ ರಿಂದ ೫ರ ವರೆಗೆ ವಿಷಯ : "ಬೆಳಗುವೆನಿಲ್ಲಿ ಲೌಕಿಕಮನ್" ಪಂಪನ "ವಿಕ್ರಮಾರ್ಜುನ ವಿಜಯಂ". ಉಪನ್ಯಾಸಕರು ಡಾ. ಜಿ. ಎಸ್. ಸಿದ್ಧಲಿಂಗಯ್ಯ. ಸಂಜೆ ೫-೧೫ ರಿಂದ ೫-೪೫ರ ವರೆಗೆ ಗಮಕವಾಚನ 'ಪಂಪರಾಮಾಯಣ' ಶ್ರೀಮತಿ ಸಿ. ವಿ. ಶ್ರೀಮತಿ 'ಆದಿಪುರಾಣ', ಶ್ರೀ ಎಂ. ಆರ್. ಸತ್ಯನಾರಾಯಣ. ಉಪನ್ಯಾಸಗಳನ್ನು ನೀಡಿದರು. ಡಾ॥ ವಿಜಯಾ ಸುಬ್ಬರಾಜ್ ಶಿಬಿರದ ಸಂಚಾಲಕರಾಗಿದ್ದರು.

೧೯. ೯-೧-೨೦೧೦ ರಂದು ಎಂ.ವಿ.ಸೀ. **ಶತಮಾನೋತ್ಸವ ತಿಂಗಳ ಉಪನ್ಯಾಸ ಮಾಲೆ-೪ ಕಾರ್ಯಕ್ರಮ ಜರುಗಿತು. ಇದನ್ನು ವಿಮಾನ ಕನ್ನಡ ಸಂಘ ಎಚ್.ಎ.ಎಲ್. ಬೆಂಗಳೂರು-೧೩ ಪ್ರಾಯೋಜಿಸಿತ್ತು.** ಡಾ. ವಿಜಯಾ ಸುಬ್ಬರಾಜ್ ಅಧ್ಯಕ್ಷತೆ ವಹಿಸಿದ್ದರು. ಡಾ. ಜಿ. ಬಿ. ಹರೀಶ್‌ರವರು ಎಂ.ವಿ.ಸೀ. ರಾಘವ ಅವರ ಕಾವ್ಯಗಳನ್ನು ಕುರಿತು ಬೋಧಪ್ರದ ಉಪನ್ಯಾಸ ನೀಡಿದರು. ಪ್ರಾರಂಭದಲ್ಲಿ ಶ್ರೀ ರಾ. ನಂ. ಚಂದ್ರಶೇಖರ್ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಶ್ರ. ದೇ. ಪಾರ್ಶ್ವನಾಥ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ವಿಮಾನ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ. ಬಿ. ಎಸ್. ಶಶಿಧರ್ ಅವರು ವಂದನಾರ್ಪಣೆ ಮಾಡಿದರು. ಪ್ರತಿಷ್ಠಾನದಲ್ಲಿ ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು.

೨೦. **ಫೆಬ್ರವರಿ ೫, ೨೦೧೦ ರಂದು ಮಂಗಳೂರಿನ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.** ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರು ಡಾ. ಪಿ. ವಿ. ನಾರಾಯಣ ಪ್ರಾಸ್ತಾವಿಕ ಭಾಷಣ ಮಾಡಿದರು. ಎಂ.ವಿ.ಸೀ. ಅವರನ್ನು ಕುರಿತು ಡಾ. ಜಿ. ಬಿ. ಹರೀಶ್ ಅವರು ಉಪನ್ಯಾಸ

ನೀಡಿದರು. ಹಸ್ತಪ್ರತಿ ಸಂರಕ್ಷಣೆ ಕುರಿತು ಡಾ. ನಾ. ಗೀತಾಚಾರ್ಯ ಮಾತನಾಡಿದರು. ಕಾಲೇಜಿನ ಕನ್ನಡ ವಿಭಾಗದ ಡಾ. ಸಬಿಹಾ ಅಧ್ಯಕ್ಷತೆ ವಹಿಸಿದ್ದರು.

೨೧. ೬-೨-೨೦೧೦ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ. ಆಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಮಣಿಪಾಲ ಹಾಗೂ ಎಂ.ವಿ.ಸೀ. ಶತಮಾನೋತ್ಸವ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ್ದವು.

ಡಾ. ಪಿ. ವಿ. ನಾರಾಯಣ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶಯಭಾಷಣ ಮಾಡಿದರು. ಡಾ. ತಾಳ್ತಜೆ ವಸಂತಕುಮಾರ, ನಿವೃತ್ತ ಪ್ರಾಧ್ಯಾಪಕರು, ಮುಂಬೈ ವಿಶ್ವವಿದ್ಯಾನಿಲಯ, ಅವರು ಅಧ್ಯಕ್ಷತೆ ವಹಿಸಿದ್ದರು. ಡಾ. ಜಿ. ಬಿ. ಹರೀಶ್ 'ಎಂ.ವಿ.ಸೀ. ಬದುಕು-ಬರಹ' ಕುರಿತು, ಡಾ. ನಾ. ಗೀತಾಚಾರ್ಯ 'ಪ್ರಾಚೀನ ಹಸ್ತಪ್ರತಿಗಳು' ಕುರಿತು ಉಪನ್ಯಾಸಗಳನ್ನು ನೀಡಿದರು. ಎಂ.ಜಿ.ಎಂ. ಕಾಲೇಜಿನ ಪ್ರಾಂಶುಪಾಲ ಡಾ. ಪಿ. ವೆಂಕಟರಮಣಗೌಡ ಮುಖ್ಯ ಅತಿಥಿಗಳಾಗಿ ಆಗಿಮಿಸಿದ್ದರು. ಡಾ. ರಾಮದಾಸ್ ಎಂ. ಪೈ, ರಿಜಿಸ್ಟ್ರಾರ್ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ, ಶ್ರೀ ಹೆರಂಜೆ ಕೃಷ್ಣಭಟ್ಟ ನಿರ್ದೇಶಕರು, ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ ಇವರುಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

೨೨. ಜೂನಿಯರ್ ಕಾಲೇಜಿನ ಮೈದಾನದಲ್ಲಿ ನಡೆದ ಫೆಬ್ರವರಿ ೮ ಮತ್ತು ೯, ೨೦೧೦ 'ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ' ಕಾರ್ಯಕ್ರಮಗಳ ಅಂಗವಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಪ್ರದರ್ಶನ ಹಾಗೂ ಪ್ರೊ. ಎಂ.ವಿ.ಸೀ. ಜನ್ಮಶತಮಾನೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೈಲ್ವೆ ಸಚಿವ ಶ್ರೀ ಕೆ. ಎಚ್. ಮುನಿಯಪ್ಪ, ವಿಧಾನಸಭಾ ಸದಸ್ಯ ಶ್ರೀ ಎಸ್. ಎನ್ ಕೃಷ್ಣಯ್ಯ ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಶ್ರೀ ವಿ. ಆರ್. ಸುದರ್ಶನ್, ಶ್ರೀ ನಸೀರ್ ಅಹಮದ್, ಶ್ರೀ ವೈ. ವಿ. ನಾರಾಯಣಸ್ವಾಮಿ, ಜಿಲ್ಲಾಪಂಚಾಯಿತಿ ಸದಸ್ಯೆ ಶ್ರೀಮತಿ ನವೀದಾಖಾನಂ ಮುಂತಾದವರು ಉಪಸ್ಥಿತರಿದ್ದರು. ಜನ್ಮಶತಾಬ್ಧಿ ಕಾರ್ಯಕ್ರಮದಲ್ಲಿ ಡಾ. ನಾ. ಗೀತಾಚಾರ್ಯ ಎಂ.ವಿ.ಸೀ. ಕುರಿತು ಉಪನ್ಯಾಸ ಮಾಡಿದರು. ಹಾಗೂ ಹಸ್ತಪ್ರತಿ ಸಂಗ್ರಹಣ, ಸಂರಕ್ಷಣೆ ಬಗ್ಗೆ ಮಾಹಿತಿ ನೀಡಿದರು. ಶ್ರೀ ಎಸ್. ವೆಂಕಟರಾವ್ ಸ್ವಾಗತಿಸಿದರು. ಶ್ರೀ ಟಿ. ಎಸ್. ರಮೇಶ್ ವಂದನಾರ್ಪಣೆ ಮಾಡಿದರು.

೨೩. ೯.೨.೧೦ ಎಂ.ವಿ.ಸೀ. **ಶತಮಾನೋತ್ಸವ ತಿಂಗಳ** ಉಪನ್ಯಾಸಮಾಲೆ-೫ ನಡೆಯಿತು. ಪ್ರಾಯೋಜಕರು : **ಕರ್ನಾಟಕ ಸಾಂಸ್ಕೃತಿಕ ವೇದಿಕೆ ಕುವೆಂಪುನಗರ, ಬೆಂಗಳೂರು-೬೮.** ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಂ. ಎಲ್. ಲಲಿತಮ್ಮ ವಹಿಸಿದ್ದರು. ಪ್ರೊ. ಕೆ.ಎಸ್. ಮಧುಸೂದನ ಅವರು 'ಎಂ.ವಿ.ಸೀ. ಅವರ ಅಧ್ಯಾಪನ

ಕಲೆ' ಕುರಿತು ಉಪನ್ಯಾಸ ನೀಡಿದರು. ಮಧುಸೂದನ ಅವರು ಎಂ.ವಿ.ಸೀ. ಅವರ ಖಾಸಾ ಶಿಷ್ಯರಾಗಿದ್ದುದರಿಂದ ಅನೇಕ ವೈಯಕ್ತಿಕ ಘಟನೆಗಳನ್ನು ನಿರೂಪಿಸಿ ಗುರುಗಳು ಶಿಷ್ಯರತ್ತ ತೋರುತ್ತಿದ್ದ ಪ್ರೀತಿ ವಾತ್ಸಲ್ಯದ ಮೇಲೆ ಬೆಳಕು ಚೆಲ್ಲಿ ಎಂ.ವಿ.ಸೀ. ಅವರಿಗೆ ಗುರುಭಕ್ತಿ ಅರ್ಪಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್. ನಿಂಗರಾಜು ಆಗಮಿಸಿದ್ದರು. ಸಾಂಸ್ಕೃತಿಕ ವೇದಿಕೆಯ ಶ್ರೀ ಎಲ್. ರಾಮಕೃಷ್ಣ ಸಹ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶ್ರೀ ರಾ. ನಂ. ಚಂದ್ರಶೇಖರ್, ಶ್ರೀ ಶ್ರ. ದೇ. ಪಾರ್ಶ್ವನಾಥ ಅವರು ಕಾರ್ಯಕ್ರಮದ ಸ್ವಾಗತ ಹಾಗೂ ವಂದನಾರ್ಪಣೆ ನೆರವೇರಿಸಿದರು.

೨೪. ೫-೩-೨೦೧೦ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಪ್ರಥಮ ದರ್ಜೆ ಮಹಿಳಾ ಕಾಲೇಜು ಕನ್ನಡ ಸಂಘ 'ಅನನ್ಯ' ಹಾಗೂ ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಬಿ.ಎಂ.ಶ್ರೀ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ಉಪನ್ಯಾಸ ಮಾಲಿಕೆ "ಎಂ.ವಿ.ಸೀ. ಅವರ ಬದುಕು-ಬರಹ", ಉಪನ್ಯಾಸ ಡಾ. ವಿಜಯ ಸುಬ್ಬರಾಜ್, ನಿವೃತ್ತ ಕನ್ನಡ ಪ್ರಾಧ್ಯಾಪಕರು ಎಂ. ಇ. ಎಸ್. ಕಾಲೇಜು. ಅಧ್ಯಕ್ಷತೆ ಡಾ. ಪಿ. ವಿ. ನಾರಾಯಣ ಕಾರ್ಯಾಧ್ಯಕ್ಷರು, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು. ಸ್ಥಳ : ರುಕ್ಕಮ್ಮ ರಾಘವಾಚಾರ್ ಆಡಿಟೋರಿಯಂ.

೨೫. ೧೭-೪-೨೦೧೦ ರಂದು ಮಾಲೂರು ಸರ್ಕಾರಿ ಕಲಾ ಕಾಲೇಜು, ಮಾಲೂರು ಮತ್ತು ಎಂ.ವಿ.ಸೀ. ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ೧೨-೩೦ ಗಂಟೆಗೆ ಎಂ.ವಿ.ಸೀ. ಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮ : ೧. ಉಪನ್ಯಾಸ : ಡಾ. ನಾ. ಗೀತಾಚಾರ್ಯ ಅಧ್ಯಕ್ಷತೆ ಪ್ರೊ. ಕೆ. ಆರ್. ರವಿಕುಮಾರ್ ಪ್ರಾಚಾರ್ಯರು. ಕಾಲೇಜು ಆವರಣದಲ್ಲಿ ನಡೆಯಿತು. ಕಾರ್ಯಕ್ರಮ-೨ : ಮಧ್ಯಾಹ್ನ ೨-೩೦ಕ್ಕೆ. ವಿಶೇಷ 'ಕನ್ನಡ ಪದವಿ ಪಠ್ಯಗಳ ಗ್ರಹಿಕೆ' ಉಪನ್ಯಾಸ : ಡಾ. ನಾ. ಗೀತಾಚಾರ್ಯ. ಅಧ್ಯಕ್ಷತೆ : ಪ್ರೊ. ಕವಿತಾ, ಕನ್ನಡ ವಿಭಾಗದ ಮುಖ್ಯಸ್ಥರು. ಸ್ಥಳ : ಪದವಿಪೂರ್ವ ಕಾಲೇಜು ಆವರಣ.

೨೬. ೯-೩-೨೦೧೦ ಮಂಗಳವಾರದಂದು ಎಂ.ವಿ.ಸೀ. ಶತಮಾನೋತ್ಸವ **ತಿಂಗಳ ಉಪನ್ಯಾಸ ಮಾಲೆ-೯** ನಡೆಯಿತು. ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಅಖಿಲ **ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತು** ಸಹಯೋಗದೊಡನೆ ಶ್ರೀ ಬಾಬು ಕೃಷ್ಣಮೂರ್ತಿ, ಸಂಪಾದಕರು ಕರ್ಮವೀರ ವಾರಪತ್ರಿಕೆ ಅಧ್ಯಕ್ಷತೆ ವಹಿಸಿದ್ದರು. ಡಾ. ಎಚ್.ಎ. ಸತ್ಯವತಿ ಕನ್ನಡ ವಿಭಾಗದ ಮುಖ್ಯಸ್ಥರು. ಎಸ್.ಜೆ.ಆರ್.ಸಿ. ಕಾಲೇಜು ಬೆಂಗಳೂರು. ಅವರು ತಮ್ಮ ಉಪನ್ಯಾಸದಲ್ಲಿ ಎಂ.ವಿ.ಸೀ. ಅವರ 'ಮಕ್ಕಳ ಸಾಹಿತ್ಯ ಕುರಿತು' ಸುದೀರ್ಘ ವಿವರಣೆ ನೀಡಿ ಸಾಹಿತ್ಯದ ಸಿಹಿಯನ್ನು ಸವಿಯುವಂತೆ ಮಾಡಿದರು. ಅಖಿಲ ಕರ್ನಾಟಕದ ಮಕ್ಕಳ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸರಾವ್‌ರವರು. ಅ.ಕ.ಮ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ನಿರುಪಮಾ ಅವರ ಅನುಪಸ್ಥಿತಿಯಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿ ಮಕ್ಕಳ ಸಾಹಿತ್ಯ ಪರಿಷತ್ತಿನ

ಉಗಮ, ಬೆಳವಣಿಗೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ, 'ಮಕ್ಕಳ ಸಾಹಿತ್ಯ' ಸಾಹಿತ್ಯ ವೃಕ್ಷದ ತಾಯಿ ಬೇರಾಗಿರುವುದರಿಂದ ಇದಕ್ಕೆ ಸಾಕಷ್ಟು ಪ್ರಾತಿನಿಧ್ಯ ನೀಡಬೇಕಾದ ಅವಶ್ಯಕತೆ ಇದೆ ಎಂಬುದನ್ನು ಒತ್ತಿ ಹೇಳಿ-ಸಾಹಿತ್ಯಾಸಕ್ತರು ಹಾಗೂ ಸಾಹಿತಿಗಳು ಈ ಕ್ಷೇತ್ರವನ್ನು ಸಂಪನ್ನವಾಗಿ ಬೆಳೆಸಲು ಮುಂದೆ ಬರಬೇಕೆಂದು ವಿನಂತಿಸಿಕೊಂಡರು. ಡಾ. ನಾ. ಗೀತಾಚಾರ್ಯ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಣ ಸಂರಕ್ಷಣೆಯ ಅವಶ್ಯಕತೆ ಕುರಿತು ವಿವರಣೆ ನೀಡಿದರು. ಪ್ರಾರಂಭದಲ್ಲಿ ಶ್ರೀಮತಿ ಚಂದ್ರಲೇಖಾ ಮತ್ತು ಶ್ರೀಮತಿ ಮೇಘನಾ ಅವರು ಪ್ರಾರ್ಥನೆ ಮಾಡಿದರು. ಡಾ. ಮುಳಕುಂಟೆ ರಮೇಶ್ ಕಾರ್ಯಕ್ರಮವನ್ನು ನಿರೂಪಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ನಿರುಪಮಾರವರ ಪುತ್ರ ಶ್ರೀ ರವೀಂದ್ರನಾಥ, ಪುತ್ರಿ ಶ್ರೀಮತಿ ಉಷಾಮೂರ್ತಿ ಮುಂತಾದ ಕುಟುಂಬದ ಸದಸ್ಯರುಗಳು ಹಾಜರಿದ್ದರು.

೨೭. ೧೯-೩-೨೦೧೦ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕೊಂಗಾಡಿಯಪ್ಪ ಕಾಲೇಜು

ದೊಡ್ಡಬಳ್ಳಾಪುರ, ಬಿ.ಎಂ.ಶ್ರೀ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಎಂ.ವಿ.ಸೀ. ಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಿತ್ತು. ಡಾ. ಪಿ.ವಿ. ನಾರಾಯಣ ಅವರು ಉದ್ಘಾಟಿಸಿದರು. ಕೊಂಗಾಡಿಯಪ್ಪ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ವಿ. ಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ನಾ. ಗೀತಾಚಾರ್ಯ ಹಸ್ತಪ್ರತಿ ಸಂಗ್ರಹಣೆ, ಸಂರಕ್ಷಣೆ ಕುರಿತು ಉಪನ್ಯಾಸ ನೀಡಿದರು. ಅಂದು ಸಂಜೆ ಗಮಕ ಕಲಾ ಪರಿಷತ್ತು ಬೆಂಗಳೂರು (ರಿ). ಬೆಂಗಳೂರು ಜಿಲ್ಲಾ ಗಮಕ ವಾಚನ ಕಾರ್ಯಕ್ರಮ ಏರ್ಪಡಿಸಿತ್ತು. ಡಾ. ಪಿ. ವಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು.

೨೮. ದಿನಾಂಕ : ೯-೪-೨೦೧೦ ಶುಕ್ರವಾರ ಸಂಜೆ ೫-೩೦ ಗಂಟೆಗೆ ಎಂ.ವಿ.ಸೀ. ಶತಮಾನೋತ್ಸವದ ಏಪ್ರಿಲ್ ತಿಂಗಳ ಕಾರ್ಯಕ್ರಮ-೭ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಸಹಯೋಗದೊಂದಿಗೆ ನಡೆಯಿತು. ಕ.ಕೈ.ವಾ. ಕ.ಸಂ. ಒಕ್ಕೂಟದ ಅಧ್ಯಕ್ಷರಾದ ಶ್ರೀ ಪ್ರಭಾಕರ ರೆಡ್ಡಿ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಡಾ. ಪಿ. ವಿ. ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಎಂ.ವಿ.ಸೀ. ರಚಿತ 'ಜೀವನ ಚರಿತ್ರೆಗಳು' ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮಗಳ ಸಂಚಾಲಕರಾದ ಶ್ರೀ ರಾ. ನಂ. ಚಂದ್ರಶೇಖರ್ ಸದಸ್ಯರನ್ನೂ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ವಿಜಯಕುಮಾರ್ ಕಾರ್ಯದರ್ಶಿ ಕ.ಕೈ.ವಾ. ಕ. ಸಂ. ಒಕ್ಕೂಟ, ವಂದನಾರ್ಪಣೆ ಮಾಡಿದರು.

೨೯. ದಿನಾಂಕ : ೯-೫-೨೦೧೦ ಸಂಜೆ ೫-೧೫ ಗಂಟೆಗೆ ತಿಂಗಳ ಕಾರ್ಯಕ್ರಮ-೮ ಜಿ.ಟಿ.ಆರ್.ಇ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘದ ಸಹಯೋಗದೊಡನೆ ನಡೆಯಿತು. ಡಾ. ವಿಜಯಾ, ಹಿರಿಯ ಪತ್ರಕರ್ತರು ಅಧ್ಯಕ್ಷತೆ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಜಿ.ಟಿ.ಆರ್.ಇ.ಯ ತಾಂತ್ರಿಕ ಅಧಿಕಾರಿ ಶ್ರೀ ಅ.ನಾ. ವಿಜಯಶಂಕರ್

ಆಗಮಿಸಿದ್ದರು. ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಅಬ್ದುಲ್ ಬಷೀರ್ 'ಎಂ.ವಿ.ಸೀ ಅವರ ಕಾವ್ಯ ಮೀಮಾಂಸೆ ವಿಚಾರಗಳು' ಬಗ್ಗೆ ಬಹಳ ಉಪಯುಕ್ತ ಹಾಗೂ ವಿಚಾರಪೂರ್ಣ ಉಪನ್ಯಾಸ ನೀಡಿದರು. ಶ್ರೀ ಎಸ್. ವಿ. ಶ್ರೀನಿವಾಸರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ರಾ. ನಂ. ಚಂದ್ರಶೇಖರ್ ಮುಖ್ಯ ಅತಿಥಿಗಳ ಪರಿಚಯ ಮಾಡಿ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಶ್ರ. ದೇ. ಪಾರ್ಶ್ವನಾಥ ಅವರು ಕಾರ್ಯಕ್ರಮ ನಿರೂಪಿಸಿದರು. ಅಧ್ಯಕ್ಷತೆ ವಹಿಸಿದ್ದ ಡಾ. ವಿಜಯಾರವರು, ಪ್ರೊ. ಎಂ.ವಿ.ಸೀ. ಅವರ ವಿಸ್ತೃತ ವೈವಿಧ್ಯಪೂರ್ಣ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಜನಪರ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಅವರ ಕಾರ್ಯ ವೈಖರಿಯನ್ನೂ ಪ್ರಶಂಸಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಜಿ.ಟಿ.ಆರ್.ಇ.ಯ ಪ್ರಧಾನ ಕಾರ್ಯದರ್ಶಿ ಶ್ರೀ ಬೇ. ಹ. ಶ್ರೀಧರ್ ಸರ್ವರನ್ನೂ ವಂದಿಸಿದರು.

೩೦. ದಿನಾಂಕ : ೯-೬-೨೦೧೦ ರಂದು ಸಂಜೆ ೫-೩೦ಕ್ಕೆ ಆಯೋಜಿಸಿದ್ದ ತಿಂಗಳ ಕಾರ್ಯಕ್ರಮ-೯ ನಾಗನಾಥಪುರ ಮೈಕೋ ಕನ್ನಡ ಸಂಘದ ಸಹಯೋಗದಲ್ಲಿ ನಡೆಯಿತು. ಡಾ. ದೇವರಕೊಂಡಾರೆಡ್ಡಿ, ಖ್ಯಾತ ಶಾಸನತಜ್ಞರು, ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಪ್ರಾಧ್ಯಾಪಕ ಡಾ. ಎಸ್. ಎಲ್. ಶ್ರೀನಿವಾಸಮೂರ್ತಿಯವರು 'ಎಂ.ವಿ.ಸೀ. ಅವರ ಸಂಶೋಧನಾ ಲೇಖನಗಳು' ಈ ಬಗ್ಗೆ ವಿಚಾರಪೂರ್ಣ ಉಪನ್ಯಾಸ ನೀಡಿದರು. ಮೈಕೋ ಕನ್ನಡ ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ಟಿ. ಆರ್. ಪಾಲಾಕ್ಷ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇವರು ತಮ್ಮ ಭಾಷಣದಲ್ಲಿ ಮೈಕೋ ಕನ್ನಡ ಸಂಘದ ಚಟುವಟಿಕೆಗಳ ಬಗ್ಗೆ ವಿವರಣಾತ್ಮಕ ಮಾಹಿತಿ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಡಾ. ದೇವರಕೊಂಡಾರೆಡ್ಡಿ ಎಂ.ವಿ.ಸೀ. ಅವರ ಸಂಶೋಧನಾ ಸಾಮರ್ಥ್ಯವನ್ನು ಉದಾಹರಣೆಯೊಡನೆ ಪ್ರಶಂಸಿಸಿದರು ಹಾಗೂ ಸಂಸ್ಥೆಯೊಡನೆ ತಮಗಿರುವ ನಿಕಟ ಸಂಬಂಧದ ಬಗ್ಗೆಯೂ ಮಾಹಿತಿ ನೀಡಿ, ಪ್ರತಿಷ್ಠಾನದ ಕಾರ್ಯಚಟುವಟಿಕೆಗಳನ್ನು ಪ್ರಶಂಸಿಸಿದರು. ಮೈಕೋ ಕನ್ನಡ ಸಂಘದ ಶ್ರೀ ರಾಜೇಶ್ ಜಿ. ಬಿ. ಅವರು ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮದ ಸಂಚಾಲಕರಾದ ಶ್ರೀ ರಾ.ನಂ. ಚಂದ್ರಶೇಖರ್ ಹಾಗೂ ಶ್ರ. ದೇ. ಪಾರ್ಶ್ವನಾಥ್ ಅವರು ಸ್ವಾಗತ ಹಾಗೂ ನಿರೂಪಣಾ ಕಾರ್ಯಕ್ರಮವನ್ನು ನೆರವೇರಿಸಿದರು.

೩೧. ದಿನಾಂಕ : ೦೯-೦೭-೨೦೧೦ ಶುಕ್ರವಾರ ಸಂಜೆ ೫-೩೦ ರಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ **ಬನಶಂಕರಿ ಸಾಂಸ್ಕೃತಿಕ ಸಂಘದ ಸಹಯೋಗದೊಡನೆ ೧೦ನೇ ಶತಮಾನೋತ್ಸವ ಉಪನ್ಯಾಸಮಾಲೆ ಕಾರ್ಯಕ್ರಮನ್ನು** ನಡೆಸಿತು. ಸುಪ್ರಸಿದ್ಧ ಸಾಹಿತಿ ಡಾ. ಸುಮತೀಂದ್ರ ನಾಡಿಗ ಅವರು ಅಧ್ಯಕ್ಷತೆ ವಹಿಸಿದ್ದರು. 'ಎಂ.ವಿ.ಸೀ. ಅವರ ಕಥಾ ಸಾಹಿತ್ಯ' ಕುರಿತು ಡಾ. ಮುಳುಕುಂಟೆ ರಮೇಶ್ ಅವರು ವಿಸ್ತೃತ ವಿವರಣೆ ನೀಡಿದರು. ಪ್ರತಿಷ್ಠಾನದ ಅಧ್ಯಕ್ಷರು ಡಾ. ಜಿ. ನಾರಾಯಣ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಬನಶಂಕರಿ ಸಾಂಸ್ಕೃತಿಕ ಸಂಘದ ಅಧ್ಯಕ್ಷರು ಶ್ರೀ ಎಸ್.ವಿ. ಶ್ರೀನಿವಾಸರಾವ್ ಬನಶಂಕರಿ ಸಾಂಸ್ಕೃತಿಕ ಸಂಘದ ಕಿರು ಪರಿಚಯ ಹಾಗೂ ಅತಿಥಿಗಳ ಪರಿಚಯ ಮಾಡಿ, ಸರ್ವರನ್ನು ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಉಪನ್ಯಾಸ ಕಾರ್ಯಕ್ರಮ ಮುಗಿದ ನಂತರ ಬನಶಂಕರಿ ಸಾಂಸ್ಕೃತಿಕ ಸಂಘದ ಮಹಿಳಾ ವಿಭಾಗದಿಂದ ಸಿರಿಸಂಗೀತ – ದಾಸರ ಕೀರ್ತನೆಗಳು ನಡೆದವು. ಬನಶಂಕರಿ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿ ಸಾವಿತ್ರಿ ಹುಚ್ಚಯ್ಯ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮಗಳ ಜೊತೆಜೊತೆಯಲ್ಲೇ ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನವನ್ನು ಪ್ರತಿಷ್ಠಾನದ ಮೊದಲನೆಯ ಮಹಡಿಯಲ್ಲಿ ಏರ್ಪಡಿಸಲಾಗಿತ್ತು.

೩೨. ದಿನಾಂಕ: ೧೯–೦೭–೨೦೧೦ರಂದು ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮ ಹಾಗೂ ಹಸ್ತಪ್ರತಿಗಳ ಪ್ರದರ್ಶನ ನಡೆಯಿತು. ಡಾ. ತೀ. ನಂ. ಶಂಕರನಾರಾಯಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಉದಯನಾರಾಯಣ ಶಾಸ್ತ್ರೀ ಅವರು ಬೆಂಗಳೂರಿನಿಂದ ಬಂದಿದ್ದ ಅತಿಥಿಗಳನ್ನು ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಎಂ.ವಿ.ಸೀ. ಅವರ ಬದುಕು ಬರಹ ಕುರಿತು; ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು ; ಪ್ರತಿಷ್ಠಾನದ ಖಜಾಂಚಿ ಹಾಗೂ ಎಂ.ವಿ.ಸೀ. ಅವರ ಪುತ್ರರಾದ ಶ್ರೀ. ಎಸ್.ಟಿ. ರಾಧಾಕೃಷ್ಣ 'ನಾ ಕಂಡಂತೆ ನನ್ನ ತಂದೆ' ಎಂಬ ವಿಷಯ ಕುರಿತು ಭಾಷಣ ಮಾಡಿದರು.

೩೩. ದಿನಾಂಕ: ೨೦–೦೭–೨೦೧೦ ಮಂಗಳವಾರ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ (ಕುವೆಂಪು ವಿಶ್ವವಿದ್ಯಾಲಯ) ಸಹಯೋಗದಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಶತಮಾನೋತ್ಸವ ಕಾರ್ಯಕ್ರಮ ಏರ್ಪಡಿಸಿತ್ತು. ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲ ಪ್ರೊ. ಸುಗುಣ ಅಧ್ಯಕ್ಷತೆ ವಹಿಸಿದ್ದರು, ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಹೋಗಿದ್ದ ಡಾ. ನಾ. ಗೀತಾಚಾರ್ಯ ಎಂ.ವಿ.ಸೀ. ಜೀವನ ಕುರಿತು, ಶ್ರೀ ಎಸ್.ವಿ. ಶ್ರೀನಿವಾಸರಾವ್ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಕುರಿತು; ಶ್ರೀ ಎಸ್.ಟಿ. ರಾಧಾಕೃಷ್ಣ(ಎಂ.ವಿ.ಸೀ. ಅವರ ಪುತ್ರರು) 'ನಾ ಕಂಡಂತೆ ನನ್ನ ತಂದೆ' ಕುರಿತು ಭಾಷಣ ಮಾಡಿದರು. ಅಧ್ಯಕ್ಷ ಪ್ರೊ. ಸುಗುಣರವರು ಅಧ್ಯಕ್ಷ ಭಾಷಣ ಮಾಡಿ, ಬೆಂಗಳೂರಿನಿಂದ ಆಗಮಿಸಿ ಕಾರ್ಯಕ್ರಮ ನಡೆಸಿದ ಅತಿಥಿಗಳಿಗೆ ಸಹ್ಯಾದ್ರಿ ಕಾಲೇಜಿನ ಕನ್ನಡವಿಭಾಗದ ಮುಖ್ಯಸ್ಥರು ಕೃತಜ್ಞತೆ ಅರ್ಪಿಸಿದರು.

೩೪. ದಿನಾಂಕ : ೨೭–೦೭–೨೦೧೦ ಭಾನುವಾರ ಬೆಳಗ್ಗೆ ಮಲ್ಲೇಶ್ವರದ ಹಿರಿಯ ನಾಗರಿಕರ ಸಂಘ; ಬಿ.ಎಂ.ಶ್ರೀ ಸ್ಮಾರಕ ಸಹಯೋಗದೊಂದಿಗೆ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮವನ್ನು ಆಯೋಜಿಸಿತ್ತು. ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಶ್ರೀ ಎಸ್.ಕೆ. ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಡಾ. ನಾ. ಗೀತಾಚಾರ್ಯ ಅವರು ಎಂ.ವಿ.ಸೀ. ಅವರ ಬದುಕು–ಬರಹದ ಬಗ್ಗೆ ಹಾಗೂ ಹಸ್ತಪ್ರತಿಗಳ ಸಂರಕ್ಷಣೆ, ಸಂಪಾದನೆ ಬಗ್ಗೆ ವಿದ್ವತ್ಪೂರ್ಣ ಭಾಷಣ ಮಾಡಿದರು.

೩೫. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕೆಂಗೇರಿ ಉಪನಗರ ಸ್ನೇಹಕೂಟ ಸಾಂಸ್ಕೃತಿಕ ವೇದಿಕೆ ಸಹಯೋಗದೊಡನೆ ದಿನಾಂಕ: ೦೯-೦೮-೨೦೧೦ ಸಂಜೆ ೫-೩೦ಕ್ಕೆ ೧೧ನೇ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು ನಡೆಸಿತು. ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗದ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ತೀ. ನಂ. ಶಂಕರನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಡಾ. ಕೆ. ಆರ್. ಗಣೇಶ್ ಅವರು ಎಂ.ವಿ.ಸೀ. ಅವರ ವಿದ್ವತ್ ಪ್ರಪಂಚವನ್ನು ಪರಿಚಯಿಸಿದರು. ಕನ್ನಡ ಪ್ರಾಧ್ಯಾಪಕ ಡಾ. ಎಸ್.ಎಚ್. ಭುವನೇಶ್ವರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಡಾ. ತೀ. ನಂ. ಶಂಕರನಾರಾಯಣ ಅವರು ಎಂ.ವಿ.ಸೀ. ಅವರ ವಿದ್ವತ್ ಕೃತಿಗಳ ಪರಾಮರ್ಶೆ ನಡೆಸಿ, ಅವರ ಸಂಶೋಧನಾ ಪ್ರವೃತ್ತಿಯನ್ನು ಪ್ರಶಂಸಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀ ಎಸ್.ವಿ. ಶ್ರೀನಿವಾಸರಾವ್‌ರವರು ಎಲ್ಲಾ ಅತಿಥಿಗಳನ್ನು ಪರಿಚಯಿಸಿ, ಸರ್ವರನ್ನೂ ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಸ್ನೇಹಕೂಟದ ಶ್ರೀ ಆರ್. ವಾದಿರಾಜ್ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಡಾ. ಜಿ. ನಾರಾಯಣ ಅವರು ಉಪಸ್ಥಿತರಿದ್ದರು.

೩೬. ದಿನಾಂಕ: ೨೧-೦೮-೨೦೧೦ ಶನಿವಾರ ಬೆಳಿಗ್ಗೆ ೧೦-೦೦ಕ್ಕೆ ದಾವಣಗೆರೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಸಹಯೋಗದೊಡನೆ 'ಎಂ.ವಿ.ಸೀ. ಸಾಹಿತ್ಯ ಸಾಧನೆ ವಿಚಾರಗೋಷ್ಠಿ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ' ಕಾರ್ಯಕ್ರಮವನ್ನು ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿತ್ತು. ದಾವಣಗೆರೆಯ ವಿಚಾರವಾದಿ ಪ್ರೊ. ಬಿ.ವಿ. ವೀರಭದ್ರಪ್ಪ ದೀಪ ಬೆಳಗಿಸುವ ಮೂಲಕ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. 'ರಾಘವರ ಕಾವ್ಯ', ವಿಷಯ ಕುರಿತು ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎನ್.ಬಿ. ಚಂದ್ರಮೋಹನ್, 'ಎಂ.ವಿ.ಸೀ. ಅವರ ಪಾಂಡಿತ್ಯ'ದ ಬಗ್ಗೆ ಪ್ರಸಿದ್ಧ ಸಾಹಿತಿ ಪ್ರೊ. ಜಿ. ಅಶ್ವತ್ಥನಾರಾಯಣ, 'ಎಂ.ವಿ.ಸೀ. ಅವರ ಕಥಾಸಾಹಿತ್ಯ' ಕುರಿತು ಖ್ಯಾತ ಲೇಖಕಿ ಡಾ. ವಿಜಯಾ ಸುಬ್ಬರಾಜ್, 'ಎಂ.ವಿ.ಸೀ. ಅವರ ಮಕ್ಕಳ ಸಾಹಿತ್ಯ' ಕುರಿತು ಹಿರಿಯ ಸಾಹಿತಿ ಶ್ರೀ ಎಸ್.ವಿ. ಶ್ರೀನಿವಾಸರಾವ್, 'ಎಂ.ವಿ.ಸೀ. ಅವರ ಸಂಶೋಧನೆ, ಸಂಘಟನೆ ಕುರಿತು ಪ್ರತಿಷ್ಠಾನದ ಕಾರ್ಯದರ್ಶಿ ಡಾ. ನಾ. ಗೀತಾಚಾರ್ಯ ಉಪನ್ಯಾಸಗಳನ್ನು ನೀಡಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ಡಿ. ಬಸವರಾಜ್ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಸಂಚಾಲಕ ಡಾ. ಕೆ. ನಾರಾಯಣಸ್ವಾಮಿ ಅವರು ಎಲ್ಲರನ್ನೂ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಮಲ್ಲಿಕಾರ್ಜುನ ಕಲಮರಹಳ್ಳಿ ಅವರು ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮ ಸಭಾಂಗಣದ ಮುಂದೆ ಏರ್ಪಡಿಸಿದ್ದ ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ಕಾಲೇಜಿನ ನೂರಾರು ವಿದ್ಯಾರ್ಥಿಗಳು ವೀಕ್ಷಿಸಿ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದರು.

೩೭. ದಿನಾಂಕ: ೨೭-೦೮-೨೦೧೦ ಶುಕ್ರವಾರ ಬೆಳಿಗ್ಗೆ ೧೧-೦೦ ಗಂಟೆಗೆ **ತಿಪಟೂರಿನ ಪಲ್ಲಾಗಟ್ಟ ಅಡವಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು** ಎಂ.ವಿ.ಸೀ. ಅವರ ಜನ್ಮಶತಮಾನೋತ್ಸವದ ಅಂಗವಾಗಿ ವಿಚಾರಗೋಷ್ಠಿ ಹಾಗೂ ಪ್ರಾಚೀನ ಹಸ್ತಪ್ರತಿ ಪ್ರದರ್ಶನವನ್ನು ಕಾಲೇಜಿನ ಶಂಕರಪ್ಪ ಸಭಾಂಗಣದಲ್ಲಿ ಏರ್ಪಡಿಸಿತ್ತು.

ಹಿರಿಯ ಸಾಹಿತಿ ಶ್ರೀ ಎಸ್.ವಿ. ಶ್ರೀನಿವಾಸರಾವ್ ದೀಪ ಬೆಳಗಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಪ್ರತಿಷ್ಠಾನ ನಡೆದು ಬಂದ ದಾರಿಯನ್ನು ವಿವರಿಸಿ ರಾಜ್ಯದಾದ್ಯಂತ ನಡೆಸಲಾಗುತ್ತಿರುವ ಶತಮಾನೋತ್ಸವ ಸಮಾರಂಭಗಳ ಕಿರು ಪರಿಚಯ ಮಾಡಿಸಿಕೊಟ್ಟರು. ಕಲ್ಪತರು ಕಾಲೇಜಿನ ಪ್ರೊ. ಟಿ.ಎಸ್. ನಾಗರಾಜಶೆಟ್ಟಿ ಅವರು ಸ್ವಾಗತ ಭಾಷಣ ಮಾಡಿ ಅತಿಥಿಗಳ ಪರಿಚಯ ಮಾಡಿದರು. ಕಾಲೇಜಿನ ಪ್ರಾಚಾರ್ಯ ಪ್ರೊ. ಬಿ. ಬೋರೇಗೌಡ ಅಧ್ಯಕ್ಷತೆ ವಹಿಸಿದ್ದರು. 'ರಾಘವರ ಕಾವ್ಯ'ದ ಬಗ್ಗೆ ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಎನ್.ಬಿ. ಚಂದ್ರಮೋಹನ್, ಎಂ.ವಿ.ಸೀ. ಅವರ ಮಕ್ಕಳ ಸಾಹಿತ್ಯ ಕುರಿತು ಪ್ರೊ. ಎಸ್. ನಾಗರಾಜಶೆಟ್ಟಿ, 'ಎಂ.ವಿ.ಸೀ. ಅವರ ಹಸ್ತಪ್ರತಿ, ಸಂಶೋಧನೆ, ಸಂಘಟನಾ ಶಕ್ತಿ ಬಗ್ಗೆ ಕನ್ನಡ ಪ್ರಾಧ್ಯಾಪಕ ಡಾ. ನಾ. ಗೀತಾಚಾರ್ಯ, ಎಂ.ವಿ.ಸೀ. ಅವರ ಪುತ್ರ ಶ್ರೀ ಎಸ್.ಟಿ. ರಾಧಾಕೃಷ್ಣ ಅವರು 'ನಾ ಕಂಡಂತೆ ನನ್ನ ತಂದೆ' ಎಂದು ಕೆಲ ಆತ್ಮೀಯ ವಿಚಾರಗಳನ್ನು ಹಂಚಿಕೊಂಡರು. ಕಲ್ಪತರು ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರು ವಂದನಾರ್ಪನೆ ಮಾಡಿದರು.

೩೮. ದಿನಾಂಕ: ೨೭-೦೮-೨೦೧೦ ಶುಕ್ರವಾರ ೨.೦೦ ಗಂಟೆಗೆ **ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕನ್ನಡ ಸಾಹಿತ್ಯ ಪರಿಷತ್ತು ನವೋದಯ ಪ್ರಥಮ ದರ್ಜೆ ಕಾಲೇಜಿನ** ಆವರಣದಲ್ಲಿ ಎಂ.ವಿ.ಸೀ. ಜನ್ಮಶತಮಾನೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಕ್ಕನಾಯಕನಹಳ್ಳಿ ಪ್ರಾಚಾರ್ಯರಾದ ಪ್ರೊ. ಕೆ.ಸಿ. ಬಸಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಹಿರಿಯ ಸಾಹಿತಿಗಳೂ ಆದ ಪ್ರೊ. ಎಂ. ವಿ. ನಾಗರಾಜ್ ಅವರು ಸ್ವಾಗತ ಭಾಷಣ ಮಾಡಿ, ಜೊತೆಯಾಗಿ ಎಲ್ಲಾ ಅತಿಥಿಗಳ ಪರಿಚಯ ಮಾಡಿಕೊಟ್ಟರು, ಎಂ.ವಿ.ಸೀ. ಅವರ ಮಕ್ಕಳ ಸಾಹಿತ್ಯ ಕುರಿತು ಹಾಗೂ ಎಂ.ವಿ.ಸೀ. ಜೀವನ ಕುರಿತು ಹಿರಿಯ ಸಾಹಿತಿ ಶ್ರೀ ಎಸ್.ವಿ. ಶ್ರೀನಿವಾಸರಾವ್, ಹಸ್ತಪ್ರತಿ ಅಧ್ಯಯನ ಸಂರಕ್ಷಣೆ ಬಗೆಗೆ, ಪ್ರತಿಷ್ಠಾನದ ಕಾರ್ಯದರ್ಶಿ ಡಾ.ನಾ. ಗೀತಾಚಾರ್ಯ, 'ನಮ್ಮ ತಂದೆ' ಎಂದು ಎಂ.ವಿ.ಸೀ. ಅವರ ಪುತ್ರರಾದ ಶ್ರೀ ಎಸ್.ಟಿ. ರಾಧಾಕೃಷ್ಣ ಭಾಷಣ ಮಾಡಿದರು. ಕಾರ್ಯದರ್ಶಿ. ಶ್ರೀ ಸಿ. ಗುರುಮೂರ್ತಿ ಕೊಟಿಗೆಮನೆಯವರು ಕಾರ್ಯಕ್ರಮ ನಿರೂಪಿಸಿ, ವಂದನಾರ್ಪಣೆ ಮಾಡಿದರು. ಬಹುಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಸ್ತಪ್ರತಿ ಪ್ರದರ್ಶನದಲ್ಲಿ ಭಾಗವಹಿಸಿ ಈ ಬಗ್ಗೆ ಮಾಹಿತಿ ಸಂಗ್ರಹಿಸಿದರು.

೩೯. ದಿನಾಂಕ: ೩೦-೦೮-೨೦೧೧ರ ಎಂ.ವಿ.ಸೀ. ಅವರ ಜನ್ಮ ಜನ್ಮಶತಾಬ್ಧಿ ಅಂಗವಾಗಿ ಕನ್ನಡ ಯುವಜನ ಸಂಘದ ಸಭಾಂಗಣದಲ್ಲಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕನ್ನಡ ಯುವ ಜನ ಸಂಘದ ಅಧ್ಯಕ್ಷ ಶ್ರೀ ಜಗದೀಶ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಎಂ.ವಿ.ಸೀ. ಕುರಿತು ಭಾಷಣ ಮಾಡಿದರು. ಮುಖ್ಯ ಅತಿಥಿಗಳಾಗಿ ಡಾ. ನಾ. ಗೀತಾಚಾರ್ಯ ಗ್ರಂಥ ಸಂಪಾದನೆ -ಹಸ್ತಪ್ರತಿ ಶಾಸ್ತ್ರದ ಬಗ್ಗೆ ಮೌಲಿಕ ಮಾಹಿತಿ ನೀಡಿದರು. ಸಂಘದ ಸಂಚಾಲಕ ಶ್ರೀ ಎಂ. ಕೆಂಪಯ್ಯ ವಂದನಾರ್ಪಣೆ ಮಾಡಿದರು.

೪೦. ದಿನಾಂಕ: ೦೯-೦೯-೨೦೧೧ ಗುರುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಎಂ.ವಿ.ಸೀ. ಜನ್ಮ ಶತಮಾನೋತ್ಸವ ಹಸ್ತಪ್ರತಿ ಅಧ್ಯಯನಶಾಸ್ತ್ರ ವಿಚಾರಗೋಷ್ಠಿ.

ಎಂ.ವಿ.ಸೀ. ಶತಮಾನೋತ್ಸವವನ್ನು ಹಸ್ತಪ್ರತಿಗಳ ಅಧ್ಯಯನಮುಖೀ ಚಿಂತನೆಯಿಂದ ಅಂತಿಮಗೊಳಿಸಲಾಯಿತು. ದಿನಾಂಕ: ೦೯-೦೯-೨೦೧೧ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ 'ಹಸ್ತಪ್ರತಿ ಅಧ್ಯಯನಶಾಸ್ತ್ರ' ಎಂಬ ವಿಚಾರದಲ್ಲಿ ರಾಷ್ಟ್ರೀಯ ವಿಚಾರಗೋಷ್ಠಿಯನ್ನು ನಗರದ **ಶೇಷಾದ್ರಿಪುರಂ ಕಾಲೇಜಿನ ಸ್ನಾತಕೋತ್ತರ ಕನ್ನಡ ವಿಭಾಗದ ಸಹಯೋಗದಲ್ಲಿ** ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ ಶತಮಾನೋತ್ಸವ ಸಮಿತಿ ಸಂಘಟಿಸಿತ್ತು.

ಉದ್ಘಾಟನೆ : ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಕಿರೀಟವನ್ನು ತೊಡಿಸಿರುವ ಪ್ರಸ್ತುತ ಸಂದರ್ಭದಲ್ಲಿ ಶಾಸ್ತ್ರೀಯ ಭಾಷೆಯ ಮೂಲ ಹಸ್ತಪ್ರತಿ ಆಕರಗಳ ಬಗೆಗೆ ನಡೆಯುತ್ತಿರುವ ಪೂರ್ಣ ಪ್ರಮಾಣದ ಪ್ರಪ್ರಥಮ ರಾಷ್ಟ್ರೀಯ ವಿಚಾರಗೋಷ್ಠಿ ಆಗಿದೆ. ಕನ್ನಡದ ಪ್ರಾಚೀನ ಸಾಹಿತ್ಯದ ಭಂಡಾರವೇ ಆಗಿರುವ ಹಸ್ತಪ್ರತಿ ಸಂಪತ್ತೇ ನಿಜವಾದ ಶಾಸ್ತ್ರೀಯ ಕನ್ನಡದ ಕಣಜವಾಗಿದೆ. ಇದರಲ್ಲಿ ಅಡಗಿರುವ ನಾನಾ ವಿಷಯಗಳನ್ನು ಹೊರತೆಗೆದು ಇಂದಿನ ಸಾಮಾಜಿಕ ಸಂದರ್ಭದೊಂದಿಗೆ ವಾಗ್ವಾದಕ್ಕೆ ತೆರೆದಿಡುವುದೇ ಈ ಹಸ್ತಪ್ರತಿ ಅಧ್ಯಯನಶಾಸ್ತ್ರದ ಪ್ರಮುಖ ಆಶಯವಾಗಿದೆ. ಡಾ. ಗೀತಾಚಾರ್ಯ ಅವರ ಈ ಪ್ರಯತ್ನವನ್ನು ವಿದ್ವಾಂಸರು ಮುಂದುವರಿಸಬೇಕಾಗಿದೆ. ನಾವೆಲ್ಲ ಅವರೊಂದಿಗೆ ಕೈಜೋಡಿಸಬೇಕಾಗಿದೆ ಎಂದು ಈ ವಿಚಾರಗೋಷ್ಠಿಯನ್ನು ಉದ್ಘಾಟಿಸಿದ ನಾಡಿನ ಪ್ರಸಿದ್ಧ ಸಂಶೋಧಕರಾದ ಡಾ॥ ಎಂ. ಚಿದಾನಂದ ಮೂರ್ತಿ ಅವರು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಎಂ.ವಿ.ಸೀ. ಪುಸ್ತಕ ಮತ್ತು ಚಿತ್ರಗಳ ಪ್ರದರ್ಶನವನ್ನು, ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನವನ್ನು ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಉದ್ಘಾಟಿಸಿದರು. ನಾಡಿನ ಹಿರಿಯ ಚೇತನರಾಗಿದ್ದ ಎಂ.ವಿ.ಸೀ.ಯವರು ಬಿ.ಎಂ.ಶ್ರೀ. ಪ್ರತಿಷ್ಠಾನದ ಮೂಲಕ ಮಾಡಿರುವ ಹಸ್ತಪ್ರತಿ ಕಾರ್ಯ ಎಲ್ಲ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿರುವಂತೆ ಉಳಿದ ವಿಶ್ವವಿದ್ಯಾಲಯಗಳಲ್ಲೂ ಹಸ್ತಪ್ರತಿ ಅಧ್ಯಯನ ವಿಭಾಗಗಳು ಆರಂಭವಾಗಬೇಕು

ಎಂದರು. ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾದ ನಾಡೋಜ ಜಿ. ನಾರಾಯಣರು ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಸಿದ್ಧ ಹಸ್ತಪ್ರತಿ ತಜ್ಞರಾದ ಪ್ರೊ. ಎಸ್. ಬಸವಾರಾಧ್ಯ ಅವರು ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಬಿ.ಎಂ.ಶ್ರೀ ಪ್ರತಿಷ್ಠಾನದ ಸಾಧನೆಗಳನ್ನೂ ಎಂ.ವಿ.ಸೀತಾರಾಮಯ್ಯನವರ ಕೊಡುಗೆಗಳನ್ನೂ ವಿವರಿಸಿದರು. ಶೇಷಾದ್ರಿಪುರಂ ಕಾಲೇಜಿನ ಪ್ರಾಚಾರ್ಯರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸ್ವಾಗತ ಮಾಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಎನ್. ಬೈರೇಗೌಡ ನಿರೂಪಣೆ ಮಾಡಿದರು ಸ್ನಾತಕೋತ್ತರಕೇಂದ್ರದ ಸಂಚಾಲಕ ನೋಟಕಾರ್ ಸತೀಶ್ ವಂದಿಸಿದರು. ಆರಂಭದಲ್ಲಿ ಕಾಲೇಜಿನ ವಿದ್ಯಾರ್ಥಿವೃಂದ ನಾಡಗೀತೆಯನ್ನು ಹಾಡಿದರು.

ಪ್ರಾಸ್ತಾವಿಕ : ಈ ಬಗೆಯ ವಿಚಾರಗೋಷ್ಠಿ ರಾಷ್ಟ್ರದಲ್ಲೇ ಪ್ರಥಮವಾಗಿದ್ದು ಹಸ್ತಪ್ರತಿ ಅಧ್ಯಯನವನ್ನೇ ಒಂದು ಸ್ವತಂತ್ರ ಶಾಸ್ತ್ರ ವಿಷಯವನ್ನಾಗಿ ರೂಪಿಸಿರುವ ಪ್ರಯತ್ನಕ್ಕೆ ರಾಷ್ಟ್ರದಲ್ಲಿ ಕರ್ನಾಟಕವೇ ಮೊದಲಾಗಿದೆ. ಹಸ್ತಪ್ರತಿಶಾಸ್ತ್ರದಂತೆ 'ಹಸ್ತಪ್ರತಿ ಅಧ್ಯಯನಶಾಸ್ತ್ರ' ಎಂಬ ಪದವನ್ನೂ ಕರ್ನಾಟಕ ಅದರಲ್ಲೂ ಬಿ.ಎಂ.ಶ್ರೀ. ಪ್ರತಿಷ್ಠಾನ ಭಾರತೀಯ ಮತ್ತು ಇಂಗ್ಲೀಷ್ ವಿಶ್ವಕೋಶ ಹಾಗೂ ನಿಘಂಟುಗಳಿಗೆ ಹೊಸದಾಗಿ ಟಂಕಿಸಿ ಕೊಡುಗೆಯಾಗಿ ನೀಡುತ್ತಿದೆ ಎಂದು ಹಸ್ತಪ್ರತಿ ವಿದ್ವಾಂಸರಾದ ಡಾ. ನಾ. ಗೀತಾಚಾರ್ಯರು ತಿಳಿಸಿದರು.

ಎಂ.ವಿ.ಸೀಯವರು ಆರಂಭಿಸಿದ ಹಸ್ತಪ್ರತಿಶಾಸ್ತ್ರ ಇತ್ತೀಚಿನ ವರ್ಷಗಳಲ್ಲಿ ಸಂಸ್ಕೃತಿ ಚಿಂತನೆಯತ್ತ ಹೊರಳಿದ್ದು ಹಸ್ತಪ್ರತಿಗಳನ್ನು ಕೇವಲ ಗ್ರಂಥಸಂಪಾದನೆಗೆ ಅಥವಾ ಸಂರಕ್ಷಿಸಿ ಹಸ್ತಪ್ರತಿ ಭಂಡಾರದಲ್ಲಿಡುವುದಕ್ಕೆ ಸೀಮಿತಗೊಳಿಸದೆ ಹಸ್ತಪ್ರತಿಗಳನ್ನು ಆಕರ ಸಾಮಗ್ರಿಯಾಗಿ ಪರಿಗಣಿಸಿ ಅವುಗಳಲ್ಲಿ ಅಡಗಿರುವ ಅಪಾರ ಮಾಹಿತಿಗಳನ್ನು ಹೊರತೆಗೆದು ಬಹುಮುಖೀ ಅಧ್ಯಯನಕ್ಕೆ ತೊಡಗಿಸುವ ನೂತನವಿಧಾನಕ್ಕೆ 'ಹಸ್ತಪ್ರತಿ ಅಧ್ಯಯನಶಾಸ್ತ್ರ' ಎಂದು ಕರೆದು ಬಿ.ಎಂ.ಶ್ರೀ. ಪ್ರತಿಷ್ಠಾನ ಈಗಾಗಲೇ ತಾನು ನಡೆಸುತ್ತಿರುವ ಹಸ್ತಪ್ರತಿ ತರಗತಿಗಳಲ್ಲಿ ಚಾಲನೆಗೆ ತಂದಿದೆ. ಈ ಶತಮಾನೋತ್ಸವ ವರ್ಷದಲ್ಲಿ ಇದೇ ಹೆಸರಿನ ಗ್ರಂಥವನ್ನೂ ಪ್ರಕಟಿಸಿದೆ. ಇದೀಗ ರಾಷ್ಟ್ರೀಯ ವಿಚಾರಗೋಷ್ಠಿಯ ಮೂಲಕ ವಿದ್ವಜ್ಜನರ ಅಂಕಿತಕ್ಕೆ ವೇದಿಕೆ ರೂಪಿಸಿದೆ. ಮುಂಬಯಿ, ಚನ್ನೈ, ಅನಂತಪುರ, ಹಂಪಿ, ಕೋಲಾರ, ಉಡುಪಿ, ಶ್ರವಣಬೆಳಗೊಳ, ಶಿವಮೊಗ್ಗ, ಮೈಸೂರು, ತುಮಕೂರು ಮುಂತಾದ ಕಡೆಗಳಿಂದ ವಿದ್ವಾಂಸರು ಆಗಮಿಸಿದ್ದಾರೆ. ಇದೊಂದು ವಿಶೇಷ ವಿಚಾರಗೋಷ್ಠಿಯಾಗಿದೆ ಎಂದು ಡಾ. ನಾ. ಗೀತಾಚಾರ್ಯ ಗೋಷ್ಠಿಯ ಸಂಘಟಕರಾಗಿ, ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿಯಾಗಿ ವಿಚಾರ ಗೋಷ್ಠಿಗೆ ಸ್ವಾಗತ ಮಾಡುತ್ತ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಗೋಷ್ಠಿಗಳು : ಮಧ್ಯಾಹ್ನ ೧೨ ಗಂಟೆಗೆ ನಡೆದ 'ಹಸ್ತಪ್ರತಿಗಳ ಅಧ್ಯಯನ ಕ್ರಮಗಳು' ಎಂಬ ೧ನೇ ಗೋಷ್ಠಿಯಲ್ಲಿ 'ಆಕರಸಾಹಿತ್ಯವಾಗಿ ಹಸ್ತಪ್ರತಿಗಳು' ವಿಷಯ ಕುರಿತು

ಕನ್ನಡ ವಿ.ವಿ. ಹಸ್ತಪ್ರತಿ ವಿಭಾಗದ ಪ್ರಾಧ್ಯಾಪಕರಾದ ಡಾ.ಎಸ್.ಎಸ್. ಅಂಗಡಿ; 'ಲೌಕಿಕ ಪಠ್ಯಗಳ ಅಧ್ಯಯನ' ವಿಷಯ ಕುರಿತು ಮೈಸೂರು ವಿ.ವಿ. ಹಸ್ತಪ್ರತಿ ವಿಭಾಗದ ಡಾ. ವೈ.ಸಿ. ಭಾನುಮತಿ; 'ಪಾಠಾಂತರ ಅಧ್ಯಯನ' ವಿಷಯ ಕುರಿತು ಉಡುಪಿಯ ವಿದ್ವಾಂಸರಾದ ಡಾ॥ ಪಾದೇಕಲ್ಲು ವಿಷ್ಣುಭಟ್ ಅವರು ಪ್ರಬಂಧ ಮಂಡಿಸಿದರು. ಮುಂಬಯಿ ವಿ.ವಿ. ವಿಶ್ರಾಂತ ಪ್ರಾಧ್ಯಾಪಕರೂ ಹಿರಿಯ ವಿದ್ವಾಂಸರೂ ಆದ ಡಾ. ತಾಳ್ತಜೆ ವಸಂತಕುಮಾರ್ ಅವರು ಅಧ್ಯಕ್ಷತೆ ವಹಿಸಿ ಇಂತಹ ವಿಚಾರಗೋಷ್ಠಿಯನ್ನು ಸಂಘಟಿಸಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಉತ್ತಮ ಕೆಲಸಮಾಡಿದೆ ಎಂದು ಶ್ಲಾಘಿಸಿದರು. ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಸಿಸಿರ ಅವರು ವಂದನಾರ್ಪಣೆ ಮಾಡಿದರು. ಶೇಷಾದ್ರಿಪುರಂ ಪದವಿ ಕಾಲೇಜಿನ ಕನ್ನಡ ಅಧ್ಯಾಪಕಿ ಶ್ರೀಮತಿ ಎಚ್. ಎಂ. ಗೀತ ನಿರೂಪಣೆ ಮಾಡಿದರು.

ಮಧ್ಯಾಹ್ನ ೨.೩೦ಕ್ಕೆ ನಡೆದ 'ಹಸ್ತಪ್ರತಿ ಅಧ್ಯಯನದ ಆಯಾಮಗಳು' ಎಂಬ ೨ನೇ ಗೋಷ್ಠಿಯಲ್ಲಿ 'ಹಸ್ತಪ್ರತಿಗಳ ಬಹುಮುಖಿ ಅಧ್ಯಯನ' ಎಂಬ ವಿಷಯವಾಗಿ ಮೈಸೂರಿನ ಹಿರಿಯ ವಿದ್ವಾಂಸರಾದ ಡಾ. ಸೀತಾರಾಮ ಜಾಗೀರದಾರ ಅವರೂ; 'ಹಸ್ತಪ್ರತಿಗಳ ಸಾಂಸ್ಕೃತಿಕ ಅಧ್ಯಯನ' ವಿಷಯವಾಗಿ ಬೆಂಗಳೂರು ವಿ.ವಿ. ಕೋಲಾರ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರಾದ ಡಾ. ಸಿ. ನಾಗಭೂಷಣ ಅವರೂ ಮತ್ತು 'ಹಸ್ತಪ್ರತಿ ಅಧ್ಯಯನಕ್ಕೆ ಕಂಪ್ಯೂಟರ್ ಬಳಕೆ' ವಿಷಯವಾಗಿ ಕನ್ನಡ ಗಣಕ ಪರಿಷತ್ತಿನ ಶ್ರೀ. ಜಿ.ಎನ್. ನರಸಿಂಹಮೂರ್ತಿ ಅವರೂ ಪ್ರಬಂಧ ಮಂಡಿಸಿದರು. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಅನಂತಪುರ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಹಿರಿಯ ವಿದ್ವಾಂಸರೂ ಆದ ಡಾ. ಆರ್. ಶೇಷಶಾಸ್ತ್ರೀ ನಡೆಸಿಕೊಟ್ಟರು. ಸಮಾರೋಪ ಭಾಷಣವನ್ನು ಹಿರಿಯ ಹಸ್ತಪ್ರತಿ ವಿದ್ವಾಂಸರಾದ ಶ್ರವಣಬೆಳಗೊಳದ ಪ್ರಾಕೃತ ಕೇಂದ್ರದ ಮುಖ್ಯಸ್ಥರಾದ ಪ್ರೊ. ಬಿ.ಎಸ್. ಸಣ್ಣಯ್ಯ ಅವರು ಮಾತನಾಡುತ್ತ ವಿಶ್ವವಿದ್ಯಾಲಯಗಳು, ಸರ್ಕಾರ, ಹಸ್ತಪ್ರತಿಕ್ಷೇತ್ರದಲ್ಲಿ ಕೆಲಸ ಮಾಡಿರುವ ವಿದ್ವಾಂಸರನ್ನು ಗುರುತಿಸಿ ಗೌರವಿಸುವ ಅಗತ್ಯವಿದೆ ಎಂದು ಹೇಳಿದರು. ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ಫಿಲ್ ವಿದ್ಯಾರ್ಥಿ ಶ್ರೀ ಬಸವರಾಜಪ್ಪ ಅವರು ಆರಂಭದಲ್ಲಿ ಸ್ವಾಗತಿಸಿದರು. ಬಿ.ಎಂ.ಶ್ರೀ ಪ್ರತಿಷ್ಠಾನದ ಗ್ರಂಥಾಲಯ ಸಂರಕ್ಷಕಿ ಡಾ. ಶ್ಯಾಮಲರತ್ನಕುಮಾರಿ ವಂದನಾರ್ಪಣೆ ಮಾಡಿದರು. ಶೇಷಾದ್ರಿಪುರಂ ಪದವಿ ಕಾಲೇಜಿನ ಕನ್ನಡ ಅಧ್ಯಾಪಕಿ ಶ್ರೀಮತಿ ಅರ್ಚನ ತೇಜಸ್ವಿ ನಿರೂಪಣೆ ಮಾಡಿದರು. ಈ ನೂತನ ಶಿಸ್ತಿನ ರೂವಾರಿಗಳೂ ಆದ ಡಾ॥ ನಾ ಗೀತಾಚಾರ್ಯ ಅವರು ಗೋಷ್ಠಿಯ ನಿರ್ದೇಶಕರಾಗಿದ್ದರು.

೪೧. ಎಂ.ವಿ.ಸೀ. ಜನ್ಮಶತಮಾನೋತ್ಸವ ಸಮಾರೋಪ ಸಮಾರಂಭ

೯-೯-೨೦೧೦ ರಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಿತು. ಹೆಸರಾಂತ ಕವಿ, ಸಾಹಿತಿ, ವಿದ್ವಾಂಸ, ಸಂಘಟಕರಾಗಿದ್ದ ಪ್ರೊ. ಎಂ. ವಿ. ಸೀತಾರಾಮಯ್ಯನವರ

ಜನ್ಮ ಶತಮಾನೋತ್ಸವವನ್ನು ಕಳೆದ ವರ್ಷದ ಸೆಪ್ಟೆಂಬರ್ ೯ ರಂದು ಆರಂಭಿಸಿ ವಿವಿಧ ಯೋಜನೆಗಳನ್ನು ಹಮ್ಮಿಕೊಂಡು ನಾಡಿನಾದ್ಯಂತ ೬೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಚರಿಸಲಾಗಿದೆ. ಎಂದು ಎಸ್.ವಿ. ಶ್ರೀನಿವಾಸರಾವ್ ಅವರು ತಿಳಿಸಿದರು. ಈಚೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಎಂ.ವಿ.ಸೀ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಸ್ವಾಗತ ಭಾಷಣ ಮಾಡುತ್ತ, ನಾಡಿನ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆಗಾಗಿ ಶ್ರಮಿಸಿ 'ಹಸ್ತಪ್ರತಿಶಾಸ್ತ್ರ' ಎಂಬ ವಿನೂತನ ಶಿಸ್ತನ್ನೂ ರೂಪಿಸಿದ್ದ ಎಂ.ವಿ.ಸೀ.ಯವರ ಶತಮಾನೋತ್ಸವ ವರ್ಷವನ್ನು 'ಹಸ್ತಪ್ರತಿ ಅಧ್ಯಯನ ವರ್ಷ' ಎಂದೇ ಘೋಷಿಸಲಾಗಿತ್ತು. ಶತಮಾನೋತ್ಸವ ಕಾರ್ಯಕ್ರಮ ಎಂದರೆ ಕೇವಲ ಭಾಷಣ–ವ್ಯಕ್ತಿ ಸ್ತುತಿಯಾಗಿರದೆ ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನ ಮತ್ತು ಅದರ ಬಗೆಗೆ ಜಾಗೃತಿ ಮೂಡಿಸುವಂತಹ ಅಪರೂಪದ ಕಾರ್ಯಕ್ರಮವನ್ನಾಗಿ ರೂಪಿಸಲಾಗಿತ್ತು ಎಂದರು.

ಕಾರ್ಯಕ್ರಮವನ್ನು ನಿರೂಪಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಡಾ. ನಾ. ಗೀತಾಚಾರ್ಯರು ಇದೊಂದು ಅಪರೂಪದ ವಿಶೇಷ ಕಾರ್ಯಕ್ರಮವೆಂದು ನಾಡಿನಾದ್ಯಂತ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಕಾರ್ಯಕ್ರಮದ ಸಂದರ್ಭದಲ್ಲಿ ಅನೇಕ ಹಸ್ತಪ್ರತಿ ದಾನಿಗಳಿಂದ ಅಮೂಲ್ಯ ಆಸ್ತಿಯಾದ ಓಲೆಗರಿ–ಕಾಗದದ ಹಸ್ತಪ್ರತಿಗಳು ಪ್ರತಿಷ್ಠಾನಕ್ಕೆ ಕೊಡುಗೆಯಾಗಿ ಬಂದವು. ಪ್ರತಿಷ್ಠಾನದ ಹಸ್ತಪ್ರತಿ ಸಂಗ್ರಹಾಲಯದಲ್ಲಿ ಇವುಗಳನ್ನೆಲ್ಲ ಅತ್ಯಂತ ವೈಜ್ಞಾನಿಕವಾಗಿ ಸಂರಕ್ಷಿಸಲಾಗುತ್ತಿದೆ. ಇಡೀ ವರ್ಷದಲ್ಲಿ ೬೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿ ಪ್ರಾಚೀನ ಹಸ್ತಪ್ರತಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಮೂಲಕ ಎಂ.ವಿ.ಸೀ. ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಇನ್ನೂ ಸಂಸ್ಮರಣ ಸಂಪುಟ, ಸಂಚಿಕೆ, ಜೀವನ ಚರಿತ್ರೆ ಹಾಗೂ ಸಮಗ್ರ ಸಂಪುಟಗಳು ಪ್ರಕಟವಾಗಬೇಕಾಗಿದ್ದು ಅವುಗಳು ಸಿದ್ಧವಾದಂತೆ ಅವುಗಳನ್ನೂ ಬಿಡುಗಡೆ ಮಾಡಲಾಗುವುದು. ಔಪಚಾರಿಕವಾಗಿ ಕಳೆದ ವರ್ಷ ಇದೇ ದಿನ ಆರಂಭಿಸಿದ ಈ ಯೋಜನೆಯನ್ನು ಯಶಸ್ವಿಯಾಗಿ ಇವುಗಳನ್ನು ಪೂರ್ಣಗೊಳಿಸುತ್ತಿದ್ದೇವೆ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಹಿರಿಯ ಸಾಹಿತಿಗಳೂ ಆದ ಪ್ರೊ. ಎಂ.ಎಚ್. ಕೃಷ್ಣಯ್ಯ ಅವರು ಸಮಾರೋಪ ಭಾಷಣ ಮಾಡುತ್ತ ಈ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾಗಿದೆ ಎಂದರು. ಹಸ್ತಪ್ರತಿಗಳ ಬಗೆಗಿನ ಈ ರಾಷ್ಟ್ರೀಯ ವಿಚಾರಗೋಷ್ಠಿ ಹಸ್ತಪ್ರತಿಗಳ ಸಂಸ್ಕೃತಿ ಅಧ್ಯಯನ ಮುಖವನ್ನು ಅನಾವರಣಗೊಳಿಸಿದೆ. ಹಸ್ತಪ್ರತಿಗಳಲ್ಲಿನ ಚಿತ್ರಕಲೆ ಚರಿತ್ರೆಗೆ ಅಮೂಲ್ಯ ಮಾಹಿತಿಗಳಿವೆ ಎಂದು ಹೇಳುತ್ತ ಎಂ.ವಿ.ಸೀ. ಅವರು ಚಿತ್ರಕಲೆ ಮತ್ತು ಹಸ್ತಪ್ರತಿ ಎರಡೂ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿರುವುದು ಗಮನಾರ್ಹವಾದದ್ದು ಎಂದರು.

ಪುಸ್ತಕ ಬಿಡುಗಡೆ : ಈ ಸಂದರ್ಭದಲ್ಲಿ ಉತ್ಸವ ಸಮಿತಿ ಪ್ರಕಟಿಸಿರುವ ಎಂ.ವಿ.ಸೀ ಅವರನ್ನು ಮಕ್ಕಳಿಗಾಗಿ ಪರಿಚಯಿಸಿ ಬೇ.ಗೊ. ರಮೇಶ್ ಬರೆದಿರುವ 'ಮಕ್ಕಳ ಎಂ.ವಿ.ಸೀ' ಮತ್ತು ಎಂ.ವಿ.ಸೀ. ಅವರ ಅಪ್ರಕಟಿತ ನಾಟಕವಾದ 'ತಿರುಕಿಯ ಕನಸು' ಎಂಬ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಉಪಸ್ಥಿತರಿದ್ದ ಬೆ. ಗೋ. ರಮೇಶ್ ಅವರು ಎಂ.ವಿ.ಸೀ.ಯವರ ಹಿರಿಯ ವ್ಯಕ್ತಿತ್ವವನ್ನು ನೆನಪಿಸಿಕೊಂಡರು. ಎಂ.ವಿ.ಸೀ.ಯವರ ಪುತ್ರರಾದ ಎಂ.ಎಸ್. ಭಾಸ್ಕರ್, ಎಸ್. ಟಿ. ರಾಧಾಕೃಷ್ಣ ಪ್ರಥಮ ಪ್ರತಿಗಳನ್ನು ಸ್ವೀಕರಿಸಿದರು.

ಕನ್ನಡ ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಬಿ.ಟಿ. ಮುನಿರಾಜಯ್ಯ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಇಲಾಖೆಯ ವತಿಯಿಂದ ಅಗತ್ಯವಾದ ಎಲ್ಲ ನೆರವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಒದಗಿಸಲಾಗುವುದು ಎಂದರು. ಕವಿಗಳ ಹೆಸರಿನ ಪ್ರತಿಷ್ಠಾನಗಳಿಗೆ ಸರ್ಕಾರ ನೀಡುತ್ತಿರುವಷ್ಟೇ ಮೊತ್ತವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೂ ಮಂಜೂರು ಮಾಡಲು ಪ್ರಯತ್ನಿಸಲಾಗುವುದು ಎಂದರು. ಇಲಾಖೆ ಸಿದ್ಧಪಡಿಸುತ್ತಿರುವ ಎಂ.ವಿ.ಸೀ. ಸಮಗ್ರ ಸಂಪುಟಗಳನ್ನು ಶೀಘ್ರವಾಗಿ ಬಿಡುಗಡೆ ಮಾಡಲಾಗುವುದೆಂದರು.

ಉತ್ಸವ ಸಮಿತಿಯ ಗೌರವಾಧ್ಯಕ್ಷರಾದ ನಾಡಿನ ಹಿರಿಯ ವಿದ್ವಾಂಸರಾದ ನಾಡೋಜ ಜಿ. ವೆಂಕಟಸುಬ್ಬಯ್ಯ ಅವರ ಅಧ್ಯಕ್ಷತೆಯಲ್ಲಿ ಇಡೀ ಕಾರ್ಯಕ್ರಮ ನಡೆಯಿತು. ೯೮ ವರ್ಷದ ಈ ಯುವಕರು ಅತ್ಯುತ್ಸಾಹದಿಂದ ಎಂ.ವೀ.ಸಿಯವರ ನೆನಪುಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ಈ ವರ್ಷ ಬೆಂಗಳೂರಿನಲ್ಲೇ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಕನ್ನಡಿಗರು ಇವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡದೆ ಹೋದರೆ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸಾಹಿತ್ಯ ಲೋಕದ ಇತಿಹಾಸದಲ್ಲಿ ಒಂದು ಕಪ್ಪು ಚುಕ್ಕೆಯಾಗಿ ಉಳಿದು ಬಿಡುತ್ತದೆ. ಎಂದು ನಿರೂಪಕರು ಸೂಚಿಸಿದಾಗ ತುಂಬಿದ ಸಭೆ ಕರತಾಡನದ ಮೂಲಕ ಬೆಂಬಲ ಸೂಚಿಸಿತು.

ಇದು ಎಂ.ವಿ.ಸೀ. ಶತಮಾನೋತ್ಸವ ಸಮಿತಿಯು ಕಳೆದ ವರ್ಷ ಆರಂಭಿಸಿದ್ದ 'ಎಂ.ವಿ.ಸೀ. ಶತಮಾನೋತ್ಸವ – ಹಸ್ತಪ್ರತಿ ಅಧ್ಯಯನ ವರ್ಷ' ಅಭಿಯಾನದ ಸಮಾರೋಪ ಸಮಾರಂಭವಾಗಿರುತ್ತದೆ. ಪ್ರತಿಷ್ಠಾನ ನಡೆಸುತ್ತಿರುವ ಎಂ.ವಿ.ಸೀ.ಯವರ ಕಾರ್ಯಕ್ಷೇತ್ರವಾದ ಹಸ್ತಪ್ರತಿಗಳ ಬಗೆಗಿನ ಈ ವಿಚಾರಗೋಷ್ಠಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ಈ ಮೂಲಕ ಮತ್ತು ಎಂ.ವಿ.ಸೀ ಗೀತಗಾಯನ : ಶತಮಾನೋತ್ಸವ ಯೋಜನೆ ಪೂರ್ಣವಾಗುತ್ತದೆ. ಎಂದು ವಂದನಾರ್ಪಣೆ ಮಾಡಿದ ಡಾ. ವಿಜಯಾಸುಬ್ಬರಾಜ್ ತಿಳಿಸಿದರು.

ನಾಟಕ ಪ್ರದರ್ಶನ : ಇಂದು ಬಿಡುಗಡೆಯಾಗುತ್ತಿರುವ 'ತಿರುಕಿಯ ಕನಸು' ನಾಟಕದ ಪ್ರಥಮ ಪ್ರಯೋಗವನ್ನು ಸಂಜೆ ಸವಿಕಲಾನಿಕೇತನದ ಶ್ರೀ ಸವಿರಾಜು ಅವರ ನಿರ್ದೇಶನದಲ್ಲಿ ಅವರ ತಂಡದ ಕಲಾವಿದರಿಂದ ಅಭಿನಯಿಸಲಾಯಿತು. ಈ ನಾಟಕ ಪ್ರದರ್ಶನಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಪ್ರಾಯೋಜನೆಯನ್ನು ನೀಡಿತ್ತು.

ಸಮಾರಂಭದಲ್ಲಿ ವಿದುಷಿ ಸುಕನ್ಯ ವಿಜಯಕುಮಾರ್ ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ, ಶ್ರೀಮತಿ ಮಂಜುಳ ಅವರುಗಳು ಎಂ.ವಿ.ಸೀ. ಗೀತೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ನಾಡಿನ ಬೇರೆ ಬೇರೆ ಭಾಗಗಳಿಂದ ಗಣ್ಯಸಾಹಿತಿಗಳು, ವಿದ್ವಾಂಸರು, ಹಸ್ತಪ್ರತಿ ತಜ್ಞರು ಭಾಗವಹಿಸಿದ್ದರು. ತಲಕಾಡಿನ ಚಿಲುಕವಾಡಿಯ, ಕುಮಾರ ನಿಜಗುಣ ಸ್ವಾಮಿಗಳು. ಹಸ್ತಪ್ರತಿತಜ್ಞರಾದ ಪ್ರೊ. ಸಿ. ಮಹದೇವಪ್ಪ – ಬೆಂಗಳೂರು, ಡಾ. ಜಿ. ಜಿ. ಮಂಜುನಾಥ್ – ಮೈಸೂರು, ಡಾ. ಬಿ. ನಂಜುಂಡಸ್ವಾಮಿ – ತುಮಕೂರು, ಡಾ. ಚನ್ನವೀರಪ್ಪ – ಕ.ವಿ.ವಿ.ಹಂಪಿ, ಡಾ. ಎಫ್.ಟಿ. ಹಳ್ಳಿಕೇರಿ – ಕ.ವಿ.ವಿ.ಹಂಪಿ, ಶ್ರೀ ರವೀಂದ್ರನಾಥ್ – ಕ.ವಿ.ವಿ.ಹಂಪಿ, ಡಾ. ವಿಘ್ನರಾಜ್– ಧರ್ಮಸ್ಥಳ, ಪ್ರೊ. ಡಿ. ಲಿಂಗಯ್ಯ – ಬೆಂಗಳೂರು, ಡಾ. ಎಂ.ಎಲ್. ಲಲಿತಮ್ಮ – ಬೆಂಗಳೂರು, ಡಾ. ವೆಂಕಟೇಶ ಜೋಯಿಸ್–ಕುವೆಂಪು ವಿ.ವಿ, ಶಿವಮೊಗ್ಗ, ಡಾ. ದೇವರಕೊಂಡಾರೆಡ್ಡಿ – ಬೆಂಗಳೂರು, ಪ್ರೊ. ಎಸ್.ಬಿ. ಚಂದ್ರಮೋಹನ್ – ಬೆಂಗಳೂರು, ಡಾ. ಜಿ.ಬಿ. ಹರೀಶ್ – ತುಮಕೂರು ವಿ. ವಿ. ಪ್ರೊ. ಜಿ. ಅಶ್ವತ್ಥನಾರಾಯಣ – ಬೆಂಗಳೂರು, ಡಾ. ಆರ್. ಲಕ್ಷ್ಮೀನಾರಾಯಣ್ – ಬೆಂಗಳೂರು, ಡಾ. ಕೆ.ಆರ್. ಗಣೇಶ್ – ಬೆಂಗಳೂರು, ಡಾ. ವಿಜಯಾ ಸುಬ್ಬರಾಜ್ – ಬೆಂಗಳೂರು, ಡಾ.ಪಿ.ವಿ.ಕೃಷ್ಣಮೂರ್ತಿ – ಬೆಂಗಳೂರು, ಡಾ. ಎಚ್.ಎಸ್. ಗೋಪಾಲರಾವ್ – ಬೆಂಗಳೂರು, ಪ್ರೊ. ರಾಮರಾವ್ ಕುಲಕರ್ಣಿ – ಬೆಂಗಳೂರು, ಪ್ರೊ. ಎಚ್.ವಿ. ಶ್ರೀನಿವಾಸಶರ್ಮ – ಬೆಂಗಳೂರು, ಡಾ. ಸಿ.ಯು. ಮಂಜುನಾಥ್ – ಬೆಂಗಳೂರು, ಡಾ. ಮಂಗಳಾ ಪ್ರಿಯದರ್ಶಿನಿ – ಬೆಂಗಳೂರು, ಡಾ. ಎಸ್.ವಿ. ಪ್ರಭಾವತಿ – ಬೆಂಗಳೂರು, ಡಾ. ಕಂಟನಕುಂಟೆ ರಂಗನಾಥ್ – ಬೆಂಗಳೂರು, ಶ್ರೀ ಜಯಸಿಂಹ – ಬೆಂಗಳೂರು ಮುಂತಾದವರು ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿದ್ದರು.

ಪ್ರಾಚೀನ ಹಸ್ತಪ್ರತಿ ಮತ್ತು ಎಂ.ವಿ.ಸೀ. ಪುಸ್ತಕ ಚಿತ್ರಗಳ ಪ್ರದರ್ಶನ : ಸಮಾರಂಭದಲ್ಲಿ ಕಲಾಕ್ಷೇತ್ರದ ಆವರಣದಲ್ಲಿ ಪ್ರಾಚೀನ ಹಸ್ತಪ್ರತಿಗಳ ಪ್ರದರ್ಶನವನ್ನು ವ್ಯವಸ್ಥೆ ಮಾಡಲಾಗಿತ್ತು. ಸಭಿಕರು ನೋಡಿ ತಿಳಿದು ಮೆಚ್ಚುಗೆ ವ್ಯಕ್ತಪಡಿಸಿದರು ಶ್ರೀ ವಿ.ಎಸ್. ಮೂರ್ತಿ, ಧೀರೇಂದ್ರ, ನಿರಂಜನ, ವೆಂಕಟೇಶ್. ಅವರುಗಳು ಇದರ ಜವಾಬ್ದಾರಿವಹಿಸಿ ನೋಡುಗರಿಗೆ ಅಗತ್ಯಮಾಹಿತಿಗಳನ್ನು ನೀಡಿದರು. ಇದೊಂದು ಅಪರೂಪದ ಪ್ರದರ್ಶನವೆಂದೂ ನೋಡುವ ಅವಕಾಶ ಲಭಿಸಿದ್ದು ನಮ್ಮ ಜೀವಮಾನದ ವಿಶೇಷ ಅನುಭವವೆಂದೂ ಸಭಿಕರು ಮನಸಾರೆ ಅಭಿನಂದಿಸಿದರು.

ಎಂ.ವಿ.ಸೀ. ಅವರ ಪುಸ್ತಕಗಳ ಪ್ರದರ್ಶನವನ್ನೂ ಚಿತ್ರಕಲೆಗಳ ಪ್ರದರ್ಶನವನ್ನೂ ಪತ್ರಿಕಾವರದಿಗಳ ಪ್ರದರ್ಶನವನ್ನು ಮಾಡಲಾಗಿತ್ತು. ಶ್ರೀವಾದಿರಾಜ್, ಶ್ರೀಗಂಗಾಧರ್, ಡಾ. ಶ್ಯಾಮಲಾರತ್ನಕುಮಾರಿ, ಶ್ರೀ ಗುರುಪ್ರಸಾದ್ ಅವರುಗಳು ಇದರ ಜವಾಬ್ದಾರಿ ವಹಿಸಿದ್ದರು.

ಇಡೀದಿನ ಪ್ರತಿಷ್ಠಾನದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯೂ ಇತ್ತು. ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದವರಲ್ಲಿ ನೂರಕ್ಕೂ ಹೆಚ್ಚು ಜನ ಕಾಲೇಜು ಕನ್ನಡ ಅಧ್ಯಾಪಕರು ಮತ್ತು ಬೆಂಗಳೂರು ವಿ.ವಿ.ಯ ಸ್ನಾತಕೋತ್ತರ ಕೇಂದ್ರಗಳ ಕನ್ನಡ ಎಂ.ಎ ವಿದ್ಯಾರ್ಥಿಗಳು ಹಾಗೂ ಬೆಂಗಳೂರಿನ ವಿವಿಧ ಕಾಲೇಜುಗಳ ಐಚ್ಛಿಕಕನ್ನಡ ವಿದ್ಯಾರ್ಥಿಗಳು ಮತ್ತು ಶೇಷಾದ್ರಿಪುರಂ ಕಾಲೇಜಿನ ವಿದ್ಯಾರ್ಥಿಗಳು ಇದ್ದರು. ಎಲ್ಲರಿಗೂ ಪ್ರಮಾಣಪತ್ರ, ಪೆನ್ನು, ಫೈಲು ಮತ್ತು ಎಂ.ವಿ.ಸೀ. ಅವರ 'ಮಾದನ ಮಗಳು' ಪುಸ್ತಕವನ್ನು ವಿತರಿಸಲಾಯಿತು. ಕಲಾಕ್ಷೇತ್ರ ಇಡೀ ದಿನ ಕಿಕ್ಕಿರಿದು ತುಂಬಿದ್ದು ಅತಿಥಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು.

೪೨. ೧೫-೯-೨೦೧೦ರ ಬುಧವಾರ ಮೈಕೋ ಕನ್ನಡ ಬಳಗ ಬೆಂಗಳೂರು-೩೦ ಮತ್ತು ಎಂ.ವಿ.ಸೀ. ಶತಮಾನೋತ್ಸವ ಸಮಿತಿ, ಬೆಂಗಳೂರು-೧೯ ಒಟ್ಟಾಗಿ ಎಂ.ವಿ.ಸೀ. ಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ನಡೆಸಿತ್ತು. ಸ್ಥಳ ಮೈಕೊ ಕನ್ನಡ ಭವನ. ಉಪನ್ಯಾಸ ಡಾ. ನಾ. ಗೀತಾಚಾರ್ಯ. ಅಧ್ಯಕ್ಷತೆ : ಶ್ರೀ ಟಿ. ನಾಗರಾಜ್. ಪ್ರಾಸ್ತಾವಿಕ ಭಾಷಣ : ಶ್ರೀ ಎಸ್. ಮಂಜುನಾಥ್ ಪ್ರಧಾನ ಕಾರ್ಯದರ್ಶಿ.

೪೩. ೧೭-೯-೨೦೧೦ರಂದು ಕರ್ನಾಟಕ ರೆಡ್ಡಿಜನ ಸಂಘ (ರಿ) ಕೋರಮಂಗಲ, ಬೆಂಗಳೂರು-೩೪ ಇವರ ಪದವಿ ಪೂರ್ವ ಮತ್ತು ಪ್ರಥಮ ದರ್ಜೆ ಕಾಲೇಜು ವಿಚಾರ ಸಂಕೀರಣ ಡಾ. ನಾ. ಗೀತಾಚಾರ್ಯರವರಿಂದ ಪ್ರಾಚೀನ ಹಸ್ತಪ್ರತಿಗಳು ಮತ್ತು ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮವನ್ನು ತೃತೀಯ ಬಿ.ಕಾಂ. ತರಗತಿ ಕೊಠಡಿ ಸಂಖ್ಯೆ-೧೦೪ ಪ್ರಾಚೀನ ಹಸ್ತಪ್ರತಿ ಮತ್ತು ಎಂ.ವಿ.ಸೀ. ಅವರ ಪುಸ್ತಕಗಳ ಪ್ರದರ್ಶನ ಆರ್.ಜೆ.ಎಸ್. ಗ್ರಂಥಾಲಯದಲ್ಲಿ ನಡೆಯಿತು.

೪೪. ಕರ್ನಾಟಕ ವಿಶ್ವವಿದ್ಯಾಲಯ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಧಾರವಾಡ ಕರ್ನಾಟಕ ಸಂಘ ಹಾಗೂ ಬಿ.ಎಂ.ಶ್ರೀ ಪ್ರತಿಷ್ಠಾನ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮ ಸಂಘಟಿಸಿತ್ತು. ಸ್ವಾಗತಭಾಷಣ ಡಾ. ಜಿ. ಎಂ.ನಾಗಯ್ಯ ಅವರು ಉದ್ಘಾಟನೆ. ಭಾಷಣ ಪ್ರೊ. ಡಿ. ಲಿಂಗಯ್ಯನವರು ಮಾಡಿದರು. ಉಪನ್ಯಾಸ ಕಾರ್ಯಕ್ರಮಗಳನ್ನು ಶ್ರೀ ಎಸ್.ವಿ. ಶ್ರೀನಿವಾಸರಾವ್, ಡಾ. ನಾ. ಗೀತಾಚಾರ್ಯ, ಅಧ್ಯಕ್ಷ ಭಾಷಣ ಡಾ. ಕೆ. ಆರ್.ದುರ್ಗಾದಾಸ್ ಅವರು ನಡಿಸಿಕೊಟ್ಟರು.

೪೫. ೨೭-೦೯-೨೦೧೦ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಶತಮಾನೋತ್ಸವ ಸಮಿತಿ ಮತ್ತು ಹಿರಿಯಡ್ಕ (ಉಡುಪಿ ಜಿಲ್ಲೆ)ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎಂ.ವಿ.ಸೀ. ಶತಮಾನೋತ್ಸವ ಹಾಗೂ ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮ ನಡೆಸಿದೆವು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರು ಡಾ. ಪಾದೇಕಲ್ಲು ವಿಷ್ಣುಭಟ್ಟ ವಹಿಸಿದ್ದರು. ಹಿರಿಯ ಸಾಹಿತಿ ಶ್ರೀ ಎಸ್.ವಿ. ಶ್ರೀನಿವಾಸರಾವ್

ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ. ಕೆ.ಎಸ್. ಮಧುಸೂದನ ಮತ್ತು ಡಾ. ನಾ. ಗೀತಾಚಾರ್ಯ ಅವರುಗಳು ಎಂ.ವಿ.ಸೀ. ಅವರ ಜೀವನ ಹಾಗೂ ಪ್ರಾಚೀನ ಹಸ್ತಪ್ರತಿಗಳ ಬಗ್ಗೆ ವಿದ್ವತ್‌ಪೂರ್ಣ ಭಾಷಣ ನೀಡಿದರು, ಕನ್ನಡ ವಿಭಾಗದ ಮುಖ್ಯಸ್ಥರು ಸರ್ವರನ್ನು ಸ್ವಾಗತಿಸಿ ಕೊನೆಯಲ್ಲಿ ಎಲ್ಲರನ್ನೂ ವಂದಿಸಿದರು.

೪೬. ೨೭-೦೯-೨೦೧೦ರ ಮಧ್ಯಾಹ್ನ ೨.೦೦ ಗಂಟೆಗೆ ಮಂಗಳೂರಿನ ಸೈಂಟ್ ಆ್ಯಗ್ನೆಸ್ ಮಹಿಳಾ ಕಾಲೇಜಿನಲ್ಲಿ ಎಂ.ವಿ.ಸೀ. ಶತಮಾನೋತ್ಸವ ಹಾಗೂ ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಭೂಮಿಗೌಡ ಅವರು ಸರ್ವರನ್ನೂ ಸ್ವಾಗತಿಸಿದರು. ಪ್ರೊ. ಸಂಪೂರ್ಣಯ್ಯ ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರೊ. ಕೆ.ಎಸ್. ಮಧುಸೂದನ, ಶ್ರೀ ಎಸ್.ವಿ. ಶ್ರೀನಿವಾಸರಾವ್, ಡಾ. ನಾ. ಗೀತಾಚಾರ್ಯ ಅವರು ಎಂ.ವಿ.ಸೀ. ಅವರ ಕೊಡುಗೆ, ಪ್ರತಿಷ್ಠಾನದ ಬಗ್ಗೆ ಮಾಹಿತಿ, ಹಾಗೂ ಪ್ರಾಚೀನ ಹಸ್ತಪ್ರತಿಗಳ ಸಂರಕ್ಷಣೆ, ಸಂಪಾದನೆ ಬಗ್ಗೆ ಮೌಲಿಕ ಭಾಷಣಗಳನ್ನು ಮಾಡಿದರು.

೪೭. ೧೧-೨-೨೦೧೧ ಮುಂಜಾನೆ ೧೧-೦೦ ಗಂಟೆಗೆ : ಕರ್ನಾಟಕ ವಿಶ್ವವಿದ್ಯಾಲಯ, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನಪೀಠ, ಕರ್ನಾಟಕ ಸಂಘ ಹಾಗೂ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಗಳು ಸಂಯುಕ್ತವಾಗಿ ಆಯೋಜಿಸಿದ್ದ **ಎಂ.ವಿ.ಸೀತಾರಾಮಯ್ಯ ಶತಮಾನೋತ್ಸವ ಕಾರ್ಯಕ್ರಮದ** ಅಂಗವಾಗಿ 'ವಿಚಾರಗೋಷ್ಠಿ' ನಡೆದವು.

ಪ್ರೊ. ಡಿ. ಲಿಂಗಯ್ಯ ವಿಚಾರಗೋಷ್ಠಿಯ ಉದ್ಘಾಟನೆ ನಡೆಸಿದರು. **'ಎಂ.ವಿ.ಸೀ. ಅವರ ಜೀವನ ಮತ್ತು ಸಾಹಿತ್ಯ'** ಕುರಿತು ಶ್ರೀ ಎಸ್. ವಿ. ಶ್ರೀನಿವಾಸರಾವ್ ಭಾಷಣ ಮಾಡಿದರು. **'ಎಂ.ವಿ.ಸೀ. ಮತ್ತು ಪ್ರಾಚೀನ ಕನ್ನಡ ಹಸ್ತಪ್ರತಿ'** ಕುರಿತು ಡಾ॥ ನಾ. ಗೀತಾಚಾರ್ಯ, **'ಹಸ್ತಪ್ರತಿಗಳ ಕಂಪ್ಯೂಟರೀಕರಣ'** ಯೋಜನೆ ಕುರಿತು ಡಾ. ಮಧು ವೆಂಕಾರೆಡ್ಡಿ, (ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ) ಮಾತನಾಡಿ ಮೌಲಿಕ ವಿವರಗಳನ್ನು ತಿಳಿಸಿದರು. ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರಾದ ಡಾ. ಕೆ. ಆರ್. ದುರ್ಗದಾಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಲಕ್ಷ್ಮೀಕಾಂತ ಎಸ್. ಹೂಗಾರ್, ಶ್ರೀ ದೇವಿನಾಪ್ಪಿ ; ಡಾ. ಜೆ. ಎಂ. ನಾಗಯ್ಯ ಉಪಸ್ಥಿತರಿದ್ದರು.

೪೮. ೨೫-೩-೨೦೧೧ ಸಂಜೆ ೬-೦೦ ಗಂಟೆಗೆ ಎಂ.ವಿ.ಸೀ. **ಶತಮಾನೋತ್ಸವದ ಅಂಗವಾಗಿ** ಎಂ.ವಿ.ಸೀ. **ಸಭಾಂಗಣದಲ್ಲಿ** ಎಂ.ವಿ.ಸೀ. **ಪುರಸ್ಕಾರ ಮತ್ತು ಎಂ.ಫಿಲ್, ಪಿಎಚ್.ಡಿ. ಪದವಿ ಪ್ರದಾನ ಸಮಾರಂಭ ಏರ್ಪಡಿಸಲಾಗಿತ್ತು.** ನಾಡೋಜ ಡಾ. ಜಿ. ನಾರಾಯಣ ದೀಪ ಬೆಳಗುವ ಮುಖೇನ ಸಮಾರಂಭ ಉದ್ಘಾಟಿಸಿ ಚಾಲನೆ ನೀಡಿದರು. ಕಾರ್ಯದರ್ಶಿಗಳಾದ ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರು ಮುಖ್ಯ ಅತಿಥಿಗಳ

ಪರಿಚಯ ಮಾಡಿಸಿ, ಎಲ್ಲರನ್ನೂ ಸ್ವಾಗತಿಸಿದರು. ಗಮಕ ವಿದ್ವಾನ್ ಡಾ. ಎ. ವಿ. ಪ್ರಸನ್ನ ಅವರು ಎಂ.ಫಿಲ್ ಮತ್ತು ಪಿಎಚ್.ಡಿ. ಪದವೀಧರರಿಗೆ ಪ್ರಶಸ್ತಿಪತ್ರ ಪ್ರದಾನಮಾಡಿ ಅವರಿಗೆ ಶುಭ ಹಾರೈಸಿದರು. ಖ್ಯಾತ ಸಾಹಿತಿ ಹಾಗೂ ಹಿರಿಯ ಚಿಂತಕರಾದ **ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ** ಶಾಲು ಹೊದಿಸಿ ಎಂ.ವಿ.ಸೀ. ಪುರಸ್ಕಾರ ಫಲಕ ಪ್ರದಾನ ಮತ್ತು ನಗದು ಹತ್ತು ಸಾವಿರ ರೂಪಾಯಿಗಳನ್ನು, ನಾಡೋಜ ಜಿ. ನಾರಾಯಣ ಅವರು ಪ್ರದಾನ ಮಾಡಿ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳು ಪ್ರತಿಷ್ಠಾನದ ಪ್ರಾರಂಭದಿಂದಲೂ ನಿಕಟ ಸಂಪರ್ಕ ಇರಿಸಿಕೊಂಡಿದ್ದು ಪ್ರತಿಷ್ಠಾನದ ಚಟುವಟಿಕೆಗೆ ನಿರಂತರ ದುಡಿದಿದ್ದಾರೆಂದು ಶ್ಲಾಘಿಸಿದರು. ಎಲ್ಲ ಹಿರಿಯ ಸಾಹಿತಿಗಳೊಡನೆ ನಿಕಟ ಸಂಪರ್ಕ ಹೊಂದಿದ್ದಾರೆಂದು ತಿಳಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ನಾಡಗೀತೆ ಹಾಡಿ, ಉದ್ಘಾಟನೆ ಸಮಯದಲ್ಲಿ 'ಹಚ್ಚೇವು ಕನ್ನಡದದೀಪ' ಹಾಡಿದರು. ಎಂ.ವಿ.ಸೀ. ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ವಿಜಯ ಸುಬ್ಬರಾಜ್ ಎಂಫಿಲ್, ಪಿ.ಎಚ್‌ಡಿ. ಪದವಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿದ ವಿದ್ವಾಂಸರ ಕೊಡುಗೆಯನ್ನು ಪ್ರಶಂಸಿಸಿದರು. ಪದವಿ ಸ್ವೀಕರಿಸಿದ ವಿದ್ಯಾರ್ಥಿಗಳ ಪರವಾಗಿ ಎನ್. ಮಂಜುನಾಥ್, ಅನ್ನಪೂರ್ಣ, ಬಸವರಾಜಪ್ಪ ಅವರುಗಳು ಮಾತನಾಡಿ ಮಾರ್ಗದರ್ಶಕರ ನೆರವನ್ನು ಕೊಂಡಾಡಿ ಪ್ರತಿಷ್ಠಾನಕ್ಕೆ ಕೃತಜ್ಞತೆ ಸಲ್ಲಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಡಿ. ಲಿಂಗಯ್ಯ ಅವರು ಅಧ್ಯಕ್ಷ ಭಾಷಣ ಮಾಡಿ ಪದವಿ ಪುರಸ್ಕೃತರಿಗೆ ಅಭಿನಂದನೆ ಸಲ್ಲಿಸಿ ಅವರ ಭವಿಷ್ಯ ಉಜ್ವಲವಾಗಲೆಂದು ಶುಭಾಶಯ ಕೋರಿದರು. ಕಾರ್ಯಕ್ರಮವನ್ನು ಪ್ರಾರಂಭದಿಂದ ಕೊನೆಯವರೆಗೆ ಡಾ. ನಾ. ಗೀತಾಚಾರ್ಯ ನಿರೂಪಿಸಿದರು.

ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಅಧ್ಯಯನ ಸಮಾವೇಶ

೪೯. ೨೬-೩-೧೧ ಶನಿವಾರ ಬೆಳಗ್ಗೆ ೧೦-೦೦ ರಿಂದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಡಾ. ಹಾ.ಮಾ.ನಾ. ಸಂಶೋಧನ ಕೇಂದ್ರ ಮತ್ತು ಕನ್ನಡ ವಿಭಾಗ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಮಹಾವಿದ್ಯಾಲಯ ಉಜಿರೆ ಸಂಯುಕ್ತವಾಗಿ ಎಂ.ವಿ.ಸೀ. ಶತಮಾನೋತ್ಸವ-ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶವನ್ನು ನಡೆಸಲಾಯಿತು.

ಶ್ರೀ ಸಿದ್ಧವನ ಗುರುಕುಲ ಉಜಿರೆಯಲ್ಲಿ ನಡೆದ ಈ ಸಮಾವೇಶದ ಉದ್ಘಾಟನೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಅನುಪಸ್ಥಿತಿಯಲ್ಲಿ ಸರ್ವಾಧ್ಯಕ್ಷರಾದ ಪ್ರೊ. ಬಿ. ಎಸ್. ಸಣ್ಣಯ್ಯ ಮತ್ತು ಎಸ್.ಡಿ.ಎಂ. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಯಶೋವರ್ಮರವರು ದೀಪಬೆಳಗುವ ಮುಖೇನ ಉದ್ಘಾಟಿಸಿದರು. ಡಾ. ನಾ. ಗೀತಾಚಾರ್ಯ ಪ್ರಾಸ್ತಾವಿಕ ಮಾತುಗಳನ್ನಾಡಿ ಈ ಸಮಾವೇಶದ ಉದ್ದೇಶವನ್ನು ತಿಳಿಸಿದರು. ಶ್ರೀ ಎಸ್. ಪಿ. ಶ್ರೀನಿವಾಸರಾವ್ ಸರ್ವರನ್ನೂ ಸ್ವಾಗತಿಸಿದರು. ಅತಿಥಿಗಳಿಗೆ ಶ್ರೀ ದಿವ ಕೊಕ್ಕಡ ಹೂಗುಚ್ಛ ನೀಡಿದರು. ಡಾ. ಬಿ. ಪಿ. ಸಂಪತ್‌ಕುಮಾರ್

ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಬಿ. ಎಸ್. ಸಣ್ಣಯ್ಯ ಅವರು ಮಾತನಾಡಿ ಈ ಸಮಾವೇಶದ ಮಹತ್ವವನ್ನು ನಿರೂಪಿಸಿದರು. 'ಸಿರಿಕಂಟ' ವಿಶೇಷ ಸಂಪುಟದ ಸಂಪಾದಕರಾದ ಪ್ರೊ. ಎಸ್. ಬಸವಾರಾಧ್ಯ ಅವರು ಈ ಸಂಕಲನದಲ್ಲಿನ ವಿಶೇಷ ಲೇಖನಗಳ ಮೇಲೆ ಬೆಳಕು ಚೆಲ್ಲಿದರು. ಹಸ್ತಪ್ರತಿಶಾಸ್ತ್ರ ಹಾಗೂ ಅದರ ಮಹತ್ವದ ಬಗ್ಗೆ ಮಾತನಾಡಿ ಈ ಗ್ರಂಥ ಈ ಬಗ್ಗೆ ಮಾಹಿತಿ ನೀಡುವ ವಿಶೇಷ ಮೌಲಿಕ ಗ್ರಂಥವಾಗಿದೆ ಎಂದು ಹೇಳಿದರು. ಡಾ|| ಎಸ್. ಡಿ. ಶೆಟ್ಟಿ ಅವರು ವಂದನಾರ್ಪಣೆ ಮಾಡಿದರು.

ಈ ಉದ್ಘಾಟನಾ ಸಮಾರಂಭದ ನಂತರ ಗೋಷ್ಠಿ ಕಾರ್ಯಕ್ರಮಗಳು ಸುಮಾರು ೧೨ ಗಂಟೆಗೆ ಪ್ರಾರಂಭಗೊಂಡವು. ಈ ಗೋಷ್ಠಿಗಳ ಪ್ರಾರಂಭದಲ್ಲಿ ಡಾ. ನಾ. ಗೀತಾಚಾರ್ಯ ಅವರು ಈ ಗೋಷ್ಠಿಗಳಲ್ಲಿ ಮಂಡಿತವಾಗಲಿರುವ ಪ್ರಬಂಧಗಳ ಪ್ರಾಮುಖ್ಯತೆಯನ್ನು ಹೇಳಿ ಈ ಎಲ್ಲಾ ಗೋಷ್ಠಿಗಳಲ್ಲಿ ಮಂಡಿತವಾಗಲಿರುವ ಟಿಪ್ಪಣಿಗಳನ್ನು ಮುಂದಿನ ಹಸ್ತಪ್ರತಿ ಸಮಾವೇಶದಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದೆಂದೂ ಆದ್ದರಿಂದ ಈ ಟಿಪ್ಪಣಿ ರೂಪದಲ್ಲಿ ಮಂಡಿತವಾಗಲಿರುವ ಪ್ರಬಂಧಗಳನ್ನು ವಿಸ್ತೃತವಾಗಿ ಬರೆದು ಪ್ರತಿಷ್ಠಾನಕ್ಕೆ ಕಳುಹಿಸಿಕೊಡಬೇಕೆಂದು ತಿಳಿಸಿದರು.

ಮೊದಲನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ಖ್ಯಾತ ಹಸ್ತಪ್ರತಿ ತಜ್ಞೆ **ಡಾ. ವೈ. ಸಿ. ಭಾನುಮತಿ** ವಹಿಸಿದ್ದರು. ಈ ಗೋಷ್ಠಿಯಲ್ಲಿ ಶ್ರೀ ವೇಮಗಲ್ ಮೂರ್ತಿ, ಡಾ. ಕೆ. ನರ್ಮದಾಂಬ; ಡಾ. ಶ್ಯಾಮಲಾರತ್ನಕುಮಾರಿ, ಡಾ. ಜಿ. ಕೆ. ದೇವರಾಜಸ್ವಾಮಿ ; ಡಾ. ನಾ. ಗೀತಾಚಾರ್ಯ ಅವರು ಬರೆದಿರುವ ಪ್ರಬಂಧದ ಬಗ್ಗೆ ಟಿಪ್ಪಣಿ ಮಂಡಿಸಿದರು. ಕೊನೆಯಲ್ಲಿ ಡಾ. ವೈ. ಸಿ. ಭಾನುಮತಿಯವರೂ ಒಂದು ಪ್ರಬಂಧ ಮಂಡಿಸಿ, ಅಧ್ಯಕ್ಷೀಯ ಭಾಷಣದಲ್ಲಿ ಎಲ್ಲಾ ಟಿಪ್ಪಣಿಗಳ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿದರು.

೨ನೇ ಗೋಷ್ಠಿಯ ಅಧ್ಯಕ್ಷತೆಯನ್ನು, ಡಾ. ಕೆ. ಎಸ್. ಎನ್. ಉಡುಪ ವಹಿಸಿದ್ದರು. ಈ ಗೋಷ್ಠಿಯಲ್ಲಿ ಡಾ. ಕೆ.ವಿ. ಪದ್ಮನಾಭ, ಶ್ರೀ ಪ್ರವೀಣಕುಮಾರ್, ಶ್ರೀಮತಿ ಉಮಾರಾಣಿ, ವಿ. ಸಂಧ್ಯಾ, ಗಂಗಾಂಬಿಕೆ. ಮತ್ತು ಸೈಯದ್ ಮೊಯಿನ್ ತಮ್ಮ ಪ್ರಬಂಧಗಳಿಗೆ ಸಂಬಂಧಿಸಿದಂತೆ ಟಿಪ್ಪಣಿ ಮಂಡಿಸಿದರು. ಸು. ಪ. ಗೋವರ್ಧನ್, ನಿರೂಪಿಸಿದರು.

೩ನೇ ಗೋಷ್ಠಿ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರಲ್ಲಿ ಡಾ. ಪಿ. ವಿ. ಕೃಷ್ಣಮೂರ್ತಿ. ಡಾ. ಬಿ. ರಾಜಶೇಖರಪ್ಪ, ನಂಜುಂಡಸ್ವಾಮಿ ಮುಂತಾದವರು ಟಿಪ್ಪಣಿ ಮಂಡಿಸಿದರು. ವಿ. ಸೋಮಶೇಖರ್ ನಿರೂಪಣೆ ಮಾಡಿದರು.

ಈ ಮೂರು ಗೋಷ್ಠಿಗಳು ಮುಗಿದ ನಂತರ ಸರ್ವಾಧ್ಯಕ್ಷ ಪ್ರೊ. ಬಿ. ಎಸ್. ಸಣ್ಣಯ್ಯ ಅವರಿಗೆ ಗೌರವಾರ್ಪಣೆಯು ಅಧ್ಯಕ್ಷ ಡಾ. ಬಿ. ಯಶೋವರ್ಮ. ಪ್ರೊ. ಬಸವಾರಾಧ್ಯ. ಶ್ರೀ ಎಸ್. ವಿ. ಶ್ರೀನಿವಾಸರಾವ್ ಅವರ ಸಮ್ಮುಖದಲ್ಲಿ ನಡೆಯಿತು. ಎಸ್.ಡಿ.ಎಂ. ಕಾಲೇಜಿನ ಪ್ರಾಂಶುಪಾಲರು ಡಾ. ಬಿ. ಯಶೋವರ್ಮ ಮತ್ತು ಶ್ರೀ

ಎಸ್. ವಿ. ಶ್ರೀನಿವಾಸರಾವ್ ಅವರು ಸರ್ವಾಧ್ಯಕ್ಷರಿಗೆ ಶಾಲು ಹೊದಿಸಿ, ಫಲಕ ನೀಡಿ ಗೌರವಾರ್ಪಣೆ ಮಾಡಿದರು. ಅನಂತರ ದೀರ್ಘವಾಗಿ ಮಾತನಾಡಿದ ಪ್ರೊ. ಬಿ. ಎಸ್. ಸಣ್ಣಯ್ಯ ಹಸ್ತಪ್ರತಿಗಳ ಪ್ರಾಮುಖ್ಯತೆ, ಸಂರಕ್ಷಣೆ, ಸಂಪಾದನೆಯ ಬಗ್ಗೆ ಮಾಹಿತಿ ನೀಡಿ ತಮ್ಮ ಅಪಾರ ಅನುಭವವನ್ನು ಎಲ್ಲರಿಗೂ ಪರಿಚಯಿಸಿದರು. ಪ್ರೊ. ಎನ್. ಬಸವಾರಾಧ್ಯ ಸಹ ಈ ಬಗ್ಗೆ ತಮ್ಮ ಅನುಭವದ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ಬಗ್ಗೆ ಮೌಲಿಕ ಮಾಹಿತಿಯನ್ನು ನೀಡಿ ಅವುಗಳ ಸಂಪಾದನೆಯಲ್ಲಿ ಅನುಸರಿಸಬೇಕಾದ ನೀತಿ ನಿಯಮಗಳನ್ನು ವಿವರಿಸಿದರು. ಡಾ. ಬಿ. ಯಶೋವರ್ಮ ಈ ಸಮಾವೇಶವನ್ನು ಉಜಿರೆಯಲ್ಲಿ ನಡೆಸಿದ ಬಗ್ಗೆ ಪ್ರತಿಷ್ಠಾನಕ್ಕೆ ಅಭಿಮಾನಪೂರ್ವಕ ಮೆಚ್ಚಿಗೆ ವ್ಯಕ್ತಪಡಿಸಿದರು. ಡಾ. ನಾ. ಗೀತಾಚಾರ್ಯ ಅವರು ಮಾತನಾಡಿ ಈ ಸಮಾವೇಶವನ್ನು ಬಹಳ ಅಚ್ಚುಕಟ್ಟಾಗಿ ನಡೆಸಲು ಶ್ರಮಿಸಿರುವ ಉಜಿರೆ ಕಾಲೇಜಿನ ಪ್ರಾಂಶುಪಾಲರು, ಅಧಿಕಾರವರ್ಗ, ಉಪನ್ಯಾಸವರ್ಗ ವಿದ್ಯಾರ್ಥಿಗಳಿಗೆ ಅಭಾರಮನ್ನಣೆ ಸಲ್ಲಿಸಿದರು. ಎಸ್.ವಿ. ಶ್ರೀನಿವಾಸರಾವ್ ಅವರು ಎಲ್ಲಾ ಗೋಷ್ಠಿಯ ಪ್ರಬಂಧ ಮಂಡಿಸಿದ ವಿದ್ವಾಂಸರುಗಳಿಗೆ ಪ್ರತಿಷ್ಠಾನದ ಗ್ರಂಥ ನೀಡಿ ಪುರಸ್ಕರಿಸಿದರು.

–ಡಾ|| ನಾ. ಗೀತಾಚಾರ್ಯ
–ಎಸ್. ವಿ. ಶ್ರೀನಿವಾಸರಾವ್

ಪ್ರತಿವರ್ಷ ಹಸ್ತಪ್ರತಿ ಅಧ್ಯಯನ ಸಮಾವೇಶ

ಮತ್ತು ಈ ಶತಮಾನೋತ್ಸವದ ನೆನಪಿಗಾಗಿ ಪ್ರತಿವರ್ಷ ಹಸ್ತಪ್ರತಿ ಸಮಾವೇಶವನ್ನು ನಡೆಸಲು ಹಸ್ತಪ್ರತಿ ಉಪಸಮಿತಿ ತೀರ್ಮಾನಿಸಿದ್ದು ಕಾರ್ಯಸಮಿತಿ ಅನುಮೋದಿಸಿದೆ. ಪ್ರಥಮ ಸಮಾವೇಶವನ್ನು ಧರ್ಮಸ್ಥಳದಲ್ಲಿ ನಡೆಸಲು ಶ್ರೀಶ್ರೀಗಳು ಆಹ್ವಾನಿಸಿದ್ದು ಸದ್ಯದಲ್ಲೇ ವ್ಯವಸ್ಥೆಯಾಗಲಿದೆ. ಈ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರು ಒಂದೊಂದು ಟಿಪ್ಪಣಿಗಳನ್ನು ಈ ಸಮಾವೇಶದಲ್ಲಿ ಮಂಡಿಸಬಹುದು. ಇದೊಂದು ಮುಕ್ತ ಅಧಿವೇಶನ ಹಸ್ತಪ್ರತಿ ಸಂಬಂಧದ ಯಾವುದೇ ವಿಚಾರವನ್ನು ಮಂಡಿಸಲು ಎಲ್ಲರಿಗೂ ಅವಕಾಶವಿರುತ್ತದೆ. ಆಸಕ್ತರು ತಾವು ಮಂಡಿಸಲಿರುವ ವಿಷಯದ ಸಾರಲೇಖನವನ್ನು ಪ್ರತಿಷ್ಠಾನಕ್ಕೆ ಕಳುಹಿಸಿಕೊಡಲು ಕೋರಿದೆ.

ಎಂ.ವಿ.ಸೀ. ಶತಮಾನೋತ್ಸವ ಸಂಪುಟ

ಎಂ.ವಿ.ಸೀತಾರಾಮಯ್ಯನವರ ಶತಮಾನೋತ್ಸವ ಸಂದರ್ಭದಲ್ಲಿ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರ ಸಂಪಾದಕತ್ವದಲ್ಲಿ ಶತಮಾನೋತ್ಸವ ಸಂಸ್ಮರಣ ಸಂಪುಟವನ್ನು ಹೊರತರಲು ಉತ್ಸವ ಸಮಿತಿ ತೀರ್ಮಾನಿಸಿದ್ದು ಈ ಬಗೆಗಿನ ಪ್ರಯತ್ನಗಳು ನಡೆಯುತ್ತಿವೆ.

ಎಂ.ವಿ.ಸೀತಾರಾಮಯ್ಯನವರನ್ನು ಹತ್ತಿರದಿಂದ ಬಲ್ಲ, ಅವರೊಡನೆ ನಿಕಟವಾದ ಸಂಪರ್ಕವಿಟ್ಟುಕೊಂಡಿದ್ದ, ಅವರೊಡನಾಟದ ಆತ್ಮೀಯವಾದ ನೆನಪುಗಳನ್ನು ಹೊಂದಿರುವವರು ತಮ್ಮ ನೆನಪುಗಳನ್ನು ಸಂಕ್ಷಿಪ್ತವಾಗಿ ಬರೆದು ಕಳುಹಿಸಬೇಕಾಗಿ ಕೋರಿಕೆ. ಸೂಕ್ತ ಕಂಡವುಗಳನ್ನು ಈ ಸಂಪುಟದಲ್ಲಿ ಪ್ರಕಟಿಸಲಾಗುವುದು.

ಎಂ.ವಿ.ಸೀಯವರ ಪತ್ರ, ಮುನ್ನುಡಿ, ವಿಮರ್ಶೆಗಳಿಗೆ ಆಹ್ವಾನ

ಎಂ. ವಿ. ಸೀ. ಶತಮಾನೋತ್ಸವ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟಗಳನ್ನು ಪ್ರಕಟಿಸುತ್ತಿದೆ. ಈಗಾಗಲೆ ವಿವಿಧ ಸಂಪುಟಗಳಿಗೆ ಸಂಪಾದಕರನ್ನು ನಿಯೋಜಿಸಲಾಗಿದೆ. ಎಂ.ವಿ.ಸೀ. ಬಿಡಿ ಬರಹಗಳ ಸಂಪುಟದಲ್ಲಿ ಆರು ಸಂಪುಟಗಳು ಮುದ್ರಣದಲ್ಲಿವೆ.

ಎಂ.ವಿ.ಸೀ.ಯವರು ಬರೆದಿರುವ ಪತ್ರಗಳು, ಮುನ್ನುಡಿಗಳ ವಿಮರ್ಶೆಗಳನ್ನು ಪ್ರಕಟಿಸಲಾಗುತ್ತಿದ್ದು ಇಂತಹ ಅಮೂಲ್ಯ ಬರಹಗಳನ್ನು ಹೊಂದಿರುವವರು ದಯಮಾಡಿ ಪ್ರತಿಷ್ಠಾನದ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರಿಕೆ. ಈ ಸಂಪುಟದಲ್ಲಿ ಸೂಕ್ತ ಕಂಡಂತೆ ಬಳಸಿಕೊಳ್ಳಲಾಗುವುದು ಅಥವ ಪ್ರತಿಷ್ಠಾನ ಇ-ಮೇಲ್ ವಿಳಾಸಕ್ಕೂ ನೇರವಾಗಿ ಕಳುಹಿಸಬಹುದಾಗಿದೆ.

ಇಮೇಲ್: bmsritrust@gmail.com

Website : www.bmsri.org

ಎಂ.ವಿ.ಸೀ ಅವರ ಮುಖ್ಯ ಕೃತಿಗಳು

ಎಂ.ವಿ.ಸೀ. ಅವರು ರಚಿಸಿರುವ ಗ್ರಂಥಗಳ ಸಂಖ್ಯೆ ಸುಮಾರು ೧೦೦, ಲೇಖನಗಳು ನೂರಾರು. ಅವುಗಳಲ್ಲಿ ವೈವಿಧ್ಯ ಇದೆ. ಸೃಜನಶೀಲತೆ ಮತ್ತು ಪಾಂಡಿತ್ಯ ಎರಡೂ ಕ್ಷೇತ್ರಗಳಲ್ಲಿ ಸರಿಸಮ ಎನ್ನಿಸುವಂತಹ ಸಾಹಿತ್ಯ ರಚಿಸಿದ್ದಾರೆ.'ಕವಿರಾಜಮಾರ್ಗ', 'ಪ್ರಾಚೀನ ಕನ್ನಡ ವ್ಯಾಕರಣಗಳು', 'ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ', 'ಅರ್ಚನ' ದಂತಹ ಶ್ರೇಷ್ಠ ಕೃತಿಗಳನ್ನು ಕನ್ನಡಸಾಹಿತ್ಯಕ್ಕೆ ನೀಡಿದ್ದಾರೆ.

ಕವನ ಸಂಗ್ರಹಗಳು : ಪಕ್ಕಿಹಾಡು, ಆ ಚಿತ್ರಗಳು ಮತ್ತು ಇತರ ಕಥನ ಕವನಗಳು; ರಾಗ(ಪ್ರಣಯ ಗೀತೆಗಳು); ಅಶೋಕ ಚಕ್ರ (ದೇಶಭಕ್ತಿ ಕವನಗಳು); ವಿಶ್ವಜ್ಯೋತಿ ಬಾಪು; ರಾಷ್ಟ್ರಪಥ; ರಾಷ್ಟ್ರ ದಿನೋತ್ಸವ ಗೀತೆ; ಮುಗಿಯದ ಮಾಯೆ; ಗೀತಭಾರತಿ; ಹಂಸಪಥ; ಬೀಸಿಬಂದ ಗಾಳಿ; ಮೊದಲಹೆಜ್ಜೆ; ಕಾವ್ಯಾಲಾಪ; [ಪುರಾತನ ನಾವಿಕ; ಸೌಂದರ್ಯ ಲಹರಿ–ಅಪ್ರಕಟಿತ]

ಮಕ್ಕಳ ಸಾಹಿತ್ಯ : ಹೂವಾಡಗಿತ್ತಿ; ಹಾವಾಡಿಗ; ಕೋಡಂಗಿ. ಕವನ ಸಂಗ್ರಹ : ಕೈಕೋಲು, ಕುಮಾರಗೌತಮ (ನಾಟಕ) ಕನ್ನಡದ ಕಥೆ (ಪ್ರಬಂಧ)

ಸಣ್ಣಕಥೆ : ಶಿಲಾಮುಖಿ; ಯೌವನಸುಧೆ; ಮಾರ್ಗದರ್ಶಕ; ರತಿದೇವಿ ಮತ್ತು ಇತರಕಥೆಗಳು; ಕರುಣಾಲಹರಿ; ಬಿಸಿಲು–ಬೆಳದಿಂಗಳು; ಜೀವನ ನಾಟಕ; ಗುಂಡಿನೇಟು ಮತ್ತು ಇತರ ಕಥೆಗಳು; ನಿಲ್ದಾಣಗಳ ನಡುವೆ.

ಕಾದಂಬರಿ : ಭಾಗ್ಯಲಕ್ಷ್ಮಿ; ರಾಬಿನ್‌ಸನ್ ಕ್ರೂಸೊ(ಅನು) ಮಾದನಮಗಳು; ಸೌಭಾಗ್ಯವತಿ; ನಂಜಿನ ಸವಿ. ಸ್ನೇಹದ ಕಾಣಿಕೆ, ತಾಯಿ ಬಯಕೆ; ಕುಂಕುಮಭಾಗ್ಯ; ಜೀವನ ಜೊತೆಗಾತಿ; ಜೂಡಿಲಕ್ಷ್ಮೀ (ಅನು) ಏಳು ಜಪ್ಪಾರಿನ ಮನೆ (ಅನುವಾದ).

· **ಸಾಹಿತ್ಯ ಸಮೀಕ್ಷೆ** : ಹೊಸ ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು, ಕನ್ನಡ ಜೀವನ ಚರಿತ್ರೆ; ಶಾಸ್ತ್ರ ಸಾಹಿತ್ಯ, ಹರಿದಾಸರು ಮತ್ತು ಅನುಭಾವ ಕವಿಗಳು, ಸಾಹಿತ್ಯ ಮತ್ತು ಚಿತ್ರಕಲೆ.

ನಾಟಕ : ಹೂವಿನ ಆಸೆ, ತೆರೆಮರೆಯ ಚಿತ್ರಗಳು, ಸ್ವಯಂವರ, ಕವಿಯ ಹೆಂಡತಿ; ತೊಟ್ಟಿಲು ತೂಗದ ಕೈ; ತಿರುಕನ ಕನಸು; (ಅಪ್ರಕಟಿತ) ಕರುಣೆಯ ಕುರಿ.

ಗ್ರಂಥಸಂಪಾದನೆ : ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ, ಅರ್ಚನ, ಕೀರ್ತನ ಕುಸುಮಾಂಜಲಿ; ಕವಿ ವೆಂಕಣ್ಣನ ಕೃತಿಗಳು; ಸೂತ ಭಾರತ, ಶ್ರೀಕೃಷ್ಣ ಬಾಲಲೀಲೆ, ವೀರ ಅಭಿಮನ್ಯು, ಸರ್ವಜ್ಞನ ವಚನಗಳು.

ಕಾವ್ಯಮೀಮಾಂಸೆ /ವ್ಯಾಕರಣ/ಸಂಪಾದಿತ : ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ, ಕನ್ನಡ ಸಾಹಿತ್ಯದಲ್ಲಿ ಶಾಂತರಸ. ಪ್ರಾಚೀನ ಕನ್ನಡ ವ್ಯಾಕರಣಗಳು. ಚಿನ್ನದ ಬೆಳೆಸು, ಕೌಸ್ತುಭ, ಧೀಮಂತ (ಡಿ.ವಿ.ಜಿ ಸಂಪುಟ)

ಪ್ರಬಂಧಗಳು : ಹಿಡಿಹೂವು, ಮುಗಿಲುಗಳು, ಬಾಳಿನ ಬುತ್ತಿ, ಹಿತಚಿಂತನ, ರಸಿಕತೆ.

ಜೀವನ ಚರಿತ್ರೆ /ವ್ಯಕ್ತಿಚಿತ್ರಗಳು : ಯುಧಿಷ್ಠಿರ, ಕವಿರನ್ನ, ವೈಣಿಕ ವಿದ್ವಾನ್ ಎಲ್. ರಾಜಾರಾವ್, ವಿವೇಕಾನಂದ, ರಾಜರಾಜವರ್ಮ, ಪ್ರತಿಮಾಗ್ರಹ, ಟಿ.ಎಸ್.ವೆಂಕಟಣ್ಣಯ, ಕೆ.ವೆಂಕಟಪ್ಪ, ನಾಡೋಜ ಬಿ.ಎಂ.ಶ್ರೀ.

ಎಂ.ವಿ.ಸೀ. ಜೀವನ ಪಥ

೧೯೧೦	ಜನನ ಸೆಪ್ಟೆಂಬರ್ ೯, ೧೯೧೦. (ತಂದೆ ವೆಂಕಟದಾಸಪ್ಪ, ತಾಯಿ ಸಾವಿತ್ರಮ್ಮ)
೧೯೧೦-೨೬	ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ಶಿಕ್ಷಣ ಮೈಸೂರಿನಲ್ಲಿ.
೧೯೨೦	ಮೃದಂಗ ಅಭ್ಯಾಸ ಪ್ರಾರಂಭ. ಎಲ್ ರಾಜಾರಾಯರೊಂದಿಗೆ ಮುಂದಿನ ಅಭ್ಯಾಸ.
೧೯೨೧	ಚಾಮರಾಜ ಚಿತ್ರಕಲಾ ಶಾಲೆಯಲ್ಲಿ ಚಿತ್ರಕಲಾಭ್ಯಾಸ.
೧೯೨೨-೨೩	ದಸರಾ ವಸ್ತುಪ್ರದರ್ಶನ (ಮೈಸೂರು)ಹಾಗೂ ಕಾಂಗ್ರೆಸ್ ವಸ್ತುಪ್ರದರ್ಶನ(ಮದರಾಸು) – ಚಿತ್ರಗಳಿಗೆ ಪ್ರಶಸ್ತಿ.
೧೯೨೮	ಸೌ॥ ಸಾವಿತ್ರಮ್ಮ ಅವರೊಂದಿಗೆ ವಿವಾಹ.
೧೯೩೧	ಬಿ.ಎ ಪದವಿ (ಕನ್ನಡ, ಇಂಗ್ಲೀಷ್, ಚರಿತ್ರೆ)
೧೯೩೨	ಚಿತ್ರಕಲಾಭ್ಯಾಸಕ್ಕೆ ಕೆ. ವೆಂಕಟಪ್ಪನವರಲ್ಲಿ ಶಿಷ್ಯತ್ವ
೧೯೩೩	ಎಂ.ಎ ಪದವಿ (ಕನ್ನಡ), ಶ್ರೀ ಚಿನ್ನದ ಪದಕದೊಂದಿಗೆ
೧೯೩೪-೩೯	ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿ
೧೯೩೯-೪೬	ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್-ಕನ್ನಡ ಕೋಶದ ಸಹ ಸಂಪಾದಕ
೧೯೪೬	ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ.
೧೯೫೧	ಸ್ವಂತ ಪ್ರಕಟನೆಗಳಿಗಾಗಿ ರಾಘವ ಪ್ರಕಾಶನ ಪ್ರಾರಂಭ.
೧೯೫೯	ಕಾಲೇಜಿನಲ್ಲಿ ಜಿ.ಪಿ. ರಾಜರತ್ನಂರಿಂದ ಆರಂಭಗೊಂಡಿದ್ದ ಕರ್ಣಾಟಕ ಸಂಘದ ಪುನರಾರಂಭ.
೧೯೬೧	ಆಕಾಶವಾಣಿಯ ರಾಷ್ಟ್ರೀಯ ಕವಿಸಮ್ಮೇಳನದಲ್ಲಿ ಭಾಗವಹಿಸಿದ್ದು.

೧೯೬೩	ಕನ್ನಡ ರೀಡರ್ ಆಗಿ ಬಡ್ತಿ.
೧೯೬೪	ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಮಕ್ಕಳ ಸಾಹಿತ್ಯದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದು.
೧೯೬೫	ಅಣ್ಣಾಮಲೈ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ಭಾಷಾವಿಜ್ಞಾನ ಗೋಷ್ಠಿಯಲ್ಲಿ ಭಾಗವಹಿಸಿದ್ದು.
೧೯೬೭	ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸುವಿಕೆ.
೨೪-೩-೬೭	ಅಧ್ಯಾಪಕ ವೃತ್ತಿಯಿಂದ ನಿವೃತ್ತಿ ರಾಘವ ಸನ್ಮಾನ ಸಮಿತಿಯಿಂದ ಸನ್ಮಾನ
೧೯೬೭	ಶ್ರೀ ನಿಡುಮಾಮಿಡಿ ಶ್ರೀಗಳವರಾದ ಡಾ. ಜ.ಚ.ನಿ. ಅವರಿಂದ 'ವಿಚಾರ ರತ್ನಾಕರ' ಪ್ರಶಸ್ತಿ.
೧೯೬೮-೭೩	ಯು.ಜಿ.ಸಿ. ಪ್ರಾಧ್ಯಾಪಕರಾಗಿ ಬೆಂ.ವಿ.ವಿ.ಯಲ್ಲಿ ಸೇವೆ.
೧೯೭೯	ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸ್ಥಾಪನೆ.
೧೯೮೦	ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ.
೧೯೮೨	ಗೋಕಾಕ್ ಚಳುವಳಿಯಲ್ಲಿ ಸಕ್ರಿಯ ಹೋರಾಟ, ಸಾಹಿತಿ ಕಲಾವಿದರ ಬಳಗಕ್ಕೆ 'ಕನ್ನಡಮ್ಮನ ಕೊರಗು' ಪುಸ್ತಕ ದಾನ.
೧೯೮೩	ಉದಯಭಾನು ಕಲಾ ಸಂಘದಿಂದ 'ಆಸ್ವಾದ' ಅಭಿನಂದನ ಗ್ರಂಥ ಸಮರ್ಪಣೆ
೧೯೮೫	ರಾಜ್ಯ ಪ್ರಶಸ್ತಿ ಗೌರವ
೧೯೮೯	ಸರ್ವಧರ್ಮ ಸಮ್ಮೇಳನ ಸಾಹಿತ್ಯ ಗೌರವ, ಧರ್ಮಸ್ಥಳ
೯-೯-೮೯	ಎಂ.ವಿ.ಸೀ ೮೦ ಸನ್ಮಾನ ಸಮಿತಿಯಿಂದ ಸನ್ಮಾನ ಮತ್ತು ಪುಸ್ತಕ ಸಮರ್ಪಣೆ.
೧೨-೩-೯೦	ನಿಧನ, ಬೆಂಗಳೂರಿನಲ್ಲಿ.
೯-೯-೯೦	'ಕದಂಬ' ಎಂ.ವಿ.ಸೀ. ಸಂಸ್ಮರಣ ಸಂಪುಟ, 'ಕಲಾರಾಘವ' ಸಂಸ್ಮರಣಸಂಚಿಕೆ ಬಿಡುಗಡೆ.

ಎಂ.ವಿ.ಸೀ. ಶತಮಾನೋತ್ಸವ ಸಮಿತಿಯ ಪ್ರಕಟನೆಗಳು

೧.	ಎಂ.ವಿ.ಸೀ. ನುಡಿಮುತ್ತು	–ಎಸ್. ವಿ. ಶ್ರೀನಿವಾಸರಾವ್	೨೦–೦೦
೨.	ಹಸ್ತಪ್ರತಿ ಅಧ್ಯಯನ ಶಾಸ್ತ್ರ	–ಡಾ॥ ನಾ. ಗೀತಾಚಾರ್ಯ	೫೦–೦೦
೩.	ಮಕ್ಕಳ ಎಂ.ವಿ.ಸೀ.	–ಬೇ. ಗೋ. ರಮೇಶ್	೨೦–೦೦
೪.	ತಿರುಕಿಯ ಕನಸು	–(ಅಪ್ರಕಟಿತ ನಾಟಕ–ಎಂ.ವಿ.ಸೀ)	೫೦–೦೦
೬.	ಸಿರಿಕಂಟ (ಹಸ್ತಪ್ರತಿಅಧ್ಯಯನ ಸಂಪುಟ)	–ಪ್ರಸಂ. ಎನ್. ಬಸವರಾಧ್ಯ –ಸಂ. ಡಾ॥ ನಾ. ಗೀತಾಚಾರ್ಯ	೨೦೦–೦೦
೭.	ಹಸ್ತಪ್ರತಿ ಅಧ್ಯಯನ ವಾರ್ಷಿಕ	– " –	೧೦೦.೦೦
೮.	ಎಂ.ವಿ.ಸೀ. ಜೀವನ ಚರಿತ್ರೆ	– " –	೫೦–೦೦
೯.	ಎಂ.ವಿ.ಸೀ. ಚಿತ್ರಸಂಪುಟ	–ಸಂ. ಡಾ॥ ಆ. ಲ. ನರಸಿಂಹನ್	೨೦೦–೦೦
೧೦.	ಎಂ.ವಿ.ಸೀ. ವಾಚಿಕೆ ಭಾಗ–೧, ೨	–ಸಂ.ಎನ್.ಎಸ್. ಶ್ರೀಧರಮೂರ್ತಿ	೨೦೦–೦೦
೧೧.	ಲೋಚನ–ಎಂ.ವಿ.ಸೀ. ವಿಶೇಷಾಂಕ	} –ಸಂ. ಪ್ರೊ. ಜಿ. ಅಬ್ದುಲ್ ಬಷೀರ್೭೭	
೧೨.	ಎಂ.ವಿ.ಸೀ. ಸಾಹಿತ್ಯ ಸಾಧನೆ		

ಇತರರ ಪ್ರಕಟನೆಗಳು

೧.	ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟಗಳು (೧೨ ಸಂಪುಟಗಳಲ್ಲಿ–ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟನೆ)		
೨.	ಗಾಂಧೀಜಿಗೆ ನಮನ	–ಸಂ. ಎಂ. ಎಸ್. ಭಾಸ್ಕರ್	೨೫–೦೦
೩.	ಎಂ.ವಿ.ಸೀ. ಮರೆಯಲಾಗದ ನೆನಪು	–ಎಂ. ಎಸ್. ಭಾಸ್ಕರ್	೬೦–೦೦
೪.	ಹಂಸಪಥ (ಎಂ.ವಿ.ಸೀ. ಶತಮಾನೋತ್ಸವ ಸಂಪುಟ) ಸಂ. ಕಮಲ ನರಸಿಂಹ, ಪ್ರ : ಪ್ರತಿಭಾ ಪ್ರಕಾಶನ, ಬೆಂಗಳೂರು		೨೦೦–೦೦
೫.	ತ್ರಿವಿಕ್ರಮ ಎಂ.ವಿ.ಸೀ.(ಜೀವನ ಚಿತ್ರ)	–ಡಾ॥ ನಾ. ಗೀತಾಚಾರ್ಯ, ಕ.ಸಾ.ಪ.	
೬.	ಎಂ. ವಿ. ಸೀತಾರಾಮಯ್ಯ (ವ್ಯಕ್ತಿಚಿತ್ರ)	–ಎಸ್. ವಿ. ಶ್ರೀನಿವಾಸರಾವ್ –ಪ್ರ : ಬೆಂ.ನ.ಜಿಲ್ಲಾ ಕ.ಸಾ.ಪ.	

ಲೇಖಕರ ವಿಳಾಸಗಳು

ಪ್ರೊ. ಜಿ. ಅಬ್ದುಲ್ ಬಷೀರ್ (ಸಂ.)
ನಿವೃತ್ತ ಕನ್ನಡ ಪ್ರಾಧ್ಯಾಪಕರು
ನಂ.೫, ೮ನೆಯ ಅಡ್ಡರಸ್ತೆ
ಬೈರಸಂದ್ರ, ಜಯನಗರ ೧ನೇ ಬ್ಲಾಕ್‌ಪೂರ್ವ
ಬೆಂಗಳೂರು – ೫೬೦ ೦೧೧.
ಮೊಬೈಲ್ : ೯೦೦೮೭೬೩೩೩೬
ಮೊಬೈಲ್ : ೯೬೬೩೭೭೮೮೬೮

೧. **ಪ್ರೊ. ಡಿ. ಲಿಂಗಯ್ಯ**
೬೯೦, ೭ನೇ ಬ್ಲಾಕ್, ೨ನೇ ಫೇಸ್
ಬನಶಂಕರಿ ೩ನೇ ಹಂತ,
ಬೆಂಗಳೂರು – ೫೬೦ ೦೮೫.

೨. **ಡಾ॥ ನಾ. ಗೀತಾಚಾರ್ಯ**
೧೫೯, ವಿಜಯ ಎನ್‌ಕ್ಲೇವ್
೫ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು–೫೬೦ ೦೫೮

೩. **ಶ್ರೀ ರಾ. ನಂ. ಚಂದ್ರಶೇಖರ**
ನಂ. ೧, 'ಶ್ರೀನಿಲಯ'
ಮಾರಮ್ಮ ದೇವಸ್ಥಾನದ ರಸ್ತೆ
ಕತ್ತರಿಗುಪ್ಪೆ, ಬನಶಂಕರಿ ೩ನೇ ಹಂತ
ಬೆಂಗಳೂರು – ೫೬೦ ೦೮೫

೪. **ಡಾ. ಜಿ. ಬಿ. ಹರೀಶ್**
ನಂ. ೧೫೭, ೩೦ನೇ ಮುಖ್ಯರಸ್ತೆ
೩ನೇ ಅಡ್ಡರಸ್ತೆ, ಬಿ.ಟಿ.ಎಂ. ಮೊದಲ ಹಂತ
ಬೆಂಗಳೂರು–೫೬೦ ೦೬೮

೫. **ಡಾ. ಎಚ್. ಎ. ಸತ್ಯವತಿ**
ಕನ್ನಡ ವಿಭಾಗದ ಮುಖ್ಯಸ್ಥರು
ಶ್ರೀ ಜಗದ್ಗುರು ರೇಣುಕಾಚಾರ್ಯ
ವಿಜ್ಞಾನ, ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಆನಂದರಾವ್ ವೃತ್ತ
ಬೆಂಗಳೂರು–೫೬೦ ೦೦೯.

೬. **ಡಾ. ಮುಳುಕುಂಟೆ ರಮೇಶ್**
ನಂ. ೨೬೧೧೦, ೮ನೇ ಮೈನ್, ೧೭ನೇ ತಿರುವು,
ಬನಶಂಕರಿ ೨ನೇ ಹಂತ
ಬೆಂಗಳೂರು–೫೬೦ ೦೭೦.

೭. **ಡಾ. ಎಚ್. ಎಸ್. ಗೋಪಾಲರಾವ್**
ನಂ. ೧೪೪, 'ಸ್ವಸ್ತಿಶ್ರೀಸ್ಕಂದ',
ಐ.ವೈ.ಡಿ. ರಸ್ತೆ,
ಅರಸಿನಕುಂಟೆ,
ನೆಲಮಂಗಲ ತಾಲ್ಲೂಕು ಬೆಂಗಳೂರು
ಗ್ರಾಮಾಂತರ ಜಿಲ್ಲೆ–೫೬೨ ೧೨೩

೮. **ಪ್ರೊ. ಜಿ. ಅಶ್ವತ್ಥನಾರಾಯಣ**
ನಂ. ೯೫, ೩೪ 'ಬಿ' ಅಡ್ಡರಸ್ತೆ
೧೬ನೆಯ ಮುಖ್ಯರಸ್ತೆ, 'ಟಿ' ಬ್ಲಾಕ್
ಜಯನಗರ,
ಬೆಂಗಳೂರು – ೫೬೦ ೦೪೧.

೯. **ಡಾ. ಎಸ್. ಎಲ್. ಶ್ರೀನಿವಾಸಮೂರ್ತಿ**
ಕನ್ನಡ ವಿಭಾಗದ ಮುಖ್ಯಸ್ಥರು
ವಿಜಯ ಪದವಿಪೂರ್ವ ಕಾಲೇಜು
ಆರ್. ವಿ. ರಸ್ತೆ
ಬಸವನಗುಡಿ
ಬೆಂಗಳೂರು – ೫೬೦ ೦೦೪

೧೦. **ಶ್ರೀ ಎಸ್. ವಿ. ಶ್ರೀನಿವಾಸರಾವ್**
ವ್ಯವಸ್ಥಾಪಕ ಕಾರ್ಯದರ್ಶಿಗಳು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
೩ನೇ ಮುಖ್ಯರಸ್ತೆ,
ಎನ್. ಆರ್. ಕಾಲೋನಿ
ಬೆಂಗಳೂರು – ೫೬೦ ೦೧೯.

೧೧. **ಶ್ರೀ ಎಂ. ಎನ್. ಭಾಸ್ಕರ್**
ನಂ. ೩೭೬, ಬನಶಂಕರಿ ೧ನೇ 'ಇ' ಕ್ರಾಸ್
೩ನೇ ಮುಖ್ಯರಸ್ತೆ,
೬ನೇ ಬ್ಲಾಕ್
ಬನಶಂಕರಿ ೩ನೇ ಹಂತ
ಬೆಂಗಳೂರು – ೫೬೦ ೦೮೫

೧೨. **ಶ್ರೀ ಎಸ್. ಟಿ. ರಾಧಾಕೃಷ್ಣ**
ಕೋಶಾಧಿಕಾರಿಗಳು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
೩ನೇ ಮುಖ್ಯರಸ್ತೆ,
ಎನ್. ಆರ್. ಕಾಲೋನಿ
ಬೆಂಗಳೂರು – ೫೬೦ ೦೧೯.

ಎಂ.ವಿ.ಸೀ. ಶತಮಾನೋತ್ಸವದ ಕೆಲವು ಛಾಯಾಚಿತ್ರಗಳು



ಉಡುಪಿ ಎಂ.ಜಿ.ಎಂ. ಕಾಲೇಜಿನಲ್ಲಿ
ಗೋವಿಂದ ಪೈ ಸಂಶೋಧನ
ಕೇಂದ್ರದಲ್ಲಿ ನಡೆದ
ಶತಮಾನೋತ್ಸವ ಕಾರ್ಯಕ್ರಮ
೬-೨-೧೦



ಶೇಷಾದ್ರಿಪುರಂ ಕಾಲೇಜಿನ
ಸಹಯೋಗದಲ್ಲಿ
ರಾಷ್ಟ್ರೀಯ ಹಸ್ತಪ್ರತಿ ಅಧ್ಯಯನಶಾಸ್ತ್ರ
ವಿಚಾರಗೋಷ್ಠಿ ಉದ್ಘಾಟನೆಯಲ್ಲಿ
ಗಣ್ಯರಿಂದ ಪುಷ್ಪ ನಮನ
೯-೯-೨೦೧೧



ಮಡಕೇರಿಯಲ್ಲಿ ಕ.ಸಾ.ಪ.ದಲ್ಲಿ
ಶತಮಾನೋತ್ಸವ
೩೦-೧೧-೦೯



ಶತಮಾನೋತ್ಸವ ಸಾಂಸ್ಕೃತಿಕ
ಕಾರ್ಯಕ್ರಮದಲ್ಲಿ ಸವಿರಾಜು ಮತ್ತು
ಸಹಕಲಾವಿದರಿಂದ
'ಸ್ವಯಂವರ' ನಾಟಕ
೨೮-೧೨-೦೯

೦೯-೦೯-೨೦೦೯ ಎಂ.ವಿ.ಸೀ. ಶತಮಾನೋತ್ಸವ ಉದ್ಘಾಟನೆ ಮತ್ತು ಸಮಾರೋಪ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು



ಉದ್ಘಾಟನಾ ಸಮಾರಂಭದಲ್ಲಿ 'ಎಂ.ವಿ.ಸೀ. ನುಡಿ ಮತ್ತು ಹಸ್ತಪ್ರತಿ ಅಧ್ಯಯನಶಾಸ್ತ್ರ' ಬಿಡುಗಡೆ



ಉದ್ಘಾಟನಾ ಸಮಾರಂಭದಲ್ಲಿ 'ಎಂ.ವಿ.ಸೀ. ಪುತ್ರರು



೯-೯-೧೦ರ ಎಂ.ವಿ.ಸೀ. ಶತಮಾನೋತ್ಸವ ಸಮಾರೋಪ ಸಮಾರಂಭ ರವೀಂದ್ರ ಕಲಾಕ್ಷೇತ್ರದಲ್ಲಿ 'ತಿರುಕಿಯ ಕನಸು' ಮತ್ತು 'ಮಕ್ಕಳ ಎಂ.ವಿ.ಸೀ.' ಬಿಡುಗಡೆ



ಸಮಾರಂಭದಲ್ಲಿ ಶತಮಾನೋತ್ಸವ ಸಮಿತಿ ಗೌ॥ ಅಧ್ಯಕ್ಷರ ಭಾಷಣ